ಗುರುವಾರ, ಡಿಸೆಂಬರ್ 23, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 354 | ಪುಟ 14

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ

ಸಹಾಯಕ ಪ್ರಾಧ್ಯಾಪಕ ಹುದ್ದೆಗಳ ಸ್ಪರ್ಧಾತ್ಮಕ ಪರೀಕ್ಷೆಗೆ ಸಂಬಂಧಿಸಿದಂತೆ 'ಸಾಮಾನ್ಯ ಜ್ಞಾನ' ವಿಷಯ ಕುರಿತ ಮಾದರಿ ಪ್ರಶ್ನೋತ್ತರಗಳು ಇಲ್ಲಿವೆ.



ಆಳ-ಅಗಲ
ಸಂಸ್ಕರಣೆ, ಪೂರೈಕೆಯಲ್ಲಿ ಹಲವು ನ್ಯೂನತೆ

ಹಾದಿ ತಪ್ಪಿದ ಕಲಾಪ: ಸದಸ್ಯರ ಕಳಕಳಿ 6

ಮತಾಂತರ ನಿಷೇಧ ಮಸೂದೆ ಕೈಬಿಡಲು ಒತ್ತಾಯ 4

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
56,930 ▲	16,955 ▲	₹49,680 (ಬೆಂಗಳೂರು) ▼	₹63,300 (ಬೆಂಗಳೂರು) ▼	75.54 ▲

'ಸರ್ಕಾರಿ ಗೋಶಾಲೆ ಆರಂಭವೇ ಆಗಿಲ್ಲ'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ರಾಜ್ಯದ 30 ಜಿಲ್ಲೆಗಳಲ್ಲಿ ಸರ್ಕಾರಿ ಗೋಶಾಲೆಗಳನ್ನು ಪ್ರಾರಂಭಿಸುವ ಕಾರ್ಯ ಪ್ರಗತಿಯಲ್ಲಿದ್ದು, ಈವರೆಗೆ ಯಾವುದೇ ಗೋಶಾಲೆ ಕಾರ್ಯಾರಂಭ ಮಾಡಿಲ್ಲ' ಎಂದು ಪಶು ಸಂಗೋಪನಾ ಸಚಿವ ಪ್ರಭು ಚವ್ಹಾಣ್ ತಿಳಿಸಿದ್ದಾರೆ.

ಬಿಜೆಪಿಯ ಮುನಿರಾಜು ಗೌಡ ಪ್ರಶ್ನೆಗೆ ವಿಧಾನಪರಿಷತ್‌ನಲ್ಲಿ ಬುಧವಾರ ಲಿಖಿತ ಉತ್ತರ ನೀಡಿರುವ ಅವರು, 'ಸರ್ಕಾರದ ವತಿಯಿಂದ ಗೋಶಾಲೆಗಳ ನಿರ್ಮಾಣಕ್ಕೆ ಎಲ್ಲ ಜಿಲ್ಲೆಗಳಿಗೂ ಅನುದಾನ ಬಿಡುಗಡೆ ಮಾಡಲಾಗಿದೆ. ಅದನ್ನು ಬಳಸಿಕೊಂಡು ಜಮೀನು ಸಮತಟ್ಟು ಮಾಡುವ ಕೆಲಸ ನಡೆಯುತ್ತಿದೆ' ಎಂದು ಮಾಹಿತಿ ನೀಡಿದ್ದಾರೆ.

ಜೆಡಿಎಸ್‌ನ ಮರಿತಿಬ್ಬೇಗೌಡ ಪ್ರಶ್ನೆಗೆ ಉತ್ತರಿಸಿರುವ ಸಚಿವರು, 'ಗೋಶಾಲೆಗಳ ನಿರ್ಮಾಣಕ್ಕಾಗಿ ಎಲ್ಲ ಜಿಲ್ಲೆಗಳಿಗೂ ತಲಾ ₹ 50 ಲಕ್ಷ ಅನುದಾನ ಬಿಡುಗಡೆ ಮಾಡಲಾಗಿದೆ. ಗೋಶಾಲೆಗಳನ್ನು ಪ್ರಾರಂಭಿಸುವುದಕ್ಕೆ ಮಾರ್ಗಸೂಚಿಯನ್ನೂ ಹೊರಡಿಸಲಾಗಿದೆ' ಎಂದು ತಿಳಿಸಿದ್ದಾರೆ.

ಬೆಂಗಳೂರು ಸೇರಿ 7 ನಗರಗಳ ಪ್ರಕರಣಗಳ ಜಿನೋಮ್ ಸೀಕ್ವೆನ್ಸಿಂಗ್‌ಗೆ ಸೂಚನೆ

ಸಮುದಾಯಕ್ಕೆ ಓಮೈಕ್ರಾನ್?

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರು ಸೇರಿ ಏಳು ಮೆಟ್ರೊ ನಗರಗಳಲ್ಲಿ ಓಮೈಕ್ರಾನ್ ರೂಪಾಂತರ ತಳಿಯ ಕೋವಿಡ್ ಸಮುದಾಯಕ್ಕೆ ಹರಡಿದೆಯೇ ಎಂಬುದನ್ನು ಪರಿಶೀಲಿಸಿ ಎಂದು ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳಿಗೆ ಪತ್ರ ಬರೆದಿದೆ.

'ಬೆಂಗಳೂರು, ದೆಹಲಿ, ಭುವನೇಶ್ವರ, ಚೆನ್ನೈ, ಮುಂಬೈ, ಪುಣೆ, ಹೈದರಾಬಾದ್ ಮತ್ತು ಕೋಲ್ಕತ್ತದಲ್ಲಿ ಓಮೈಕ್ರಾನ್, ಸಮುದಾಯಕ್ಕೆ ಹರಡಿದೆಯೇ ಎಂಬುದನ್ನು ಪರಿಶೀಲಿಸಬೇಕಿದೆ. ಇದಕ್ಕಾಗಿ ಈ ನಗರಗಳಲ್ಲಿ ಕೋವಿಡ್ ದೃಢಪಡುವ ಪ್ರತಿ ವ್ಯಕ್ತಿಯ ಮೂಗು ಮತ್ತು ಗಂಟಲ ದ್ರವದ ಮಾದರಿಯನ್ನು ವೈರಾಣು ಸಂರಚನೆ ವಿಶ್ಲೇಷಣೆಗೆ (ಜಿನೋಮ್ ಸೀಕ್ವೆನ್ಸಿಂಗ್) ಕಳುಹಿಸಬೇಕು. ಇದಕ್ಕಾಗಿ ಗುರುತಿಸಲಾದ ಪ್ರಯೋಗಾಲಯಗಳಲ್ಲೇ ಈ ವಿಶ್ಲೇಷಣೆ ನಡೆಸಬೇಕು' ಎಂದು ರಾಷ್ಟ್ರೀಯ ರೋಗ ನಿಯಂತ್ರಣ ಕೇಂದ್ರವು (ಎನ್‌ಸಿಡಿಸಿ) ರಾಜ್ಯ ಸರ್ಕಾರಗಳಿಗೆ ಪತ್ರ ಬರೆದಿದೆ.

ದೇಶದಲ್ಲಿ ಈವರೆಗೆ ಒಟ್ಟು 222 ಓಮೈಕ್ರಾನ್ ಪ್ರಕರಣಗಳು ಪತ್ತೆಯಾಗಿವೆ. ಆದರೆ ಇವುಗಳಲ್ಲಿ ವಿದೇಶ ಪ್ರಯಾಣದ ಹಿನ್ನೆಲೆಯೇ ಇಲ್ಲದ 51 ಜನರಿಗೆ ಓಮೈಕ್ರಾನ್ ತಗುಲಿದೆ. ಮಹಾರಾಷ್ಟ್ರ, ತೆಲಂಗಾಣ, ಕರ್ನಾಟಕ, ಕೇರಳ, ದೆಹಲಿ ಮತ್ತು ಜಮ್ಮು–ಕಾಶ್ಮೀರದಲ್ಲಿ ಪತ್ತೆಯಾಗಿರುವ ಹಲವು ಪ್ರಕರಣಗಳಲ್ಲಿ, ಸೋಂಕಿತರಿಗೆ ವಿದೇಶ ಪ್ರಯಾಣದ ಹಿನ್ನೆಲೆಯೇ ಇಲ್ಲ. ಈ ರಾಜ್ಯಗಳಲ್ಲಿ ಓಮೈಕ್ರಾನ್ ಸಮುದಾಯಕ್ಕೆ ಹರಡಿದೆ ಎಂಬುದನ್ನು ಇದು ಸೂಚಿಸುತ್ತದೆ. ಮುಂದಿನ ದಿನಗಳಲ್ಲಿ ಓಮೈಕ್ರಾನ್ ಪ್ರಕರಣಗಳ ಸಂಖ್ಯೆ ಏರಿಕೆಯಾಗಬಹುದು ಎಂದು ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ.

'ಓಮೈಕ್ರಾನ್ ಸಮುದಾಯಕ್ಕೆ ಹರಡಿರುವ ಸಾಧ್ಯತೆ ಅತ್ಯಧಿಕವಾಗಿರುವ ಕಾರಣ, ಶಂಕಿತ ನಗರಗಳಲ್ಲಿನ ಎಲ್ಲಾ ಕೋವಿಡ್ ಪ್ರಕರಣಗಳನ್ನು ವೈರಾಣು ಸಂರಚನೆ ವಿಶ್ಲೇಷಣೆಗೆ ಒಳಪಡಿಸಲು ನಿರ್ಧರಿಸಲಾಗಿದೆ' ಎಂದು ಕೇಂದ್ರ ಆರೋಗ್ಯ ಸಚಿವಾಲಯದ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಇನ್ನಷ್ಟು ಸುದ್ದಿಗಳು 5

ಪ್ರಧಾನಿ ಸಭೆ ಇಂದು

ದೇಶದಲ್ಲಿ ಓಮೈಕ್ರಾನ್ ಸ್ಥಿತಿಗತಿ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ ಸರ್ಕಾರದ ಉನ್ನತ ಅಧಿಕಾರಿಗಳ ಜತೆಗೆ ಸಭೆ ನಡೆಸಲಿದ್ದಾರೆ. ಈ ವಿಚಾರವಾಗಿ ಪ್ರಧಾನಿ ಮೋದಿ ಅವರು ಈ ಹಿಂದೆ ಸಭೆ ನಡೆಸಿದ್ದು, ನ. 27ರಂದು.

ಮತ್ತೆ ಮೂವರಿಗೆ ಓಮೈಕ್ರಾನ್

ಬೆಂಗಳೂರು: ನಗರದಲ್ಲಿ ಮತ್ತೆ ಮೂವರು ಕೊರೋನಾ ರೂಪಾಂತರ ತಳಿ ಓಮೈಕ್ರಾನ್ ಸೋಂಕು ಹೊಂದಿರುವುದು ಬುಧವಾರ ದೃಢಪಟ್ಟಿದ್ದು, ರಾಜ್ಯದಲ್ಲಿನ ಒಟ್ಟು ಸೋಂಕಿತರ ಸಂಖ್ಯೆ 22ಕ್ಕೆ ಏರಿಕೆಯಾಗಿದೆ.

ಬ್ರಿಟನ್‌ನಿಂದ ಡಿ.14ರಂದು ಮರಳಿದ ವಿದ್ಯಾರ್ಥಿಯು ಓಮೈಕ್ರಾನ್ ಸೋಂಕು ಇರುವುದು ಪತ್ತೆಯಾಗಿದೆ. ಅವರ ನೇರ ಸಂಪರ್ಕಕ್ಕೆ ಬಂದ ತಂದೆತಾಯಿಯೂ ಈ ರೂಪಾಂತರ ತಳಿಯ ಸೊಂಕು ಹೊಂದಿರುವುದು ದೃಢಪಟ್ಟಿದೆ ಎಂದು ಆರೋಗ್ಯ ಇಲಾಖೆಯ ಮೂಲಗಳು ತಿಳಿಸಿವೆ.

ಈ ಕುರಿತ ವಿವರಗಳನ್ನು ಆರೋಗ್ಯ ಇಲಾಖೆ ಇನ್ನೂ ಅಧಿಕೃತವಾಗಿ ಬಿಡುಗಡೆ ಮಾಡಿಲ್ಲ.

ಡೀಮ್ಡ್ ಅರಣ್ಯ ವಾಪಸ್?

6.64ಲಕ್ಷ ಹೆಕ್ಟೇರ್ ಕಂದಾಯ ಇಲಾಖೆಗೆ: 'ಸುಪ್ರೀಂ'ಗೆ ಶೀಘ್ರ ಪ್ರಮಾಣಪತ್ರ

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣ ವಿಧಾನಸೌಧ): 'ರಾಜ್ಯದಲ್ಲಿರುವ 10.11 ಲಕ್ಷ ಹೆಕ್ಟೇರ್ ಡೀಮ್ಡ್ ಅರಣ್ಯ ಪ್ರದೇಶದ ಪೈಕಿ 6.64 ಲಕ್ಷ ಹೆಕ್ಟೇರ್ ಅನ್ನು ಕಂದಾಯ ಇಲಾಖೆಯ ವ್ಯಾಪ್ತಿಗೆ ವಾಪಸ್ ಪಡೆಯಲು ನಿರ್ಧರಿಸಿದ್ದು, ಸುಪ್ರೀಂ ಕೋರ್ಟ್‌ಗೆ ಶೀಘ್ರದಲ್ಲಿ ಪ್ರಮಾಣಪತ್ರ ಸಲ್ಲಿಸಲಾಗುವುದು' ಎಂದು ಕಂದಾಯ ಸಚಿವ ಆರ್.ಅಶೋಕ ಬುಧವಾರ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್‌ನ ಕೆ.ಪ್ರತಾಪಚಂದ್ರ ಶೆಟ್ಟಿ ಪ್ರಶ್ನೆಗೆ ಉತ್ತರಿಸಿದ ಅವರು, 'ಕಂದಾಯ ಇಲಾಖೆ ಅಧೀನದಲ್ಲಿದ್ದ ಭೂಮಿಯನ್ನು ಜಿಲ್ಲಾಧಿಕಾರಿಗಳೇ ಈ ಹಿಂದೆ ಅರಣ್ಯ ಇಲಾಖೆಗೆ ಹಸ್ತಾಂತರಿಸಿದ್ದರು. ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸುವ ಮೂಲಕ ಈಗ ಡೀಮ್ಡ್ ಅರಣ್ಯದ ವ್ಯಾಪ್ತಿಯಿಂದ ಕೈಬಿಡಲಾಗುವುದು' ಎಂದು ತಿಳಿಸಿದರು.

'ಕೈಬಿಡಬೇಕಾದ ಜಮೀನನ್ನು ಈಗಾಗಲೇ ಗುರುತಿಸಲಾಗಿದೆ. ಅರಣ್ಯ ಇಲಾಖೆಯೂ ಪ್ರಸ್ತಾವಕ್ಕೆ ಒಪ್ಪಿಗೆ ನೀಡಿದೆ. ಕಾನೂನು ಇಲಾಖೆಯ ಸಲಹೆ ಆಧರಿಸಿ ಅರಣ್ಯ ಇಲಾಖೆಯು ಪ್ರಮಾಣ ಪತ್ರವನ್ನು ಸಿದ್ಧಪಡಿಸುತ್ತಿದೆ' ಎಂದು ಹೇಳಿದರು.

'ಡೀಮ್ಡ್ ಅರಣ್ಯದ ಕಾರಣದಿಂದ ಉಡುಪಿ ಜಿಲ್ಲೆಯಲ್ಲಿ ಜಮೀನು ಮಂಜೂರಾತಿ ಕೋರಿ ನಮೂನೆ 50ರ ಅಡಿಯಲ್ಲಿ 80, ನಮೂನೆ 53ರ ಅಡಿಯಲ್ಲಿ 7,754 ಮತ್ತು ನಮೂನೆ 94ಸಿ ಅಡಿಯಲ್ಲಿ ಸಲ್ಲಿಸಿದ್ದ ಅರ್ಜಿಗಳನ್ನು ತಡೆ ಹಿಡಿಯಲಾಗಿದೆ. ಜಿಲ್ಲೆಯಲ್ಲಿ 68,794 ಹೆಕ್ಟೇರ್ ಡೀಮ್ಡ್ ಅರಣ್ಯವಿದ್ದು, 34,918 ಹೆಕ್ಟೇರ್ ಕೈಬಿಡಲು ವರದಿ ಸಲ್ಲಿಸಲಾಗಿದೆ' ಎಂದರು.

ಪರಿಹಾರಕ್ಕೆ ಆಗ್ರಹಿಸಿ ಧರಣಿ: ಸಚಿವರ ಉತ್ತರವನ್ನು ಪ್ರತಿಭಟಿಸಿ ಪ್ರತಾಪಚಂದ್ರ ಶೆಟ್ಟಿ ಸಭಾಪತಿಯವರ ಪೀಠದ ಎದುರು ಕೆಲಕಾಲ ಧರಣಿ ನಡೆಸಿದರು. ಆಗ ಕಾಂಗ್ರೆಸ್ ಮತ್ತು ಬಿಜೆಪಿ ಸದಸ್ಯರ ನಡುವೆ ವಾಕ್ಸಮರವೂ ನಡೆಯಿತು.

'ಉಡುಪಿ ಜಿಲ್ಲೆಯಲ್ಲಿ ಕರಾವಳಿ ನಿಯಂತ್ರಣ ವಲಯದಲ್ಲಿ ಮರಳು ಗಣಿಗಾರಿಕೆಗೆ ಅನುಮತಿ ಸಿಗುತ್ತದೆ. ಆದರೆ, ಬಡವರ ಮನೆಗೆ ಹಕ್ಕುಪತ್ರ ಸಿಗುವುದಿಲ್ಲ. ಜನರ ಗೋಳು ಕೇಳುವವರು ಯಾರು' ಎಂದು ಪ್ರತಾಪ ಚಂದ್ರ ಶೆಟ್ಟಿ ಪ್ರಶ್ನಿಸಿದರು.

'ಕಂದಾಯ ಇಲಾಖೆಯು ಜಮೀನುಗಳನ್ನು ಅರಣ್ಯ ಇಲಾಖೆಗೆ ಬಿಟ್ಟುಕೊಟ್ಟಿರುವುದು 1993–94ರಲ್ಲಿ. ಡೀಮ್ಡ್ ಅರಣ್ಯದ ಸಮಸ್ಯೆ ಕಾಂಗ್ರೆಸ್ ಸರ್ಕಾರದ ಪಾಪದ ಕೂಸು' ಎಂದು ಇಂಧನ ಸಚಿವ ವಿ.ಸುನಿಲ್ ಕುಮಾರ್ ಪ್ರತ್ಯುತ್ತರ ನೀಡಿದರು.

ಡೀಮ್ಡ್ ಅರಣ್ಯದ ಸಮಸ್ಯೆ ಕುರಿತು ಅರ್ಧ ಗಂಟೆಗಳ ಕಾಲ ಚರ್ಚೆಗೆ ಅವಕಾಶ ನೀಡುವುದಾಗಿ ಸಭಾಪತಿ ತಿಳಿಸಿದರು. ಬಳಿಕ ಶೆಟ್ಟಿ ಧರಣಿ ಅಂತ್ಯಗೊಳಿಸಿದರು.

14.27 ಲಕ್ಷ ಎಕರೆ ಸರ್ಕಾರಿ ಜಮೀನು ಒತ್ತುವರಿ

ಬೆಳಗಾವಿ: ರಾಜ್ಯದಲ್ಲಿ ಒಟ್ಟು 62.72 ಲಕ್ಷ ಎಕರೆ ಸರ್ಕಾರಿ ಜಮೀನು ಇದ್ದು, ಅದರಲ್ಲಿ 14.27 ಲಕ್ಷ ಎಕರೆ ಒತ್ತುವರಿಯಾಗಿದೆ ಎಂದು ಕಂದಾಯ ಸಚಿವ ಆರ್.ಅಶೋಕ ಬುಧವಾರ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್‌ನ ಬಿ.ಕೆ. ಹರಿಪ್ರಸಾದ್ ಪ್ರಶ್ನೆಗೆ ಅವರು, 'ಚಿತ್ರದುರ್ಗ ಜಿಲ್ಲೆಯಲ್ಲಿ 2.06 ಲಕ್ಷ ಎಕರೆ ಸರ್ಕಾರಿ ಜಮೀನು ಒತ್ತುವರಿಯಾಗಿದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ 1.45 ಲಕ್ಷ ಎಕರೆ, ಶಿವಮೊಗ್ಗ ಜಿಲ್ಲೆಯಲ್ಲಿ 1.44 ಲಕ್ಷ ಎಕರೆ, ಉಡುಪಿ ಜಿಲ್ಲೆಯಲ್ಲಿ 1.11 ಲಕ್ಷ ಎಕರೆ ಸರ್ಕಾರಿ ಜಮೀನು ಒತ್ತುವರಿ ಮಾಡಲಾಗಿದೆ' ಎಂದು ತಿಳಿಸಿದರು.

ಬೆಂಗಳೂರು ನಗರ ಜಿಲ್ಲೆಯಲ್ಲಿ 38,894 ಎಕರೆ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 36,229 ಎಕರೆ, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 61,095 ಎಕರೆ ಹಾಗೂ ರಾಮನಗರ ಜಿಲ್ಲೆಯಲ್ಲಿ 38,026 ಎಕರೆ ಸರ್ಕಾರಿ ಜಮೀನು ಅತಿಕ್ರಮಣಗೊಂಡಿದೆ ಎಂದರು.

ದಾಖಲೆಗಳ ಪ್ರಕಾರ ರಾಜ್ಯದಲ್ಲಿ 19.39 ಲಕ್ಷ ಎಕರೆ ಗೋಮಾಳದ ಜಮೀನು ಲಭ್ಯವಿದೆ. ಅದರಲ್ಲೂ ಸಾಕಷ್ಟು ಒತ್ತುವರಿಯಾಗಿದೆ. ಬಗರ್ ಹುಕುಂ ಯೋಜನೆಯಡಿ ಜಮೀನು ಕೋರಿ ನಮೂನೆ 50 ಮತ್ತು 53ರ ಅಡಿಯಲ್ಲಿ ಅರ್ಜಿಸಲ್ಲಿಸಿರುವವರು ಒಟ್ಟು 9.97 ಲಕ್ಷ ಎಕರೆ ಒತ್ತುವರಿ ಮಾಡಿದ್ದಾರೆ ಎಂದು ತಿಳಿಸಿದರು.

ಅರ್ಜಿಗಳು ವಿಲೇವಾರಿಗೆ ಬಾಕಿ ಇಲ್ಲದ ಮತ್ತು ವ್ಯಾಜ್ಯಗಳಿಲ್ಲದ ಪ್ರಕರಣಗಳಲ್ಲಿ 2.70 ಲಕ್ಷ ಎಕರೆ ಜಮೀನುಗಳ ಒತ್ತುವರಿಯನ್ನು ತೆರವು ಮಾಡಲಾಗಿದೆ. 1.36 ಲಕ್ಷ ಎಕರೆ ಸರ್ಕಾರಿ ಜಮೀನಿನ ಒತ್ತುವರಿ ತೆರವು ಬಾಕಿ ಇದೆ ಎಂದು ಅಶೋಕ ಮಾಹಿತಿ ನೀಡಿದರು.

6ನೇ ಪುಟ ನೋಡಿ

31ಕ್ಕೆ ಕರ್ನಾಟಕ ಬಂದ್‌ಗೆ ಕರೆ

ಕನ್ನಡ ಸಂಘಟನೆಗಳ ಕರೆ: ಎಂಇಎಸ್ ನಿಷೇಧಕ್ಕೆ 29ರವರೆಗೆ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ನಿಷೇಧಿಸಬೇಕೆಂದು ಒತ್ತಾಯಿಸಿ ಡಿ.31ರಂದು ಕರ್ನಾಟಕ ಬಂದ್‌ಗೆ ವಿವಿಧ ಕನ್ನಡ ಸಂಘಟನೆಗಳು ಕರೆ ನೀಡಿವೆ.

ಎಂಇಎಸ್ ನಿಷೇಧಿಸುವ ಬಗ್ಗೆ ಡಿ.29ರ ಒಳಗೆ ರಾಜ್ಯ ಸರ್ಕಾರ ತೀರ್ಮಾನ ಕೈಗೊಳ್ಳಬೇಕು. ಈ ಗಡುವಿನೊಳಗೆ ನಿಷೇಧಿಸದಿದ್ದರೆ ಬಂದ್ ಖಚಿತ ಎಂದು ಈ ಸಂಘಟನೆಗಳು ತಿಳಿಸಿವೆ.

ಕನ್ನಡ ಚಳವಳಿ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ್, ಅಖಿಲ ಕರ್ನಾಟಕ ಡಾ. ರಾಜ್‌ಕುಮಾರ್ ಅಭಿಮಾನಿಗಳ ಸಂಘದ ಅಧ್ಯಕ್ಷ ಸಾ.ರಾ. ಗೋವಿಂದು, ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ ಪ್ರವೀಣ್‌ಕುಮಾರ್ ಶೆಟ್ಟಿ, ಕನ್ನಡ ಸೇನೆಯ ಕೆ.ಆರ್.ಕುಮಾರ್ ಸೇರಿ ವಿವಿಧ ಸಂಘಟನೆಗಳ ಮುಖಂಡರು ಬುಧವಾರದ ಸಭೆಯಲ್ಲಿ ಬಂದ್‌ಗೆ ಕರೆ ನೀಡುವ ತೀರ್ಮಾನ ಕೈಗೊಂಡಿದ್ದಾರೆ.

'ಕನ್ನಡಿಗರ ಶಕ್ತಿ ಪ್ರದರ್ಶಿಸಬೇಕಾಗಿದೆ. ಪಕ್ಷಾತೀತವಾಗಿ ಎಲ್ಲರೂ ಬೆಂಬಲಿಸಬೇಕು. ಬಂದ್ ಶಕ್ತಿಯನ್ನು ಕುಂದಿಸುವ ಪ್ರಯತ್ನಕ್ಕೆ ಯಾರೂ ಕೈಹಾಕಬಾರದು' ಎಂದು ವಾಟಾಳ್ ನಾಗರಾಜ್ ಕೋರಿದರು. 'ಎಂಇಎಸ್ ನಿಷೇಧಿಸಲು ಸಿ.ಎಂ ಕಠಿಣ ನಿರ್ಧಾರ ಕೈಗೊಳ್ಳಬೇಕು. ಡಿ.29ರವರೆಗೆ ಅವಕಾಶ ನೀಡುತ್ತೇವೆ' ಎಂದು ಹೇಳಿದರು.

'ಬಂದ್‌ಗೆ 35ಕ್ಕೂ ಹೆಚ್ಚು ಸಂಘಟನೆಗಳು ಬೆಂಬಲ ಸೂಚಿಸಿವೆ. ಚಲನಚಿತ್ರ ನಟರೂ ಬೆಂಬಲ ಸೂಚಿಸಿದ್ದಾರೆ' ಎಂದು ಸಾ.ರಾ. ಗೋವಿಂದು ತಿಳಿಸಿದರು.

ಓಲಾ, ಉಬರ್ ಚಾಲಕರ ಸಂಘ, ಬೀದಿಬದಿ ವ್ಯಾಪಾರಿ ಸಂಘಟನೆಗಳ ಒಕ್ಕೂಟ ಬಂದ್‌ಗೆ ಬೆಂಬಲ ಸೂಚಿಸಿದೆ.

'ಹೋರಾಟಕ್ಕೆ ಬೆಂಬಲ, ಬಂದ್‌ಗೆ ಇಲ್ಲ'

'ಕನ್ನಡ ಪರ ಹೋರಾಟಕ್ಕೆ ನಾವು ಸಂಪೂರ್ಣ ಬೆಂಬಲ ಕೊಡುತ್ತೇವೆ. ಆದರೆ, ಡಿ.31ರ ಕರ್ನಾಟಕ ಬಂದ್‌ಗೆ ಬೆಂಬಲ ನೀಡುವುದಿಲ್ಲ. ಮುಂದಿನ ದಿನಗಳಲ್ಲಿಯೂ ಯಾವುದೇ ಬಂದ್ ಬೆಂಬಲಿಸುವುದಿಲ್ಲ' ಎಂದು ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘದ ಅಧ್ಯಕ್ಷ ಪಿ.ಸಿ.ರಾವ್ ತಿಳಿಸಿದ್ದಾರೆ.

'ಬಂದ್ ಪರಿಹಾರವಲ್ಲ'

'ಬಂದ್ ಎಲ್ಲ ಸಮಸ್ಯೆಗಳಿಗೂ ಪರಿಹಾರವಲ್ಲ. ನಮ್ಮ ಸಂಘಟನೆ ಮೊದಲಿನಿಂದಲೂ ದಿಢೀರ್ ಬಂದ್ ಕರೆಗಳಿಂದ ದೂರ ಉಳಿಯುತ್ತ ಬಂದಿದೆ' ಎಂದು ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ ಟಿ.ಎ. ನಾರಾಯಣಗೌಡ ತಿಳಿಸಿದ್ದಾರೆ.

'ಬಂದ್ ಒಂದೇ ಚಳವಳಿ ಮಾರ್ಗವಲ್ಲ. ಅದು ಕೊನೆಯ ಅಸ್ತ್ರವಾಗಬೇಕು' ಎಂದು ಟ್ವೀಟ್ ಮಾಡಿದ್ದಾರೆ.

ಮಹಾರಾಷ್ಟ್ರಕ್ಕೆ ಬಸ್ ಸಂಚಾರ ಸ್ಥಗಿತ

ಕಲಬುರಗಿ: ಮಹಾರಾಷ್ಟ್ರದಲ್ಲಿ ರಾಜ್ಯದ ಸಾರಿಗೆ ಸಂಸ್ಥೆಯ ಬಸ್‌ಗಳನ್ನು ತಡೆದು ಮಸಿ ಹಚ್ಚಿದ ಘಟನೆಗಳು ನಡೆದಿರುವುದರಿಂದ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು ಮಹಾರಾಷ್ಟ್ರಕ್ಕೆ ಬಸ್ ಸಂಚಾರ ಸ್ಥಗಿತಗೊಳಿಸಿದೆ.

ಭಯದಿಂದ ಮನೆಯಿಂದ ಹೊರಗೆ ಓಡಿ ಬಂದ ಜನರು

ಚಿಕ್ಕಬಳ್ಳಾಪುರದ ಹಳ್ಳಿಗಳಲ್ಲಿ ಲಘು ಭೂಕಂಪನ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ತಾಲ್ಲೂಕಿನ ಮಂಡಿಕಲ್ ಮತ್ತು ಅಡ್ಡಗಲ್ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯ ವಿವಿಧ ಹಳ್ಳಿಗಳಲ್ಲಿ ಬುಧವಾರ ಬೆಳಿಗ್ಗೆ ಲಘು ಭೂಕಂಪನ ಸಂಭವಿಸಿದೆ.

ಬಂಡಹಳ್ಳಿ, ಶೆಟ್ಟಗೆರೆ, ಬೋಗೇನಹಳ್ಳಿ, ಭೋಗಪರ್ತಿ, ಹೊಸಹಳ್ಳಿ, ದೊಡ್ಡಹಳ್ಳಿ, ಪಿಳ್ಳಗುಂಡಹಳ್ಳ, ಗುಂಡ್ಲಹಳ್ಳಿ, ಮಂಡಿಕಲ್, ಅಡ್ಡಗಲ್, ಪೈಲಗುರ್ಕಿ, ಆರೂರು, ಭೋಗಪರ್ತಿಯಲ್ಲಿ ನಿವಾಸಿಗಳಿಗೆ ಬೆಳಿಗ್ಗೆ 7 ಗಂಟೆಯ ಸುಮಾರಿಗೆ ಎರಡು ಬಾರಿ ಭೂಕಂಪನದ ಅನುಭವವಾಗಿದೆ.

'ಬೆಳಿಗ್ಗೆ 7.09 ಮತ್ತು 7.14 ಗಂಟೆಗೆ ಭೂಕಂಪನ ಸಂಭವಿಸಿದ್ದು, ರಿಕ್ಟರ್ ಮಾಪಕದಲ್ಲಿ ಇದರ ತೀವ್ರತೆಯು ಕ್ರಮವಾಗಿ 3.1 ಹಾಗೂ 3.3ರಷ್ಟು ದಾಖಲಾಗಿದೆ' ಎಂದು ರಾಷ್ಟ್ರೀಯ ಭೂಕಂಪ ಮಾಪನ ಕೇಂದ್ರವು (ಎನ್‌ಸಿಎಸ್) ಟ್ವೀಟ್ ಮಾಡಿದೆ

ಮಂಡಿಕಲ್ ಭೂಕಂಪನದ ಕೇಂದ್ರಬಿಂದುವಾಗಿದೆ. ಬಂಡ್ಲಹಳ್ಳಿ ಮತ್ತು ಶೆಟ್ಟಗೆರೆ ಗ್ರಾಮಗಳಲ್ಲಿ ಕೆಲವು ಮನೆಯ ಗೋಡೆಗಳು ಬಿರುಕು ಬಿಟ್ಟಿವೆ. ಪಾತ್ರೆಗಳು ನೆಲಕ್ಕುರುಳಿವೆ. ಭೂಮಿಯು ಕಂಪಿಸುತ್ತಿದ್ದಂತೆ ಜನರು ಭಯದಿಂದ ಮನೆಯಿಂದ ಹೊರಗೆ ಓಡಿ ಬಂದಿದ್ದಾರೆ. ಅಧಿಕಾರಿಗಳು ಗ್ರಾಮಗಳಿಗೆ ಭೇಟಿ ನೀಡಿದ್ದು, 'ಇದು ಲಘು ಭೂಕಂಪನ. ಯಾವುದೇ ಅಪಾಯವಿಲ್ಲ' ಎಂದು ಜನರಲ್ಲಿ ಧೈರ್ಯ ತುಂಬಿದರು.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಹಾಕಿ: ಭಾರತಕ್ಕೆ ಕಂಚಿನ ಪದಕ

ಢಾಕಾ (ಪಿಟಿಐ): ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿಯಲ್ಲಿ ಭಾರತ ತಂಡ ಕಂಚಿನ ಪದಕ ಗಳಿಸಿತು. ಮೂರನೇ ಸ್ಥಾನಕ್ಕಾಗಿ ಬುಧವಾರ ನಡೆದ ಪಂದ್ಯದಲ್ಲಿ ಪಾಕಿಸ್ತಾನವನ್ನು ಭಾರತ 4–3ರಲ್ಲಿ ಸೋಲಿಸಿತು.

ಹರ್ಮನ್‌ಪ್ರೀತ್ ಸಿಂಗ್ (1ನೇ ನಿಮಿಷ) ಸುಮಿತ್ (45ನೇ ನಿ), ವರುಣ್ ಕುಮಾರ್ (53ನೇ ನಿ) ಮತ್ತು ಆಕಾಶ್‌ದೀಪ್ ಸಿಂಗ್ (57ನೇ ನಿ) ಭಾರತದ ಪರ ಗೋಲು ಗಳಿಸಿದರು.

ಪಾಕಿಸ್ತಾನಕ್ಕಾಗಿ ಅಫ್ರಾಜ್ (10ನೇ ನಿ), ಅಬ್ದುಲ್ ರಾಣಾ (33ನೇ ನಿ) ಮತ್ತು ಅಹಮ್ಮದ್ ನದೀಮ್ (57ನೇ ನಿ) ಗೋಲು ಗಳಿಸಿದರು. ಜಪಾನ್ ವಿರುದ್ಧ 4–2ರಲ್ಲಿ (ಶೂಟೌಟ್) ಜಯ ಗಳಿಸಿ ಕೊರಿಯಾ ಚಿನ್ನದ ಪದಕ ಗೆದ್ದುಕೊಂಡಿತು. ರೌಂಡ್ ರಾಬಿನ್ ಪಂದ್ಯದಲ್ಲೂ ಭಾರತ ತಂಡ ಪಾಕಿಸ್ತಾನವನ್ನು 3–1ರಲ್ಲಿ ಮಣಿಸಿತ್ತು.

ಕಳೆದ ಬಾರಿಯ ಚಾಂಪಿಯನ್‌ಷಿಪ್‌ನಲ್ಲಿ ಎರಡೂ ತಂಡಗಳು ಫೈನಲ್ ಪ್ರವೇಶಿಸಿದ್ದವು. ಆದರೆ ಮಳೆಯ ಕಾರಣ ಪ್ರಶಸ್ತಿ ಸುತ್ತಿನ ಪಂದ್ಯ ನಡೆಯದೇ ಇದ್ದುದರಿಂದ ಜಂಟಿ ವಿಜೇತರೆಂದು ಘೋಷಿಸಲಾಗಿತ್ತು.

ಒಳ ಪುಟಗಳು

ಓಮೈಕ್ರಾನ್ ರೂಪಾಂತರಿ 222ಕ್ಕೆ ಏರಿಕೆ 5

'ಬಸವರಾಜ ಬೊಮ್ಮಾಯಿಯೇ ಚುನಾವಣೆವರೆಗೂ ಮುಖ್ಯಮಂತ್ರಿ' 6

'ಮತಾಂತರ ತಡೆಗೆ ಪ್ರತಿ ಜಿಲ್ಲೆಯಲ್ಲೂ ಕಾರ್ಯಪಡೆ' 4

ಕೊಬ್ಬರಿ ಬೆಂಬಲ ಬೆಲೆ ಹೆಚ್ಚಳ 11

ಬೆಂಗಳೂರಿನಲ್ಲಿ ಐಪಿಎಲ್ ಮೆಗಾ ಹರಾಜು? 11

ಚಿನಕುರಳಿ

ಪ್ರಕಾಶ್ ಶೆಟ್ಟಿ



ವ್ಯಂಗ್ಯಚಿತ್ರ ಉತ್ಸವ: ನಾಲ್ವರಿಗೆ ಪ್ರಶಸ್ತಿ

ಬೆಂಗಳೂರು: ಭಾರತೀಯ ವ್ಯಂಗ್ಯಚಿತ್ರಗಾರರ ಸಂಸ್ಥೆಯು 2022ರ ಜ.1ರಂದು ನಗರದಲ್ಲಿ 'ವ್ಯಂಗ್ಯಚಿತ್ರ ಉತ್ಸವ-2022' ಆಯೋಜಿಸಿದೆ. ಜೀವಮಾನದ ಸಾಧನೆ ಮಾಡಿದ ವ್ಯಂಗ್ಯಚಿತ್ರಗಾರರಿಗೆ ಈ ಸಂದರ್ಭದಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದ್ದು, ರಾಜ್ಯದ ನಾಲ್ವರು ಆಯ್ಕೆಯಾಗಿದ್ದಾರೆ.

ಚತ್ತೀಸ್‌ಗಡದ 'ಕಾರ್ಟೂನ್ ವಾಚ್' ಮಾಸಿಕ ಪತ್ರಿಕೆ ಸಹಯೋಗದಲ್ಲಿ ಕಾರ್ಟೂನ್ ಗ್ಯಾಲರಿಯಲ್ಲಿ ಉತ್ಸವ ನಡೆಯಲಿದೆ. ವ್ಯಂಗ್ಯಚಿತ್ರಕಾರರಾದ ಕೆ.ಆರ್.ಸ್ವಾಮಿ, ವಿ.ಜಿ.ನರೇಂದ್ರ, ಬಿ.ಜಿ. ಗುಜ್ಜಾರಪ್ಪ ಮತ್ತು ಜಿ.ಎಸ್.ನಾಗನಾಥ ಅವರು ಪ್ರಶಸ್ತಿ ಸ್ವೀಕರಿಸಲಿದ್ದಾರೆ.

ಬಿ.ಜಿ.ಗುಜ್ಜಾರಪ್ಪ, ವೈ.ಎಸ್. ನಂಜುಂಡಸ್ವಾಮಿ, ರಾ.ಸೂರಿ, ಚಂದ್ರನಾಥ ಆಚಾರ್ಯ, ಸತೀಶ್ ಆಚಾರ್ಯ, ಜಿ.ಎಸ್.ನಾಗನಾಥ, ರಘುಪತಿಶೃಂಗೇರಿ, ಮನೋಹರ್ ಆಚಾರ್ಯ, ಜೈರಾಮ್ ಉಡುಪ, ಜೀವನ್ ಶೆಟ್ಟಿ, ಜೇಮ್ಸ್ ವಾಜ್, ಸುಭಾಶ್ಚಂದ್ರ, ರವಿ ಪೂಜಾರಿ, ಯತೀಶ್ ಸಿದ್ದಕಟ್ಟೆ, ಚಂದ್ರ ಗಂಗೊಳ್ಳಿ, ಸಂಕೇತ್ ಗುರುದತ್ತ, ಸತೀಶ್ ಬಾಬು, ಶೈಲೇಶ್ ಉಜಿರೆ, ಗೀಚ ಬೊಳ್ಕಟ್ಟೆ, ಪ್ರಸನ್ನ ಕುಮಾರ್ ಮತ್ತು ಎಂ.ಎನ್. ದತ್ತಾತ್ರಿ ಸೇರಿ 21 ಕಲಾವಿದರ ವ್ಯಂಗ್ಯಚಿತ್ರಗಳು ಪ್ರದರ್ಶನಗೊಳ್ಳಲಿವೆ.

ದಾಖಲೆ ವಶ

ಬೆಂಗಳೂರು: ಗೋಮಾಳವನ್ನು ಖಾಸಗಿ ವ್ಯಕ್ತಿಗಳಿಗೆ ಖಾತೆ ಮಾಡಿಕೊಡಲಾಗಿದೆ ಎಂಬ ದೂರು ಆಧರಿಸಿ ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ಅಧಿಕಾರಿಗಳು ಬುಧವಾರ ನಗರದ ಹೊರ ವಲಯದ ಎರಡು ಗ್ರಾಮ ಪಂಚಾಯಿತಿ ಕಚೇರಿಗಳಲ್ಲಿ ದಾಖಲೆಗಳನ್ನು ವಶಕ್ಕೆ ಪಡೆದರು. 'ಸಮೇತನಹಳ್ಳಿ, ದೊಡ್ಡಗಟ್ಟಿಗಾನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಗೋಮಾಳ ಜಾಗವನ್ನು ಅನ್ಯರಿಗೆ ಖಾತೆ ಮಾಡಿಕೊಡಲಾಗಿದೆ ಎಂಬ ದೂರು ಬಂದಿತ್ತು. ತನಿಖೆ ಇನ್ನಷ್ಟೇ ನಡೆಯಬೇಕಿದೆ' ಎಂದಿದ್ದಾರೆ ಬೆಂಗಳೂರು ಗ್ರಾಮಾಂತರ ಜಿಲ್ಲಾ ಎಸಿಬಿ ಅಧಿಕಾರಿಗಳು.

90ನೇ ಹುಟ್ಟುಹಬ್ಬದ ಸಂದರ್ಭದಲ್ಲಿ ಲೇಖಕ ಆರ್‌.ಜಿ. ಹಳ್ಳಿ ನಾಗರಾಜ್

'ಅನಂತಮೂರ್ತಿ ಬದುಕಿನುದ್ದಕ್ಕೂ ಸುತ್ತಿಕೊಂಡ ವಿವಾದ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡದ ಬಹುಮುಖ ಪ್ರತಿಭೆಯ ಸಾಹಿತಿಯಾಗಿದ್ದ ಯು.ಆರ್. ಅನಂತಮೂರ್ತಿ ಅವರು ಬದುಕಿನುದ್ದಕ್ಕೂ ವಿವಾದಗಳನ್ನೇ ಎದುರಿಸಬೇಕಾಯಿತು. ಅವರು ಮೃತಪಟ್ಟ ಬಳಿಕ ಅಂತ್ಯ ಸಂಸ್ಕಾರದ ವಿಚಾರದಲ್ಲೂ ವಿವಾದ ಸೃಷ್ಟಿಯಾಗಿದ್ದು ವಿಪರ್ಯಾಸ' ಎಂದು ಲೇಖಕ ಆರ್.ಜಿ. ಹಳ್ಳಿ ನಾಗರಾಜ್ ಬೇಸರ ವ್ಯಕ್ತಪಡಿಸಿದರು.

ಅನಂತಮೂರ್ತಿ ಅವರ 90ನೇ ಹುಟ್ಟುಹಬ್ಬದ ಪ್ರಯುಕ್ತ ರಂಗೋತ್ರಿ ಸಾಂಸ್ಕೃತಿಕ ಸಂಸ್ಥೆ ನಗರದಲ್ಲಿ ಬುಧವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ನಾಗರಾಜ್ ಮಾತನಾಡಿದರು.

'ಅನಂತಮೂರ್ತಿ ಅವರು ತಮಗೆ ಅನಿಸಿದ್ದನ್ನು ನೇರವಾಗಿಯೇ ಹೇಳುತ್ತಿದ್ದರು. ಸಮಾಜವಾದಿ ಚಿಂತನೆಗಳಿಂದ ಪ್ರೇರೇಪಿತರಾಗಿದ್ದ ಅವರು, ರಾಜಕೀಯ, ಸಾಹಿತ್ಯ, ಸಂಸ್ಕೃತಿಯನ್ನು ವಿಮರ್ಶೆಗೆ ಒಳಪಡಿಸುತ್ತಿದ್ದರು. ಅವರ 'ಸಂಸ್ಕಾರ', 'ಅವಸ್ಥೆ' ಕಾದಂಬರಿಗಳ ವಸ್ತುಗಳೂ ವಿವಾದಕ್ಕೆ ಕಾರಣವಾದವು. ಸಿನಿಮಾ ಆಗಿಯೂ ಅವು ಸದ್ದು ಮಾಡಿದ್ದವು' ಎಂದು ನೆನಪಿಸಿಕೊಂಡರು.

'ಕವಿತೆ, ಸಣ್ಣಕತೆ, ವಿಮರ್ಶೆಯಲ್ಲಿ ಸಾಧನೆ ಮಾಡಿದ ಅವರಿಗೆ ಬದುಕಿನುದ್ದಕ್ಕೂ ವಿವಾದಗಳೇ ಸುತ್ತುವರೆದಿದ್ದವು. ಅವರು ಪಡೆದ ಜ್ಞಾನಪೀಠ ಪ್ರಶಸ್ತಿ, ಸಾಹಿತ್ಯ ಸಮ್ಮೇಳನಾಧ್ಯಕ್ಷ ಸ್ಥಾನ, ಕೇರಳ ಗಾಂಧಿ ವಿಶ್ವವಿದ್ಯಾಲಯದ ಕುಲಪತಿ ಸ್ಥಾನ ಸೇರಿದಂತೆ ವಿವಿಧ ಗೌರವಗಳೂ ಚರ್ಚೆಗೆ ಗ್ರಾಸವಾಗಿದ್ದವು. ಸದಾ ಸುದ್ದಿಯಲ್ಲಿರುತ್ತಿದ್ದ ಅವರು, ಕನ್ನಡದ ಅಸ್ಮಿತೆಯನ್ನು ಕಾಪಾಡುವಲ್ಲಿ ಮಹತ್ವದ ಪಾತ್ರ ವಹಿಸಿದ್ದರು' ಎಂದು ಹೇಳಿದರು.

ಅನಂತಮೂರ್ತಿ ಅವರ ಸಮಾಧಿಗೆ ಆರ್‌.ಜಿ. ಹಳ್ಳಿ ನಾಗರಾಜ್, ಕವಿ ವಡ್ಡಗೆರೆ ನಾಗರಾಜಯ್ಯ,ರಂಗೋತ್ರಿಯ ಸಂಘಟಕ ಕೆ.ಎಚ್ ಕುಮಾರ, ಕವಿ ಸಿ.ಜಿ. ಹಳ್ಳಿ ಮೂರ್ತಿ, ಗುಂಡೀಗೆರೆ ವಿಶ್ವನಾಥ ಮತ್ತಿತರರು ಪುಷ್ಪ ನಮನ ಸಲ್ಲಿಸಿದರು.

ಕವಿ ವಡ್ಡಗೆರೆ ನಾಗರಾಜಯ್ಯ, 'ಕಲಾಗ್ರಾಮದಲ್ಲಿರುವ ಜಿ.ಎಸ್. ಶಿವರುದ್ರಪ್ಪ, ಅನಂತಮೂರ್ತಿ ಹಾಗೂ ಸಿದ್ದಲಿಂಗಯ್ಯ ಅವರ ಸಮಾಧಿಗಳು ಸರ್ಕಾರದ ನಿರ್ಲಕ್ಷ್ಯಕ್ಕೆ ಒಳಗಾಗಿವೆ. ಈ ಸ್ಥಳವನ್ನು 'ಕವಿ ವನ' ಎಂದು ಘೋಷಿಸಿ, ಅಲ್ಲಿ ವಸ್ತು ಸಂಗ್ರಹಾಲಯ ಮತ್ತು ಸಭಾಂಗಣ ನಿರ್ಮಿಸಬೇಕು. ಚಿತ್ರ ನಟರಿಗೆ ಸಿಗುವ ಗೌರವ ಹಾಗೂ ಸ್ಥಾನಮಾನ ಸಾಹಿತಿಗಳಿಗೂ ಸಿಗಬೇಕು' ಎಂದು ಒತ್ತಾಯಿಸಿದರು.

PUBLIC NOTICE

My client intends to purchase the properties from the respective owners more fully mentioned and described in the Schedule hereunder. The Owners represent that they are the absolute owners of the Schedule Property and have a good marketable, right, title and interest therein and that apart from them there are no other person/s having any right or claim over the Schedule Property and they have not entered into any Agreements/Memorandum of Understanding etc. The Owners further represents that they have not mortgaged, created any right, interest, lien or encumbered the Schedule Property or any part thereof in any manner with any person/s. Any person/s having objection/s or claims, shall with documentary evidence lodge their objection/s or claims **within Fifteen (15) days** from the date of this Notice with the Undersigned, failing which, my client shall proceed with the above-mentioned transaction.

SCHEDULE

All that piece and parcel of the below mentioned converted lands situated at Chikkabanahalli Village, Bidarahalli Hobli, Bengaluru East Taluk, Bengaluru Urban District.

Sl. No.	Sy. No.	Extent		Owners	Boundaries			
		Acres	Guntas		East by	West by	North by	South by
1.	41/2	01	02	Sterling Urban Condominiums Private Limited	Sy. Nos. 39 & 40	Sy. Nos. 38 & 41/1	Sy. No. 38	Sy. No. 41/3
2.	46/1C	02	01	Sterling Urban Condominiums Private Limited	Sy. Nos. 46/1A, 47 & 48	Sy. Nos.46/1D, 76 & 77	Sy. No. 46/1B	Sy. Nos. 77 & 74
3.	70/2	00	21	Sterling Urban Condominiums Private Limited				
4.	70/4	00	05½	Sterling Urban Condominiums Private Limited	Sy. Nos. 54, 55 & 70/3	Sy. No. 71	Sy. No. 53	Sy. No. 70/1
5.	70/5	00	02½	Sterling Urban Condominiums Private Limited				
6.	33/2	00	16	M/s. Gopalan Enterprises	Sy. No. 33/3	Sy. No. 30	Sy. No. 34/2	Sy. No. 33/1
7.	73/2	00	13	M/s. Gopalan Enterprises	Sy. Nos. 49 & 50	Sy. No. 73/1	Sy. No. 46/1	Remaining portion of the Sy. No. 73/2
8.	44/1A	00	39	M/s. Gopalan Enterprises	Sy. No. 40 & & remaining portion of the Sy. No. 44/1	Sy. No. 43	Sy. Nos. 40 & 41	Sy. Nos. 43 & 44/2
9.	73/1	00	25	M/s. Gopalan Enterprises	Sy. No. 73/2	Sy. No. 74	Sy. No. 46	Kaluve
10.	47/1	00	05	M/s. Gopalan Enterprises	Sy. Nos. 47/3 & 47/4	Road & Sy. No.46	Sy .No. 46	Sy. No. 47/2
11.	46/1A	02	07	M/s. Gopalan Enterprises	Sy. No. 45/1	Sy. Nos. 46/1B & 46/1C	Sy. No. 46/2	Sy. Nos. 47 & 45/1
12.	48/1	00	08	M/s. Gopalan Enterprises	Sy. Nos. 48/2 & 48/3	Sy. No. 46 & Road	Sy. No. 47/2	Sy. No. 49
13.	71/1	00	14	M/s. Gopalan Enterprises	Sy. No. 71/2	Sy. No. 73	Sy. No. 50	Canal
14.	71/2	00	20	M/s. Gopalan Enterprises	Sy. No. 70	Sy. No. 71/1	Sy. No. 51	Canal
15.	54	00	20	M/s. Gopalan Enterprises	Road & remaining portion of Sy. No. 54	Sy. No. 70	Sy. No. 53	Sy. Nos. 55 56, 57 and remaining portion of Sy. No. 54

Jayanth M Pattanshetti, ADVOCATE
102, Ground Floor "Rams Infantry Manor", No.70, Infantry Road,
Bengaluru-560001. Ph.: 25593195/41238516/41238367

Bengaluru
Date: 22-12-2021

PUBLIC NOTICE

My client – **M/s. Spectra Shelters Pvt Ltd,** had obtained an Arbitral Award dated 14.04.2008 passed against Dr. K. Balaraman, the proprietor of Sree Krishna Gardenia Builders and Developers. By order dated 17.01.2009, passed in Arbitration Application No.144/2008 passed by the Hon'ble Court of LXXXII Addl. City Civil and Sessions Judge at Bengaluru was further pleased to restrain **Dr. K. Balaraman,** the proprietor of **Sree Krishna Gardenia Builders** from transferring, alienating and encumbering the properties mentioned in the schedule below, the same order has been confirmed by the Hon'ble High Court of Karnataka at Bengaluru in Commercial Appeal No. 11/2019 vide its order dated 24.11.2021. My Client has right, claim, title and interest in the Schedule Properties mentioned below. It has recently come to the notice of my client that Dr. K. Balaraman the proprietor of Sree Krishna Gardenia Builders is attempting to alienate/encumber the schedule properties. Hence, the general public is hereby cautioned not to deal with the Schedule Properties in any manner. It is further notified that any such transactions entered into in respect of the Schedule Properties shall be illegal and not binding upon my client.

Schedule Properties

SCHEDULE - A

All that piece and parcel of the Land of Residential Apartment **"Krsna Laburnum"** at Sy No. 24/5, Site No.559, RMV II Stage, New B.E.L. Road, 5th Main, Bengaluru 560 094, measuring **33,000 Sq.ft** and bounded on:

East by : Road
West by : Private property
North by : Private Property
South by : Krishna Gardenia Apartments

SCHEDULE - B

All that piece and parcel of Apartments bearing Nos. A-302 and E-304 in **"Krishna Diamond"**, built on Sy No. 47/2 and 48/1, No. 520, Sahakarnagar, Byatarayanapura Village, Yelahanka, Bengaluru-560 092.

B.V. Nidhishree, Advocate
F-02, Benson Boulevard, No.77/1, Nandidurga Road
Benson Town, Bengaluru 560 046, Tel: 080 4166 8469

ಕೇಕ್ ಪ್ರದರ್ಶನವನ್ನು ಉದ್ಘಾಟಿಸಿದ ಸಿನಿಮಾ ನಟಿ ರಾಧಿಕಾ ನಾರಾಯಣ್ 20 ಅಡಿ ಎತ್ತರದ 'ಮಿಡೀವಲ್ ಕ್ಯಾಸಲ್' ಕೇಕ್ ಕಲಾಕೃತಿಯನ್ನು ತೋರಿಸಿದರು –ಪ್ರಜಾವಾಣಿ ಚಿತ್ರ

ಗರುಡ ಮಾಲ್‌ನಲ್ಲಿ 'ಮಿಡೀವಲ್ ಕ್ಯಾಸಲ್'

ಬೆಂಗಳೂರು: ನಗರದ ಗರುಡ ಮಾಲ್‌ನಲ್ಲಿ ಕ್ರಿಸ್‌ಮಸ್ ಮತ್ತು ಹೊಸ ವರ್ಷ ಆಚರಣೆ ಪ್ರಯುಕ್ತ 10 ದಿನಗಳ ಕೇಕ್ ಪ್ರದರ್ಶನವನ್ನು ಆಯೋಜಿಸಲಾಗಿದೆ.

ಮಧ್ಯಯುಗದ ಕೋಟೆಯನ್ನು ಪ್ರತಿಬಿಂಬಿಸುವ 'ಮಿಡೀವಲ್ ಕ್ಯಾಸಲ್' ಕೇಕ್ ಈ ವರ್ಷದ ಪ್ರದರ್ಶನದ ಪ್ರಮುಖ ಆಕರ್ಷಣೆ. ಕೇಕ್‌ನಲ್ಲಿ ನಿರ್ಮಿಸಿರುವ ಈ ಕಲಾಕೃತಿಯು 20 ಅಡಿ ಎತ್ತರ, 16X16 ಅಡಿ ವಿಸ್ತೀರ್ಣ, 800 ಕೆ.ಜಿ ತೂಕವಿದೆ. ಒಟ್ಟು 12 ಬಾಣಸಿಗರು ಸೇರಿ ಇದನ್ನು ತಯಾರಿಸಿದ್ದಾರೆ. ಇದಲ್ಲದೇ, 6 ಅಡಿ ಎತ್ತರದ ಸಾಂತಾ ಕ್ಲಾಸ್, 7 ಅಡಿ ಎತ್ತರದ 4 ಕೋಟೆ ಬುರುಜುಗಳ ಪ್ರತಿಕೃತಿ ಕೇಕ್‌ಗಳನ್ನು ಪ್ರದರ್ಶನಕ್ಕೆ ಇಡಲಾಗಿದೆ.

ಸಿನಿಮಾ ನಟಿ ರಾಧಿಕಾ ನಾರಾಯಣ್ ಅವರು ಕೇಕ್ ಪ್ರದರ್ಶನವನ್ನು ಬುಧವಾರ ಉದ್ಘಾಟಿಸಿದರು. ಪ್ರದರ್ಶನವು 2022ರ ಜ.2 ರವರೆಗೆ ನಡೆಯಲಿದ್ದು, ಸಾರ್ವಜನಿಕರಿಗೆ ವೀಕ್ಷಣೆಗೆ ಮುಕ್ತ ಅವಕಾಶ ಕಲ್ಪಿಸಲಾಗಿದೆ. ಗ್ರಾಹಕರಿಗೆ ಕೇಕ್‌ಗಳನ್ನು ತಯಾರಿಸಿಕೊಡುವ ವಿಶೇಷ ಕೌಂಟರ್ ಮತ್ತು ಕ್ರಿಸ್‌ಮಸ್ ವಸ್ತುಗಳ ಸಂತೆಯನ್ನೂ ಏರ್ಪಡಿಸಲಾಗಿದೆ ಎಂದು ಆಯೋಜಕ ನರೇಂದ್ರ ಭಾಟಿಯಾ ತಿಳಿಸಿದ್ದಾರೆ.

ಹೊರಗೆ ಹೋಗುವಾಗ ಮುಖಗವಸು ಧರಿಸಿ

ADVERTORIAL

Amruth Innovation for Agriculture

ಎಲ್ಲಾ ರೈತ ಬಾಂಧವರಿಗೆ ರೈತ ದಿನಾಚರಣೆಯ ಶುಭಾಶಯಗಳು



ಅಮೃತ್ ಆರ್ಗ್ಯಾನಿಕ್‌ನಿಂದ ಹೊಸ ಭೂ ಫಲವತ್ತತೆಯ ಉತ್ಪನ್ನ

ಸಾಯಿಲ್ ರಿಚ್

ಗಂಡುಮೆಟ್ಟಿನ ನಾಡು ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲ್ಲೂಕಿನ ಮಲ್ಲಾಡಿಹಳ್ಳಿಯನ್ನು ಯೋಗ, ಆಯುರ್ವೇದ ಗುರು ರಾಘವೇಂದ್ರ ಸ್ವಾಮೀಜಿ ರಾಜ್ಯದ ಭೂಪಟದಲ್ಲಿ ರಾರಾಜಿಸುವಂತೆ ಮಾಡಿದ್ದರು. ಈಗ ರಾಘವೇಂದ್ರ ಸ್ವಾಮೀಜಿ ಅವರ ಶಿಷ್ಯ ಹಾಗೂ ಅನುಯಾಯಿ ಕೆ.ನಾಗರಾಜ್, ಅಮೃತ್ ಆರ್ಗ್ಯಾನಿಕ್ಸ್ ಕಾರ್ಖಾನೆಯ ಮೂಲಕ ಮಲ್ಲಾಡಿಹಳ್ಳಿಯನ್ನು ಜಗದ್ವಿಖ್ಯಾತ ಮಾಡುತ್ತಿದ್ದಾರೆ. ದೊಡ್ಡ ನಗರಗಳಲ್ಲಿ ಕಾರ್ಖಾನೆ ತಯಾರಿಸಲು ಅವಕಾಶಗಳಿದ್ದರೂ, ತನ್ನ ಕರ್ಮಭೂಮಿ ಮಲ್ಲಾಡಿಹಳ್ಳಿಯಲ್ಲಿಯೇ ಕೈಗಾರಿಕೆ ಆರಂಭಿಸಿ ನೂರಾರು ಜನರಿಗೆ ಉದ್ಯೋಗ ದೊರಕಿಸಿಕೊಟ್ಟಿದ್ದಾರೆ. ರೈತರಿಗೆ ಅಗತ್ಯವಾದ ಸಾವಯವ ಗೊಬ್ಬರ, ಜೈವಿಕ ಉತ್ಪನ್ನಗಳ ತಯಾರಿಕೆಯ ಮೂಲಕ ರೈತರ ಸಂಜೀವಿನಿಯಾಗಿದ್ದಾರೆ.

ಕೋವಿಡ್ ನಂತಹ ಜಾಗತಿಕ ಮಟ್ಟದ ರೋಗದಿಂದ ತಲ್ಲಣಗೊಂಡ ಜನ ರಾಸಾಯನಿಕದಿಂದ ಸಾವಯವದತ್ತ ಹೊರಳಿದ್ದಾರೆ. ಆನರ ನಾಡಿಮಿಡಿತ ಅರಿತಿರುವ ಕೆ.ನಾಗರಾಜ್ ಆರೋಗ್ಯವರ್ಧಕ ಸಾವಯವ ಉತ್ಪನ್ನಗಳ ತಯಾರಿಕೆಯಲ್ಲಿ ತೊಡಗಿದ್ದಾರೆ. ಕಾರ್ಖಾನೆಯಲ್ಲಿ ಈಗಾಗಲೇ 120ಕ್ಕೂ ಹೆಚ್ಚು ಸಾವಯವ ಹಾಗೂ ಜೈವಿಕ ಉತ್ಪನ್ನ ತಯಾರಿಸುತ್ತಿದ್ದು, ಮತ್ತೆ ಎರಡು ಹೊಸ ಉತ್ಪನ್ನಗಳನ್ನು ಸೇರ್ಪಡೆ ಮಾಡಿದ್ದಾರೆ.



'ಸಾಯಿಲ್ ರಿಚ್' ಬಳಕೆಯಿಂದ ರೈತರಿಗೆ ಇತರೇ ಗೊಬ್ಬರ ಬಳಕೆಯ ಖರ್ಚಿಗಿಂತ ಶೇ.30ರಷ್ಟು ಉಳಿತಾಯ ಆಗುವುದಲ್ಲದೆ ಶೇ.20 ರಷ್ಟು ಇಳುವರಿ ಹೆಚ್ಚಾಗುತ್ತದೆ.

ಕೆ. ನಾಗರಾಜ್, ಅಮೃತ್ ಕಾರ್ಖಾನೆಯ ಎಂ.ಡಿ.

ಕಾರ್ಖಾನೆಯ ಸಂಪರ್ಕಕ್ಕೆ

Address: **Amruth organic Fertilizers, Malladihalli 577531, Holalkere Taluk, Chitradurga District.**
Email: **amruth.organic@gmail.com**
Info@amruthgroup.net
Website: **www.amruthgroup.net**
YouTube: **Amruth organic fertilizers**

7338178090, 7338178082, 9380404247, 9900066307

ಉತ್ಕೃಷ್ಟ ಬೆಳೆ ಪೋಷಕ 'ಸಾಯಿಲ್ ರಿಚ್'

ಅರ್ಕ ಮೈಕ್ರೋಬಿಯಲ್ ಕನ್ಸಾರ್ಷಿಯ ಎಂಬ ಉತ್ಪನ್ನದಿಂದ ಅಮೃತ್ ಕಾರ್ಖಾನೆಯಲ್ಲಿ 'ಸಾಯಿಲ್ ರಿಚ್' ಎಂಬ ದ್ರವ ರೂಪದ ಗೊಬ್ಬರ ತಯಾರಿಸಲಾಗುತ್ತಿದೆ. ಇದು ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಯಿಂದ ಮಾನ್ಯತೆ ಪಡೆದಿವೆ. ಇದನ್ನು ಭೂಮಿಗೆ ಸೇರಿಸುವುದರಿಂದ ಹೂವು, ಹಣ್ಣು, ತರಕಾರಿ ಬೆಳೆಗಳು, ಅಡಿಕೆ, ಕಬ್ಬು, ಭತ್ತ, ಕಾಫಿ, ಈರುಳ್ಳಿ, ದಾಳಿಂಬೆ, ಆಲೂಗಡ್ಡೆ, ಮಿಡಿಸೌತೆ, ಪೈನಾಪಲ್, ಮೆಣಸು ಮತ್ತಿತರ ಬೆಳೆಗಳಲ್ಲಿ ಹೆಚ್ಚು ಇಳುವರಿ ಪಡೆಯಬಹುದು. ಇದರಲ್ಲಿನ ಜೈವಿಕ ಸೂಕ್ಷ್ಮಾಣು ಜೀವಿಗಳು ಭೂಮಿಯಲ್ಲಿನ ಸಾರಜನಕ, ರಂಜಕ, ಪೊಟ್ಯಾಷ್, ಜಿಂಕ್ ಸೂಕ್ಷ್ಮ ಪೋಷಕಾಂಶಗಳನ್ನು ಬೆಳೆಗಳಿಗೆ ಒದಗಿಸಿಕೊಡುತ್ತವೆ ಎನ್ನುತ್ತಾರೆ ಕೆ.ನಾಗರಾಜ್.

ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಯಿಂದ ಆರ್ಕ ವೇಸ್ಟ್ ಡೀಕಂಪೋಸರ್ ಎಂಬ ಮತ್ತೊಂದು ತಂತ್ರಜ್ಞಾನದ ಪರವಾನಿಗೆ ಪಡೆದಿದ್ದೇವೆ. ಇದನ್ನು ಬಳಸುವುದರಿಂದ ಕೇವಲ ಒಂದೂವರೆ ತಿಂಗಳಲ್ಲಿ ಗೊಬ್ಬರ ತಯಾರಿಸಬಹುದು. ತೆಂಗು, ಅಡಿಕೆ, ಕಾಫಿ ತೋಟಗಳು ಹಾಗೂ ಹೊಲಗಳಲ್ಲಿ ಉದುರುವ ಎಲೆಗಳ ಮೇಲೆ ಈ ದ್ರಾವಣ ಸಿಂಪಡಿಸಿದರೆ ಬಹುಬೇಗನೆ ಹಸಿರೆಲೆ ಗೊಬ್ಬರವಾಗಿ ಮಾರ್ಪಟ್ಟು ಉತ್ಕೃಷ್ಟ ಬೆಳೆ ಬರುವಂತೆ ಮಾಡುತ್ತದೆ ಎನ್ನುತ್ತಾರೆ ಕಂಪನಿಯ ಸಿಇಒ ಅಭಿಲಾಷ್.

ನಾಗರಾಜ್ ಕೇವಲ ಲಾಭದ ದೃಷ್ಟಿಕೋನದಿಂದ ಕಾರ್ಖಾನೆ ಆರಂಭಿಸಿಲ್ಲ. ಗ್ರಾಮೀಣ ಪ್ರದೇಶದ ಸುಮಾರು 300ರಿಂದ 400 ಜನರಿಗೆ ಉದ್ಯೋಗ ನೀಡಿ ಅವರ ಬಾಳಿಗೆ ಬೆಳಕಾಗಿದ್ದಾರೆ.

ನಾಗರಾಜ್ ಅವರ ಸಾಧನೆಗೆ ಸಾಕಷ್ಟು ಪ್ರಶಸ್ತಿಗಳು ಅರಸಿ ಬಂದಿವೆ. ಸಾವಯವ ಕೃಷಿ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆಗಾಗಿ ಡಾ.ಕೆ.ಶಿವರಾಮ ಕಾರಂತ ಸದ್ಭಾವನಾ ರಾಷ್ಟ್ರ ಪ್ರಶಸ್ತಿ, ಅತ್ಯುತ್ತಮ ಉದ್ಯಮಿ ಪ್ರಶಸ್ತಿ, ನ್ಯಾಷನಲ್ ಪ್ರೆಸ್ ಕೌನ್ಸಿಲ್ ನಿಂದ ಮದರ್ ಥೆರೇಸಾ ರಾಷ್ಟ್ರೀಯ ಪ್ರಶಸ್ತಿ ಹಾಗೂ ಈ ವರ್ಷ ದುಬೈನಲ್ಲಿ ನಡೆದ ಸಮಾರಂಭದಲ್ಲಿ ಅತ್ಯುತ್ತಮ ಸಾಧಕ ಉದ್ಯಮಿ ಪ್ರಶಸ್ತಿ ಸ್ವೀಕರಿಸಿದ್ದಾರೆ.

ಅಮೃತ್ ಸಂಸ್ಥೆಯಿಂದ ಸಿರಿಧಾನ್ಯ ಕೆಫೆ

ಅಮೃತ್ ಸಂಸ್ಥೆ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಜನರ ಆರೋಗ್ಯವೃದ್ಧಿಗೆ ಸಿರಿಧಾನ್ಯ ಕೆಫೆ ಆರಂಭಿಸಲು ಸಜ್ಜಾಗಿದೆ. ಚನ್ನಗಿರಿ ತಾಲ್ಲೂಕಿನ ಕಾರಿಗನೂರು ಸಮೀಪ ಕಾರ್ಖಾನೆಗೆ ಭರ್ಜರಿ ತಯಾರಿ ನಡೆಸಿದ್ದು, ಸಂಕ್ರಾಂತಿಯ ವೇಳೆಗೆ ಬಿಡುಗಡೆ ಮಾಡುವ ಚಿಂತನೆ ಮಾಡಿದ್ದಾರೆ. ಸಾವಯವ ಗೊಬ್ಬರದ ಮೂಲಕ ಪರೋಕ್ಷವಾಗಿ ಜನರ ಆರೋಗ್ಯದ ಕಾಳಜಿ ವಹಿಸಿದ್ದ ನಾಗರಾಜ್ ಈಗ ಸಿರಿಧಾನ್ಯಗಳ ಉತ್ಪನ್ನ ತಯಾರಿಸುವ ಮೂಲಕ ನೇರವಾಗಿ ಜನರ ಆರೋಗ್ಯವೃದ್ಧಿಗೆ ಮುಂದಾಗಿದ್ದಾರೆ.

ರಾಗಿ, ಜೋಳ, ಸಜ್ಜೆ, ನವಣೆ, ಸಾಮೆ, ಅರ್ಕದಿಂದ ಮಿಶ್ರಣ ಪುಡಿ, ಬಿಸ್ಕೇಟ್, ಬ್ರೆಡ್ ತಯಾರಿಸಲಾಗುವುದು. ರಾಗಿ, ನವಣೆ, ಸಜ್ಜೆ, ಸಾಮೆಗಳನ್ನು ಶುಚಿಗೊಳಿಸಿ ಒಂದು, ಎರಡು, ಐದು, ಹತ್ತು ಕೆಜಿ ಪ್ಯಾಕೆಟ್ ಮಾಡಿ ಮಾರಾಟ ಮಾಡುವ ಉದ್ದೇಶವೂ ಇದೆ ಎನ್ನುತ್ತಾರೆ ನಾಗರಾಜ್.

ದುಬೈನಲ್ಲಿ ಅತ್ಯುತ್ತಮ ಉದ್ಯಮಿ ಪ್ರಶಸ್ತಿ ಸ್ವೀಕಾರ.

ರೈತರು, ಕೃಷಿ ಕಾಲೇಜು ವಿದ್ಯಾರ್ಥಿಗಳಿಗೆ ಸಾವಯವ ಪಾಠ ಹೇಳುತ್ತಿರುವ ನಾಗರಾಜ್.

ರೈತರಿಗೆ ಕೃಷಿ ಮಾಹಿತಿ ನೀಡುತ್ತಿರುವ ಅಭಿಲಾಷ್.

ಅಡಿಕೆ ಮತ್ತು ಇತರೆ ಬೆಳೆಗಳಿಗೆ ರಾಮಬಾಣ

ಈಜುತ್ತಾ ಆತ್ಮವಿಶ್ವಾಸವನ್ನೇ ಗೆದ್ದ ವಿಶ್ವಾಸ್

• ರಂಜಿತ್ ಪುಣ್ಚಪ್ಪಾಡಿ

ಹೊಸ ಬೆಳಕು

ಬೆಂಗಳೂರು: ಬದ್ಧತೆ ಹಾಗೂ ತಾಳ್ಮೆಯನ್ನು ಮೈಗೂಡಿಸಿಕೊಂಡಿರುವ ಕೆ.ಎಸ್.ವಿಶ್ವಾಸ್, ಅಂತರರಾಷ್ಟ್ರೀಯ ಪ್ಯಾರಾ ಈಜು ಚಾಂಪಿಯನ್‌ಷಿಪ್‌ಗಳಲ್ಲಿ ಇದುವರೆಗೆ 15 ರಾಷ್ಟ್ರೀಯ ಹಾಗೂ 7 ಅಂತರರಾಷ್ಟ್ರೀಯ ಪದಕಗಳನ್ನು ಜಯಗಳಿಸಿದ್ದಾರೆ. ಆಕಸ್ಮಿಕವಾಗಿ ಸಂಭವಿಸಿದ ಅವಘಡದಲ್ಲಿ ಎರಡು ಕೈಗಳನ್ನೂ ಕಳೆದುಕೊಂಡಿದ್ದರೂ ಎದೆಗುಂದದ ಅವರು ದೈಹಿಕ ನ್ಯೂನತೆಗಳನ್ನು ಮೀರಿ ಈ ಸಾಧನೆ ಮಾಡಿರುವುದು ವಿಶೇಷ.

ಕೋಲಾರದ ಕಾಳಹಸ್ತಿಪುರದವರಾದ ವಿಶ್ವಾಸ್ 21 ವರ್ಷಗಳಿಂದ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಇವರ ತಂದೆ ಸತ್ಯನಾರಾಯಣ ಮೂರ್ತಿ, ತಾಯಿ ಉಷಾ. ವಿಶ್ವಾಸ್ ಹುಟ್ಟುತ್ತಲೇ ಅಂಗವಿಕಲರಾಗಿರಲಿಲ್ಲ. ಆದರೆ ದಿಢೀರ್ ಎದುರಾದ ದುರಂತವೊಂದು ಅವರ ಬದುಕನ್ನೇ ಕತ್ತಲೆಗೆ ತಳ್ಳಿತ್ತು. ಕಠಿಣ ಪರಿಶ್ರಮದಿಂದಾಗಿ ಅವರ ಬದುಕಿನ ದಿಕ್ಕೇ ಬದಲಾಯಿತು.

ನಾಲ್ಕನೇ ತರಗತಿಯಲ್ಲಿದ್ದಾಗ ಹೊಸ ಮನೆ ನಿರ್ಮಿಸುವ ಕೆಲಸ ಕಾರ್ಯಗಳು ನಡೆಯುತ್ತಿದ್ದವು. ತಾರಸಿಯ ಕಾಂಕ್ರಿಟ್‌ಗೆ ನೀರುಣಿಸಲು

ಕೆ.ಎಸ್.ವಿಶ್ವಾಸ್

ಮೇಲೆ ಹೋಗಿದ್ದ ವಿಶ್ವಾಸ್ ಆಯ ತಪ್ಪಿ ಬಿದ್ದರು. ಆಧಾರಕ್ಕಾಗಿ ಎರಡೂ ಕೈಗಳಿಂದ ವಿದ್ಯುತ್ ತಂತಿಯನ್ನು ಹಿಡಿದುಕೊಂಡರು. ಇವರನ್ನು ಕಾಪಾಡಲು ಬಂದ ಇವರ ತಂದೆ ವಿದ್ಯುತ್ ಸ್ಪರ್ಶದಿಂದಾಗಿ ಸ್ಥಳದಲ್ಲೇ ಸಾವಿಗೀಡಾದರು. ಬಾಲಕ ವಿಶ್ವಾಸ್, ಸುಮಾರು ಎರಡು ತಿಂಗಳ ಕಾಲ ಕೋಮಾದಲ್ಲಿದ್ದರು. ಪ್ರಜ್ಞೆ ಬಂದಾಗ ಅವರ ಎರಡೂ ಕೈಗಳನ್ನು ಕತ್ತರಿಸಿ ತೆಗೆಯಲಾಗಿತ್ತು. ಎರಡೂ ಕೈಗಳನ್ನು ಕಳೆದುಕೊಂಡ ವಿಶ್ವಾಸ್, ಪ್ರತಿಯೊಂದು ಕಾರ್ಯಕ್ಕೂ ಇತರರನ್ನು ಅವಲಂಬಿಸಬೇಕಾಗಿತ್ತು.

ಬೆಂಗಳೂರಿನಲ್ಲಿ ಬಿ.ಕಾಂ ಪದವಿ ಪಡೆದ ವಿಶ್ವಾಸ್, ಉದ್ಯೋಗಕ್ಕಾಗಿ ಅಲೆದಾಡಿದರು. ಪ್ರತಿ ಹಂತದಲ್ಲೂ ಅಂಗವೈಕಲ್ಯ ಅಡ್ಡಿಯಾಯಿತು. ಉದ್ಯೋಗ ಸಿಗದೆ ಖಿನ್ನತೆಗೂ ಒಳಗಾದರು.

'ತಂದೆ ಪ್ರಾಣ ತ್ಯಾಗ ಮಾಡಿ ನನ್ನನ್ನು ಬದುಕಿಸಿದ್ದಾರೆ. ಮೊದಲು ನನ್ನನ್ನು ನಾನು ಒಪ್ಪಿಕೊಳ್ಳಬೇಕು. ಏನನ್ನಾದರೂ ಸಾಧಿಸಿ ಜನರು ನನ್ನನ್ನು ಒಪ್ಪಿಕೊಳ್ಳುವಂತೆ ಮಾಡಬೇಕು ಎಂದು ನಿರ್ಧರಿಸಿದೆ. ಆಗ ಈಜು ಕಲಿತು ಸ್ಪರ್ಧೆಗಳಲ್ಲಿ ಭಾಗವಹಿಸಲು ನಿರ್ಧರಿಸಿದೆ. ವಿಜಯನಗರದ ಆಕ್ವಾಟಿಕ್ ಸೆಂಟರ್ ಈಜು ತರಬೇತಿ ಸಂಸ್ಥೆ ಸೇರಿದೆ' ಎಂದು ವಿಶ್ವಾಸ್ ತಮ್ಮ ಬದುಕಿನ ಅನುಭವ ಬಿಚ್ಚಿಟ್ಟರು.

'ತರಬೇತಿ ಕಠಿಣವಾಯಿತ್ತು. ಕೆಲವೊಮ್ಮೆ ತರಬೇತಿ ಮುಗಿದ ನಂತರ ಅಲ್ಲೇ ನಿದ್ರೆ ಮಾಡುತ್ತಿದ್ದೆ. ಎಸ್.ಆರ್.ಸಿಂಧ್ಯಾ ಅವರು ಒಂದು ರೂಪಾಯಿಯನ್ನೂ ಪಡೆಯದೇ ತರಬೇತಿ ನೀಡಿದರು. ಅವರು ನನ್ನ ಗಾಡ್‌ಫಾದರ್. ಜತೆಗೆ, ಆಸ್ಥಾ ಸಂಸ್ಥೆಯ ಸುನಿಲ್ ಜೈನ್ ಪ್ರೋತ್ಸಾಹಿಸಿದರು. ಕಷ್ಟದಲ್ಲಿದ್ದಾಗ ನನ್ನ ಅಣ್ಣ ಹಾಗೂ ಕುಟುಂಬದ ಎಲ್ಲ ಸದಸ್ಯರು ನೆರವಾಗಿದ್ದಾರೆ. ಬಾಳಿನಲ್ಲಿ ಜೊತೆಯಾಗಿರುವ ಪತ್ನಿ ಲಕ್ಷ್ಮೀ ಸದಾ ಪ್ರೋತ್ಸಾಹ ನೀಡುತ್ತಿದ್ದಾರೆ' ಎಂದು ಅವರು ತಿಳಿಸಿದರು.

ಮಾರ್ಷಲ್ ಆರ್ಟ್ಸ್ ಮತ್ತು ನೃತ್ಯವನ್ನೂ ವಿಶ್ವಾಸ್ ಅಭ್ಯಾಸ ಮಾಡಿದ್ದಾರೆ. 'ನಾಟ್ಯಲೋಕ'ದ ಆನಂದ್ ನೃತ್ಯ ಕಲಿಸಿದ್ದಾರೆ.

ಹಲವು ಪ್ರಶಸ್ತಿಗಳು ವಿಶ್ವಾಸ್ ಅವರನ್ನು ಅರಸಿ ಬಂದಿವೆ. 2018ರಲ್ಲಿ ಉಪರಾಷ್ಟ್ರಪತಿ ವೆಂಕಯ್ಯ ನಾಯ್ಡು ಅವರಿಂದ 'ನ್ಯಾಷನಲ್ ರೋಲ್ ಮಾಡೆಲ್' ಪ್ರಶಸ್ತಿ ಸ್ವೀಕರಿಸಿದ್ದಾರೆ. ಅಮೆರಿಕದ 'ಸ್ಪೆಷಲ್ ಗೋಲ್ಡನ್ ಅಚೀವರ್' ಪ್ರಶಸ್ತಿಯೂ ಇವರಿಗೆ ಸಂದಿದೆ.

ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕೆಂಪೇಗೌಡ ಪ್ರಶಸ್ತಿ, ವಿಶ್ವೇಶ್ವರಯ್ಯ ರತ್ನ ಪ್ರಶಸ್ತಿ, ರಾಜ್ಯ ಅಂಗವಿಕಲ ಸಂಸ್ಥೆಯಿಂದ ರಾಜ್ಯಮಟ್ಟದ ಪ್ರಶಸ್ತಿ ಹಾಗೂ ಮುಂಬೈನ ಆ್ಯಂಪಲ್ ಮಿಷನ್ 'ಶೂರ್ ವೀರ್ ಪ್ರಶಸ್ತಿ'ಗೆ ಭಾಜನರಾಗಿದ್ದಾರೆ.

'ನಾವು ಕೈಗೆತ್ತಿಕೊಂಡಿರುವ ಕಾರ್ಯವನ್ನು ಆತ್ಮವಿಶ್ವಾಸದಿಂದ ಹಾಗೂ ಇಷ್ಟಪಟ್ಟು ಮಾಡಬೇಕು. ಆಗ ಯಶಸ್ಸು ಲಭಿಸುತ್ತದೆ' ಎಂದು ವಿಶ್ವಾಸ್ ಹೇಳುತ್ತಾರೆ.

ಸಾಧನೆಯ ಪಥ

- ಬೆಳಗಾವಿಯಲ್ಲಿ 2015ರಲ್ಲಿ ನಡೆದ ರಾಷ್ಟ್ರೀಯ ಪ್ಯಾರಾಲಿಂಪಿಕ್ ಕ್ರೀಡಾಕೂಟದ ಈಜು ಸ್ಪರ್ಧೆಯಲ್ಲಿ ಮೂರು ವಿಭಾಗಗಳಲ್ಲಿ ಬೆಳ್ಳಿ ಪದಕ
- 2016ರಲ್ಲಿ ಕೆನಡಾದಲ್ಲಿ ನಡೆದ ಅಂತರರಾಷ್ಟ್ರೀಯ ಪ್ಯಾರಾ ಈಜು ಚಾಂಪಿಯನ್‌ಶಿಪ್‌ನಲ್ಲಿ ಎರಡು ಬೆಳ್ಳಿ ಹಾಗೂ ಒಂದು ಕಂಚು
- 2017ರಲ್ಲಿ ಉದಯಪುರದಲ್ಲಿ ನಡೆದ ರಾಷ್ಟ್ರೀಯ ಪ್ಯಾರಾ ಈಜು ಚಾಂಪಿಯನ್‌ಶಿಪ್‌ನಲ್ಲಿ ಎರಡು ಬೆಳ್ಳಿ ಹಾಗೂ 1 ಸ್ವರ್ಣ ಪದಕ
- 2017 ಮತ್ತು 2018ರಲ್ಲಿ ಜರ್ಮನಿಯಲ್ಲಿ ನಡೆದ ಅಂತರಾಷ್ಟ್ರೀಯ ಪ್ಯಾರಾ ಈಜು ಚಾಂಪಿಯನ್‌ಶಿಪ್‌ನಲ್ಲಿ ಸ್ಪರ್ಧಿಸಿ ಬೆಳ್ಳಿ ಮತ್ತು ಕಂಚು ಪದಕ
- 2018ರಲ್ಲಿ ಬೆಂಗಳೂರಿನಲ್ಲಿ ನಡೆದ ಇಂಡಿಯನ್ ಓಪನ್ ಸ್ವಿಮ್ಮಿಂಗ್ ಸ್ಪರ್ಧೆಯಲ್ಲಿ 5 ಸ್ವರ್ಣ ಪದಕಗಳು

ಸಂಕ್ಷಿಪ್ತ ಸುದ್ದಿ

ತೇಜಶ್ರೀಗೆ ಪು.ತಿ.ನ.ಕಾವ್ಯ ನಾಟಕ ಪುರಸ್ಕಾರ

ಬೆಂಗಳೂರು: ಪು.ತಿ.ನ ಟ್ರಸ್ಟ್ ವತಿಯಿಂದ ನೀಡಲಾಗುವ 2020ನೇ ಸಾಲಿನ 'ಪು.ತಿ.ನ.ಕಾವ್ಯ ನಾಟಕ ಪುರಸ್ಕಾರ'ಕ್ಕೆ ತೇಜಶ್ರೀ ಅವರನ್ನು ಆಯ್ಕೆ ಮಾಡಲಾಗಿದೆ.


ತೇಜಶ್ರೀ

ಇದೇ 26ರಂದು ಬೆಳಿಗ್ಗೆ 10.30ಕ್ಕೆ ನಡೆಯಲಿರುವ ಕಾರ್ಯಕ್ರಮದಲ್ಲಿ ಟ್ರಸ್ಟ್‌ನ ಅಧ್ಯಕ್ಷ ಎಚ್.ಎಸ್.ವೆಂಕಟೇಶಮೂರ್ತಿ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಆನ್‌ಲೈನ್ ಗೇಮ್: ತೀರ್ಪು ಕಾಯ್ದಿರಿಸಿದ ಹೈಕೋರ್ಟ್

ಬೆಂಗಳೂರು: ಆನ್ ಲೈನ್ ಗೇಮ್‌ಗಳನ್ನು ನಿರ್ಬಂಧಿಸುವ ದಿಸೆಯಲ್ಲಿ ಕರ್ನಾಟಕ ಪೊಲೀಸ್ ಕಾಯ್ದೆಗೆ ತರಲಾದ ತಿದ್ದುಪಡಿ ಪ್ರಶ್ನಿಸಿದ ಅರ್ಜಿಗಳ ವಿಚಾರಣೆಯನ್ನು ಹೈಕೋರ್ಟ್ ಪೂರ್ಣಗೊಳಿಸಿದೆ.

ಕಾಯ್ದೆ ತಿದ್ದುಪಡಿ ಪ್ರಶ್ನಿಸಿ, 'ಆಲ್ ಇಂಡಿಯಾ ಗೇಮಿಂಗ್ ಫೆಡರೇಷನ್' ಸೇರಿದಂತೆ ಇತರ ಕಂಪನಿಗಳು ಸಲ್ಲಿಸಿದ್ದ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಆಲಿಸಿತು.

ವಾದ-ಪ್ರತಿವಾದ ಬುಧವಾರ ಪೂರ್ಣಗೊಂಡಿದ್ದು, ತೀರ್ಪು ಕಾಯ್ದಿರಿಸಿರುವುದಾಗಿ ನ್ಯಾಯಪೀಠ ತಿಳಿಸಿತು.

ವಕೀಲ ರಂಜಿತ್ ಶ್ರೀನಿವಾಸ್ ಹತ್ಯೆಗೆ ಖಂಡನೆ

ಬೆಂಗಳೂರು: 'ಕೇರಳದ ವಕೀಲ ರಂಜಿತ್ ಶ್ರೀನಿವಾಸ್ ಹತ್ಯೆಯ ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು' ಎಂದು ರಾಜ್ಯ ವಕೀಲರ ಪರಿಷತ್ ಆಗ್ರಹಿಸಿದೆ.

ಎಲ್.ಶ್ರೀನಿವಾಸಬಾಬು ಅವರ ಅಧ್ಯಕ್ಷತೆಯಲ್ಲಿ ನಡೆದ ವಕೀಲರ ಪರಿಷತ್ ಸಭೆಯಲ್ಲಿ, ಸದಸ್ಯ ಎಸ್. ಹರೀಶ್ ಈ ವಿಷಯ ಪ್ರಸ್ತಾಪಿಸಿ ಮಾತನಾಡಿದರು. 'ಹತ್ಯೆಗೊಳಗಾದ ರಂಜಿತ್ ಕುಟುಂಬದ ದುಃಖದಲ್ಲಿ ನಾವೂ ಭಾಗಿಯಾಗಿದ್ದೇವೆ. ಕೇರಳ ಪೊಲೀಸರು ಕೃತ್ಯ ಎಸಗಿದವರನ್ನು ಪತ್ತೆ ಹಚ್ಚಿ ಕಠಿಣ ಶಿಕ್ಷೆ ವಿಧಿಸಲು ಕ್ರಮಕೈಗೊಳ್ಳಬೇಕು' ಎಂದು ಸಭೆ ಆಗ್ರಹಿಸಿತು.

'ಕಲೆ-ಕರಕುಶಲ ಮೇಳ' ನಾಳೆಯಿಂದ

ಬೆಂಗಳೂರು: ಕ್ರಿಸ್‌ಮಸ್ ಹಾಗೂ ಹೊಸ ವರ್ಷಾಚರಣೆ ಪ್ರಯುಕ್ತ ಕರ್ನಾಟಕ ಚಿತ್ರಕಲಾ ಪರಿಷತ್ತಿನ ಆವರಣದಲ್ಲಿ ಇದೇ 24ರಿಂದ 2022ರ ಜ.2ರವರೆಗೆ ಬೆಳಿಗ್ಗೆ 11ರಿಂದ ಸಂಜೆ 7 ಗಂಟೆಯವರೆಗೆ 'ಕಲೆ ಮತ್ತು ಕರಕುಶಲ ವಸ್ತುಗಳ ಪ್ರದರ್ಶನ ಹಾಗೂ ಮಾರಾಟ ಮೇಳ' ಏರ್ಪಡಿಸಲಾಗಿದೆ.

ದೇಶದ ವಿವಿಧ ಭಾಗಗಳ ಕುಶಲಕರ್ಮಿಗಳಿಗೆ ಸೂಕ್ತ ಮಾರುಕಟ್ಟೆ ಒದಗಿಸುವುದು ಈ ಮೇಳದ ಉದ್ದೇಶ. 80ಕ್ಕೂ ಹೆಚ್ಚು ಮಳಿಗೆಗಳಲ್ಲಿ ಕುಶಲಕರ್ಮಿಗಳು ತಯಾರಿಸಿದ ತರಹೇವಾರಿ ಕರಕುಶಲ ವಸ್ತುಗಳು, ಆಟಿಕೆ, ಉಡುಪು, ಮರದ ಆಟಿಕೆ, ಆಭರಣ, ಕಲಾಕೃತಿ, ಪೀಠೋಪಕರಣ, ಪಿಂಗಾಣಿ ವಸ್ತುಗಳು ಸೇರಿದಂತೆ ನೂರಾರು ಬಗೆಯ ಉತ್ಪನ್ನಗಳು ಒಂದೇ ಸೂರಿನಡಿ ಸಿಗುತ್ತವೆ ಎಂದು ಪ್ರಕಟಣೆ ತಿಳಿಸಿದೆ.

ಸಂಪರ್ಕ: 9611835597

ಶ್ರೀಮಂತ, ವಿದ್ಯಾವಂತ ಮುಸ್ಲಿಂ ಕುಟುಂಬದ ಅಪರೂಪದ ಪ್ರಕರಣ

ಮಲತಾಯಿ ಮಡಿಲಿಗೆ ಮಗು ಬೇಡ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಕ್ಕಳ ಅಭಿರಕ್ಷೆ (ಕಸ್ಟಡಿ) ಎಂಬುದು ಧರ್ಮ ಮತ್ತು ನಂಬಿಕೆಗಳನ್ನು ದಾಟಿ ನಿಂತ ಸಂಕೀರ್ಣ ವಿಚಾರ. ಅದರಲ್ಲೂ ಮುಸ್ಲಿಂ ಕುಟುಂಬಗಳ ವಿವಾಹ ವಿಚ್ಛೇದನ ಪ್ರಕರಣಗಳಲ್ಲಿ ಗಂಡ–ಹೆಂಡತಿ ಪ್ರತ್ಯೇಕವಾಗಿ ಇರುವಾಗ ಮಗುವಿನ ಪಾಲನೆ, ಪೋಷಣೆಗೆ ಹೆತ್ತ ತಾಯಿಯೇ ಸೂಕ್ತ; ಇದು ಅವಳ ಹಕ್ಕು ಕೂಡಾ. ಹಾಗಾಗಿ, ಮಲ ತಾಯಿಯ ಮಡಿಲಿಗೆ ಮಗುವನ್ನು ಒಪ್ಪಿಸುವುದು ಅಥವಾ ಮಗುವಿನ ತಂದೆಯ ಬಳಿಗೆ ಕಳುಹಿಸುವುದು ಸರ್ವಥಾ ಸಮರ್ಥನೀಯವಲ್ಲ' ಎಂದು ಹೈಕೋರ್ಟ್ ಪ್ರತಿಪಾದಿಸಿದೆ.

ಶ್ರೀಮಂತ ಮತ್ತು ವಿದ್ಯಾವಂತ ಮುಸ್ಲಿಂ ದಂಪತಿಯ ವಿಚ್ಛೇದನ ಪ್ರಕರಣವೊಂದರಲ್ಲಿ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ಈ ತೀರ್ಪು ನೀಡಿದ್ದು, ಅರ್ಜಿದಾರ ಪತಿಗೆ ₹ 50 ಸಾವಿರ ದಂಡ ವಿಧಿಸಿದೆ.

> **ವಿಚ್ಛೇದನ ಕೋರಿದ ನಂತರ ಹೆಂಡತಿ ಮೊಹಮ್ಮದೀಯ ಕಾನೂನು ಅನುಸಾರ ಸ್ವತಂತ್ರ ಜೀವನ ನಡೆಸುತ್ತಿದ್ದಾಳೆ. ಮಗು, ಆಕೆಯ ಮಮತೆಯಲ್ಲೇ ಹೆಚ್ಚು ಸುರಕ್ಷಿತ ಭಾವನೆ ಅನುಭವಿಸುತ್ತಿದೆ.**
>
> **ಕೃಷ್ಣ ಎಸ್.ದೀಕ್ಷಿತ್,** ನ್ಯಾಯಮೂರ್ತಿ

'ನನ್ನ ಮಗನನ್ನು ನನ್ನೊಟ್ಟಿಗೇ ಇರಿಸಿಕೊಳ್ಳಲು ನಿರ್ದೇಶಿಸಬೇಕು' ಎಂದು ಕೋರಿ ಬೆಂಗಳೂರು ನಿವಾಸಿ 39 ವರ್ಷದ ಜಿ.ಕೆ.ಮೊಹಮ್ಮದ್ ಮುಷ್ತಾಕ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ವಜಾಗೊಳಿಸಿರುವ ನ್ಯಾಯಪೀಠ, 'ದಂಡದ ಮೊತ್ತವನ್ನು ಒಂದು ತಿಂಗಳೊಳಗೆ ಪತ್ನಿಗೆ ನೀಡಬೇಕು. ತಪ್ಪಿದಲ್ಲಿ ಮಗುವಿನ ಭೇಟಿಗೆ ಕಲ್ಪಿಸಲಾಗಿರುವ ಅವಕಾಶವನ್ನು ಅಮಾನತುಗೊಳಿಸಲಾಗುವುದು' ಎಂದು ಎಚ್ಚರಿಸಿದೆ.

'ಪತಿ–ಪತ್ನಿಯ ನಡುವೆ ಬಾಕಿ ಇರುವ ಎಂಟು ಪ್ರಕರಣಗಳನ್ನು ವಿಚಾರಣಾ ನ್ಯಾಯಾಲಯಗಳು ಮುಂದಿನ ಒಂಬತ್ತು ತಿಂಗಳೊಳಗಾಗಿ ವಿಲೇವಾರಿ ಮಾಡಬೇಕು, ಈ ಕುರಿತ ವರದಿಯನ್ನು ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ಅವರಿಗೆ ತಲುಪಿಸಬೇಕು' ಎಂದೂ ಆದೇಶಿಸಿದೆ.

ಪ್ರಕರಣವೇನು?: ಬೆಂಗಳೂರಿನ 'ಹನಿವೆಲ್ ಟೆಕ್ನಾಲಜಿ ಸಲ್ಯೂಷನ್ಸ್'ನಲ್ಲಿ ಸಾಫ್ಟ್‌ವೇರ್ ಉದ್ಯೋಗಿಯಾಗಿರುವ ಮೊಹಮ್ಮದ್ ಮುಷ್ತಾಕ್, ದಾವಣಗೆರೆಯ 37 ವರ್ಷದ ಲೆಕ್ಕ ಪರಿಶೋಧಕಿ ಆಯೇಷಾ ಬಾನು ಅವರನ್ನು 2009ರಲ್ಲಿ ಮದುವೆಯಾದರು. ಕೆಲಕಾಲ ಅಮೆರಿಕದ ಅರಿಝೋನಾದಲ್ಲೂ ನೆಲೆಸಿದ್ದ, ಸುನ್ನಿ ಮುಸ್ಲಿಂ ಪಂಗಡಕ್ಕೆ ಸೇರಿದ ಈ ದಂಪತಿಗೆ 2013ರ ಆಗಸ್ಟ್ 1ರಂದು ಗಂಡು ಮಗು ಜನಿಸಿತು. ನಂತರ ಇಬ್ಬರ ನಡುವೆ ಉಂಟಾದ ಮನಸ್ತಾಪಗಳು ಈಗ ವಿವಾಹ ವಿಚ್ಛೇದನದ ಹಾದಿ ಸವೆಸುತ್ತಿವೆ. ಬೆಂಗಳೂರಿನ ಕೌಟುಂಬಿಕ ನ್ಯಾಯಾಲಯದಲ್ಲಿ ವಿಚ್ಛೇದನ ವ್ಯಾಜ್ಯ, ಪೋಷಕರು ಮತ್ತು ಮಕ್ಕಳ ಕಾಯ್ದೆಯಡಿ ವ್ಯಾಜ್ಯ, ಮಾನನಷ್ಟ ಮೊಕದ್ದಮೆ, ವಿಚಾರಣಾ ನ್ಯಾಯಾಲಯದಲ್ಲಿ ಕ್ರಿಮಿನಲ್ ಕೇಸುಗಳು ಮತ್ತು ಹೈಕೋರ್ಟ್‌ನಲ್ಲಿರುವ ಕ್ರಿಮಿನಲ್ ಅರ್ಜಿಯೂ ಸೇರಿದಂತೆ ದಂಪತಿಯ ನಡುವೆ ಒಟ್ಟು ಎಂಟು ಪ್ರಕರಣ ಕಾನೂನು ಸಂಘರ್ಷ ನಡೆಸಿವೆ..!

'ಪತಿ ವರದಕ್ಷಿಣೆ ಕಿರುಕುಳ ನೀಡುತ್ತಿದ್ದು, ಮಾನಸಿಕ ಹಿಂಸೆಯಿಂದ ಯಾತನೆ ಅನುಭವಿಸುತ್ತಿದ್ದೇನೆ' ಎಂಬುದು ಪತ್ನಿಯ ಆರೋಪ. 'ಬದುಕು ಹೊಂದಾಣಿಕೆಯಾಗುತ್ತಿಲ್ಲ' ಎಂಬುದು ಪತಿಯ ಪ್ರತ್ಯಾರೋಪ.

ವಿಚ್ಛೇದನ ನೀಡುವಂತೆ ಕೋರಿದ ಬಳಿಕ ಮೊಹಮ್ಮದ್ ಮುಷ್ತಾಕ್ ಮತ್ತೊಂದು ಮದುವೆಯಾಗಿದ್ದು, ಎರಡನೇ ಹೆಂಡತಿಯಿಂದ ಒಂದು ಹೆಣ್ಣು ಮಗು ಹೊಂದಿದ್ದಾರೆ.

ಏತನ್ಮಧ್ಯೆ ವಿಚ್ಛೇದನದ ಅರ್ಜಿ ದಾಖಲಾಗುತ್ತಿದ್ದಂತೆ ಅಯೇಷಾ ಬಾನು ಮಗನನ್ನು ತಮ್ಮ ಬಳಿಯೇ ಇರಿಸಿಕೊಂಡು ಸಲಹುತ್ತಿದ್ದಾರೆ. ಆದರೆ ಪತಿ, 'ಆಯೇಷಾ ಮಗುವನ್ನು ಚೆನ್ನಾಗಿ ನೋಡಿಕೊಳ್ಳುವುದಿಲ್ಲ. ನಾನು ಸಾಕಷ್ಟು ಶ್ರೀಮಂತನಿದ್ದೇನೆ ಮತ್ತು ನನ್ನ ಮಗನಿಗೆ ಉತ್ತಮ ಶಿಕ್ಷಣ ನೀಡಿ ಸಂಪೂರ್ಣ ಕುಟುಂಬದ ಪರಿಸರದಲ್ಲಿ ಅವನನ್ನು ಬೆಳೆಸುತ್ತೇನೆ. ಹಾಗಾಗಿ ಅವನನ್ನು ನನ್ನ ಬಳಿಯೇ ಇರಿಸಿಕೊಳ್ಳಲು ನಿರ್ದೇಶಿಸಬೇಕು' ಎಂದು ಕೋರಿ ಕೌಟುಂಬಿಕ ನ್ಯಾಯಾಲಯದಲ್ಲಿ ಕಸ್ಟಡಿ ಅರ್ಜಿ ಸಲ್ಲಿಸಿದ್ದರು.

ಈ ಮನವಿ ತಿರಸ್ಕರಿಸಿದ್ದ ನ್ಯಾಯಾಲಯ, 'ಮಧ್ಯಸ್ಥಿಕೆ ನ್ಯಾಯಾಲಯದಲ್ಲಿ, ತಿಂಗಳ ಮೊದಲ ಮತ್ತು ಮೂರನೆಯ ಶನಿವಾರಗಳಂದು ಮಗನನ್ನು ನಾಲ್ಕು ಗಂಟೆಗಳ ಕಾಲ ಭೇಟಿ ಮಾಡಬಹುದು' ಎಂದು ಮುಷ್ತಾಕ್‌ಗೆ ಅವಕಾಶ ಕಲ್ಪಿಸಿತ್ತು. ಆದರೆ, ಮೊಹಮ್ಮದ್ ಮುಷ್ತಾಕ್, ರಿಟ್ ಅರ್ಜಿ ಮುಖಾಂತರ ಹೈಕೋರ್ಟ್ ಮೆಟ್ಟಿಲೇರಿದ್ದರು.

ಬಾಡಿ ಕ್ಯಾಮೆರಾ: ವಿವರ ಕೇಳಿದ ಹೈಕೋರ್ಟ್

ಬೆಂಗಳೂರು: 'ನಗರ ಪೊಲೀಸರಿಗಾಗಿ ಖರೀದಿಸಿರುವ 50 ಬಾಡಿ ವೋರ್ನ್ ಕ್ಯಾಮೆರಾಗಳನ್ನು ಬಳಕೆ ಮಾಡಲು ನಿರ್ದೇಶಿಸಬೇಕು ಎಂದು ಕೋರಲಾದ ಅರ್ಜಿಗೆ ಸಂಬಂಧಿಸಿದಂತೆ ಏನೆಲ್ಲಾ ಕ್ರಮ ಕೈಗೊಂಡಿದ್ದೀರಿ ಎಂಬ ಮಾಹಿತಿನೀಡಿ' ಎಂದು ಸರ್ಕಾರಕ್ಕೆ ಹೈಕೋರ್ಟ್ ಸೂಚಿಸಿದೆ.

ಈ ಕುರಿತಂತೆ ಹೈಕೋರ್ಟ್ ವಕೀಲೆ ಗೀತಾ ಮಿಶ್ರಾ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ಸರ್ಕಾರದ ಪರ ವಕೀಲರು ನ್ಯಾಯಪೀಠಕ್ಕೆ ಮಾಹಿತಿ ನೀಡಿ, 'ಪೊಲೀಸರು ಬಾಡಿ ಕ್ಯಾಮೆರಾ ಧರಿಸುವ ವಿಚಾರಕ್ಕೆ ಸಂಬಂಧಿಸಿದ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು, ಕಾರ್ಯಾದೇಶ ಹೊರಡಿಸಲಾಗಿದೆ. ಇದಕ್ಕೆ ಸಂಬಂಧಿಸಿದ ವಿವರ ಸಲ್ಲಿಸಲು ಕಾಲಾವಕಾಶ ನೀಡಬೇಕು' ಎಂದು ಮನವಿ ಮಾಡಿದರು.

ಇದನ್ನು ಪರಿಗಣಿಸಿದ ನ್ಯಾಯಪೀಠ, 'ಈ ಕುರಿತಂತೆ ಕೈಗೊಂಡಿರುವ ಕ್ರಮಗಳ ವಿವರ ಸಲ್ಲಿಸಿ' ಎಂದು ನಿರ್ದೇಶಿಸಿ ವಿಚಾರಣೆ ಮುಂದೂಡಿದೆ.

ಏನಿದು ಅರ್ಜಿ?: 'ಬಾಡಿ ಕ್ಯಾಮೆರಾ ಧರಿಸುವುದರಿಂದ ಪೊಲೀಸರಿಗೆ ರಕ್ಷಣೆ ಸಿಗಲಿದೆ. ಸಿಬ್ಬಂದಿಯ ಕರ್ತವ್ಯ ನಿರ್ವಹಣೆಯನ್ನು ಪೊಲೀಸ್ ಠಾಣೆಯಿಂದಲೇ ಹಿರಿಯ ಅಧಿಕಾರಿಗಳು ಗಮನಿಸಿ ಮೇಲ್ವಿಚಾರಣೆ ನಡೆಸಬಹುದು. ತಪ್ಪಿತಸ್ಥರಿಗೂ ಭಯ ಹುಟ್ಟಿಸುತ್ತದೆ ಪೊಲೀಸ್ ಸಿಬ್ಬಂದಿ ಮಾಡುವ ಭ್ರಷ್ಟಾಚಾರಕ್ಕೂ ಕಡಿವಾಣ ಹಾಕಬಹುದು' ಎಂಬುದು ಅರ್ಜಿದಾರರ ಪ್ರತಿಪಾದನೆ.

ಸುರಂಗ ಕೊರೆಯಲು ಮತ್ತೆ ನೆಲದೊಳಗೆ ಸೇರಿದ 'ಊರ್ಜಾ'

ಬೆಂಗಳೂರು: 'ನಮ್ಮ ಮೆಟ್ರೊ' ಎರಡನೇ ಹಂತದ ವಿಸ್ತರಣೆ ಯೋಜನೆಯ ಸುರಂಗ ಮಾರ್ಗ ಕೊರೆಯುವ ಯಂತ್ರ (ಟಿಬಿಎಂ) ಊರ್ಜಾ ಯಂತ್ರ ಬುಧವಾರ ಮತ್ತೆ ನೆಲದಡಿ ಸೇರಿಕೊಂಡಿತು. ಕಂಟೋನ್ಮೆಂಟ್‌ನಲ್ಲಿ ಮೆಟ್ರೊ ನಿಲ್ದಾಣ ನಿರ್ಮಾಣವಾಗಲಿರುವ ಸ್ಥಳದಿಂದ ಪಾಟರಿ ಟೌನ್ ತನಕದ 907 ಮೀಟರ್ ಉದ್ದದ ಸುರಂಗವನ್ನು ಕೊರೆಯಲು ಈ ಯಂತ್ರವನ್ನು ಬಳಸಲಾಗುತ್ತಿದೆ.

'ಈ ಯಂತ್ರದ ಬಿಡಿ ಭಾಗಗಳನ್ನು ಬಿಚ್ಚಿ ಮತ್ತೆ ಜೋಡಿಸಿದ್ದೇವೆ. ಕಂಟೋನ್ಮೆಂಟ್‌ನಿಂದ ಸುರಂಗ ಕೊರೆಯುವ ಕಾರ್ಯವನ್ನು ಬುಧವಾರ ಆರಂಭಿಸಲಾಗಿದೆ' ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದರು.

2020ರ ಜುಲೈನಲ್ಲಿ ನೆಲದಡಿ ಸೇರಿದ್ದ 'ಊರ್ಜಾ' ಯಂತ್ರ ಶಿವಾಜಿನಗರ ನಿಲ್ದಾಣದ ತನಕ 855 ಮೀಟರ್ ಸುರಂಗವನ್ನು ಕೊರೆದಿತ್ತು. 2021ರ ಸೆಪ್ಟೆಂಬರ್ 22ರಂದು ಹೊರಕ್ಕೆ ಬಂದಿತ್ತು.


ಸುರಂಗ ಕೊರೆಯುವ ಕಾರ್ಯ ಆರಂಭಿಸಿದ ಊರ್ಜಾ

ವಿವಿಧೆಡೆ ವಿದ್ಯುತ್ ವ್ಯತ್ಯಯ ಇಂದು

ಬೆಂಗಳೂರು: ನೆಲದಡಿಯಲ್ಲಿ ಕೇಬಲ್ ಅಳವಡಿಸುವ ಕಾರ್ಯ ಕೈಗೊಂಡಿರುವುದರಿಂದ ಇದೇ 23ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ.

ಸ್ಥಳಗಳು: ಮಾಳಗಾಳ, ಬಿಎಚ್‌ಇಎಲ್ ಮುಂಭಾಗ, ಮೈಸೂರು ಮುಖ್ಯ ರಸ್ತೆ, ಭೂಮಿಕಾ ಬಡಾವಣೆ, ಪಟ್ಟಣಗೆರೆ, ಹೊಸಹಳ್ಳಿ ರಸ್ತೆ, ಸೃಷ್ಟಿನಗರ, ವೀರಭದ್ರೇಶ್ವರ ನಗರ, ಬೋಳಾರೆ, ತಿಟ್ಟಹಳ್ಳಿ, ಗಂಟಕನದೊಡ್ಡಿ, ಬಂಜಾರಪಾಳ್ಯ, ಭೈರಸಂದ್ರ, ಅಗರ, ಜಿ.ಆರ್. ಕಾಲೇಜ್, ಕರಡಿಗುಡ್ಡ, ಕೆಂಗೇರಿ ಮುಖ್ಯ ರಸ್ತೆ, ಪೂನಂ ಹಾಲ್, ದುಬಾಸಿಪಾಳ್ಯ, ಭುವನೇಶ್ವರಿ ನಗರ, ಆರ್.ಆರ್. ಬಡಾವಣೆ, ಗಂಗಾನಗರ ಯಮುನಾನಗರ ಸ್ಕೂಲ್, ಅಂಬೇಡ್ಕರ್ ನಗರ, ಉಲ್ಲಾಳ ಬಸ್ ನಿಲ್ದಾಣ ಸುತ್ತಮುತ್ತ ಪ್ರದೇಶಗಳು

ನಗರದಲ್ಲಿ ಇಂದು

ವೆಲ್‌ನೆಸ್ ಮತ್ತು ಡೈರೆಕ್ಟ್ ಸೆಲ್ಲಿಂಗ್ ಕೋರ್ಸ್‌ನ ಪ್ರಮಾಣಪತ್ರ ಪ್ರದಾನ, ಆಯೋಜನೆ: ಎಸ್‌ಎಚ್‌ಕೆ ವೆಲ್‌ನೆಸ್ ಅಕಾಡೆಮಿ, ಸ್ಥಳ–ಗಾಯನ ಸಮಾಜ, ಬೆಳಿಗ್ಗೆ 10

ರೈತರ ದಿನ: ಉದ್ಘಾಟನೆ–ಲಕ್ಷ್ಮೀಪತಯ್ಯ, ಅತಿಥಿಗಳು–ಎಂ.ಎಸ್. ಗಣಪತಿ, ಎಂ.ಎನ್.ರವಿಶಂಕರ್, ಅಧ್ಯಕ್ಷತೆ–ಕೆ.ಶಿವರಾಮು, ಆಯೋಜನೆ–ಕೃಷಿ ವಿಶ್ವವಿದ್ಯಾಲಯ, ಸ್ಥಳ–ಬಾಬು ರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಮಾವೇಶ ಭವನ, ಜಿಕೆವಿಕೆ, ಬೆಳಿಗ್ಗೆ 10

'ಜೀವದಾಯಿನಿ–ಅಮೃತವಾಹಿನಿ': ನೃತ್ಯ ಮತ್ತು ನಾಟಕ ಪ್ರದರ್ಶನ, ಅತಿಥಿಗಳು–ಪ್ರೊ.ಕೆ.ಆರ್.ವೇಣುಗೋಪಾಲ್, ನಾಗೇಶ್ ವಿ.ಬೆಟ್ಟಕೋಟೆ, ವೀಣಾ ಮೂರ್ತಿ ವಿಜಯ್, ಯಲ್ಲಪ್ಪರೆಡ್ಡಿ, ಆಯೋಜನೆ–ಪ್ರದರ್ಶನ ಕಲಾ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಸ್ಥಳ–ಸೇವಾಸದನ, ಮಲ್ಲೇಶ್ವರ, ಬೆಳಿಗ್ಗೆ 10.30

ಕೋವಿಡ್ ಸೇನಾನಿಗಳಿಗೆ ಸನ್ಮಾನ: ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ.ಮಂಜುನಾಥ್ ಸ್ಥಳ–ಕಂದಾಯ ಇಲಾಖೆ ನೌಕರರ ಸಂಘದ ಸಭಾಂಗಣ, ಜಿಲ್ಲಾಧಿಕಾರಿ ಕಚೇರಿ ಪಕ್ಕ, ಬೆಳಿಗ್ಗೆ 11

ಕವಿ ಜಿ.ಎಸ್.ಶಿವರುದ್ರಪ್ಪ ಅವರ ಸ್ಮರಣಾರ್ಥ ಕವಿ ಸ್ಮರಣೆ ದಿನ: ಗೀತಗಾಯನ, ಕವಿಗೋಷ್ಠಿ ಹಾಗೂ ಸಾಹಿತ್ಯ ವಿಚಾರ ಮಂಡನೆ, ಅತಿಥಿಗಳು–ಪುಸ್ತಕಮನೆ ಹರಿಹರಪ್ರಿಯ, ಕೆ.ಎಚ್. ಕುಮಾರ್ ರಂಗೋತ್ರಿ, ವಡ್ಡಗೆರೆ ನಾಗರಾಜಯ್ಯ, ಆರ್.ಜಿ.ಹಳ್ಳಿ ನಾಗರಾಜ್, ಮಲ್ಲಿಕಾರ್ಜುನ ಸ್ವಾಮಿ ಮಹಾಮನೆ, ಎಂ.ಪ್ರಕಾಶಮೂರ್ತಿ, ಸಿರಿಮನೆ ನಾಗರಾಜ್, ಆಯೋಜನೆ–ಸಾಹಿತಿಗಳ ಗೌರವ ಕ್ರಿಯಾ ಸಮಿತಿ, ಸ್ಥಳ–ಜಿಎಸ್‌ಎಸ್ ಅಂತ್ಯಕ್ರಿಯಾ ಕಟ್ಟೆ ಎದುರು, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 4

ನಟ ಪುನೀತ್ ರಾಜ್‌ಕುಮಾರ್ ಅವರಿಗೆ ಮರಣೋತ್ತರ 'ರೋಟರಿ ವೃತ್ತಿ ಸೇವಾ ಪ್ರಶಸ್ತಿ' ಪ್ರದಾನ ಹಾಗೂ ನೃತ್ಯ ನಮನ: ಅತಿಥಿಗಳು–ಎಸ್.ರಂಗಪ್ಪ, ಎ.ಚಿನ್ನೇಗೌಡ, ಅಜಯ್ ಕುಮಾರ್ ಸಿಂಗ್, ವೀಣಾ ಶರ್ಮ, ಇಂದ್ರಾಣಿ, ರಾಗಿಣಿ, ರಾಧಾ ಶ್ರೀಧರ್, ಮಾಳವಿಕಾ ಅವಿನಾಶ್, ವೈಜಯಂತಿ ಕಾಶಿ, ಶ್ರೀನಿವಾಸ ಜಿ.ಕಣ್ಣಪ್ಪ, ಗಿರಿಜಾ ಲೋಕೇಶ್, ಶುಭ ಧನಂಜಯ, ನೃತ್ಯನಮನ–ಸೃಷ್ಟಿ ಕೇಂದ್ರ ಮತ್ತು ಪುನೀತ್ ಅಭಿಮಾನಿಗಳು, ಆಯೋಜನೆ–ಸೃಷ್ಟಿ ಅಭಿನಯ ಕಲಾವಿದರ ಕೇಂದ್ರ ಹಾಗೂ ರೋಟರಿ 3190ನೇ ಜಿಲ್ಲಾ ಕ್ಲಬ್‌ಗಳು, ಸ್ಥಳ–ರವೀಂದ್ರ ಕಲಾಕ್ಷೇತ್ರ, ಸಂಜೆ 5.30

ಗಿರಿಜಾ ಲೋಕೇಶ್

ಸತ್ಯಮಂಗಲ ಮಹಾದೇವ ಅವರ 'ಕಂಗಳ ಬೆಳಕು' ಪುಸ್ತಕ ಬಿಡುಗಡೆ: ಶ್ಯಾಮಸುಂದರ ಬಿದರಕುಂದಿ, ಅಧ್ಯಕ್ಷತೆ–ವೂಡೇ ಪಿ.ಕೃಷ್ಣ, ಪುಸ್ತಕ ಕುರಿತು ಮಾತು–ಟಿ.ಎನ್.ವಾಸುದೇವ ಮೂರ್ತಿ, ಅತಿಥಿ–ಜೀರಿಗೆ ಲೋಕೇಶ್, ಆಯೋಜನೆ–ಶೇಷಾದ್ರಿಪುರ ಸಂಜೆ ಪದವಿ ಕಾಲೇಜು, ಸ್ಥಳ–ಕಸ್ತೂರಬಾ ಸಭಾಂಗಣ, ಗಾಂಧಿ ಭವನ, ಸಂಜೆ 6

'ಕಾಂತ ಮತ್ತು ಕಾಂತ' ನಾಟಕ ಪ್ರದರ್ಶನ: ರಚನೆ ಮತ್ತು ನಿರ್ದೇಶನ–ಎಸ್.ಸುರೇಂದ್ರನಾಥ್, ಆಯೋಜನೆ–ಸಂಕೇತ್ ನಾಟಕ, ಸ್ಥಳ–ರಂಗಶಂಕರ, ಸಂಜೆ 7.30

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ಸಂಖ್ಯೆ: ಬೆಂಅಪ್ರಾ/ವಿಭೂಸ್ವಾಅ-6/93/2021-22 ದಿನಾಂಕ: 21.12.2021

ಪ್ರಕಟಣೆ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಡಾ.ಕೆ.ಶಿವರಾಮ ಕಾರಂತ ಬಡಾವಣೆ ನಿರ್ಮಾಣಕ್ಕಾಗಿ ಬೆಂಗಳೂರು ಉತ್ತರ (ಅಪರ)/ಯಲಹಂಕ ತಾಲ್ಲೂಕು, ಹೆಸರಘಟ್ಟ ಹೋಬಳಿಯ ಬ್ಯಾಲಕೆರೆ ಗ್ರಾಮದ ಜಮೀನುಗಳನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಿವಿಲ್ ಅಪೀಲ್ ನಂ.7661-63/2018 ರಲ್ಲಿನ ಆದೇಶದಂತೆ ಭೂಸ್ವಾಧೀನಪಡಿಸಿಕೊಳ್ಳಲು ಈಗಾಗಲೇ ದಿನಾಂಕ.31.12.2008ರಂದು ಹೊರಡಿಸಿರುವ ಪ್ರಾಥಮಿಕ ಅಧಿಸೂಚನೆಯಂತೆ ದಿನಾಂಕ.30.10.2018ರಂದು ಅಂತಿಮ ಅಧಿಸೂಚನೆ ಹೊರಡಿಸಲಾಗಿರುತ್ತದೆ. ಸುಮಾರು ಏಳು ಸರ್ವೆ ನಂಬರು ಜಮೀನುಗಳಿಗೆ ಸಂಬಂಧಿಸಿದಂತೆ ಭೂಸ್ವಾಧೀನ ಕಾಯ್ದೆ 1894ರ ಕಲಂ11ರಡಿ ಐತೀರ್ಪು ಸಹ ಘೋಷಿಸಲಾಗಿದೆ. ಘೋಷಣೆ ಮಾಡಲಾದ ಈ ಎಲ್ಲಾ 07 ಪ್ರಕರಣಗಳಲ್ಲಿ ಪರಿಹಾರ ಪಡೆದುಕೊಳ್ಳಲು ಬ್ಯಾಲಕೆರೆ ಗ್ರಾಮದ ಭೂಮಾಲೀಕರಿಗೆ ಈಗಾಗಲೇ ಭೂಸ್ವಾಧೀನ ಕಾಯ್ದೆ 1894ರ ಕಲಂ12(2)ರಡಿ ನೋಟಿಸ್ ಜಾರಿ ಮಾಡಲಾಗಿದೆ.

ಭೂಸ್ವಾಧೀನ ಕಾಯ್ದೆ 1894ರ ಕಲಂ12(2)ರಡಿ ಜಾರಿ ಮಾಡಲಾದ ನೋಟಿಸ್‌ಗಳಲ್ಲಿ ಒಳಗೊಂಡ ಜಮೀನುಗಳ ಮತ್ತು ಅಂತಿಮ ಅಧಿಸೂಚನೆಯಂತೆ ಭೂಮಾಲೀಕರ ವಿವರ ಹಾಗೂ ಕಂದಾಯ ನಿವೇಶನದಾರರ ವಿವರ ಈ ಕೆಳಗಿನಂತೆ ಇರುತ್ತದೆ.

ತಾಲ್ಲೂಕು: ಬೆಂಗಳೂರು ಉತ್ತರ ಅಪರ (ಯಲಹಂಕ) ಹೋಬಳಿ: ಹೆಸರುಘಟ್ಟ ಗ್ರಾಮ: ಬ್ಯಾಲಕೆರೆ

ಕ್ರ. ಸಂ	ಎಲ್. ಎ.ಸಿ ಸಂಖ್ಯೆ	ಅಧಿಸೂಚಿತ ಖಾತೆದಾರರ ಹೆಸರು ಹಾಗೂ ಕಂದಾಯ ನಿವೇಶನದಾರರ ಹೆಸರು	ಸರ್ವೆ ನಂ	ಹಿಸ್ಸಾ ನಂ	ಒಟ್ಟು ವಿಸ್ತೀರ್ಣ		ಖರಾಬು		ಭೂಸ್ವಾಧೀನ ಪಡಿಸಿರುವ ವಿಸ್ತೀರ್ಣ		ಐತೀರ್ಪು ಅನುಮೋದನೆಯಾದ ದಿನಾಂಕ (ಆಯುಕ್ತರು / ಉಪ ಆಯುಕ್ತರು (ಭೂಸ್ವಾ) ರವರಿಂದ)	12(2) ನೋಟಿಸ್ ಜಾರಿ ಮಾಡಿರುವ ದಿನಾಂಕ
					ಎ	ಗು	ಎ	ಗು	ಎ	ಗು		
1	559	Muniakkayamma W/o Lakshmaiah, S.Muniyappa s/o late Sanjeevappa, Shivanna s/o Rajanna, Channarayappa s/o Hanumappa, Krishnappa s/o late Hanumanthanna, Rathnamma D/o Begurappa, B.R.Varalakshmi W/o Rajanna, Muddamma W/o Muniyappa, Anjanappa s/o Muniyappa, Krishnappa s/o late Chikka muttappa, B.Ramaiah s/o Late Muniyappa, Chikkanna s/o late Buddanna, R.Vijayakumar s/o B.Ramaiah, Lakshmamma W/o Muniveerappa, Manjunatha s/o Muniveerappa, D.Prabhakar Rao S/o Late D.Venkoba Rao, Lakshmana S/o Late Chikkanna, Muniveerappa S/o Late Anjinappa, Thimmakka W/o Late Krishnappa, Manjanna S/o Muni veerappa, Channaveerappa s/o Hanumappa, Munirathnamma W/o Vijayakumar, Sahakarnagar Roller Skating and Sports Club, Lokesh S/o Late B.Ramaiah	19	2	7	25	0	07.08	6	0	02.12.2021	14.12.2021
2	565	Hanumantha, Hanuma, Poojappa s/o Hanumanthaiah, Yallappa s/o sanjeevappa, S.Hanumaiah S/o Sanjeevappa, Gangayalla, S.Yallappa, Hanumaiah, Muniyappa s/o late sanjeevappa, R.Sakamma D/o Ramaiah, Galihanumakka W/o yallappa, Marappa S/o Muniarasa, Yallappa S/o Muniarasa, D.C Thimmarayappa s/o Chinnappa, G.L Rathna W/o D.CThimmarayappa, Yallappa, Hanumanthappa S/o sanjeevappa, Muniyappa, Sushilamma W/o late Nagaraju, Muniraju s/o late sanjeevappa, Hanumaiah, V.Ragu s/o late Venkataswamappa, Sakamma W/o Hanumaiah,D. Anjanamurthy s/o late muniyappa, Manjunatha s/o late muniyappa, Renukamma D/o late muniyappa, Anandhakumar s/o late muniyappa, R.M Nagaraju s/o late B.G Munikrishnappa Y. Janardhanaraju S/o Late Chinnapparaju, A.Venkatesh waralu s/o A.Pullaiah, Munirathnamma W/o Muniyappa, Anjanamma W/o Late Muniyappa, Ravi S/o Late S.Yallappa, M.Krishnappa S/o Late Gullappa, Rajaveer Singh Chauhan, Shantha.K, B.Narasimha Rao S/o Narasaiah,Indira Bai N.R W/o M.Panduranga Rao, V.V Dhanalakshmi W/o V.Vishwanathan, D.Sunil Kumar S/o M.V Dhamodharan Nambiar, D.Ramadevi W/o Ananda, K.Ramu S/o Venkatesh, Roopa Pradeep, A.Parvathamma W/o Rudrappa.B, P.N Anjaneya Reddy S/o Narayanappa, R.Mahesh Singh, Govinda Singh Yadav S/o Shivaram Singh Yadav, R.P Manjunatha S/o R.P Krishnappa, Rajaram S/o Late Punaram, T.D Ramesh, S.Manjunath S/o T.Swamynathan, Bhavesh Kumar S/o Shankar Sahu, Ibrahim Hatelasab Yadahalli, Sudhir Kumar, B.T Thippeswamy, Mahadeva Khadilkar & Karthik, Shyamala Devi.J W/o Ananda Rao.B, M.Savithri, Hanumantha Reddy.S S/o Seetharam, Ramu S/o Late Narayana, Vijay Anand Kumar S/o D.C Thimmarayappa, Omkarswamy, Narasaiah S/o Channaiah, D.Shobha W/o Late Dayanand Rao, Renukamma.P W/o G.M Suresh, R.Shivaramakrishnan, Prasanna Kumar A.K, G.S Venugopal, R.Vijayalakshmi, Ramadevi. D W/o Anand, Thirupal S/o Hanumanthaiah, G.T Swamy, Veerabhadrappa D.M	26	-	6	2	0	4	6	2	02.12.2021	14.12.2021
3	585	Muniyamma W/o Late Narayanappa, Hanumantha rayappa s/o Narayanappa, Munirevaiah s/o arasappa Munibathyappa s/o Bathyappa, Munianjinappa s/o Late Hanumantharayappa,Thomas varghese,C.G Varghese, Narayanaswamy s/o Channappa,Thimmegowda s/o Muniswamappa, K.S Chandru S/o Kariyanna Poojari, Kurien Mammoottil Thomas S/o M.K Thomas, Jayamma W/o Thimmarayappa, Jayaramaiah S/o K.Gangaiah, Muniraju B.T S/o Late Thimmegowda, Sowmya.G, P.Periyaswamy, Narasimhamurthy, Joby John, Nagarajan, Mary.P, D.Dhanendran, Krishnan.V	32	1, 2, 3	5	3	0	0	4	3	02.12.2021	14.12.2021
4	622	Shivarathnamma urf.Rathnamma W/o Late Thayappa, S.Harish S/o R.Subramanyam, B.Hari S/o Muniswamy, Eshwari W/o Mogilappa, B.Jaganadhan S/o B.Rangappa, D.Narasimha Reddy S/o Late Perumal Reddy, D.Devarajulu Reddy S/o D.Shankar Reddy, G.Chinnaswamy Reddy and Krishnamma, M.Nagaraja, Shalini.A W/o R.Manjunath, S.R Kumari W/o S.Hemadri Reddy, Gangadevi W/o Late V.R Doreswamy, K.A Madhu S/o Angamuttusetty, N.Mahesh S/o T.Narasimhamurthy, A.Kumari W/o Lokanath Reddy, Munisomappa S/o Munimarappa, P.Murali S/o Munireddy, V.Simha Rao S/o Appa Rao, B.Janakiraman D/o Appa Rao, S.R Kalavathi W/oS.Ramareddy, S.Jayalakshmi W/o Dhananjaya Reddy, T.Vijaya Kumar Naidu, Manjunath.C, G.Shekar	53	-	4	29	0	07.12	3	0	02.12.2021	14.12.2021
5	623	Muniyappa S/o Late Munihanumaiah and Kariyanna S/o Late Munihanumaiah, Thayamma W/o Late Kariyanna, Suresh.R S/o Ramachar, Nagarathna W/o Manju, Surendra S/o Velayudan, Radhe Krishna Yadav	54	-	3	38	0	4	3	38	02.12.2021	14.12.2021
6	671	P.Munikrishnappa s/o Late Puttaiah, Manjula Basavaraju W/o Basavaraju	72	5	1	17	0	0	1	0	07.12.2021	14.12.2021
7	711	K.M. Jayaram s/o late Marappa and K.M. Venkateshamurthi s/o late Marappa, Gangamma W/o Late Muniyappa and T.H Jayaramaiah S/o Late Dodda Thimmappa	92	1	1	23	0	0	1	23	08.04.2021	15.12.2021

ಆದ್ದರಿಂದ ಬ್ಯಾಲಕೆರೆ ಗ್ರಾಮದ ಭೂಮಾಲೀಕರಿಗೆ ಭೂಸ್ವಾಧೀನ ಕಾಯ್ದೆ ಕಲಂ12(2)ರಡಿ ಜಾರಿ ಮಾಡಲಾದ ನೋಟಿಸ್‌ಗಳು ಒಂದು ವೇಳೆ ಅವರಿಗೆ ತಲುಪದೇ ಇದ್ದ ಪಕ್ಷದಲ್ಲಿ ಈ ಮೇಲಿನ ಪತ್ರಿಕಾ ಪ್ರಕಟಣೆಯನ್ನು ನೋಟಿಸ್ ಎಂದು ಭಾವಿಸತಕ್ಕದ್ದು ಮತ್ತು ಮೇಲ್ಕಂಡ ಜಮೀನಿನ ನಗದು ಭೂಪರಿಹಾರ ಅಥವಾ 40:60 ಅನುಪಾತದಲ್ಲಿ ಬರುವ ಅಭಿವೃದ್ಧಿಪಡಿಸಿದ ನಿವೇಶನ ರೂಪದ ಪರಿಹಾರವನ್ನು ಪಡೆಯುವ ಸಂಬಂಧ ಮೇಲ್ಕಂಡ ಜಮೀನಿನ ಮೇಲೆ ತಮಗೆ ಇರುವ ಹಕ್ಕು ಸಾಬೀತುಪಡಿಸುವ ಹಕ್ಕು-ದಾಖಲೆಗಳನ್ನು ಈ ಪತ್ರಿಕಾ ಪ್ರಕಟಣೆಯ ದಿನಾಂಕದಿಂದ 30 ದಿನಗಳೊಳಗಾಗಿ ಹಾಜರುಪಡಿಸಲು ತಿಳಿಸಿದೆ. ಅವಶ್ಯವಿರುವ ಹಕ್ಕು ದಾಖಲೆಗಳನ್ನು ಸದರಿ ದಿನಾಂಕದೊಳಗಾಗಿ ಹಾಜರುಪಡಿಸದಿದ್ದಲ್ಲಿ ನಗದು ಭೂಪರಿಹಾರದ ಮೊತ್ತವನ್ನು ಭೂಸ್ವಾಧೀನ ಕಾಯ್ದೆ ಕಲಂ 30, 31(2) ರನ್ವಯ ಮಾನ್ಯ ಸಿಟಿ ಸಿವಿಲ್ ನ್ಯಾಯಾಲಯಕ್ಕೆ ಕಳುಹಿಸಲು ನಿಯಮಾನುಸಾರ ಕ್ರಮವಹಿಸಲಾಗುವುದು. ತಿಳಿಯುವುದು.

ಸಹಿ/- ಪಿ.ಎಂ. ನಂದಿನಿ, ಕೆ.ಎ.ಎಸ್., ವಿಶೇಷ ಭೂಸ್ವಾಧೀನಾಧಿಕಾರಿ-6

₹5 ಕೋಟಿ ಮೌಲ್ಯದ 5.ಕೆ.ಜಿ.ಹಷಿಶ್ ಆಯಿಲ್ ಹಾಗೂ 1.5 ಕೆ.ಜಿ.ಗಾಂಜಾ ಜಪ್ತಿ

ಬಸ್‌ನಲ್ಲಿ ಮಾದಕ ವಸ್ತು ತಂದು ಮಾರುತ್ತಿದ್ದವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸ್, ರೈಲು ಮೊದಲಾದ ಸಾರ್ವಜನಿಕ ಸಾರಿಗೆ ಮೂಲಕ ಹೊರ ರಾಜ್ಯಗಳಿಂದ ಮಾದಕ ವಸ್ತುಗಳನ್ನು ತಂದು ನಗರದ ವಿವಿಧ ಭಾಗಗಳಲ್ಲಿ ಮಾರಾಟ ಮಾಡಲು ಮುಂದಾಗಿದ್ದ ಅಂತರರಾಜ್ಯದ ಇಬ್ಬರು ಡ್ರಗ್ ಪೆಡ್ಲರ್‌ಗಳನ್ನು ಮೈಕೋ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ. ಆರೋಪಿಗಳಿಂದ 5.ಕೆ.ಜಿ. ಹಷಿಶ್ ಆಯಿಲ್ ಹಾಗೂ 1.5 ಕೆ.ಜಿ.ಗಾಂಜಾ ಸೇರಿ ₹5 ಕೋಟಿ ಮೌಲ್ಯದ ಮಾದಕ ಪದಾರ್ಥಗಳನ್ನು ಜಪ್ತಿ ಮಾಡಲಾಗಿದೆ

'ವಿಶಾಖಪಟ್ಟಣದ ಪ್ರಕಾಶ್ (32) ಹಾಗೂ ಧ್ಯಾಮರಾಜ್ (22) ಬಂಧಿತರು.

'ಆರೋಪಿಗಳು ಆಗಾಗ ನಗರಕ್ಕೆ ಬಂದು ಮಾದಕ ವಸ್ತುಗಳನ್ನು ಮಾರಾಟ ಮಾಡಿ ಹೋಗುತ್ತಿದ್ದರು. ಮೈಕೋ ಲೇಔಟ್‌ನ ಎಸ್‌ಎನ್‌ಎನ್ ವಸತಿ ಸಮುಚ್ಚಯ ರಸ್ತೆಯ ಸಮೀಪ ಅಪರಿಚಿತರು ಗ್ರಾಹಕರಿಗೆ ಮಾದಕ ವಸ್ತು ಮಾರಾಟ ಮಾಡುತ್ತಿರುವ ಕುರಿತು ಮಂಗಳವಾರ ಮಾಹಿತಿ ಲಭಿಸಿತ್ತು. ಇದರ ಆಧಾರದಲ್ಲಿ ದಾಳಿ ನಡೆಸಿ ಇಬ್ಬರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಕಾಲೇಜು ವಿದ್ಯಾರ್ಥಿಗಳು ಹಾಗೂ ಐ.ಟಿ ಕಂಪನಿಯ ಉದ್ಯೋಗಿಗಳಿಗೆ ಗಾಂಜಾ ಮತ್ತು ಹಷಿಶ್ ಆಯಿಲ್ ಮಾರುತ್ತಿದ್ದ ಅವರು ಅದರಿಂದ ಬಂದ ಹಣದಿಂದ ಐಷಾರಾಮಿ ಬದುಕು ನಡೆಸುತ್ತಿದ್ದರು ಎಂಬ ಮಾಹಿತಿಯನ್ನು ವಿಚಾರಣೆ ವೇಳೆ ಬಾಯ್ಬಿಟ್ಟಿದ್ದಾರೆ' ಎಂದು ಅವರು ಹೇಳಿದರು.

ಬಂಧಿತರನ್ನು ಮೈಕೋ ಲೇಔಟ್ ಠಾಣೆಯ ಪೊಲೀಸರ ಸಾಧನೆಯನ್ನು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಶ್ಲಾಘಿಸಿದ್ದಾರೆ.

ಪಾರ್ಕಿಂಗ್ ಸ್ಥಳದಲ್ಲಿ ಜೀವಂತ ಗುಂಡು ಹೂತಿಟ್ಟ ಕ್ಯಾಪ್ಟನ್ ಪತ್ನಿ

ಬೆಂಗಳೂರು: ಮನೆಯಲ್ಲಿ ಜೀವಂತ ಗುಂಡುಗಳು ಇರುವುದರಿಂದಲೇ ಮಗನ ದಾಂಪತ್ಯ ಜೀವನದಲ್ಲಿ ಕಲಹ ಉಂಟಾಗುತ್ತಿದೆ ಎಂದು ಭಾವಿಸಿ, ಭಾರತೀಯ ವಾಯುಪಡೆಯ ನಿವೃತ್ತ ಗ್ರೂಪ್ ಕ್ಯಾಪ್ಟನ್‌ವೊಬ್ಬರ ಪತ್ನಿ, ಅವುಗಳನ್ನು ಜಕ್ಕೂರು ವಾಯುನೆಲೆ ಬಳಿಯ ಹೋಟೆಲ್‌ವೊಂದರ ವಾಹನ ನಿಲುಗಡೆ ಪ್ರದೇಶದಲ್ಲಿ ಹುದುಗಿಸಿಟ್ಟಿದ್ದಾರೆ.

'ಇದೇ 17ರಂದು ಹೋಟೆಲ್‌ನ ಸ್ವಚ್ಛತಾ ಸಿಬ್ಬಂದಿ ಕೆಲಸ ಮಾಡುವಾಗ ಮದ್ದು ಗುಂಡುಗಳು ಪತ್ತೆಯಾಗಿದ್ದವು. ಈ ಸಂಬಂಧ ಹೋಟೆಲ್ ಮಾಲೀಕ ಶ್ರೀನಿವಾಸ್ ಎಂಬುವರು ಯಲಹಂಕ ಪೊಲೀಸರಿಗೆ ಮಾಹಿತಿ ನೀಡಿದ್ದರು. ಸಿಬ್ಬಂದಿ ಸ್ಥಳಕ್ಕೆ ಹೋಗಿ ಪರಿಶೀಲಿಸಿದಾಗ ಅವು ಸಿಂಗಲ್ ಬ್ಯಾರಲ್ ಗನ್‌ಗೆ ಬಳಸುವ ಮದ್ದುಗುಂಡುಗಳು ಎಂಬುದು ಗೊತ್ತಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಬಾಂಬ್ ನಿಷ್ಕ್ರಿಯ ದಳ ಹಾಗೂ ಶ್ವಾನದಳದವರು ಸ್ಥಳಕ್ಕೆ ಹೋಗಿ ತಪಾಸಣೆ ನಡೆಸಿದಾಗ ಹತ್ತಿರದಲ್ಲೇ ಮತ್ತೊಂದು ಗುಂಡು ಪತ್ತೆಯಾಗಿತ್ತು. ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದ ಪೊಲೀಸರು ಸಿಸಿಟಿವಿಯಲ್ಲಿ ಸೆರೆಯಾಗಿದ್ದ ದೃಶ್ಯಗಳನ್ನು ಪರಿಶೀಲಿಸಿದ್ದರು. ಹೋಟೆಲ್ ಸಿಬ್ಬಂದಿಯನ್ನೂ ವಿಚಾರಿಸಿದ್ದರು. ಮಹಿಳೆಯೊಬ್ಬರು ಸ್ಥಳಕ್ಕೆ ಭೇಟಿ ನೀಡಿರುವ ಮಾಹಿತಿ ಸಿಕ್ಕಿತ್ತು. ಕಾರಿನ ನೋಂದಣಿ ಸಂಖ್ಯೆಯನ್ನು ಪರಿಶೀಲಿಸಿದಾಗ ಅವರು ಯಲಹಂಕದಲ್ಲಿ ವಾಸಿಸುತ್ತಿರುವ ಮಾಹಿತಿ ಲಭ್ಯವಾಗಿದೆ. ಸ್ಥಳಕ್ಕೆ ಭೇಟಿ ನೀಡಿದಾಗ ಮನೆಗೆ ಬೀಗ ಹಾಕಲಾಗಿತ್ತು' ಎಂದು ವಿವರಿಸಿದ್ದಾರೆ.

'ಮೊಬೈಲ್ ನೆಟ್‌ವರ್ಕ್ ಪರಿಶೀಲಿಸಿದಾಗ ಮಹಿಳೆಯು ಕೊಡಿಗೆಹಳ್ಳಿಯಲ್ಲಿ ಇರುವ ವಿಷಯ ಗೊತ್ತಾಗಿತ್ತು. ಅವರನ್ನು ವಿಚಾರಿಸಿದಾಗ ಗುಂಡುಗಳನ್ನು ಹೂತಿಟ್ಟಿದ್ದನ್ನು ಒಪ್ಪಿಕೊಂಡಿದ್ದರು' ಎಂದಿದ್ದಾರೆ.

'ಮಹಿಳೆಯ ಪತಿ ಸೇನೆಯಿಂದ ನಿವೃತ್ತರಾದ ನಂತರ ಮದ್ದುಗುಂಡುಗಳ ಸಮೇತ ರೈಫಲ್ ಖರೀದಿಸಿದ್ದರು. ಹೋದ ವರ್ಷ ವ್ಯಕ್ತಿಯೊಬ್ಬರಿಗೆ ರೈಫಲ್ ಮಾರಿದ್ದರು. ಆದರೆ ಗುಂಡುಗಳು ಮನೆಯಲ್ಲೇ ಇದ್ದವು. ಅವುಗಳನ್ನು ಮನೆಯಿಂದ ಹೊರಹಾಕಿದರೆ ಮಗನ ಸಂಸಾರ ಸರಿಹೋಗಬಹುದೆಂದು ಭಾವಿಸಿ ಮಹಿಳೆಯು ಅವುಗಳನ್ನು ಹೋಟೆಲ್‌ಗೆ ತಂದು ನಿಲುಗಡೆ ಪ್ರದೇಶದಲ್ಲಿ ಹೂತಿಟ್ಟಿದ್ದರು' ಎಂದು ಮಾಹಿತಿ ನೀಡಿದ್ದಾರೆ.

ಮಾರಕಾಸ್ತ್ರ ತೋರಿಸಿ ₹6 ಲಕ್ಷ ಕಳ್ಳತನ

ಬೆಂಗಳೂರು: ಐವರು ದುಷ್ಕರ್ಮಿಗಳು ಏಜೆನ್ಸಿಯ ಗೋದಾಮಿಗೆ ನುಗ್ಗಿ ಅಲ್ಲಿದ್ದ ನೌಕರರಿಗೆ ಮಾರಕಾಸ್ತ್ರ ತೋರಿಸಿ ಹೆದರಿಸಿದ ಕಳ್ಳರು ₹ 6 ಲಕ್ಷ ನಗದು ಕದ್ದು ಪರಾರಿಯಾಗಿದ್ದಾರೆ. ಈ ಸಂಬಂಧ ಅನ್ನಪೂರ್ಣೇಶ್ವರಿನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಬೈಕ್‌ಗಳಲ್ಲಿ ಬಂದ ದುಷ್ಕರ್ಮಿಗಳು ಸೋಮವಾರ ರಾತ್ರಿ 8.30ರ ಸುಮಾರಿಗೆ ನಾಗರಬಾವಿಯ 9ನೇ ಹಂತದಲ್ಲಿರುವ ಸುಧಾ ಏಜೆನ್ಸಿಯ ಗೋದಾಮಿಗೆ ನುಗ್ಗಿದ್ದರು. ಅಲ್ಲಿದ್ದ ಕೆಲಸಗಾರರನ್ನು ಹೆದರಿಸಿ, ಗಲ್ಲಾಪೆಟ್ಟಿಗೆಯಲ್ಲಿದ್ದ ₹6 ಲಕ್ಷ ನಗದು ಎತ್ತಿಕೊಂಡು ಪರಾರಿಯಾಗಿದ್ದರು. ಸುತ್ತಲಿನ ಸಿಸಿಟಿವಿ ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸಲಾಗಿದೆ. ಶೀಘ್ರವೇ ಆರೋಪಿಗಳನ್ನು ಬಂಧಿಸಲಿದ್ದೇವೆ' ಎಂದು ಪೊಲೀಸರು ಹೇಳಿದ್ದಾರೆ.

ಮಹಿಳೆ ಆತ್ಮಹತ್ಯೆ ಪತಿ ಬಂಧನ

ಬೆಂಗಳೂರು: ಕೌಟುಂಬಿಕ ಕಲಹದಿಂದ ನೊಂದು ಮಹಿಳೆಯೊಬ್ಬರು ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಜ್ಞಾನಭಾರತಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು, ಮೃತ ಮಹಿಳೆಯ ಪತಿ ಮಂಜುನಾಥ್ ಎಂಬಾತನನ್ನು ಬಂಧಿಸಿದ್ದಾರೆ.

'ಉಲ್ಲಾಳದ ನಿವಾಸಿ ಮಂಜುನಾಥ್, ರಂಜಿತಾ (26) ಅವರನ್ನು ವಿವಾಹವಾಗಿದ್ದರು. ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ಇದೇ 19ರ ರಾತ್ರಿ ಇಬ್ಬರ ನಡುವೆ ಜಗಳ ನಡೆದಿತ್ತು. ಮಕ್ಕಳೊಂದಿಗೆ ಕೊಠಡಿಯೊಳಗೆ ಹೋಗಿದ್ದ ರಂಜಿತಾ, ಇದೇ 20ರಂದು ಆತ್ಮಹತ್ಯೆ ಮಾಡಿಕೊಂಡಿದ್ದರು. 'ವರದಕ್ಷಿಣೆ ಕಿರುಕುಳದಿಂದ ಮಗಳು ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಮೃತ ಮಹಿಳೆಯ ತಾಯಿ ದೂರು ನೀಡಿದ್ದರು.

ಟಾರ್ಪಲ್ ವಿತರಣೆಯಲ್ಲಿ ಅಕ್ರಮ: ತನಿಖೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷಿ ಇಲಾಖೆಯಿಂದ 'ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ (ಆರ್‌ಕೆವಿವೈ) ರೈತರಿಗೆ ಟಾರ್ಪಲ್ ವಿತರಣೆಯಲ್ಲಿ ಭಾರಿ ಅಕ್ರಮ ನಡೆದಿದ್ದು, ಈ ಬಗ್ಗೆ ಭ್ರಷ್ಟಾಚಾರ ನಿಗ್ರಹ ದಳ ತನಿಖೆ ನಡೆಸಬೇಕು' ಎಂದು ಹಾವೇರಿ ಜಿಲ್ಲೆಯ ರೈತ ಪ್ರಭುಗೌಡ. ಶಿ.ಸೊರಟೂರ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು,'ರೈತರಿಗೆ 2020-21ನೇ ಸಾಲಿನಲ್ಲಿ ಟಾರ್ಪಲ್ ವಿತರಣೆಯಲ್ಲಿ ಅಕ್ರಮ ನಡೆದಿದೆ. ಸರ್ಕಾರ ಹೇಳಿದ ಮಾನದಂಡದಂತೆ ಮೂರು ಪದರವುಳ್ಳ 12 ಕೆ.ಜಿ ತೂಕದ ಟಾರ್ಪಲ್ ವಿತರಿಸಬೇಕು. ಆದರೆ, ಇಲಾಖೆ ವಿತರಿಸಿರುವ ಟಾರ್ಪಲ್ ನಿಗದಿತ ತೂಕಕ್ಕಿಂತ 1.8 ಕೆ.ಜಿ ಕಡಿಮೆ ಇದ್ದು, ಮೂರು ಪದರಗಳನ್ನೇ ಹೊಂದಿಲ್ಲ' ಎಂದು ದೂರಿದರು.

'ಕೃಷಿ ಸಚಿವ ಬಿ.ಸಿ.ಪಾಟೀಲ್ ಈ ಅಕ್ರಮದಲ್ಲಿ ಭಾಗಿಯಾಗಿದ್ದಾರೆ. ಈ ಬಗ್ಗೆ ಸಮಗ್ರ ತನಿಖೆ ನಡೆಸಲು ಭ್ರಷ್ಟಾಚಾರ ನಿಗ್ರಹ ದಳಕ್ಕೆ ಮನವಿ ಸಲ್ಲಿಸುತ್ತಿದ್ದೇನೆ. ತನಿಖೆ ನಡೆಸದಿದ್ದರೆ, ರೈತ ಸಂಘಟನೆಗಳ ನೇತೃತ್ವದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ದೂರು ನೀಡಲಿದ್ದೇವೆ' ಎಂದೂ ಹೇಳಿದರು.

ಕಾನ್‌ಸ್ಟೆಬಲ್ ಅಮಾನತು

ಬೆಂಗಳೂರು: ಬೀದಿ ನಾಯಿಗಳಿಗೆ ಊಟ ಹಾಕಲು ಬಂದಿದ್ದ ಮಹಿಳೆಗೆ ಮರ್ಮಾಂಗ ತೋರಿಸಿ ಅಸಭ್ಯವಾಗಿ ವರ್ತಿಸಿದ್ದ ಅಮೃತಹಳ್ಳಿ ಪೊಲೀಸ್ ಠಾಣೆಯ ಹೆಡ್ ಕಾನ್‌ಸ್ಟೆಬಲ್ ಚಂದ್ರಶೇಖರ್ ಸೇವೆಯಿಂದ ಅಮಾನತುಗೊಂಡಿದ್ದಾರೆ.

ಜನ್ಮದಿನದ ಪಾರ್ಟಿ ಮುಗಿಸಿ ಮನೆಗೆ ಮರಳುತ್ತಿದ್ದ ಚಂದ್ರಶೇಖರ್, ಯಲಹಂಕ ಉಪನಗರದ ಹೌಸಿಂಗ್ ಬೋರ್ಡ್ ಬಳಿ ದ್ವಿಚಕ್ರ ವಾಹನ ನಿಲ್ಲಿಸಿ ಮೂತ್ರ ವಿಸರ್ಜನೆ ಮಾಡುತ್ತಿದ್ದ. ಈ ವೇಳೆ ಮಹಿಳೆ ಮನೆಯಿಂದ ಹೊರಗೆ ಬಂದಿದ್ದಾಗ ಈ ಘಟನೆ ನಡೆದಿತ್ತು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

BUSINESS

Business Offers

Finance

NRI'S INVESTMENT And Finance Available On Low Interest Against Properties, Land & Building, Sites, Flats, Converted & Agriculture Lands Call: 7411265189

Business to Business

Finance

GOLDEN OPPORTUNITY. RTD's, VRS, Housewives, Earn more than Lakh. Contact: 9972169164

Business

ZENITH LOANS available @4% yearly interest Business Project Takeover Property Mortgage NPA 8447587173 Agents Welcome

JOB OPPORTUNITIES

Walk-in

SWIGGY FOOD DELIVERY APP
EXCITING JOB OPPORTUNITY IN BANGALORE !
₹ 20,000 to 25,000 Per Month
We want Delivery Executives
Full Time & Part Time
Weekly Payouts
Flexible Working Hours
Walk-in Interview
#6, AVS Compound, 80 ft Road, Koramangala, Blr-34
Near Sony Signal, GKB Opticals
Interested? Call: 080-45687736

Part-Time Jobs

REPUTED MNC Company Work From Home to Earn 30K to 35K at Malleswaram.: 7019215243/ 9886641282

Wanted

WANTED FEMALE Office Assistant Qualification any Degree, Good Communication Skills: Kannada, English, Hindi, in around Rajajinagar Contact: 23384085/ 9108458798

REAL ESTATE SELLING

Flat

Electronic City

SALE 3 BHK Flat East Facing Semi Furnished Car parking Utility Ananthnagar Electronic City. 9986019351

DH DECCAN HERALD ಪ್ರಜಾವಾಣಿ

BOOK YOUR REAL ESTATE
Classified Advertisement In Deccan Herald & Prajavani

SATURDAY & SUNDAY COMBO OFFER

Ordinary Per word	Bold Per word	Ordinary Semi Display Per word	Bold Semi Display Per word	Single Col CD Per sqcm
80	125	95	155	570

For More Details Contact:
Ph:080- 45557160 | 163 | 164 | M: 9880856233 | 9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com
condition apply*

PUBLIC NOTICE

ELCITA
ELECTRONICS CITY INDUSTRIAL TOWNSHIP AUTHORITY (ELCITA), BANGALORE

Tender Number	ELCITA/UDD/2021-22/software_1712
Tender Title	ENVIRONMENTAL, SOCIAL AND GOVERNANCE (ESG) / SUSTAINABILITY PERFORMANCE AND DATA MANAGEMENT SOFTWARE FOR ELCITA, ELECTRONICS CITY, BANGALORE-560100.
Tender website	https://eproc.karnataka.gov.in/eprocportal/pages/index.jsp
Browser	Use Internet Explorer
Pre Bid Meeting Date	**07-01-2022 11:00**
Pre bid meeting	Online - Link will be shared
Contact Person Name	Subha
Phone No	**9972463299**
Last Date & Time for receipt of tenders	**15-01-2022 17:00**
Date & Time for Opening of Technical Bid	**17-01-2022 10:00**

PERSONAL

Change of Name

I, MUTTAPPA SHANKRAPPA LAMANI, S/o. Shankrappa, aged about 29 years, R/at No.6, Lamani Thanda, Kamatgi Road, Guledgudda, Bagalkot-587203 have changed my name to MUTTAPPA LAMANI vide affidavit dated 22-12-2021 sworn before notary N. Nagappa, Bangalore

I, VENKATARAMANA RAO S/o. Gajendra Rao P.G. R/a #11/12, 11th Main, 3rd Cross, Kanakanagara, Yelachenahalli, J.P.Nagar, Bangalore- 560078, Have Changed My Name to RAMANAN. P.G. vide Affidavit Dated: 22.12.2021 Before Notary B. Gopalakrishna, Bengaluru.

I, MAHABOOB JHON W/o Abdul Gafoor, R/at No. 82, 4th Cross, New Layout, Anjanappa Garden, Chamarajpet, Bengaluru-560018, have changed my name to MAHBOOB JAN vide affidavit dated:15/11/2021 Before Notary Lakshminarayana Bangalore.

VEDIKA. G. minor, born on 09/04/2011 represented by father Kori Kumara Raja Girish changed her name as KORI GIRISH VEDIKA on 14/10/2021, before notary N. Nagappa, Reg. No. 12275, Bangalore, Government of India.

PREETY SINGH W/o JC-674016X-Nb/Sub/Clk(SD)-SHRIPRAKASH SINGH R/o Bahraiech, Shekhanpur, Ghazipur, UP changed name from PREETY SINGH to PRITI SINGH notary S.I Balaguru, Bangalore.

ARUP MANDAL, 6494995K, HAV/ ASH, Vill-Chanderghat, Tehatta, Nadia, West Bengal, have changed Son's name from ARNAB MONDAL to ARNAB MANDAL, 22/12/2021, Notary K.V. Mani, Bangalore

SOCIAL SERVICES

Old Age Home

OLD AGE Home/ Orphanage available near Whitefield for Elders and Boys. Contact: 9611785161/ 9901290021.

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

GM-Advertisement

ಡಾ.ಸುದರ್ಶನ್‌ಗೆ ‘ರಾಷ್ಟ್ರೀಯ ವೈದ್ಯಶ್ರೀ’ ಪ್ರಶಸ್ತಿ

ಕಲಬುರಗಿ: ಇಲ್ಲಿನ ಡಾ. ಪಿ.ಎಸ್. ಶಂಕರ ಪ್ರತಿಷ್ಠಾನ ನೀಡುವ ‘ಡಾ. ಪಿ.ಎಸ್.ಶಂಕರ ರಾಷ್ಟ್ರೀಯ ವೈದ್ಯಶ್ರೀ’ ಪ್ರಶಸ್ತಿಗೆ ಕೋವಿಡ್–19 ತಾಂತ್ರಿಕ ಸಲಹಾ ಸಮಿತಿಯ ಅಧ್ಯಕ್ಷ ಡಾ. ಎಂ.ಕೆ. ಸುದರ್ಶನ್ ಆಯ್ಕೆಯಾಗಿದ್ದಾರೆ.

ಮಂಗಳೂರಿನ ದಂತವೈದ್ಯ ಡಾ.ಮುರಳಿಮೋಹನ ಚೂಂತಾರು ಅವರನ್ನು ‘ಡಾ.ಪಿ.ಎಸ್. ಶಂಕರ ಶ್ರೇಷ್ಠ ವೈದ್ಯ ಸಾಹಿತ್ಯ’ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಈ ಎರಡೂ ಪ್ರಶಸ್ತಿಗಳನ್ನು 2022ರ ಜನವರಿ 1ರಂದು ನಗರದಲ್ಲಿ ನಡೆಯುವ ಡಾ.ಪಿ.ಎಸ್. ಶಂಕರ ಅವರ ಜನ್ಮದಿನಾಚರಣೆ ಸಮಾರಂಭದಲ್ಲಿ ಪ್ರದಾನ ಮಾಡಲಾಗುವುದು ಎಂದು ಪ್ರತಿಷ್ಠಾನದ ಕಾರ್ಯದರ್ಶಿ ನರೇಂದ್ರ ಬಡಶೇಶಿ ತಿಳಿಸಿದ್ದಾರೆ.

ಕೆಂಪೇಗೌಡ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ನಿರ್ದೇಶಕರೂ ಆದ ಡಾ.ಸುದರ್ಶನ್, ಕೋವಿಡ್ ನಿಯಂತ್ರಣದಲ್ಲಿ ಪ್ರಧಾನ ಪಾತ್ರವಹಿಸಿದ್ದಾರೆ. ಹಾಗೂ ಡಾ.ಮುರಳಿಮೋಹನ್ ಅವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅವರು ಕೈಗೊಂಡ ಗ್ರಂಥಾಲಯ ಚಟುವಟಿಕೆಗಳನ್ನು ಪ್ರಶಸ್ತಿಗೆ ಪರಿಗಣಿಸಲಾಗಿದೆ ಎಂದರು.

ಕರುನಾಡ ವಿಜಯಸೇನೆ ಕಾರ್ಯಕರ್ತರಿಂದ ಪ್ರತಿಭಟನಾ ಮೆರವಣಿಗೆ

‘ರಾಜ್ಯದಲ್ಲಿ ಎಂಇಎಸ್, ಶಿವಸೇನಾ ನಿಷೇಧಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶಿವಸೇನಾ ಮತ್ತು ಮಹಾರಾಷ್ಟ್ರ ಏಕೀಕರಣ ಸಮಿತಿಯನ್ನು (ಎಂಇಎಸ್) ರಾಜ್ಯದಲ್ಲಿ ನಿಷೇಧಿಸಬೇಕು ಎಂದು ಒತ್ತಾಯಿಸಿ ಕರುನಾಡ ವಿಜಯಸೇನೆ ಕಾರ್ಯಕರ್ತರು ಬುಧವಾರ ಪ್ರತಿಭಟನೆ ನಡೆಸಿದರು.

ಕನ್ನಡ ಧ್ವಜ ಹಿಡಿದು ಮೈಸೂರು ಬ್ಯಾಂಕ್ ವೃತ್ತದಿಂದ ಮೆಜೆಸ್ಟಿಕ್ ಬಳಿಯ ಸಂಗೊಳ್ಳಿ ರಾಯಣ್ಣ ಪ್ರತಿಮೆವರೆಗೂ ಸಂಘಟನೆಯ ಕಾರ್ಯಕರ್ತರು ಮೆರವಣಿಗೆ ನಡೆಸಿದರು. ‘ಶಿವಾಜಿ ಪ್ರತಿಮೆಗೆ ಮಸಿ ಬಳಿದ ವಿಚಾರವನ್ನು ಮಹಾರಾಷ್ಟ್ರದ ಸಂಸದರು ಹಾಗೂ ಕೇಂದ್ರ ಸಚಿವರು ಲೋಕಸಭೆಯಲ್ಲಿ ಪ್ರಸ್ತಾಪಿಸಿ ಅದರ ವಿರುದ್ಧ ಧ್ವನಿ ಎತ್ತಿದ್ದಾರೆ. ಆದರೆ ರಾಜ್ಯದ ಸಂಸದರು, ಸಚಿವರು ಬಿಜೆಪಿ ವರಿಷ್ಠರಿಗೆ ಹೆದರಿ ಬಾಯಿಮುಚ್ಚಿ ಕುಳಿತಿರುವುದು ಖಂಡನೀಯ’ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಕರುನಾಡ ವಿಜಯಸೇನೆ ಕಾರ್ಯಕರ್ತರು ನಗರದ ಮೈಸೂರು ಬ್ಯಾಂಕ್ ವೃತ್ತದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

‘ಎಂಇಎಸ್ ನಿಷೇಧದ ಕುರಿತು ಬೆಳಗಾವಿ ಅಧಿವೇಶನದಲ್ಲೇ ನಿರ್ಣಯ ಕೈಗೊಳ್ಳಬೇಕು. ಶಿವಸೇನಾ ಮತ್ತು ಎಂಇಎಸ್‌ನ ಕಿಡಿಗೇಡಿಗಳನ್ನು ಗಡಿಪಾರು ಮಾಡಬೇಕು’ ಎಂದು ಕರುನಾಡ ವಿಜಯಸೇನೆಯ ಅಧ್ಯಕ್ಷ ಎಚ್.ಎನ್.ದೀಪಕ್ ಒತ್ತಾಯಿಸಿದರು.

‘ನಿಮಗೆ ನಾಡಿನ ನೆಲ, ಜಲ, ಭಾಷೆಯ ಬಗ್ಗೆ ಕಿಂಚಿತ್ತೂ ಅಭಿಮಾನವಿಲ್ಲವೇ. ಅಧಿಕಾರಕ್ಕೋಸ್ಕರ ಎಲ್ಲವನ್ನೂ ಸಹಿಸಿಕೊಂಡು ಸುಮ್ಮನಿದ್ದ ನಿಮ್ಮಿಂದ ನಾಡಿನ ರಕ್ಷಣೆ ಸಾಧ್ಯವೇ’ ಎಂದು ರಾಜಕಾರಣಿಗಳನ್ನು ಪ್ರಶ್ನಿಸಿದರು.

‘ಬೆಳಗಾವಿಯ ರಾಜಕಾರಣಿಗಳು ಮರಾಠಿಗರ ಗುಲಾಮರಂತೆ ವರ್ತಿಸುತ್ತಿದ್ದಾರೆ. ಘಟನೆಗೂ ತಮಗೂ ಸಂಬಂಧವೇ ಇಲ್ಲದವರ ಹಾಗೆ ನಡೆದುಕೊಳ್ಳುತ್ತಿದ್ದಾರೆ. ಸಂಗೊಳ್ಳಿ ರಾಯಣ್ಣನಿಗೆ ಅಪಮಾನ ಮಾಡಿದರೂ ನೋಡಿಕೊಂಡು ಸುಮ್ಮನಿದ್ದಾರೆ. ಇದನ್ನೆಲ್ಲಾ ನಾವು ಸಹಿಸಿಕೊಳ್ಳಲು ಸಿದ್ಧರಿಲ್ಲ. ನಾಡಿನ ನೆಲ, ಜಲ, ಭಾಷೆಯ ವಿಷಯದಲ್ಲಿ ಬೀದಿಗಿಳಿದು ಹೋರಾಡುತ್ತೇವೆ’ ಎಂದು ಹೇಳಿದರು.

ಡಾ.ರಾಜ್‌ಕುಮಾರ್ ಅಭಿಮಾನಿಗಳ ಸಂಘದ ಅಧ್ಯಕ್ಷ ಸಾ.ರಾ.ಗೋವಿಂದು, ‘ಕಿಡಿಗೇಡಿಗಳ ವಿರುದ್ಧ ನಮ್ಮನ್ನು ಆಳುವವರು ಕ್ರಮ ಕೈಗೊಳ್ಳದಿದ್ದರೆ ರಾಜ್ಯವನ್ನೇ ಬಂದ್ ಮಾಡಿ ನಾವು ಶಕ್ತಿ ಪ್ರದರ್ಶಿಸಲಿದ್ದೇವೆ’ ಎಂದರು.

ವಿಜಯಸೇನೆಯ ಪದಾಧಿಕಾರಿಗಳಾದ ಆರ್.ಎಸ್.ಮಹೇಶ್, ಬಿ.ಮೋಹನ್ ಕುಮಾರ್, ಸಚ್ಚಿದಾನಂದ, ಎಸ್.ವಿಜಯಕುಮಾರ್, ಗಂಗರಾಜಮ್ಮ ಇದ್ದರು.

ಸಲ್ಮಾನ್ ಖುರ್ಷಿದ್ ವಿರುದ್ಧ ಎಫ್‌ಐಆರ್: ಕೋರ್ಟ್ ಆದೇಶ

ಲಖನೌ: ತಮ್ಮ ‘ಸನ್‌ರೈಸ್ ಓವರ್ ಅಯೋಧ್ಯಾ: ನೇಷನ್‌ಹುಡ್ ಇನ್ ಅವರ್ ಟೈಮ್ಸ್’ ಕೃತಿಯಲ್ಲಿ ಸನಾತನ ಹಿಂದೂ ಧರ್ಮವನ್ನು ಉಗ್ರ ಸಂಘಟನೆಗಳಾದ ಐಸಿಸ್ ಹಾಗೂ ಬೊಕೊ ಹರಾಮ್‌ಗೆ ಹೋಲಿಕೆ ಮಾಡಿರುವ ಕಾಂಗ್ರೆಸ್‌ನ ಹಿರಿಯ ಮುಖಂಡ ಸಲ್ಮಾನ್ ಖುರ್ಷಿದ್ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಇಲ್ಲಿನ ಕೋರ್ಟ್ ಬುಧವಾರ ಆದೇಶಿಸಿದೆ.

ಶುಭಾಂಗಿ ತಿವಾರಿ ಎಂಬುವವರು ಅರ್ಜಿ ಸಲ್ಲಿಸಿದ್ದರು. ಅರ್ಜಿ ವಿಚಾರಣೆ ನಡೆಸಿದ ಹೆಚ್ಚುವರಿ ನ್ಯಾಯಾಧೀಶ ಶಂತನು ತ್ಯಾಗಿ ಅವರು, ‘ಸಲ್ಮಾನ್ ಖುರ್ಷಿದ್ ವಿರುದ್ಧ ಎಫ್‌ಐಆರ್ ದಾಖಲಿಸಿ, ತನಿಖೆ ನಡೆಸಬೇಕು. ಮೂರು ದಿನಗಳ ಒಳಗಾಗಿ ಕೋರ್ಟ್‌ಗೆ ಎಫ್‌ಐಆರ್ ಪ್ರತಿ ತಲುಪಿಸಬೇಕು’ ಎಂದು ಆದೇಶಿಸಿದ್ದಾರೆ.

ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ
(ಎಂ.ಎಸ್.ಎಂ.ಇ, ಭಾರತ ಸರ್ಕಾರ)
ವಿಜಿನಾಪುರ, ದೂರವಾಣಿ ನಗರ, ಎಫ್‌ಸಿಐ ಗೋಡೌನ್ ಹತ್ತಿರ, ಬೆಂಗಳೂರು–560 016. ದೂರವಾಣಿ: 080–25665884/25665885
e-mail: kvicblr@gmail.com Website: www.kvic.org.in

ಗ್ರಾಮೀಣ ಎಂಜಿನಿಯರಿಂಗ್ ಉದ್ಯಮದ ಅಡಿಯಲ್ಲಿ ತರಬೇತಿ ಕಾರ್ಯಕ್ರಮಕ್ಕಾಗಿ ಅರ್ಜಿ ಆಹ್ವಾನ

ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ (ಕೆವಿಐಸಿ) ಎಂಎಸ್‌ಎಂಇ, ಭಾರತ ಸರ್ಕಾರ ರಾಜ್ಯ ಕಚೇರಿ, ಬೆಂಗಳೂರು ಇವರ ಸಹಯೋಗದೊಂದಿಗೆ 2021–22ರ ಅವಧಿಯಲ್ಲಿ ಮರದ ಆಟಿಕೆಗಳು ವಲಯದಲ್ಲಿ ಕೌಶಲ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲು ಪ್ರಸ್ತಾಪಿಲಾಗಿದೆ. ಮರದ ಆಟಿಕೆಗಳು, ಸಾಂಪ್ರದಾಯಿಕ ಕುಶಲಕರ್ಮಿಗಳು ಸೂಕ್ತ ದಾಖಲೆಗಳಾದ ಶೈಕ್ಷಣಿಕ ದಾಖಲೆ, ಆಧಾರ್ ಕಾರ್ಡ್/ವೋಟರ್ ಐಡಿ, ಇತ್ತೀಚಿನ ಭಾವಚಿತ್ರ, ಜಾತಿ ಪ್ರಮಾಣ ಪತ್ರ, ಪಡಿತರ ಚೀಟಿ ಮತ್ತು ಸಂಪರ್ಕ ಮೊಬೈಲ್ ನಂ. ನೊಂದಿಗೆ ಬಯೋ–ಡಾಟವನ್ನು ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : **02.01.2022, ಸಂಜೆ 5.00ರವರೆಗೆ.**

Khadi India
ಸಹಿ/–
ರಾಜ್ಯ ನಿರ್ದೇಶಕರು

ಬಿ.ಎಸ್ಸಿ. ನರ್ಸಿಂಗ್ ಮತ್ತು ಇತರ ಕೋರ್ಸ್‌ಗಳಿಗೆ ಪ್ರವೇಶ ಪ್ರಕ್ರಿಯೆ

ಅವ್ಯವಸ್ಥೆಯ ಆಗರವಾದ ದಾಖಲಾತಿ ಪರಿಶೀಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ಮಲ್ಲೇಶ್ವರದ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಚೇರಿ ಆವರಣ ಬುಧವಾರ ಅವ್ಯವಸ್ಥೆಯ ಆಗರವಾಗಿತ್ತು. ಬಿ.ಎಸ್ಸಿ ನರ್ಸಿಂಗ್, ಬಿಪಿಟಿ, ಬಿಪಿಒ, ಬಿಎಸ್‌ಸಿ ಅಲೈಡ್ ಸೈನ್ಸ್ ಕೋರ್ಸ್‌ಗಳ ಪ್ರವೇಶಾತಿಗೆ ಸಂಬಂಧಿಸಿದಂತೆ ದಾಖಲಾತಿ ಪರಿಶೀಲನೆ ಸಲುವಾಗಿ ರಾಜ್ಯದ ವಿವಿಧ ಪ್ರದೇಶಗಳಿಂದ ಬಂದಿದ್ದ ಪೋಷಕರು ಮತ್ತು ವಿದ್ಯಾರ್ಥಿಗಳು ಸಮಸ್ಯೆ ಎದುರಿಸಿದರು.

ಪ್ರಾಧಿಕಾರವು ಪೋಷಕರಿಗೆ ಸಮರ್ಪಕವಾಗಿ ಮಾಹಿತಿ ನೀಡದಿರುವುದೇ ಈ ಎಲ್ಲ ಅವ್ಯವಸ್ಥೆಗೆ ಕಾರಣ ಎಂದು ಪೋಷಕರು ಆಕ್ರೋಶ ವ್ಯಕ್ತಪಡಿಸಿದರು.

‘ಎಸ್ಸೆಸ್ಸೆಲ್ಸಿ, ಪಿಯುಸಿ ಅಂಕಪಟ್ಟಿ ಸೇರಿದಂತೆ ವಿವಿಧ ದಾಖಲೆಗಳ ಪರಿಶೀಲನೆಗೆ ಬರುವಂತೆ ಸೂಚಿಸಲಾಗಿತ್ತು. ಆದರೆ, ಇದು ಅವ್ಯವಸ್ಥೆಯ ತಾಣವಾಗಿದೆ. ಕೋವಿಡ್ ಸಮಯದಲ್ಲಿ ನೂರಾರು ಜನರನ್ನು ಇಲ್ಲಿ ಒಂದೇ ದಿನ ಸೇರಿಸಿ ಜಾತ್ರೆ ಮಾಡಲಾಗಿದೆ. ಬೆಳಿಗ್ಗೆಯಿಂದಲೇ ಜನದಟ್ಟಣೆಯಾಗಿದೆ. ಸಂಜೆಯವರೆಗೆ ಕಾದರೂ ಪರಿಶೀಲನೆ ನಡೆಸಿಲ್ಲ. ಇಂದಿನ ತಂತ್ರಜ್ಞಾನ ಯುಗದಲ್ಲಿ ವಿಭಾಗವಾರು ಅಥವಾ ಜಿಲ್ಲಾವಾರು ದಾಖಲೆಗಳನ್ನು ಪರಿಶೀಲಿಸಬಹುದಿತ್ತು. ಕುಡಿಯುವ ನೀರಿಗೂ ಪರದಾಡಬೇಕಾಗಿದೆ’ ಎಂದು ತಮ್ಮ ಮಗಳ ಜತೆ ಬಂದಿದ್ದ ಚಿಕ್ಕಬಳ್ಳಾಪುರ ಜಿಲ್ಲಾ ರೇಷ್ಮೆ ಹಿತರಕ್ಷಣಾ ವೇದಿಕೆ ಅಧ್ಯಕ್ಷ ಯಲುವಳ್ಳಿ ಸೊಣ್ಣೆಗೌಡ ದೂರಿದರು.

‘ಜಿಲ್ಲಾ ಕೇಂದ್ರಗಳಲ್ಲೂ ಪರಿಶೀಲನೆ’

ಬಿ.ಎಸ್ಸಿ ನರ್ಸಿಂಗ್, ಬಿಪಿಟಿ, ಬಿಪಿಒ, ಬಿಎಸ್‌ಸಿ ಅಲೈಡ್ ಸೈನ್ಸ್ ಮತ್ತು ಬಿಪಿಒ ಕೋರ್ಸ್‌ಗಳಿಗೆ ಸಂಬಂಧಿಸಿದಂತೆ ಅರ್ಜಿ ಸಂಖ್ಯೆ 5,12,001ರಿಂದ 5,20,000ರವರೆಗೆ ದಾಖಲಾತಿಗಳ ಪರಿಶೀಲನೆಯನ್ನು ಡಿ.27ರಿಂದ 29ರವರೆಗೆ ಎಲ್ಲ ಜಿಲ್ಲಾ ಕೇಂದ್ರಗಳಲ್ಲೂ ನಡೆಸಲಾಗುವುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್. ರಮ್ಯಾ ತಿಳಿಸಿದ್ದಾರೆ.

ದಾಖಲಾತಿ ಪರಿಶೀಲನೆಗೆ ಬೆಂಗಳೂರಿನಲ್ಲೇ ಹಾಜರಾಗುವ ಅವಶ್ಯಕತೆ ಇರುವುದಿಲ್ಲ. ಆಯಾ ಜಿಲ್ಲೆಗಳಲ್ಲಿ ನಿಗದಿಪಡಿಸುವ ಕೇಂದ್ರಗಳಲ್ಲಿ ಎಲ್ಲ ಮೂಲ ದಾಖಲಾತಿಗಳೊಂದಿಗೆ ಹಾಜರಾಗಬಹುದು ಎಂದು ತಿಳಿಸಿದ್ದಾರೆ.

ದಾಖಲಾತಿ ಕೇಂದ್ರದ ವಿವರ ಹಾಗೂ ವೇಳಾಪಟ್ಟಿಯನ್ನು ಗುರುವಾರ (ಡಿ.23) ಸಂಜೆ 4ಕ್ಕೆ ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು ಎಂದು ಮಾಹಿತಿ ನೀಡಿದ್ದಾರೆ.

ವಿದ್ಯಾರ್ಥಿಗಳ ಅನುಕೂಲಕ್ಕೆ ಬುಧವಾರ ಎಲ್ಲ ರೀತಿಯ ವ್ಯವಸ್ಥೆ ಮಾಡಲಾಗಿತ್ತು. ವೆಬ್‌ಸೈಟ್‌ನಲ್ಲೂ ದಾಖಲಾತಿ ಪರಿಶೀಲನೆಯ ದಿನಾಂಕಗಳನ್ನು ಮಾಹಿತಿ ನೀಡಲಾಗಿತ್ತು. ಆದರೆ, ಹಲವರು ಬದಲಾದ ವೇಳಾಪಟ್ಟಿಯನ್ನು ಗಮನಿಸದೆಯೇ ಬೆಂಗಳೂರಿಗೆ ಬಂದಿದ್ದರು ಎಂದು ಹೇಳಿದ್ದಾರೆ.

‘ಅರ್ಜಿ ಸಂಖ್ಯೆ 5,12,000ವರೆಗೆ ಇರುವವರ ದಾಖಲಾತಿಗಳನ್ನು ಪರಿಶೀಲಿಸುವುದಾಗಿ ಅಧಿಕಾರಿಗಳು ಹೇಳಿದರು. ಆದರೆ, ದೂರದ ಊರುಗಳಿಂದ ಬಂದವರಿಗೆ ಇದರಿಂದ ತೊಂದರೆಯಾಗಿದೆ’ ಎಂದು ಹೇಳಿದರು.

‘ನನ್ನ ಮಗಳನ್ನು ಕರೆದುಕೊಂಡು ಬೆಳಿಗ್ಗೆ ಬಂದಿದ್ದೆ. ಒಳಗೆ ಕೂರಿಸಿದವರನ್ನು ಸಂಜೆಯಾದರೂ ಹೊರಗೆ ಬಿಡಲಿಲ್ಲ. ದಾಖಲಾತಿ ಪರಿಶೀಲನೆ ಇಂದಿಗೆ ಮುಕ್ತಾಯವಾಯಿತು ಎಂದು ಹೇಳಿದ್ದಾರೆ. ಉಪವಾಸವಿದ್ದರೂ ಪ್ರಯೋಜನವಾಗಲಿಲ್ಲ’ ಎಂದು ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲ್ಲೂಕಿನ ಪರಶುರಾಂಪುರದಿಂದ ಬಂದಿದ್ದ ಪೋಷಕರೊಬ್ಬರು ದೂರಿದರು.

‘ಸರಿಯಾಗಿ ಮಾಹಿತಿ ನೀಡಿದ್ದರೆ ಬೆಂಗಳೂರಿಗೆ ಬರುವ ಅನಿವಾರ್ಯ ಇರುತ್ತಿರಲಿಲ್ಲ’ ಎಂದು ವಿದ್ಯಾರ್ಥಿಗಳು ಕೆಇಎ ವಿರುದ್ಧ ಕಿಡಿಕಾರಿದರು.

‘ಬೆಂಗಳೂರಿಗೆ ಬಂದು ವಸತಿ ಗೃಹದಲ್ಲಿದ್ದರೆ ಅಪಾರ ವೆಚ್ಚವಾಗುತ್ತದೆ. ಮಧ್ಯಮ ಮತ್ತು ಬಡ ವರ್ಗದವರಿಗೆ ಇದು ಕಷ್ಟ. ಇಂದಿನ ತಂತ್ರಜ್ಞಾನ ಯುಗದಲ್ಲಿ ಬೀದರ್, ಕಲಬುರ್ಗಿಯಿಂದ ಕೇವಲ ದಾಖಲಾತಿ ಪರಿಶೀಲನೆ ಇಲ್ಲಿಗೆ ಬರಬೇಕಾ? ಜಿಲ್ಲಾಮಟ್ಟದ ಅಧಿಕಾರಿಗಳಿಂದಲೇ ಪರಿಶೀಲನೆ ನಡೆಸಿದ್ದರೆ ಈ ಅವ್ಯವಸ್ಥೆಯಾಗುತ್ತಿರಲಿಲ್ಲ’ ಎಂದು ತುಮಕೂರಿನ ಮಾರಪ್ಪ ಹೇಳಿದರು.

ನಗರದ ಮಲ್ಲೇಶ್ವರದ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಚೇರಿ ಮುಂದೆ ಬುಧವಾರ ಗುಂಪು ಸೇರಿದ್ದ ವಿದ್ಯಾರ್ಥಿಗಳು ಮತ್ತು ಪೋಷಕರು –ಪ್ರಜಾವಾಣಿ ಚಿತ್ರ

ಜನರನ್ನು ಬೇರೆಡೆ ಸೆಳೆಯಲು ಮತಾಂತರ ನಿಷೇಧ ಮಸೂದೆ

ಪ್ರಜಾವಾಣಿ ವಾರ್ತೆ

ಬೆಂಗಳೂರು:‘ಜನರ ದೃಷ್ಟಿಯನ್ನು ನೈಜ ಸಮಸ್ಯೆಗಳಿಂದ ಬೇರೆಡೆ ಸೆಳೆಯಲು ರಾಜ್ಯ ಸರ್ಕಾರ ಮತಾಂತರ ನಿಷೇಧ ಮಸೂದೆಯನ್ನು ವಿಧಾನಮಂಡಲ ಅಧಿವೇಶನದಲ್ಲಿ ಮಂಡಿಸಿದೆ. ಭ್ರಷ್ಟಾಚಾರದ ಕೂಪದಲ್ಲಿ ಮುಳುಗಿ, ಆಡಳಿತದಲ್ಲಿ ಸೋತಿರುವ ರಾಜ್ಯ ಸರ್ಕಾರ ತನ್ನ ತಪ್ಪುಗಳನ್ನು ಮುಚ್ಚಿ ಹಾಕಲು ಇಂತಹ ಕುತಂತ್ರ ಮಾಡುತ್ತಿದೆ’ ಎಂದು ಆಮ್ ಆದ್ಮಿ ಪಕ್ಷದ (ಎಎಪಿ) ರಾಜ್ಯ ಸಂಚಾಲಕ ಪೃಥ್ವಿ ರೆಡ್ಡಿ ಆರೋಪಿಸಿದರು.

‘ಸಂವಿಧಾನದ ಪ್ರಕಾರ ಒಬ್ಬ ಪ್ರಜೆಗೆ ತನ್ನಿಷ್ಟದ ಧರ್ಮ ಅನುಸರಿಸುವ ಹಕ್ಕಿದೆ. ಬಲವಂತದ ಮತಾಂತರ ತಡೆಯಲು ದೇಶದಲ್ಲಿ ಈಗಾಗಲೇ ಕಾನೂನು ಇದೆ. ಅದನ್ನು ಜಾರಿ ಮಾಡಲು ಇಚ್ಛಾಶಕ್ತಿ ಇರಬೇಕು’ ಎಂದರು.

ಪೃಥ್ವಿ ರೆಡ್ಡಿ

‘ಶೋಷಣೆ ಹಾಗೂ ಮತಾಂತರ ನಿಲ್ಲಿಸುವುದು ಸರ್ಕಾರಕ್ಕೆ ಬೇಕಿಲ್ಲ. ಬದಲಿಗೆ ತಮ್ಮಿಷ್ಟದ ಧರ್ಮಕ್ಕೆ ಮತಾಂತರ ಆದವರನ್ನೂ ಶಿಕ್ಷಿಸಲು ಅಸ್ತ್ರವೊಂದು ಬೇಕಾಗಿದೆ ಅಷ್ಟೇ. ಧರ್ಮಗಳ ನಡುವೆ ಘರ್ಷಣೆ ಸೃಷ್ಟಿಸಲು ಸರ್ಕಾರ ಮುಂದಾಗಿದೆ’ ಎಂದು ಆರೋಪಿಸಿದರು.

‘ಬೆಲೆ ಏರಿಕೆ, ರೈತರ ಸಮಸ್ಯೆ, ಸರ್ಕಾರಿ ಶಾಲೆಗಳ ಅವ್ಯವಸ್ಥೆ ಮತ್ತು ಖಾಸಗಿ ಶಾಲೆಗಳ ದರ್ಬಾರ್, ಸರ್ಕಾರಿ ಆಸ್ಪತ್ರೆಗಳ ಶೋಚನೀಯ ಸ್ಥಿತಿ ಮೊದಲಾದ ಗಂಭೀರ ಸಮಸ್ಯೆಗಳನ್ನು ಬಗೆಹರಿಸುವ ಬಗ್ಗೆ ಸರ್ಕಾರಕ್ಕೆ ಆಸಕ್ತಿಯೇ ಇಲ್ಲ’ ಎಂದು ಟೀಕಿಸಿದರು.

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಎಂ.ಪಿ. ವಿಭಾಗ, ರಾಮನಗರ.
ದೂ.ಸಂ: 080–27271259 ಇ–ಮೇಲ್: eempdrmgm@gmail.com
ಪ್ರಕಟಣೆ ಸಂಖ್ಯೆ: 07/2021–22 ದಿನಾಂಕ: 17.12.2021

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾವೇರಿ ನೀರಾವರಿ ನಿಗಮ ನಿಯಮಿತದಲ್ಲಿ ನೋಂದಾಯಿಸಿದ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ **www.eproc.karnataka.gov.in** ಮುಖಾಂತರ **ಲೆಕ್ಕಶೀರ್ಷಿಕೆ 4701 ಕಾಮಗಾರಿಗಳ** ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಕಾಮಗಾರಿಗಳ ಟೆಂಡರ್ ಸಲ್ಲಿಸಲು ಕಡೆಯ **ದಿನಾಂಕ: 31.12.2021 ಸಂಜೆ 4:30 ಘಂಟೆ**. ಆರ್ಥಿಕ ಬಿಡ್ **ದಿನಾಂಕ: 01.01.2022 ಸಂಜೆ 5:00 ಘಂಟೆ**. ಪ್ರತ್ಯೇಕ ಕೆಲಸಗಳ ವಿವರ, ಟೆಂಡರ್‌ಗಿಟ್ಟಿರುವ ಮೊತ್ತ, ಇ.ಎಂ.ಡಿ. ಕಾಲಮಿತಿ ಗುತ್ತಿಗೆದಾರರ ವರ್ಗೀಕರಣ ಮುಂತಾದ ಇತರೆ ಮಾಹಿತಿಗಳನ್ನು ಸದರಿ ಕಛೇರಿಯಿಂದ ಅಥವಾ ಮೇಲ್ಕಂಡ ವೆಬ್‌ಸೈಟ್ ಮೂಲಕ ಪಡೆಯಬಹುದು.

ವಾಸಾಸಂಇ/ರಾನ/ಪ್ರಾಂಚ್/371/2021–22
ಸಹಿ/– ಕಾರ್ಯಪಾಲಕ ಇಂಜಿನಿಯರ್
ಎಂ.ಪಿ. ವಿಭಾಗ, ರಾಮನಗರ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ, ಕೆ.ಎನ್.ಟಿ.ಬಿ ಸ್ಯಾನಿಟೋರಿಯಂ ಆಸ್ಪತ್ರೆ ಆವರಣ, ಬಂಗಾರಪೇಟೆ ರಸ್ತೆ, ಕೋಲಾರ–563102
ಸಂ: ಡಿಹೆಚ್‌ಎಸ್/ಕೋ/ಎನ್‌ಎಂಹೆಚ್‌ಪಿ/01/2021–22 ದಿ: 20.12.2021

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕೋಲಾರ ಜಿಲ್ಲೆಯ ರಾಷ್ಟ್ರೀಯ ಆರೋಗ್ಯ ಅಭಿಯಾನದ ಮಾನಸಿಕ ಆರೋಗ್ಯ ಕಾರ್ಯಕ್ರಮದಡಿಯಲ್ಲಿ ಕೋಲಾರ ಜಿಲ್ಲೆಗೆ ಅವಶ್ಯಕತೆಯಿರುವ ಔಷಧಿಗಳನ್ನು ಪೂರೈಸಲು ಅರ್ಹ ಸಂಸ್ಥೆಗಳಿಂದ ಅಲ್ಪಾವಧಿ ಟೆಂಡರ್ ಕರೆಯಲಾಗಿದೆ. ಅರ್ಹ ಏಜೆನ್ಸಿಗಳು ದಿನಾಂಕ: 20.12.2021ರಿಂದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ ಕೆ.ಎನ್.ಟಿ.ಬಿ ಸ್ಯಾನಿಟೋರಿಯಂ ಆಸ್ಪತ್ರೆ ಆವರಣ, ಬಂಗಾರಪೇಟೆ ರಸ್ತೆ, ಕೋಲಾರ ಇಲ್ಲಿ ರೂ.500 ಡಿ.ಡಿ ರೂಪದಲ್ಲಿ ನಿಗದಿತ ನಮೂನೆಯನ್ನು ಪಡೆದು ಭರ್ತಿ ಮಾಡಿ ಅಗತ್ಯ ದಾಖಲೆಗಳೊಂದಿಗೆ ತಲಾ ರೂ.10,000 ಮೊತ್ತದ ಇಎಂಡಿ ಡಿಡಿ ಯೊಂದಿಗೆ ಮೊಹರಾದ ದರಪಟ್ಟಿಯನ್ನು ದಿನಾಂಕ: 03.01.2022 ಸಂಜೆ 5.00 ಗಂಟೆಯೊಳಗಾಗಿ ಸಲ್ಲಿಸಲು ಕೋರಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ, ಕೆ.ಎನ್.ಟಿ.ಬಿ ಸ್ಯಾನಿಟೋರಿಯಂ ಆಸ್ಪತ್ರೆ ಆವರಣ, ಬಂಗಾರಪೇಟೆ ರಸ್ತೆ, ಕೋಲಾರ ಇಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.

ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ, ಕಲ್ಯಾಣ ಅಧಿಕಾರಿಗಳು,
ಕೋಲಾರ ಜಿಲ್ಲೆ, ಕೋಲಾರ
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ283/ಎಂ.ಸಿ.ಎ/2021–22

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನಿಧನ ವಾರ್ತೆ

ಹರಿಕಥಾ ವಿದ್ವಾನ್ ಲಕ್ಷ್ಮಣದಾಸ್ ವೇಲಣಕರ್

ಬೆಂಗಳೂರು: ಆಧ್ಯಾತ್ಮಿಕ ಚಿಂತಕ ಹಾಗೂ ಪ್ರವಚನಕಾರ ಲಕ್ಷ್ಮಣದಾಸ್ ವೇಲಣಕರ್ (82) ಅವರು ಬುಧವಾರ ನಿಧನರಾದರು. ಅವರು ವಯೋಸಹಜ ಅನಾರೋಗ್ಯ ಸಮಸ್ಯೆ ಎದುರಿಸುತ್ತಿದ್ದರು. ಅವರಿಗೆ ಪತ್ನಿ ಹಾಗೂ ಪುತ್ರ ಇದ್ದಾರೆ. ಹೆಬ್ಬಾಳದ ಚಿತಾಗಾರದಲ್ಲಿ ಅಂತ್ಯಸಂಸ್ಕಾರ ನೆರವೇರಿಸಲಾಯಿತು.

ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿಯವರಾದ ವೇಲಣಕರ್ ಅವರು, ಹರಿಕಥಾ ವಿದ್ವಾಂಸ ಸಂತ ಭದ್ರಗಿರಿ ಅಚ್ಯುತದಾಸ್ ಮತ್ತು ಕೇಶವದಾಸ ಅವರ ಶಿಷ್ಯರಾಗಿದ್ದರು. ಹರಿಕಥಾ ಪರಂಪರೆಗೆ ಮಹತ್ತರ ಕೊಡುಗೆ ನೀಡಿದ ಅವರು, ಗೋರಖ್‌ಪುರದ ಗೀತಾ ಪ್ರೆಸ್‌ನ ನೂರಕ್ಕೂ ಅಧಿಕ ಆಧ್ಯಾತ್ಮಿಕ ಕೃತಿಗಳನ್ನು ಕನ್ನಡಕ್ಕೆ ಅನುವಾದ ಮಾಡಿದ್ದರು.

ಷಡ್ಜ ಕಲಾ ಕೇಂದ್ರವನ್ನು ಸ್ಥಾಪಿಸಿ, ಆಧ್ಯಾತ್ಮಿಕ, ಸಂಗೀತ ಹಾಗೂ ಸಾಹಿತ್ಯ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು.

ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಹೈರಿಸ್ಕ್ ದೇಶಗಳಿಂದ ಬಂದಿರುವ ಪ್ರಯಾಣಿಕರಿಗೆ ಆರ್‌ಟಿ ಪಿಸಿಆರ್ ತಪಾಸಣೆ ಮಾಡುತ್ತಿರುವುದು

6 ಮಂದಿಗೆ ಸೋಂಕು ದೃಢ

ದೇವನಹಳ್ಳಿ: ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬುಧವಾರ ಮುಂಜಾನೆ ಹೈರಿಸ್ಕ್ (ಓಮೈಕ್ರಾನ್ ಪ್ರಕರಣ ಹೆಚ್ಚಿರುವ ದೇಶಗಳು) ದೇಶಗಳಿಂದ ಬಂದಿರುವ ಪ್ರಯಾಣಿಕರ ಪೈಕಿ 6 ಮಂದಿಗೆ ಕೋವಿಡ್ ಸೋಂಕು ಇರುವುದು ದೃಢಪಟ್ಟಿದೆ ಎಂದು ಜಿಲ್ಲಾಧಿಕಾರಿ ಕೆ. ಶ್ರೀನಿವಾಸ್ ತಿಳಿಸಿದ್ದಾರೆ.

ಇಂಗ್ಲೆಂಡ್‌ನಿಂದ ಬಂದಿರುವ 34 ವರ್ಷದ ಮಹಿಳೆ, 25 ವರ್ಷದ ಪುರುಷ, ಪ್ಯಾರಿಸ್‌ನಿಂದ ಬಂದಿರುವ 22 ವರ್ಷದ ಮಹಿಳೆ, ಫ್ರಾಂಕ್‌ಫರ್ಟ್‌ನಿಂದ ಬಂದಿರುವ 21 ವರ್ಷದ ಪುರುಷ, ಕುವೈತ್‌ನಿಂದ ಬಂದಿರುವ 45 ವರ್ಷದ ಮಹಿಳೆ ಮತ್ತು 46 ವರ್ಷದ ಪುರುಷನಿಗೆ ಸೋಂಕು ದೃಢಪಟ್ಟಿದೆ ಎಂದು ತಿಳಿಸಿದ್ದಾರೆ.

ಕೋವಿಡ್ ಅಂಕಿ–ಅಂಶ

ಆಧಾರ: ಮೈಗೌ.ಇನ್/ಕೋವಿಡ್19 ವರ್ಲ್ಡೋಮೀಟರ್

	ವಿಶ್ವ	ಭಾರತ
ಒಟ್ಟು ಪ್ರಕರಣ	27.69 ಕೋಟಿ	3.47 ಕೋಟಿ
ಸಕ್ರಿಯ ಪ್ರಕರಣ	2.31 ಕೋಟಿ	78,190
ಗುಣಮುಖ	24.83 ಕೋಟಿ	3.42 ಕೋಟಿ
ಸಾವು	53.89 ಲಕ್ಷ	4.78 ಲಕ್ಷ
ದಿನದ ಮಾಹಿತಿ: ಹೊಸ ಪ್ರಕರಣ	7.61 ಲಕ್ಷ	6,317
ಗುಣಮುಖ	5.99 ಲಕ್ಷ	6,906
ಸಾವು	7,486	318

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): 1.81ಲಕ್ಷ ಅಮೆರಿಕ; 90,629 ಬ್ರಿಟನ್; 72,832 ಫ್ರಾನ್ಸ್

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು: 1.06 ಕೋಟಿ ಅಮೆರಿಕ; 9.88 ಲಕ್ಷ ಫ್ರಾನ್ಸ್; 15.29 ಲಕ್ಷ ಬ್ರಿಟನ್

ಎಲ್ಲಿ ಹೆಚ್ಚು ಸಾವು (ಒಟ್ಟು): 1.41 ಲಕ್ಷ ಮಹಾರಾಷ್ಟ್ರ; 45,155 ಕೇರಳ; 36,691 ತಮಿಳುನಾಡು

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): 66.50 ಮಹಾರಾಷ್ಟ್ರ; 52.22 ಕೇರಳ; 27.41 ತಮಿಳುನಾಡು

ಪ್ರಜಾವಾಣಿ ಗ್ರಾಫಿಕ್ಸ್

ನಗರದ ಕೋವಿಡ್ ಅಂಕಿ–ಅಂಶ

12,60,692 ಒಟ್ಟು ಪ್ರಕರಣಗಳು
5,740 ಸಕ್ರಿಯ ಪ್ರಕರಣಗಳು
12,38,573 ಗುಣಮುಖರಾದವರು
16,378 ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	211
ಗುಣಮುಖ	162
ಸಾವು	-

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಓಮೈಕ್ರಾನ್ ಸೋಂಕಿತರ ಸಂಖ್ಯೆ 12ಕ್ಕೆ ಏರಿಕೆ

ಬೆಂಗಳೂರು: ಕೋರಮಂಗಲದ ಕುಟುಂಬವೊಂದರಲ್ಲಿ ಮೂವರು ಓಮೈಕ್ರಾನ್ ಸೋಂಕು ಹೊಂದಿರುವುದು ದೃಢಪಟ್ಟಿದ್ದು, ಅವರ ಮನೆಯನ್ನು ಬಿಬಿಎಂಪಿ ಅಧಿಕಾರಿಗಳು ಸೀಲ್‌ಡೌನ್ ಮಾಡಿದ್ದಾರೆ. ನಗರದಲ್ಲಿ ಓಮೈಕ್ರಾನ್ ದೃಢಪಟ್ಟವರ ಸಂಖ್ಯೆ ಈಗ 12ಕ್ಕೆ ಏರಿಕೆಯಾಗಿದೆ.

ಕೋರಮಂಗಲದ ನಿವಾಸಿಯಾಗಿರುವ 23 ವರ್ಷ ವಯಸ್ಸಿನ ವಿದ್ಯಾರ್ಥಿ ಬ್ರಿಟನ್‌ನಿಂದ ಕಳೆದವಾರ ಮರಳಿದ್ದರು. ವಿಮಾನ ನಿಲ್ದಾಣದಲ್ಲಿ ಕೋವಿಡ್ ಪರೀಕ್ಷೆಗೆ ಒಳಪಡಿಸಿದಾಗ ಸೋಂಕು ದೃಢಪಟ್ಟಿರಲಿಲ್ಲ. ಮನೆಯಲ್ಲಿ ಪ್ರತ್ಯೇಕವಾಸದಲ್ಲಿದ್ದ ಅವರಿಗೆ ಬಳಿಕ ಕೋವಿಡ್ ದೃಢಪಟ್ಟಿತ್ತು. ಅವರಿಂದ ಸಂಗ್ರಹಿಸಿದ್ದ ಮಾದರಿಯನ್ನು ವೈರಾಣು ವಂಶವಾಹಿ ಸಂರಚನೆ ವಿಶ್ಲೇಷಣೆಗೆ (ಜೀನೋಮ್ ಸೀಕ್ವೆನ್ಸಿಂಗ್) ಕಳುಹಿಸಲಾಗಿತ್ತು. ಬುಧವಾರ ಫಲಿತಾಂಶ ಬಂದಿದೆ. ಅವರ ನೇರ ಸಂಪರ್ಕಿತರಾದ ತಂದೆ–ತಾಯಿಯೂ ಸೋಂಕು ಹೊಂದಿರುವುದು ದೃಢಪಟ್ಟಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಸೋಂಕಿತ ವಿದ್ಯಾರ್ಥಿಯ ಪರೋಕ್ಷ ಸಂಪರ್ಕಕ್ಕೆ ಬಂದ 10 ಮಂದಿಯನ್ನೂ ಪರೀಕ್ಷೆಗೆ ಒಳಪಡಿಸಿದ್ದೇವೆ. ಅವರಲ್ಲಿ ಯಾರೂ ಸೋಂಕು ಹೊಂದಿಲ್ಲ. ‘ಓಮೈಕ್ರಾನ್ ಅತಿ ಹೆಚ್ಚಾಗಿ ಹರಡಿರುವ ದೇಶಗಳಿಂದ ಬಂದವರು ಕೋವಿಡ್ ಹೊಂದಿಲ್ಲ ಎಂಬುದು ಪರೀಕ್ಷೆಯಲ್ಲಿ ದೃಢಪಟ್ಟರೂ 8 ದಿನಗಳ ಕಾಲ ಅವರು ಪ್ರತ್ಯೇಕವಾಸದಲ್ಲಿರಬೇಕು.’ ಎಂದರು.

ನೈಋತ್ಯ ರೈಲ್ವೆ
ಟೆಂಡರ್ ಪ್ರಕಟಣೆ ಸಂ. ಸಿಎಓ/ಸಿಎನ್/ಬಿಎನ್‌ಸಿ/69/2021 ದಿನಾಂಕ : 17–12–2021
ಭಾರತದ ರಾಷ್ಟ್ರಪತಿಗಳ ಪರವಾಗಿ, ಕೆಳಸಹಿದಾರರು, ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ವಿವರ	ಅಂದಾಜು ಮೌಲ್ಯ
ಶಿವಮೊಗ್ಗ – ಶಿಕಾರಿಪುರ – ರಾಣೆಬೆನ್ನೂರು ಹೊಸ ಬ್ರಾಡ್‌ಗೇಜ್ ಮಾರ್ಗದಲ್ಲಿ (103 ಕಿ.ಮೀ) ಬೃಹತ್ ಸೇತುವೆಗಳು, ಸಣ್ಣ ಸೇತುವೆಗಳು, ರಸ್ತೆ ಮೇಲ್ಸೇತುವೆಗಳು, ರಸ್ತೆ ಕೆಳಸೇತುವೆಗಳು ಮತ್ತು ಪಾದಚಾರಿ ಸೇತುವೆಗಳು / ಸಬ್‌ವೇಗಳಿಗಾಗಿ ಜನರಲ್ ಅರೇಂಜ್‌ಮೆಂಟ್ ಡ್ರಾಯಿಂಗ್‌ಗಳ ತಯಾರಿಕೆ. (ಟೆಂಡರ್ ಉಲ್ಲೇಖ : ಎಸ್‌ಎಂಇಟಿ–ಆರ್‌ಎನ್‌ಆರ್–02)	ರೂ. 24,77,736/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 07–01–2022 ರಂದು 15.00 ಗಂಟೆಯವರೆಗೆ
ಹೆಚ್ಚಿನ ವಿವರಗಳಿಗೆ www.ireps.gov.in ಗೆ ಲಾಗ್‌ಆನ್ ಮಾಡಿ.
ಉಪ ಮುಖ್ಯ ಇಂಜಿನಿಯರ್ / ನಿರ್ಮಾಣ / ಕಾಮಗಾರಿಗಳು / ಬೆಂಗಳೂರು ದಂಡು
ಪಿಯುಬಿ/343/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2021–22
S.W.Railways SWRRLY SWRRLY

IN THE HIGH COURT OF KARNATAKA AT BENGALURU
(Substituted service of notice to the respondent No.1 by way of paper publication vide court order dated: 03/12/2021)
CP No. 53/2014
[Video conferencing / physical hearing]
COUNCIL OF THE INSTITUTE OF CHARTERED ACCOUNTANTS OF INDIA
...Petitioner/s
(Sri. S. Sriranga, Sumana Naganand and Vikram U.R.
- Advocates For The Petitioner)
V/s
MANISH AGARWAL
AND ANOTHER ***...Respondent/s***

[V/o. Dated: 17/10/2019
Sri. C. Shashikanth Assistant Solicitor General For Respondent No. 2]
[Sri. H. Shanthi Bhushan, Asst. Solicitor General Of India For R-2 (MA Filed) in Place of Shashikanth C]
To,
Respondent No. 1:
R1 - Shri. Manish Agarwal, ACA Presently Residing At H.No. 313, Deep 6th Main, II Block HRBR Layout, Kalyan Nagar, Banaswadi, Bangalore - 560043.
...Respondent/s
Whereas the above named Petitioner has filed a Petition on this Court Under Sec.21 (5) of the Chartered Accountants Act, 1949 of CPC, as in the copy of the petition annexed hereunto.
Notice is hereby given to you to appear in this Court in person or through an Advocate duly instructed or through some one authorized by law to act for you, in this matter on **25/01/2022 at 10.30 a.m.** or an any subsequent day may be posted for hearing in case you intend to contest the Petition. If you fail to appear, the petition will be dealt with, heard and decided in your absence.
GIVEN under my hand and the seal of the Court, this **03rd Day of December 2021**.
By Order Of The Court
sd/-
Assistant Registrar

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಬಿಟಿಎಂ ಲೇಔಟ್ ವಿಭಾಗ, ಬಿಬಿಎಂಪಿ ವಾಣಿಜ್ಯ ಸಂಕೀರ್ಣ, 2ನೇ ಮಹಡಿ, ಲಷ್ಕರ್ ಹೊಸೂರು ರಸ್ತೆ, ಆಡುಗೋಡಿ, ಬೆಂಗಳೂರು – 5600308.
ಸಂಖ್ಯೆ: ಕಾಅ/(ಬಿಟಿಎಂ)/ಜೆಇ/ಇ–ಪ್ರೊ/12/2021–22 ದಿನಾಂಕ: 17–12–2021

ಟೆಂಡರ್ ಅಧಿಸೂಚನೆ
(ದ್ವಿ–ಲಕೋಟೆ ಪದ್ಧತಿ) (ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕೆಳಸಹಿದಾರರು ಈ ಕೆಳಗೆ ತಿಳಿಸಿರುವ ಕಾಮಗಾರಿಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನೋಂದಾಯಿಸಿರುವ ಗುತ್ತಿಗೆದಾರರು ಅಥವಾ ಸಿಪಿಡಬ್ಲ್ಯೂಡಿ/ ಕೆಪಿಡಬ್ಲ್ಯೂಡಿ / ರೈಲ್ವೇಸ್ / ಎಂಇಎಸ್ ಅಥವಾ ಯಾವುದೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ತತ್ಸಮಾನ ನೋಂದಾಯಿತ ಹೆಸರಾಂತರಾದ ಯಾವುದೇ ಏಜೆನ್ಸಿಗಳಿಂದ ಐಟಂ ದರದ ಆಧಾರದಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಕಾಮಗಾರಿ ಅಂದಾಜು ಮೌಲ್ಯ (ರೂ. ಲಕ್ಷಗಳಲ್ಲಿ)
1	ವಾರ್ಡ್ ಸಂಖ್ಯೆ. 146 ಲಕ್ಕಸಂದ್ರದಲ್ಲಿನ ಚಂದ್ರಪ್ಪನಗರ, ಎಸ್.ಆರ್. ನಗರ, ಮಹಾಲಿಂಗೇಶ್ವರ ಬಡಾವಣೆಯಲ್ಲಿ ರಸ್ತೆಗಳಿಗೆ ಸಿಮೆಂಟ್ ಕಾಂಕ್ರೀಟ್ ಒದಗಿಸುವುದು ಹಾಗೂ ಇತರೆ ಅಭಿವೃದ್ಧಿ ಕಾಮಗಾರಿಗಳು. (ಕರೆ–1)	99.90
2	ವಾರ್ಡ್ ಸಂಖ್ಯೆ. 147 ಆಡುಗೋಡಿ ಇಲ್ಲಿನ 7ನೇ ಬ್ಲಾಕ್ ಮತ್ತು 8ನೇ ಬ್ಲಾಕ್ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ಚರಂಡಿಗಳ ಹೂಳು ತೆಗೆಯುವುದು ಮತ್ತು ಚರಂಡಿಗಳು ಹಾಗೂ ಕಲ್ವರ್ಟ್‌ಗಳನ್ನು ಅಭಿವೃದ್ಧಿಪಡಿಸುವುದು. (ಕರೆ–1)	75.00
3	ವಾರ್ಡ್ ಸಂಖ್ಯೆ. 147 ರಲ್ಲಿನ ಆಡುಗೋಡಿ ವಾರ್ಡ್‌ನಲ್ಲಿ ಬೃಬೆಂಮಪಾ ಕಾರ್ಪೊರೇಟರ್ ಕಛೇರಿ ನಿರ್ಮಿಸುವುದು. (ಕರೆ–1)	95.00
4	ವಾರ್ಡ್ ಸಂಖ್ಯೆ. 148, ಈಜಿಪುರ ಇಲ್ಲಿನ ಹೋಲಿ ಕ್ರೈಸ್ಟ್ ಸ್ಕೂಲ್ ಹತ್ತಿರ ಆರ್‌ಸಿಸಿ ಚರಂಡಿಯ ರಿಮಾಡೆಲಿಂಗ್ ಹಾಗೂ ಅಶ್ವಿನಿ ಲೇಔಟ್ ಮತ್ತು ಎಸ್.ಟಿ. ಬೆಡ್ ಪ್ರದೇಶದಲ್ಲಿ ಚರಂಡಿಯ ಹೂಳು ತೆಗೆಯುವುದು ಮತ್ತು ಕಲ್ವರ್ಟ್‌ಗಳ ನಿರ್ಮಾಣ. (ಕರೆ–1)	75.00
5	ವಾರ್ಡ್ ಸಂಖ್ಯೆ. 151 ಕೋರಮಂಗಲ ಇಲ್ಲಿನ 4ನೇ ಮತ್ತು 5ನೇ ಬ್ಲಾಕ್ ಕೋರಮಂಗಲ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ರಸ್ತೆಗಳು ಮತ್ತು ಚರಂಡಿಗಳಿಗೆ ಅಭಿವೃದ್ಧಿ. (ಕರೆ–1)	75.00
6	ವಾರ್ಡ್ ಸಂಖ್ಯೆ. 152 ಎಸ್.ಜಿ. ಪಾಳ್ಯ ಇಲ್ಲಿನ ಮಾರುತಿನಗರ ಮತ್ತು ಭಾರತಿ ಲೇಔಟ್‌ನಲ್ಲಿ ಕಾಬಲ್ ಸ್ಟೋನ್ ಒದಗಿಸುವುದು. (ಕರೆ–1)	55.00
7	ವಾರ್ಡ್ ಸಂಖ್ಯೆ. 172 ರಲ್ಲಿ ಎಐಸಿಒಬಿಎ ನಗರ ಪ್ರದೇಶ ಹಾಗೂ ಇತರೆ ಪ್ರದೇಶಗಳ ಚರಂಡಿಗಳ ಹೂಳು ತೆಗೆಯುವುದು ಮತ್ತು ಇತರೆ ಅಭಿವೃದ್ಧಿಗಳು. (ಕರೆ–1)	55.00
8	ವಾರ್ಡ್ ಸಂಖ್ಯೆ. 173 ರಲ್ಲಿನ ಹೆಚ್‌ಎಸ್‌ಆರ್ 5ನೇ ಸೆಕ್ಟರ್‌ನಲ್ಲಿ ಎಸ್‌ಡಬ್ಲ್ಯೂಡಿಗೆ ಸಂಪರ್ಕಿಸುವ 14ನೇ ಮುಖ್ಯರಸ್ತೆಗೆ ಅಡ್ಡಲಾಗಿ 4ನೇ ಅಡ್ಡರಸ್ತೆ ಹೆಚ್‌ಎಸ್‌ಆರ್ ಲೇಔಟ್‌ನಲ್ಲಿ ಕಲ್ವರ್ಟ್‌ಗಳ ನಿರ್ಮಾಣ ಮತ್ತು ಜಕ್ಕಸಂದ್ರ ಗ್ರಾಮ ಮತ್ತು ವೆಂಕಟಾಪುರ ಕ್ರಾಸ್ ಹಾಗೂ ಮುಖ್ಯರಸ್ತೆಗಳಲ್ಲಿ ಚರಂಡಿಗಳ ಹೂಳು ತೆಗೆಯುವುದು. (ಕರೆ–1)	75.00
9	ವಾರ್ಡ್ ಸಂಖ್ಯೆ. 176 ರಲ್ಲಿ 17ನೇ ಮುಖ್ಯರಸ್ತೆಯಿಂದ 28ನೇ ಮುಖ್ಯರಸ್ತೆ ಉತ್ತರ ಭಾಗದವರೆಗೆ ಇಡಬ್ಲ್ಯೂಎಸ್ ಕಾಲೋನಿಗೆ ಡಾಂಬರೀಕರಣ ಕಾಮಗಾರಿ. (ಕರೆ–1)	75.00
10	ವಾರ್ಡ್ ಸಂಖ್ಯೆ. 176 ಬಿಟಿಎಂ ಲೇಔಟ್ ಇಲ್ಲಿನ 1ನೇ ಮುಖ್ಯರಸ್ತೆ, 12ನೇ ಅಡ್ಡರಸ್ತೆ ಬಿಟಿಎಂ 2ನೇ ಹಂತ ಇಲ್ಲಿ ವಾರ್ಡ್ ಕಛೇರಿ ಕಟ್ಟಡಕ್ಕೆ ಹೆಚ್ಚುವರಿ ಅಭಿವೃದ್ಧಿ. (ಕರೆ–1)	90.00
11	ವಾರ್ಡ್ ಸಂಖ್ಯೆ. 173 ಜಕ್ಕಸಂದ್ರ ಇಲ್ಲಿನ ಭದ್ರ ಸಂಕಿರಣ ಕುವೆಂಪು ಬ್ಲಾಕ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಚರಂಡಿ ಕಲ್ವರ್ಟ್‌ಗಳಿಗೆ ಅಭಿವೃದ್ಧಿ ಮತ್ತು ಡಾಂಬರೀಕರಣ ಮಾಡುವಿಕೆ. (ಕರೆ–2)	70.00

ಟೆಂಡರ್ ಫಾರಂ ಬೆಲೆ (ಹಿಂದಿರುಗಿಸುವುದಿಲ್ಲ): ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅನುಸಾರ.

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: **https://eproc.karnataka.gov.in** ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಭರ್ತಿ ಮಾಡಿದ ಟೆಂಡರ್ ದಸ್ತಾವೇಜನ್ನು ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ: **10–01–2022ರಂದು ಸಂಜೆ 4.00 ಗಂಟೆವರೆಗೆ.** 3) ಬಿಡ್ ಪೂರ್ವ ಭಾವಿ ಸಭೆ ದಿನಾಂಕ: **03–01–2022ರಂದು 15.00 ಗಂಟೆಗೆ.** 4) ಟೆಂಡರ್ ದಸ್ತಾವೇಜನ್ನು ತೆರೆಯುವ ದಿನಾಂಕ: **11–01–2022ರಂದು ಸಂಜೆ 4.30 ಗಂಟೆಗೆ.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಬಿಟಿಎಂ ಲೇಔಟ್ ವಿಭಾಗ, ಬಿಬಿಎಂಪಿ.

ಅಭಿವೃದ್ಧಿ ಶುಲ್ಕ ಪಾವತಿಸಿ, ಬೆಂಗಳೂರು ಅಭಿವೃದ್ಧಿಗೆ ಸಹಕರಿಸಿ.
ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

‘ಶಿಕ್ಷಣ: ಕನ್ನಡ ಅನುಷ್ಠಾನ ಅಗತ್ಯ’

ಬೆಂಗಳೂರು: ‘ಶಿಕ್ಷಣದಲ್ಲಿ ಭಾಷಾ ಸಮಸ್ಯೆ ದೊಡ್ಡದಾಗಿ ಬೆಳೆಯುತ್ತಿದೆ. ಪೂರ್ಣ ಪ್ರಮಾಣದಲ್ಲಿ ಕನ್ನಡವನ್ನು ಪ್ರಾಥಮಿಕ ಹಾಗೂ ಪೂರ್ವ ಪ್ರಾಥಮಿಕ ಶಿಕ್ಷಣದಲ್ಲಿ ಅಳವಡಿಸಿಕೊಂಡರೆ ಆಡಳಿತ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಆಯಾ ರಾಜ್ಯದ ಪ್ರಧಾನ ಭಾಷೆಗೆ ಆದ್ಯತೆ ದೊರೆಯುತ್ತದೆ. ಈ ಬದಲಾವಣೆ ತರುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಲಾಗಿದೆ’ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ತಿಳಿಸಿದರು.

ನವದೆಹಲಿಯಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಪ್ರಾಧಿಕಾರದ ನಿಯೋಗವು 2 ದಿನಗಳಲ್ಲಿ ಕೇಂದ್ರ ಸಚಿವರಾದ ನಿರ್ಮಲಾ ಸೀತಾರಾಮನ್, ಪ್ರಹ್ಲಾದ್ ಜೋಶಿ, ಜಿತೇಂದ್ರ ಸಿಂಗ್, ಕಿಶನ್ ರೆಡ್ಡಿ, ಅನುರಾಗ್ ಠಾಕೂರ್ ಹಾಗೂ ಕೆಲವು ಸಂಸದರನ್ನು ಭೇಟಿ ಮಾಡಿದೆ. ಭಾಷೆ, ಉದ್ಯೋಗ ಸೇರಿದಂತೆ ರಾಜ್ಯವನ್ನು ಕಾಡುತ್ತಿರುವ ವಿವಿಧ ಸಮಸ್ಯೆಗಳ ಬಗ್ಗೆ ಅವರ ಜೊತೆಗೆ ಚರ್ಚಿಸಲಾಗಿದೆ. ಸಚಿವರಿಂದ ಸಕಾರಾತ್ಮಕ ಸ್ಪಂದನೆ ದೊರೆತಿದೆ’ ಎಂದು ತಿಳಿಸಿದರು.

‘ಶಾಸ್ತ್ರೀಯ ಭಾಷೆಗೆ ಸಂಬಂಧಿಸಿದಂತೆ ಆಗಬೇಕಾದ ಕೆಲಸಗಳ ಬಗ್ಗೆ ಮಾನವ ಸಂಪನ್ಮೂಲ ಇಲಾಖೆಗೆ ತಿಳಿಸಲಾಗಿದೆ. ಬ್ಯಾಂಕುಗಳಲ್ಲಿ ಕನ್ನಡ ಬಾರದ ಅಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಇದರಿಂದ ಗ್ರಾಹಕರು ಸಮಸ್ಯೆ ಎದುರಿಸುತ್ತಿದ್ದಾರೆ. ಗ್ರಾಹಕನಿಗೆ ಅವನದೇ ಭಾಷೆಯಲ್ಲಿ ಸೇವೆ ಒದಗಿಸಬೇಕು. ಹೀಗಾಗಿ, ಕೇಂದ್ರ ಸರ್ಕಾರವು ಬ್ಯಾಂಕುಗಳಲ್ಲಿನ ಗ್ರೂಪ್ ಎ ಮತ್ತು ಬಿ ಹುದ್ದೆಗಳಿಗೂ ಕನ್ನಡದಲ್ಲಿ ಪರೀಕ್ಷೆ ಬರೆಯಲು ಅವಕಾಶ ನೀಡಬೇಕು. ಈ ಬಗ್ಗೆ ಹಕ್ಕೊತ್ತಾಯ ಮಾಡಲಾಗಿದೆ’ ಎಂದರು.

‘ಸಾಂವಿಧಾನಿಕವಾಗಿ ಭಾರತೀಯ ಭಾಷೆಗಳು ಸಬಲೀಕರಣಗೊಳ್ಳಬೇಕೆಂಬ ದೃಷ್ಟಿಯಿಂದ ಕಾನೂನು ತಿದ್ದುಪಡಿಗೆ ಕರಡನ್ನು ಸಿದ್ಧಪಡಿಸಿ, ಎಲ್ಲ ಸಂಸದರಿಗೂ ನೀಡಲಾಗಿದೆ. ಈ ಬಗ್ಗೆ ರಾಜ್ಯದ ಸಂಸದರು ಬೇರೆ ರಾಜ್ಯಗಳ ಸಂಸದರೊಂದಿಗೆ ಚರ್ಚಿಸಬೇಕು’ ಎಂದರು.

‘ವಿಕಿಪೀಡಿಯಾದಲ್ಲಿ ತಿರುಚಿದ ಮಾಹಿತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಇಂಗ್ಲಿಷ್ ವಿಕಿಪೀಡಿಯಾದಲ್ಲಿ ಅನೇಕ ತಪ್ಪು, ಸುಳ್ಳು ಹಾಗೂ ತಿರುಚಿದ ಮಾಹಿತಿಗಳನ್ನು ಪ್ರಕಟಿಸಲಾಗಿದೆ. ಹಾಗಾಗಿ, ವಿಕಿಪೀಡಿಯಾದ ಬಳಕೆ ಕಡಿಮೆ ಮಾಡುವುದು ಸೂಕ್ತ’ ಎಂದು ಮುಖ್ಯಮಂತ್ರಿಗಳ ಇ–ಆಡಳಿತ ಸಲಹೆಗಾರ ಬೇಳೂರು ಸುದರ್ಶನ ಅಭಿಪ್ರಾಯಪಟ್ಟರು.

ಅನಂತಕುಮಾರ್ ಪ್ರತಿಷ್ಠಾನವು ಆನ್‌ಲೈನ್‌ನಲ್ಲಿ ಬುಧವಾರ ಹಮ್ಮಿಕೊಂಡಿದ್ದ ‘ಅನಂತಪಥ’ ಸಂಚಿಕೆ ಬಿಡುಗಡೆ ಕಾರ್ಯಕ್ರಮದಲ್ಲಿ ‘ಕನ್ನಡದಲ್ಲಿ ಮುಕ್ತ ಜ್ಞಾನ–ತಂತ್ರಜ್ಞಾನ’ ಕುರಿತು ಮಾತನಾಡಿದರು.

‘ಪಾಶ್ಚಾತ್ಯ ವಿಕಿಪೀಡಿಯಾ ಕಾರ್ಯಕರ್ತರು ತಮಗೆ ಸರಿಕಂಡ ವಿಷಯಗಳನ್ನು ವಿಕಿಪೀಡಿಯಾದಲ್ಲಿ ಹಾಕಿ, ಯಾರೂ ಬದಲಾಯಿಸದ ಹಾಗೆ ತಾಂತ್ರಿಕವಾಗಿ ಬಂಧಿಸಿದ್ದಾರೆ. ಇದರಿಂದ ಅಲ್ಲಿ ತಪ್ಪು ಮಾಹಿತಿಗಳೇ ಅಧಿಕವಾಗಿವೆ. ಅದರಲ್ಲಿರುವುದು ಪ್ರಾಥಮಿಕ ಮಾಹಿತಿಗಳು ಅಷ್ಟೇ’ ಎಂದರು.

‘ಕನ್ನಡ ಹಾಗೂ ಇಂಗ್ಲಿಷ್ ವಿಕಿಪೀಡಿಯಗಳಲ್ಲಿ ಪಾರಂಪರಿಕ ವೈದ್ಯಕೀಯ ಪದ್ಧತಿಗಳ ಬಗ್ಗೆ ವಿಭಿನ್ನವಾದ ಮಾಹಿತಿಗಳು ಸಿಗುತ್ತವೆ. ಇಂಗ್ಲಿಷ್ ವಿಕಿಪೀಡಿಯಾದಲ್ಲಿ ಮಾಹಿತಿ ಬದಲಾಯಿಸಲು ಯತ್ನಿಸಿದರೂ ಸಾಧ್ಯವಾಗಲಿಲ್ಲ’ ಎಂದೂ ಹೇಳಿದರು.

ಬೇಳೂರು ಸುದರ್ಶನ

‘ಮುಕ್ತ ಜ್ಞಾನದ ಕಲ್ಪನೆ ನಮ್ಮ ಪರಂಪರೆಗೆ ಹೊಸತಲ್ಲ. ಋಷಿಮುನಿಗಳು ಶತಮಾನಗಳಿಂದ ಜ್ಞಾನವನ್ನು ಮುಕ್ತವಾಗಿ ನೀಡುತ್ತಾ ಬಂದಿದ್ದಾರೆ. ನಮ್ಮಲ್ಲಿ ಇಂದಿಗೂ ಜ್ಞಾನ ಮುಕ್ತವಾಗಿ ಸಿಗುತ್ತಿದೆ. ಪ್ರಕಾಶನ ಜಗತ್ತಿನಲ್ಲಿ ಹಕ್ಕುಸ್ವಾಮ್ಯ ಇಂದು ಬಹುದೊಡ್ಡ ವಿಷಯ. ಹಿಂದೆ ಜ್ಞಾನದ ನಕಲು ಎಂಬ ಪ್ರಶ್ನೆಯೇ ಇರಲಿಲ್ಲ. ಇದು ಪಾಶ್ಚಾತ್ಯ ಪರಿಕಲ್ಪನೆ’ ಎಂದರು. ‘ಅಂದು ಕಲ್ಲಿನಲ್ಲಿ ಕೆತ್ತಿದ್ದ ಅಕ್ಷರಗಳು ಇಂದು ಕಂಪ್ಯೂಟರ್‌ನಲ್ಲಿ ಅಕ್ಷರಗಳಾಗಿ ಮೂಡುತ್ತಿವೆ. ಇದು, ಇಂದಿನ ಜಾಗತಿಕ ಮಾನದಂಡವೂ ಹೌದು. ಫೇಸ್‌ಬುಕ್, ಟ್ವಿಟರ್ ಸೇರಿದಂತೆ ನಾವು ಬಳಸುವ ವಿವಿಧ ಸಾಮಾಜಿಕ ಮಾಧ್ಯಮಗಳಲ್ಲಿ ಕನ್ನಡ ಬಳಸಬೇಕು. ಆಗ ಮಾತ್ರ ನಮ್ಮ ಪರಂಪರೆ, ಜ್ಞಾನ ಹಾಗೂ ಭಾಷೆಯನ್ನು ಮನವರಿಕೆ ಮಾಡಬಹುದು’ ಎಂದರು.

ಬಹು ಮಾಧ್ಯಮ ಪ್ರಜಾವಾಣಿ LIVE

ಪ್ರಜಾವಾಣಿ ಕನ್ನಡ ಧ್ವನಿ

Prajavani.net/podcast

ದಿನದ ವಿಶೇಷ: ಸಂಜೆ 4 : ಆಟ ನೋಟ
ಬೆಳಿಗ್ಗೆ 7 : ವಚನವಾಣಿ,
ಬೆಳಿಗ್ಗೆ 7.30: ದಿನದ ಸೂಕ್ತಿ,
ಬೆಳಿಗ್ಗೆ 8: ಮಧ್ಯಾಹ್ನ 2: ರಾತ್ರಿ 8: ಪ್ರಜಾವಾಣಿ ವಾರ್ತೆ, ಬುಲೆಟಿನ್,
ಬೆಳಿಗ್ಗೆ 9: ಪ್ರಚಲಿತ,
ಬೆಳಿಗ್ಗೆ 9.30: ಸಂಪಾದಕೀಯ

Prajavani.net
Prajavani Prajavani

ಪ್ರತಿಭಟನೆಯಲ್ಲಿ 40ಕ್ಕೂ ಅಧಿಕ ಸಂಘಟನೆಗಳು ಭಾಗಿ ● ಬಡವರ ಸೇವೆಗೆ ಧಕ್ಕೆ– ಆರ್ಚ್ ಬಿಷಪ್ ಕಳವಳ

‘ಮತಾಂತರ ನಿಷೇಧ ಮಸೂದೆ ಕೈಬಿಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತಾಂತರ ನಿಷೇಧ ಮಸೂದೆ ಕೈಬಿಡುವಂತೆ ಒತ್ತಾಯಿಸಿ ದಲಿತ, ಮುಸ್ಲಿಂ ಹಾಗೂ ಕ್ರೈಸ್ತ ಸಮುದಾಯದ 40ಕ್ಕೂ ಹೆಚ್ಚು ಸಂಘಟನೆಗಳ ಕಾರ್ಯಕರ್ತರು ನಗರದಲ್ಲಿ ಬುಧವಾರ ಭಾರಿ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಮೈಸೂರು ಬ್ಯಾಂಕ್ ವೃತ್ತದಿಂದ ಸ್ವಾತಂತ್ರ್ಯ ಉದ್ಯಾನದವರೆಗೂ ರ‍್ಯಾಲಿ ನಡೆಸಿದ ಪ್ರತಿಭಟನಾಕಾರರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. ‘ಮಸೂದೆಯ ಮೂಲಕ ಕ್ರೈಸ್ತರನ್ನು ಕಟ್ಟಿಹಾಕುವ ಕೆಲಸ ಮಾಡಲಾಗುತ್ತಿದೆ’ ಎಂದೂ ಕಿಡಿಕಾರಿದರು. ಸಂವಿಧಾನ ವಿರೋಧಿ ಮಸೂದೆಯನ್ನು ಕೂಡಲೇ ಹಿಂಪಡೆಯಬೇಕೆಂದು ಆಗ್ರಹಿಸಿದರು.

‘ಮೂಲಭೂತ ಹಕ್ಕಿನ ಮೇಲಿನ ದಾಳಿಯನ್ನು ಖಂಡಿಸುತ್ತೇವೆ’, ‘ನಂಬಿರುವ ದೇವರನ್ನು ಪೂಜಿಸುವುದು ನಮ್ಮ ಹಕ್ಕು’, ‘ಸಂವಿಧಾನವನ್ನು ಎತ್ತಿ ಹಿಡಿಯೋಣ’, ‘ನಿರಪರಾಧಿ ಕ್ರೈಸ್ತರ ಮೇಲಿನ ದೌರ್ಜನ್ಯಗಳನ್ನು ಖಂಡಿಸುತ್ತೇವೆ’, ‘ಧಾರ್ಮಿಕ ಸ್ವಾತಂತ್ರ್ಯ ನಮ್ಮ ಹಕ್ಕು’ ಎಂಬ ಬರಹಗಳಿದ್ದ ಫಲಕಗಳನ್ನು ಪ್ರದರ್ಶಿಸಿದರು.

‘ನೀತಿಗೆಟ್ಟ ಸರ್ಕಾರಕ್ಕೆ ಧಿಕ್ಕಾರ’, ‘ಡೌನ್ ಡೌನ್ ಬಿಜೆಪಿ’, ‘ಆರ್‌ಎಸ್‌ಎಸ್ ತೊಲಗಲಿ’ ಎಂಬ ಘೋಷಣೆಗಳೂ ಪ್ರತಿಧ್ವನಿಸಿದವು. ‘ಮಾನವರಾಗೋಣ ನಾವು ಮಾನವರಾಗೋಣ’ ಸೇರಿದಂತೆ ಹಲವು ಹೋರಾಟದ ಗೀತೆಗಳು, ಮತಾಂತರ ಆಗುವ ಹಾಗೂ ಧರ್ಮವನ್ನು ನಿರಾಕರಿಸುವ ಹಕ್ಕು ಬೇಕು ಎಂಬ ಒತ್ತಾಯಗಳೂ ಕೇಳಿ ಬಂದವು.

> **ಈ ಮಸೂದೆಯ ಮೂಲಕ ನಿರ್ದಿಷ್ಟ ಧರ್ಮದ ಜೊತೆಗೆ, ಮಹಿಳೆಯರು ಹಾಗೂ ದಲಿತರ ಮೇಲಿನ ದೌರ್ಜನ್ಯಗಳನ್ನು ಸರ್ಕಾರ ತಡೆಯಲಿ**
> **ಗೌರಮ್ಮ**, ಜನವಾದಿ ಮಹಿಳಾ ಸಂಘಟನೆ

> **ಹಿಂದೂ ಧರ್ಮದಲ್ಲಿರುವ ತಾರತಮ್ಯ ಜನರನ್ನು ಮತಾಂತರಗೊಳ್ಳಲು ಪ್ರೇರೇಪಿಸುತ್ತಿದೆ. ಸರ್ಕಾರದ ಏಕಪಕ್ಷೀಯ ನಿರ್ಧಾರ ಖಂಡನೀಯ**
> **ಸಿ.ಎಸ್.ದ್ವಾರಕಾನಾಥ್**, ಕಾಂಗ್ರೆಸ್ ಮುಖಂಡ.

‘ಈ ಮಸೂದೆಯಿಂದ ಕ್ರೈಸ್ತರ ಖಾಸಗಿ ಬದುಕಿಗೆ ಧಕ್ಕೆಯಾಗಲಿದೆ. ಶೋಷಿತರು, ಬಡವರಿಗೆ ದಾನನೀಡಲು ಅಡ್ಡಿ ಆಗಲಿದೆ. ಹೆಣ್ಣು ಮಕ್ಕಳು ಇಷ್ಟಪಟ್ಟವರನ್ನು ಮದುವೆಯಾಗುವ ಅವಕಾಶ ಕಳೆದುಕೊಳ್ಳಲಿದ್ದಾರೆ. ಬಡವರ ಮಕ್ಕಳು ಗುಣಮಟ್ಟದ ಶಿಕ್ಷಣದಿಂದ ವಂಚಿತರಾಗುವರು‘ ಎಂದು ಬೆಂಗಳೂರಿನ ಆರ್ಚ್ ಬಿಷಪ್ ಪೀಟರ್ ಮಚಾಡೊ ಹೇಳಿದರು.

‘ಬಲವಂತದ ಮತಾಂತರಕ್ಕೆ ನಮ್ಮ ವಿರೋಧವೂ ಇದೆ. ಅಂತಹ ಪ್ರಕರಣಗಳು ಗಮನಕ್ಕೆ ಬಂದರೆ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ನಮ್ಮ ಅಭ್ಯಂತರವಿಲ್ಲ. ಮತಾಂತರ ನಿಷೇಧಕ್ಕೆ ಸಂವಿಧಾನದಲ್ಲಿ ಹಲವು ನಿಯಮಗಳಿವೆ.

ಹೀಗಿರುವಾಗ ಮತ್ತೊಂದು ಮಸೂದೆ ಮಂಡಿಸುವ ಅಗತ್ಯವಾದರೂ ಏನು’ ಎಂದು ಪ್ರಶ್ನಿಸಿದರು.

ಮಸೂದೆಯನ್ನು ವಿರೋಧಿಸಿ ಪ್ರತಿಭಟನಾಕಾರರು ಫಲಕಗಳನ್ನು ಪ್ರದರ್ಶಿಸಿದರು. ಆರ್ಚ್ ಬಿಷಪ್ ಪೀಟರ್ ಮಚಾಡೊ (ಮುಂದಿನ ಸಾಲಿನಲ್ಲಿ ಎಡದಿಂದ ಮೂರನೆಯವರು) ಇದ್ದಾರೆ ಪ್ರಜಾವಾಣಿ ಚಿತ್ರ

ಪ್ರತಿಭಟನೆಯಲ್ಲಿ ಕೇಳಿಬಂದ ಒತ್ತಾಯಗಳು

- ರಾಜ್ಯದಲ್ಲಿ ಕ್ರೈಸ್ತರು ಭಯದ ಸ್ಥಿತಿಯಲ್ಲಿದ್ದಾರೆ. ಅವರಿಗೆ ರಕ್ಷಣೆ ನೀಡಬೇಕು
- ಕ್ರೈಸ್ತರ ಮೇಲೆ ಹಿಂದೂಪರ ಸಂಘಟನೆಗಳ ಮತೀಯ ಗೂಂಡಾಗಿರಿ ನಿಲ್ಲಬೇಕು
- ಬಲವಂತದ ಮತಾಂತರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು
- ಕ್ರೈಸ್ತರ ಮೇಲೆ ಹಲ್ಲೆ, ಬೆದರಿಕೆ, ಚರ್ಚ್‌ಗಳ ಮೇಲಿನ ದಾಳಿ ತಡೆಯಬೇಕು
- ಸುಳ್ಳು ಪ್ರಕರಣ ದಾಖಲಿಸುವುದನ್ನು ನಿಲ್ಲಿಸಬೇಕು

‘ಕ್ರೈಸ್ತರ ಮೇಲಿನ ದಾಳಿ ತಡೆಯಲಿ’

‘ರಾಜ್ಯ ಸರ್ಕಾರವು ಮತಾಂತರ ನಿಷೇಧ ಮಸೂದೆ ಜಾರಿಗೊಳಿಸುವುದನ್ನು ಬಿಟ್ಟು ಕ್ರೈಸ್ತರ ಮೇಲೆ ನಡೆಯುತ್ತಿರುವ ದಾಳಿಗಳನ್ನು ತಡೆಯಲು ಸರ್ಕಾರ ಪ್ರಯತ್ನಿಸಲಿ’ ಎಂದು ಪಿಯುಸಿಎಲ್ ರಾಜ್ಯ ಘಟಕದ ಅಧ್ಯಕ್ಷ ವೈ.ಜೆ.ರಾಜೇಂದ್ರ ಆಗ್ರಹಿಸಿದರು.

‘ಒಂದು ಧರ್ಮವನ್ನು ಅಪರಾಧಿಯಂತೆ ಬಿಂಬಿಸಲು ಹೊರಟಿರುವುದು ಸರಿಯಲ್ಲ. ಈ ಮಸೂದೆಯು ಕಾಯ್ದೆಯಾಗಿ ಜಾರಿಗೊಂಡರೆ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಲಾಗುತ್ತದೆ. ಅದನ್ನು ಹಿಂಪಡೆಯುವವರೆಗೂ ಹೋರಾಟ ಮುಂದುವರಿಸುತ್ತೇವೆ’ ಎಂದರು.

‘ಮತಾಂತರ ತಡೆಗೆ ಪ್ರತಿ ಜಿಲ್ಲೆಯಲ್ಲೂ ಕಾರ್ಯಪಡೆ’

ಪ್ರಜಾವಾಣಿ ವಾರ್ತೆ

ಕಲಬುರಗಿ: ‘ಬಲವಂತ ಹಾಗೂ ಆಮಿಷದ ಮೂಲಕ ಮತಾಂತರ ಮಾಡುವವರನ್ನು ತಡೆಯಲು ಶ್ರೀರಾಮ ಸೇನೆ ಸಂಘಟನೆಯು ಪ್ರತಿ ಜಿಲ್ಲಾ ಕೇಂದ್ರದಲ್ಲೂ 10 ಜನರ ಕಾರ್ಯಪಡೆ ರಚಿಸಲಿದೆ. ಡಿಸೆಂಬರ್ 25ರಿಂದ ಈ ತಂಡ ಕಾರ್ಯನಿರ್ವಹಿಸಲಿದೆ’ ಎಂದು ಸಂಘಟನೆಯ ರಾಜ್ಯ ಘಟಕದ ಅಧ್ಯಕ್ಷರೂ ಆದ ಆಂದೋಲಾ ಮಠದ ಸಿದ್ಧಲಿಂಗ ಸ್ವಾಮೀಜಿ ಬುಧವಾರ ತಿಳಿಸಿದರು.

‘ಮತಾಂತರ ನಿಷೇಧ ಕಾಯ್ದೆ ಮಂಡಿಸಿದ್ದು ಸ್ವಾಗತಾರ್ಹ. ಇದು ಜಾರಿಗೆ ಬಂದ ಮೇಲೂ ತೆರೆಮರೆಯಲ್ಲಿ ಮತಾಂತರದ ಕೆಲಸಗಳು ನಡೆಯುವ ಸಾಧ್ಯತೆ ಹೆಚ್ಚಿದೆ. ಆಮಿಷ ಒಡ್ಡುವ ಕೆಲಸಗಳು ನಡೆದೇ ನಡೆಯುತ್ತವೆ. ಅವುಗಳನ್ನು ಪತ್ತೆ ಮಾಡಿ, ತಡೆಯುವುದು ಇದರ ಉದ್ದೇಶ. ಕಾರ್ಯಪಡೆ ಪೊಲೀಸರ ಸಹಕಾರದೊಂದಿಗೆ ಕೆಲಸ ಮಾಡಲಿದೆ’ ಎಂದು ತಿಳಿಸಿದರು.

ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಅವರು, ‘ಈಗಾಗಲೇ ಕ್ರೈಸ್ತ ಧರ್ಮಕ್ಕೆ ಹೋದವರನ್ನು ಮನವೊಲಿಸಿ, ಹಿಂದೂ ಧರ್ಮಕ್ಕೆ ಕರೆತರಲೂ ತಂಡ ಮುಂದಾಗಲಿದೆ. ಮರಳುವವರು ಬಯಸಿದ ಮತ, ಜಾತಿ ಪ್ರಕಾರವೇ ಸ್ವಾಗತಿಸಲಾಗುವುದು’ ಎಂದರು.

ಕನ್ನಡ ಬಾವುಟಕ್ಕೆ ಮತ್ತೆ ಬೆಂಕಿ

ಬೆಳಗಾವಿ: ಜಿಲ್ಲೆಯ ಕಾಗವಾಡ ತಾಲ್ಲೂಕಿನ ಗಡಿಗೆ ಹೊಂದಿಕೊಂಡಿರುವ ಮಹಾರಾಷ್ಟ್ರದ ಮೈಶಾಳ ಗ್ರಾಮದ ಬಳಿಯ ಚೆಕ್‌ಪೋಸ್ಟ್‌ನಲ್ಲಿ ಶಿವಸೇನಾ ಕಾರ್ಯಕರ್ತರು ಬುಧವಾರ ಕನ್ನಡ ಬಾವುಟ ಸುಟ್ಟು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರತಿಕೃತಿ ದಹಿಸಿದ್ದಾರೆ.

ಕರ್ನಾಟಕ ಸರ್ಕಾರದ ವಿರುದ್ಧ ಘೋಷಣೆ ಕೂಗಿದ್ದಾರೆ. ‘ಛತ್ರಪತಿ ಶಿವಾಜಿ ಪ್ರತಿಮೆಗೆ ಬೆಂಗಳೂರಿನಲ್ಲಿ ಅವಮಾನ ಮಾಡಿದ್ದನ್ನು ಖಂಡಿಸುತ್ತೇವೆ. ಬೆಳಗಾವಿಯಲ್ಲೂ ಪ್ರತಿಮೆ ಧ್ವಂಸಕ್ಕೆ ಯತ್ನಿಸಲಾಗಿದೆ. ಇವೆಲ್ಲವನ್ನೂ ತಡೆಯಲು ಸರ್ಕಾರ ವಿಫಲವಾಗಿದೆ’ ಎಂದು ಕಿಡಿಕಾರಿದ್ದಾರೆ.

ಮುಖಂಡ ಚಂದ್ರಕಾಂತ ಮೈಗೂರೆ, ‘ಶಿವಾಜಿಗೆ ಅವಮಾನ ಮಾಡುವುದು ಕರ್ನಾಟಕದಲ್ಲಿ ಮುಂದುವರಿದಿದೆ. ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಹಾಗೂ ಶಿವಸೇನಾ ಪ್ರಮುಖ ದಿವಂಗತ ಬಾಳಾ ಠಾಕ್ರೆ ಚಿತ್ರಗಳಿಗೆ ಬೆಂಕಿ ಹಚ್ಚುತ್ತಿರುವುದನ್ನು ಅಲ್ಲಿನ ಸರ್ಕಾರ ತಡೆಯುತ್ತಿಲ್ಲ. ಇನ್ಮುಂದೆ ನಾವು ಕರ್ನಾಟಕದ ಒಳಗಡೆಗೆ ನುಗ್ಗಿ ಕನ್ನಡಿಗರನ್ನು ಅಟ್ಟಾಡಿಸಿಕೊಂಡು ಹೊಡೆಯಬೇಕಾಗುತ್ತದೆ’ ಎಂದು ಹೇಳಿದ್ದಾರೆ.

ಶಿವಸೇನಾ ಕಾರ್ಯಕರ್ತರ ಕೃತ್ಯ ಖಂಡಿಸಿ, ಕರವೇ ಕಾರ್ಯಕರ್ತರು ಜಿಲ್ಲೆಯ ಗೋಕಾಕ ತಾಲ್ಲೂಕಿನ ಘಟಪ್ರಭಾದಲ್ಲಿ ಮಹಾರಾಷ್ಟ್ರದ ಕೆಲವು ವಾಹನಗಳನ್ನು ತಡೆದು ಮರಾಠಿ ಹೆಸರುಗಳಿಗೆ ಮಸಿ ಬಳಿದಿದ್ದಾರೆ. ಜೈ ಕರ್ನಾಟಕ, ಜೈ ಕನ್ನಡ ಎಂದು ಬರೆದಿದ್ದಾರೆ. ವಾಹನದ ಮೇಲೆ ನಿಂತು ಕನ್ನಡ ಬಾವುಟವನ್ನು ಹಾರಿಸಿದ್ದಾರೆ.

ಬೇವೂರಿನಲ್ಲಿ ಪಗಡೆ ಪಂದ್ಯಾವಳಿ ಡಿ.31ಕ್ಕೆ

ಪ್ರಜಾವಾಣಿ ವಾರ್ತೆ

ಬೇವೂರ(ಬೆನಕಟ್ಟಿ): ಬಾಗಲಕೋಟೆ ತಾಲ್ಲೂಕಿನ ಬೇವೂರ ಗ್ರಾಮದಲ್ಲಿ ಡಿ.31 ರಂದು ಹೊನಲು ಬೆಳಕಿನ ಪಗಡೆ ಪಂದ್ಯಾವಳಿ ಆಯೋಜಿಸಲಾಗಿದೆ.

ಹೊಸ ವರ್ಷಾಚರಣೆ ಅಂಗವಾಗಿ ಗ್ರಾಮದ ಮಾರುತೇಶ್ವರ ಮಿತ್ರ ಮಂಡಳಿ ವತಿಯಿಂದ ಈ ಪಂದ್ಯಾವಳಿ ಹಮ್ಮಿಕೊಳ್ಳಲಾಗಿದ್ದು, ಡಿ.31 ಶುಕ್ರವಾರ ರಾತ್ರಿ 10 ಗಂಟೆಗೆ ರುದ್ರಸ್ವಾಮಿ ಮಠದ ಆವರಣದಲ್ಲಿ ಈ ಪಂದ್ಯಾವಳಿ ಪ್ರಾರಂಭವಾಗಲಿದೆ.

ಪಂದ್ಯದಲ್ಲಿ ಮೊದಲ ಸ್ಥಾನ ಪಡೆಯುವ ತಂಡಕ್ಕೆ ₹1,11,111 ಮೊತ್ತದ ಪ್ರಥಮ ಬಹುಮಾನ ನೀಡಲಾಗುತ್ತಿದ್ದು, ದ್ವಿತೀಯ ಬಹುಮಾನ ₹77,777, ತೃತೀಯ ಬಹುಮಾನ ₹55,555 ಮತ್ತು ಚತುರ್ಥ ಬಹುಮಾನ ₹33,333 ಹಾಗೂ ನಾಲ್ಕು ಸಮಾಧಾನಕರ ಬಹುಮಾನ ₹8,888 ನೀಡಲಾಗುತ್ತದೆ. ಪಗಡೆ ತಂಡಗಳು ಹೆಚ್ಚಿನ ಮಾಹಿತಿಗಾಗಿ ಮೊಬೈಲ್ 90194 54221/99726 92818 ಹಾಗೂ 94803 11611 ಗೆ ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

‘ಜಲಶಕ್ತಿ ಸಚಿವಾಲಯಕ್ಕೆ 2021 ಐತಿಹಾಸಿಕ ವರ್ಷ’

ನವದೆಹಲಿ (ಪಿಟಿಐ): ಜಲಶಕ್ತಿ ಸಚಿವಾಲಯಕ್ಕೆ 2021 ವರ್ಷವು ‘ಐತಿಹಾಸಿಕ’ ವರ್ಷವಾಗಿದೆ. ಏಕೆಂದರೆ ಹಲವು ಮಹತ್ವದ ನಿರ್ಧಾರಗಳನ್ನು ಈ ವರ್ಷ ತೆಗೆದುಕೊಳ್ಳಲಾಗಿದ್ದು, ದೀರ್ಘಕಾಲದಿಂದ ಬಾಕಿ ಇರುವ ಸಮಸ್ಯೆಗಳನ್ನು ಪರಿಹರಿಸಲಾಗಿದೆ ಎಂದು ಕೇಂದ್ರ ಸಚಿವ ಗಜೇಂದ್ರ ಸಿಂಗ್ ಶೆಖಾವತ್ ಬುಧವಾರ ಹೇಳಿದ್ದಾರೆ.

‘ಗ್ರಾಮೀಣ ಪ್ರದೇಶಗಳಲ್ಲಿನ ಮನೆಗಳಿಗೆ ನಲ್ಲಿ ನೀರಿನ ಸಂಪರ್ಕವನ್ನು ಕಲ್ಪಿಸುವುದು ಮುಂದಿನವರ್ಷದ ಯೋಜನೆಯಾಗಿದೆ ಎಂದು, ಈ ನಿಟ್ಟಿನಲ್ಲಿ ಜಲಜೀವನ ಮಿಷನ್‌ನಿಂದ ಯೋಜನೆಯನ್ನು ತ್ವರಿತವಾಗಿ ಪೂರ್ಣಗೊಳಿಸಲು ಯೋಜಿಸಲಾಗಿದೆ’ ಎಂದು ತಿಳಿಸಿದ್ದಾರೆ.

ಪಿಟಿಐ ಸುದ್ದಿಸಂಸ್ಥೆ ಮಾತನಾಡಿದ ಅವರು, ‘ಈ ವರ್ಷವು ಜಲಶಕ್ತಿ ಸಚಿವಾಲಯದ ಪಾಲಿಗೆ ನಿಜಕ್ಕೂ ಐತಿಹಾಸಿಕವಾದುದು. ದೀರ್ಘಕಾಲದಿಂದಬಾಕಿ ಉಳಿದಿದ್ದ ನದಿಗಳ ಜೋಡಣೆಯ ಯೋಜನೆಯ ವಿಚಾರದಲ್ಲಿ ಉತ್ತರಪ್ರದೇಶ ಮತ್ತು ಮಧ್ಯಪ್ರದೇಶದ ಜತೆಗಿನ ಒಪ್ಪಂದವನ್ನು ಪೂರ್ಣಗೊಳಿಸಲಾಗಿದೆ’ ಎಂದರು.

‘ಅಣೆಕಟ್ಟು ಸುರಕ್ಷತೆಗೆ ಸಂಬಂಧಿಸಿದ ಕಾನೂನನ್ನು ಜಾರಿಗೊಳಿಸಿದ್ದರಿಂದ ಜಲಶಕ್ತಿ ಸಚಿವಾಲಯಕ್ಕೆ 2021 ವರ್ಷವು ಮಹತ್ವದ್ದಾಗಿದೆ’ ಎಂದೂ ಅವರು ಇದೇ ಸಂದರ್ಭದಲ್ಲಿ ತಿಳಿಸಿದರು.

ಬಿಜೆಪಿ ಶಿಸ್ತು ಸಮಿತಿ ರಾಜ್ಯ ಘಟಕದ ಅಧ್ಯಕ್ಷ ಲಿಂಗರಾಜ ಪಾಟೀಲ ಹೇಳಿಕೆ

ಪಕ್ಷ ವಿರೋಧಿ ಚಟುವಟಿಕೆ: ಕೇಂದ್ರ ಸಮಿತಿಗೆ ವರದಿ

ಹುಬ್ಬಳ್ಳಿ: ‘ವಿಧಾನಪರಿಷತ್ ಚುನಾವಣೆಯಲ್ಲಿ ಪಕ್ಷ ವಿರೋಧಿ ಚಟುವಟಿಕೆಯಲ್ಲಿ ತೊಡಗಿದ ಸಚಿವರು, ಶಾಸಕರ ವಿರುದ್ಧ ಕ್ರಮಕ್ಕೆ ಶಿಫಾರಸು ಮಾಡಿ, ಪಕ್ಷದ ಕೇಂದ್ರ ಸಮಿತಿಗೆ ವರದಿ ಸಲ್ಲಿಸಲಾಗಿದೆ’ ಎಂದು ಬಿಜೆಪಿ ಶಿಸ್ತು ಸಮಿತಿ ರಾಜ್ಯ ಘಟಕದ ಅಧ್ಯಕ್ಷ ಲಿಂಗರಾಜ ಪಾಟೀಲ ಹೇಳಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಬೆಳಗಾವಿ, ಉತ್ತರಕನ್ನಡ, ಹಾಸನ ಹಾಗೂ ಮಂಡ್ಯ ಜಿಲ್ಲೆಗಳಲ್ಲಿ ಚುನಾವಣೆ ಸಂದರ್ಭದಲ್ಲಿ ಪಕ್ಷದ ಅಭ್ಯರ್ಥಿ ವಿರುದ್ಧ ಕೆಲವರು ಕೆಲಸ ಮಾಡಿರುವ ದೂರುಗಳು ಬಂದಿದ್ದವು. ಆ ಬಗ್ಗೆ ವಾಸ್ತವಾಂಶಗಳನ್ನು ಪರಿಶೀಲಿಸಿ ವರದಿ ನೀಡಲಾಗಿದೆ. ಕೇಂದ್ರ ಸಮಿತಿಯವರು ಅಂತಿಮವಾಗಿ ತೀರ್ಮಾನ ಕೈಗೊಳ್ಳಲಿದ್ದಾರೆ’ ಎಂದರು.

‘ಪಕ್ಷದ ಪದಾಧಿಕಾರಿಗಳು ಚುನಾವಣೆಯಲ್ಲಿ ಪಕ್ಷ ವಿರೋಧಿ ಚಟುವಟಿಕೆ ನಡೆಸಿದ್ದರೆ, ಅಂತಹವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಸ್ಥಳೀಯ ಘಟಕಗಳಿಗೆ ಸೂಚಿಸಲಾಗಿದೆ’ ಎಂದ ಅವರು, ‘ಮುಖ್ಯಮಂತ್ರಿ ಬದಲಾವಣೆ ಕುರಿತು ಹಗುರವಾಗಿ ಹೇಳಿಕೆ ನೀಡುತ್ತಿರುವವರನ್ನು ಸಹ ಸಮಿತಿ ಗಂಭೀರವಾಗಿ ಪರಿಗಣಿಸಿದೆ’ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

‘ವರದಿಯಲ್ಲಿ ಯಾವ ಸಚಿವರು, ಶಾಸಕರ ಹೆಸರುಗಳಿವೆ’ ಎಂಬ ಪ್ರಶ್ನೆಗೆ ಉತ್ತರಿಸಲು ಪಾಟೀಲ ನಿರಾಕರಿಸಿದರು.

ನಗರ ಭೂ ಸಾರಿಗೆ ನಿರ್ದೇಶನಾಲಯ, ನಗರಾಭಿವೃದ್ಧಿ ಇಲಾಖೆ
ಬಿಎಂಟಿಸಿ, ಟಿಟಿಎಂಸಿ, 'ಬಿ' ಬ್ಲಾಕ್ (ಬಸ್ ಸ್ಟ್ಯಾಂಡ್ ಮೇಲ್ಭಾಗ), 4ನೇ ಮಹಡಿ, ಕೆ.ಹೆಚ್ ರಸ್ತೆ, ಬೆಂಗಳೂರು–560 027. ದೂ: 080–22226627 / 6628, ಫ್ಯಾಕ್ಸ್: 080–22226630, ಇ–ಮೇಲ್: dultbangalore@gmail.com
ಸಂಖ್ಯೆ: ನಭೂಸಾನಿ/ಆರ್‌ಎಸ್‌ಐಎನ್‌ಒಟಿಬಿಪಿ/03/2021–22 ದಿನಾಂಕ: 22.12.2021
ಪ್ರಕಟಣೆ
ನಗರ ಭೂ ಸಾರಿಗೆ ನಿರ್ದೇಶನಾಲಯವು Energy Modeling ಪರಿಣಿತಿ ಹೊಂದಿರುವ ವ್ಯಕ್ತಿಗಳು/ಕಂಪನಿಗಳು/ಸಂಸ್ಥೆಗಳನ್ನು ಸಾರಿಗೆ – ಆಧಾರಿತ ಅಭಿವೃದ್ಧಿ ವಲಯನಲ್ಲಿನ, ಬೆಂಗಳೂರು, Energy Modeling ಹ್ಯಾಕಥಾನ್‌ನಲ್ಲಿ ಭಾಗವಹಿಸಲು ಆಸಕ್ತರು / ಅರ್ಹರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ: 10.01.2022.** ಹೆಚ್ಚಿನ ಮಾಹಿತಿಗಾಗಿ https://dult.karnataka.gov.inನ್ನು ಸಂಪರ್ಕಿಸಿ
ವಾಸಾಸಂಇ/ಬೆಂನ/ಜಿಎ/2494/2021–22 ಸಹಿ/– ಜಂಟಿ ನಿರ್ದೇಶಕರು(ಆಡಳಿತ),
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ
ಇ–ಪ್ರೊಕ್ಯೂರ್‌ಮೆಂಟ್ ಮೂಲಕ
7 Days Short Term Tender Notification
No. R/EO/Eproc/KVAFSU/eProc.70/2021-22/1095-A Dt.: 21.12.2021
ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ ಇದರ ಅಧೀನದ ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆ, ಬೆಂಗಳೂರಿಗೆ ಬೇಕಾದ **ಆಹಾರ ಪದಾರ್ಥಗಳನ್ನು** ಒದಗಿಸಲು ಇ–ಆಡಳಿತ ಇಲಾಖೆಯ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಹೆಸರನ್ನು ನೋಂದಾಯಿಸಿಕೊಂಡಿರುವ ಗುತ್ತಿಗೆದಾರರಿಂದ ಟೆಂಡರನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ. ಮೇಲಿನ ಟೆಂಡರಿಗಿಟ್ಟ **ಅಂದಾಜು ಮೊತ್ತ ರೂ. 18.25 ಲಕ್ಷ.** ಭರ್ತಿ ಮಾಡಿದ ಟೆಂಡರ್ ಅರ್ಜಿಗಳನ್ನು ಸಲ್ಲಿಸುವ ಅಂತಿಮ ದಿನಾಂಕ: **29.12.2021ರ ಸಂಜೆ 5:00 ಗಂಟೆ**ವರೆಗೆ. ಹೆಚ್ಚಿನ ವಿವರಗಳಿಗೆ ಅಧಿಕೃತ ವೆಬ್‌ಸೈಟ್: **https://eproc.karnataka.gov.in** ಮುಖಾಂತರ ದಿನಾಂಕ: **22.12.2021** ಸಂಪರ್ಕಿಸಬಹುದು. ಹೆಚ್ಚಿನ ಮಾಹಿತಿಗಾಗಿ ಕೆಳಕಂಡ ಕಛೇರಿಯ ವೇಳೆಯಲ್ಲಿ ವಿವರಗಳನ್ನು ಪಡೆಯಬಹುದು.
ವಾಸಾಸಂಇ/ಉನಿನ/ಎಲ್‌ಸಿ/2499/2021–22 ಸಹಿ/– ಇಂಜಿನಿಯರ್ ರಾಮಪ್ಪ. ಹೆಚ್. ಕೊರವರ್, ಎಸ್ಟೇಟ್ ಅಧಿಕಾರಿ(ಪ್ರ), KVAFSU, ಬೀದರ–585226. ದೂ.: 9483969344
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಆಯುಕ್ತರ ಕಛೇರಿ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ
ನಂ. 8, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು
ಸಂಖ್ಯೆ:ಎಫ್‌ಸಿಎಸ್‌ಸಿಎ/ಎಡಿ20/ಆರ್‌ಇಟಿಇ/01/2021(ಇ–ಆಫೀಸ್)
ದಿನಾಂಕ:20.12.2021
ಇ– ಟೆಂಡರ್ ನೋಟಿಫಿಕೇಷನ್
ಆಸಕ್ತ ಅರ್ಹ ಬಿಡ್ಡುದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ **31 ಜಿಲ್ಲೆಗಳ 179 ತಾಲ್ಲೂಕುಗಳಿಂದ ಆಹಾರ ಧಾನ್ಯಗಳನ್ನು ಲೋಡ್ ಮಾಡಿಕೊಂಡು ರಸ್ತೆ ಮೂಲಕವಾಗಿ ಸಾಗಾಣಿಕೆ ಮಾಡಿ ಮತ್ತು ಸದರಿ ನ್ಯಾಯಬೆಲೆ ಅಂಗಡಿಗಳಿಗೆ ಅನ್‌ಲೋಡ್ ಮಾಡಲು** ಆಯುಕ್ತರು ಜ್ಞಾಪನ ಪತ್ರ ನೀಡಿದ ದಿನಾಂಕದಿಂದ ಎರಡು ವರ್ಷದ ಅವಧಿಯವರೆಗೆ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯಿಂದ ಇ–ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಆಸಕ್ತ ಬಿಡ್‌ದಾರರು ಟೆಂಡರ್ ದಾಖಲಾತಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: **www.eproc.karnataka.gov.in** ರಿಂದ **ದಿನಾಂಕ: 24.12.2021 ರಿಂದ 24.01.2022 ಸಂಜೆ 5.30 ವರೆಗೆ** ಡೌನ್‌ಲೋಡ್ ಮಾಡಿಕೊಂಡು ಅರ್ಜಿ ಸಲ್ಲಿಸಬಹುದು. ಟೆಂಡರ್ ಪ್ರಕಟಣೆಯ **ದಿನಾಂಕ:24.12.2021.** ಪ್ರೀ ಬಿಡ್ ಮೀಟಿಂಗ್ **ದಿನಾಂಕ: 04.01.2022, ಬೆಳಿಗ್ಗೆ 11.30 ಗಂಟೆ.** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ (ಭರ್ತಿ ಮಾಡಿದ ಟೆಕ್ನಿಕಲ್ ಬಿಡ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ ಸಲ್ಲಿಸುವುದು): **24.01.2022, ಸಂಜೆ 5.30 ಗಂಟೆ.** ತಾಂತ್ರಿಕ ಬಿಡ್ ತೆರೆಯುವ ದಿನಾಂಕ (ಸಂಬಂಧಿಸಿದ ಜಿಲ್ಲಾಧಿಕಾರಿಗಳ ಕಛೇರಿಗಳಲ್ಲಿ): **27.01.2022, ಬೆಳಿಗ್ಗೆ 11.00 ಗಂಟೆ.** ಆರ್ಥಿಕ ಬಿಡ್ ತೆರೆಯುವ ದಿನಾಂಕ (ಆಯುಕ್ತರ ಕಛೇರಿಯಲ್ಲಿ): **14.02.2022, ಬೆಳಿಗ್ಗೆ 11.00 ಗಂಟೆ.** ಟೆಂಡರ್‌ದಾರರು ಇಎಂಡಿ ಮೊತ್ತ **ರೂ.2.00 ಲಕ್ಷ (ರೂ.ಎರಡು ಲಕ್ಷ ಮಾತ್ರ)** ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ ಮೂಲಕ ಪಾವತಿಸುವುದು. ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ರನ್ವಯ ಪ್ರೊಸೆಸಿಂಗ್ ವೆಚ್ಚವನ್ನು ಪಾವತಿಸುವುದು. ಟೆಂಡರ್ ಒಪ್ಪುವ ಸಮಿತಿಗೆ ಟೆಂಡರ್ ಪ್ರಕ್ರಿಯೆಯ ಯಾವುದೇ ಹಂತದಲ್ಲಿ ಯಾವುದೇ ಕಾರಣ ನೀಡದೆ ಟೆಂಡರ್‌ನ್ನು ರದ್ದುಪಡಿಸುವ ಮತ್ತು ಪರಿಶೀಲನೆಗೆ ಒಳಪಡಿಸುವ ಹಕ್ಕನ್ನು ಕಾಯ್ದಿರಿಸಿದೆ. ಇತರೆ ಹೆಚ್ಚಿನ ವಿವರಗಳನ್ನು ಟೆಂಡರ್ ಡ್ಯಾಕ್ಯುಮೆಂಟ್‌ನಿಂದ ಪಡೆಯುವುದು.
ಸಹಿ/– ಆಯುಕ್ತರು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ, ಬೆಂಗಳೂರು
ವಾಸಾಸಂಇ/ಉನಿ.ನ/2491/ಎಂಸಿಎ/2021–22

ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ನಿರ್ದೇಶಕರು, ಭದ್ರಾ ಹುಲಿ ಸಂರಕ್ಷಿತ, ಚಿಕ್ಕಮಗಳೂರು,
ಸಂಖ್ಯೆ: ಎ6/ಬಿಯುಡಿ/ಟೆಂಡರ್ /ಸಿಆರ್–20/2021–22 ದಿನಾಂಕ:20–12–2021
ಅರಣ್ಯ ಕಾಮಗಾರಿಗಳಿಗೆ ಸಂಕ್ಷಿಪ್ತ ಟೆಂಡರ್ ಪ್ರಕಟಣೆ
2021–22 ನೇ ಸಾಲಿನಲ್ಲಿ ಎನ್.ಸಿ & ಎಂ.ಎ.ಸಿ" ಮತ್ತು "ಕಾಂಪಾ" ಲೆಕ್ಕಶೀರ್ಷಿಕೆಗಳಡಿಯಲ್ಲಿ ಭದ್ರಾ ಹುಲಿ ಸಂರಕ್ಷಿತ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ವಲಯಗಳ ಅರಣ್ಯ ಪ್ರದೇಶದಲ್ಲಿ ವಿವಿಧ ಅರಣ್ಯ ಕಾಮಗಾರಿಗಳನ್ನು ಕೈಗೊಳ್ಳಲು ಇ–ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್ ಸ್ವೀಕರಿಸುವ ಕಡೆಯ ದಿನಾಂಕ: 05–01–2022 ರ ಸಂಜೆ 4 ಗಂಟೆಯ ವರೆಗೆ ನಿಗಧಿಪಡಿಸಲಾಗಿದೆ. ಒಟ್ಟು 14 ಕಾಮಗಾರಿಗಳು ಮತ್ತು ಅವುಗಳ ಒಟ್ಟು ಟೆಂಡರ್ ಮೊತ್ತ ರೂ.244.430 ಲಕ್ಷಗಳಾಗಿರುತ್ತದೆ. ಸದರಿ ಟೆಂಡರ್‌ಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯನ್ನು ಈ ಕಛೇರಿಯಿಂದ ಪಡೆಯಬಹುದಾಗಿದೆ.
ಸಹಿ/–
ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ನಿರ್ದೇಶಕರು, ಭದ್ರಾ ಹುಲಿ ಸಂರಕ್ಷಿತ, ಚಿಕ್ಕಮಗಳೂರು,

ಕರ್ನಾಟಕ ಸರ್ಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ)
ನಂ.4. ಡಿ.ಎಸ್.ಇ.ಆರ್.ಟಿ. ಕಟ್ಟಡ, 100 ಅಡಿ ವರ್ತುಲ ರಸ್ತೆ, ಬನಶಂಕರಿ 3ನೇ ಹಂತ, ಬೆಂಗಳೂರು–560085. ಇ–ಮೇಲ್: mdktbs.tender@gmail.com
ವೆಬ್‌ಸೈಟ್: http://www.ktbs.kar.nic.in
ಸಂ: A7/ಕ.ಪ.ಪು.ಸಂ/ಪ.ಪು.ಮು.ಟೆಂ/22/21–22(ಭಾಗ–2) ದಿ: 22.12.2021
ಅಲ್ಪಾವಧಿ ಟೆಂಡರ್ ಅಧಿಸೂಚನೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
2022–23ನೇ ಸಾಲಿಗೆ 1 ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ಅಂದಾಜು 558 ಲಕ್ಷ ಪಠ್ಯಪುಸ್ತಕಗಳನ್ನು ಮುದ್ರಿಸಿ ಸರಬರಾಜು ಮಾಡಲು ಟೆಂಡರ್‌ನಲ್ಲಿ ನಿಗದಿಪಡಿಸಿರುವಂತೆ ಮೂಲಭೂತ ಸೌಲಭ್ಯವುಳ್ಳ ಅರ್ಹ ಮುದ್ರಕರುಗಳಿಂದ 2 ಬಿಡ್ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಪೂರ್ಣ ವಿವರಗಳನ್ನು ಇ–ಪೋರ್ಟಲ್ ಹಾಗೂ ಇಲಾಖೆಯ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಟೆಂಡರ್ ದಸ್ತಾವೇಜಿನಲ್ಲಿ ಪರಿಶೀಲಿಸಬಹುದು. ಬಿಡ್‌ಗಳನ್ನು ದಿನಾಂಕ: **05.01.2022 ರಂದು ಸಂಜೆ 5.30 ರವರೆಗೂ** ಸಲ್ಲಿಸಬಹುದಾಗಿರುತ್ತದೆ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪೂರ್ಣ ವಿಳಾಸ: https://www.eproc.karnataka.gov.in ಸಹಾಯವಾಣಿ: 080–46010000 080–22631200 ಇಲಾಖೆಯ ವೆಬ್‌ಸೈಟ್: http://www.ktbs.kar.nic.in
ಸಹಿ/– (ಎಂ.ಪಿ.ಮಾದೇಗೌಡ), ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು.

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕಅಭಿಯಂತರರಕಚೇರಿ, ಕೃಭಾಜನಿ(ನಿ), ಆಣೆಕಟ್ಟು ವಿಭಾಗ, ಆಲಮಟ್ಟಿ–586201. ತಾಲೂಕು॥ ಬ.ಬಾಗೇವಾಡಿ, ಜಿಲ್ಲೆ॥ ವಿಜಯಪೂರ. ದೂರವಾಣಿ: 08426–281027
ಇ–ಮೇಲ್:dam_division@rediffmail.com
ಸಂಖ್ಯೆ/ಕೃ.ಭಾ.ಜ.ನಿ.ನಿ/ಡಿಬಿ/ಟೆಂಡರ್/2021–22/2805 ದಿನಾಂಕ:21.12.2021
ಅಲ್ಪಾವಧಿ ಸಂಕ್ಷಿಪ್ತ ಟೆಂಡರ ಪ್ರಕಟಣೆ
ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ. ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಆಣೆಕಟ್ಟು ವಿಭಾಗ ಆಲಮಟ್ಟಿ, ತಾ: ಬ.ಬಾಗೇವಾಡಿ ಇವರು ಅರ್ಹ ಗುತ್ತಿಗೆದಾರರಿಗೆ **(1) Indent No. 21566 for Rs. 25.17 Lakhs** ಶೇಕಡಾವಾರು ದ್ವಿಲಕೋಟೆಗಳಲ್ಲಿ ಕೆ.ಟಿ.ಪಿ.ಪಿ. ನಿಯಮಗಳನ್ವಯ, ಅರ್ಹ ಬಿಡ್ಡುದಾರರು ಗಳಿಂದ ಟೆಂಡರ್ ಆಹ್ವಾನಿಸಿದ್ದು, ಗುತ್ತಿಗೆದಾರರುಗಳು ಭದ್ರತಾ ಠೇವಣಿಯನ್ನು E-Cash ನಲ್ಲಿ ತುಂಬಿ ತಮ್ಮ ಬಿಡ್ಡುಗಳನ್ನು ದ್ವಿಲಕೋಟೆ ಪದ್ಧತಿಯಲ್ಲಿ ಸಲ್ಲಿಸಬಹುದಾಗಿದೆ. ಮೊದಲ ಲಕೋಟೆಯು ತಾಂತ್ರಿಕ ಬಿಡ್ಡದಾಗಿದ್ದು ಅಗತ್ಯವಿರುವ ದಾಖಲೆಗಳನ್ನು ಒಳಗೊಂಡಿದ್ದು ಪ್ಯಾರಾ 1.1 ರಂತೆ, ಎರಡನೇ ಲಕೋಟೆಯು ಆರ್ಥಿಕ ಬಿಡ್ಡಾಗಿದ್ದು ತಾಂತ್ರಿಕ ಬಿಡ್ಡನಲ್ಲಿ ಅರ್ಹರಾದವರ ಆರ್ಥಿಕ ಬಿಡ್ಡುಗಳನ್ನು ಮಾತ್ರ ತೆರೆಯಲಾಗುವುದು. (1) ಟೆಂಡರ ಡಾಕುಮೆಂಟ್ಸಗಳನ್ನು ವೆಬ್‌ಸೈಟನಲ್ಲಿ ನೋಡಿಕೊಳ್ಳುವ / ಡೌನಲೋಡ ಮಾಡಿಕೊಳ್ಳುವ ದಿನಾಂಕ ಹಾಗೂ ಸ್ವಿಕರಿಸುವ ಕೊನೆಯ **ದಿನಾಂಕ: 22.12.2021 ರಿಂದ 31.12.2021 ಸಾಯಂಕಾಲ 5.00 ಘಂಟೆಯುವರೆಗೆ.** (2) ಟೆಂಡರ ಡಾಕುಮೆಂಟ್ಸಗಳನ್ನು ವೆಬ್‌ಸೈಟನಲ್ಲಿ ನೋಡಿಕೊಳ್ಳುವ/ ಡೌನಲೋಡ ಮಾಡಿಕೊಳ್ಳುವ ದಿನಾಂಕ ಹಾಗೂ ಸ್ವಿಕರಿಸುವ ಕೊನೆಯ **ದಿನಾಂಕ: 22.12.2021 ರಿಂದ 31.12.2021 ಸಾಯಂಕಾಲ 5.00 ಘಂಟೆಯವರೆಗೆ.** (3) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 03.01.2022 ಮುಂಜಾನೆ 11.00 ಘಂಟೆಗೆ.** (4) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 06.01.2022 ಮುಂಜಾನೆ 11.00 ಘಂಟೆಗೆ.** ಟೆಂಡರಗೆ ಸಂಬಂಧಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ ಉಳಿದಂತೆ ಟೆಂಡರನಲ್ಲಿ ಯಾವುದೇ ಬದಲಾವಣೆಗಳನ್ನು ಈ ವೆಬ್‌ಸೈಟನ್ನು ಸಂಪರ್ಕಿಸಿ ಪಡೆಯಬಹುದು. http://www.eproc.karnataka.gov.in ಸಂಪರ್ಕಿಸಬೇಕಾದ ಕಛೇರಿ ದೂರವಾಣಿ ಸಂಖ್ಯೆ: 08426–281027.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಕೃ.ಭಾಜನಿ(ನಿ) ಆಣೆಕಟ್ಟು ವಿಭಾಗ, ಆಲಮಟ್ಟಿ.
ವಾ.ಸಾ.ಸಂ.ಇ./ ವಿಜಯಪುರ/409/ಎಂಸಿಎ/ 2021–22

ಚುನಾವಣಾಧಿಕಾರಿಗಳು, ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘ (ರಿ.)
ನಂ. 185, ಈಡಿಗ ಭವನ, ರಾಜೀವ್‌ಗಾಂಧಿ ವೃತ್ತ, ಶೇಷಾದ್ರಿಪುರಂ, ಬೆಂಗಳೂರು–20 ಇವರ ನಡವಳಿಗಳು
ಕ್ರಮ ಸಂಖ್ಯೆ : ಚುನಾವಣಾಧಿಕಾರಿ/01/2021–22 ದಿನಾಂಕ : 18–12–2021
ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘದ ಕಾರ್ಯಕಾರಿ ಸಮಿತಿಗೆ ಚುನಾವಣೆಯನ್ನು ನಡೆಸಲು ಸಂಘದ ಅಧ್ಯಕ್ಷರ ಪತ್ರ ಸಂಖ್ಯೆ : 46/2021–22 ದಿನಾಂಕ : 15–12–2021ರಂತೆ ನನ್ನನ್ನು ಚುನಾವಣಾಧಿಕಾರಿಯನ್ನಾಗಿ ನೇಮಕ ಮಾಡಲಾಗಿರುತ್ತದೆ. ಸಂಘದ ಕಾರ್ಯಕಾರಿ ಸಮಿತಿ ನಡವಳಿಗಳ ಅನ್ವಯ ದಿನಾಂಕ : 09–01–2022ರ ಭಾನುವಾರದಂದು ಚುನಾವಣೆಯನ್ನು ನಡೆಸಿಕೊಡಲು ಮನವಿ ಮಾಡಿರುತ್ತಾರೆ. ಸಂಘದ ಕಾರ್ಯಕಾರಿ ಸಮಿತಿಗೆ 31 ಜಿಲ್ಲೆಗಳಿಂದ 54 ಸ್ಥಾನಗಳಿಗೆ ಕಾರ್ಯಕಾರಿ ಸಮಿತಿ ಸದಸ್ಯರುಗಳನ್ನು ಮುಂದಿನ ಐದು ವರ್ಷಗಳ ಅವಧಿಗೆ (2021–2022 ರಿಂದ 2025–2026 ರವರೆಗೆ) ಆಯ್ಕೆ ಮಾಡಲು ಚುನಾವಣಾ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. ತತ್ಸಂಬಂಧವಾಗಿ ಎಲ್ಲಾ ಜಿಲ್ಲಾ ಕ್ಷೇತ್ರಗಳಿಗೆ ಅನ್ವಯವಾಗುವಂತೆ ಚುನಾವಣಾ ವೇಳಾಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ.
ಸಹಿ/–
(ದೊಡ್ಡತಮ್ಮೇಗೌಡ)
ಚುನಾವಣಾಧಿಕಾರಿಗಳು,
ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘ (ರಿ.)
ಬೆಂಗಳೂರು–560020
ಸ್ಥಳ : ಬೆಂಗಳೂರು
ದಿನಾಂಕ : 18–12–2021
ವಿಶೇಷ ಸೂಚನೆ : ಸಂಘದ ಎಲ್ಲಾ ಸದಸ್ಯರಿಗೆ ಚುನಾವಣಾ ವೇಳಾಪಟ್ಟಿ ಹಾಗೂ ಸೂಚನೆಗಳನ್ನು ಪ್ರತ್ಯೇಕವಾಗಿ ಅಂಚೆ ಮೂಲಕ ತಲುಪಿಸಲಾಗಿದೆ.

ಶಿವಮೊಗ್ಗ ಸ್ಮಾರ್ಟ್ ಸಿಟಿ ಲಿಮಿಟೆಡ್
ನೋಂದಾಯಿತ ಕಛೇರಿ: 1ನೇ ಮಹಡಿ, ಪಾಲಿಕೆ ಕಟ್ಟಡ ಬ್ಲಾಕ್, ಎಸ್.ಎನ್ ಮಾರ್ಕೆಟ್, ನೆಹರು ರಸ್ತೆ ಶಿವಮೊಗ್ಗ–577201
Email : shimogasmartcity@gmail.com P.No: 08182-279951
ನಾಗರೀಕರಿಗೊಂದು ವಿಶೇಷ ಪ್ರಕಟಣೆ
ಕ್ರ.ಸಂ. SSCL/CR/147/2019-20 ದಿನಾಂಕ : 16.12.2021
ಶಿವಮೊಗ್ಗ ಸ್ಮಾರ್ಟ್‌ಸಿಟಿ ಅಡಿಯಲ್ಲಿ ಎಲ್ಲಾ ಮನೆಗಳಿಗೆ ಆರ್ ಎಫ್ ಐಡಿ ಟ್ಯಾಗ್‌ಗಳನ್ನು ಅಳವಡಿಸಲಾಗುತ್ತದೆ. ಇದರಿಂದ ಪಾಲಿಕೆ ವತಿಯಿಂದ ಪ್ರತಿನಿತ್ಯ ಸಂಗ್ರಹಸುತ್ತಿರುವ ಕಸವನ್ನು ಸರಿಯಾಗಿ ನಿರ್ವಹಿಸುತ್ತಿರುವ ಬಗ್ಗೆ ಹಾಗೂ ಕಸ ವಿಲೇವಾಹಾರಿ ವಾಹನ ಸೂಚಿಸಿರುವ ಮಾರ್ಗದಲ್ಲಿ ಚಲಿಸುತ್ತಿರುವ ಬಗ್ಗೆ ನಮ್ಮ ನಿಯಂತ್ರಣಾ ಕೇಂದ್ರದಲ್ಲಿ ಸಮಯಾನುಸಾರವಾಗಿ ತಿಳಿಯಬಹುದು ಹಾಗೂ ಯಾವುದೇ ತೊಂದರೆ ಕಂಡುಬಂದಲ್ಲಿ ನಮ್ಮ ಅಧಿಕಾರಿಗಳು ಕೂಡಲೇ ಸೂಕ್ತ ಕ್ರಮವನ್ನು ಸಹ ಕೈಗೊಳ್ಳಬಹುದು
ನಮ್ಮ ಅಧಿಕಾರಿಗಳು ನಿಮ್ಮ ಮನೆ ಬಳಿ ಬಂದಾಗ ಆರ್ ಎಫ್ ಐಡಿ ಟ್ಯಾಗ್‌ಗಳನ್ನು ಮನೆಯ ಮುಂಭಾಗ ಅಳವಡಿಸಲು ಹಾಗೂ ಅವರಿಗೆ ಮಾಹಿತಿ ನೀಡಲು ಸಹಕರಿಸಿ ಇದು ಸ್ಮಾರ್ಟ್‌ಸಿಟಿಯ ವಿಶೇಷ ಪ್ರಕಟಣೆ
ವಾ.ಸಾ.ಸಂ.ಇ./ಶಿ/ನಂ.78–12 ಝೇಂಕಾರ್/2021–22 ಸಹಿ/– ವ್ಯವಸ್ಥಾಪಕ ನಿರ್ದೇಶಕರು ಸ್ಮಾರ್ಟ ಸಿಟಿ ಲಿಮಿಟೆಡ್, ಶಿವಮೊಗ್ಗ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರವರ ಕಛೇರಿ, ರಾಜಾರಾಜೇಶ್ವರಿ ನಗರ ವಿಭಾಗ, ಬಿಬಿಎಂಪಿ ಕಚೇರಿ, ಚೌಡೇಶ್ವರಿ ಬಸ್ ನಿಲ್ದಾಣದ ಹತ್ತಿರ, ಮತ್ತಿಕೆರೆ, ಬೆಂಗಳೂರು–560 054.
ಸಂಖ್ಯೆ:ಕಾಅ/ರಾರಾನವಿ/ಟೆಂಡರ್/13/2021-22 ದಿನಾಂಕ: 15-12-2021
ಅಲ್ಪಾವಧಿ ಟೆಂಡರ್‌ಗೆ ಆಹ್ವಾನ (ಐಎಫ್‌ಟಿ) ದ್ವಿ ಲಕೋಟಿ ಪದ್ಧತಿ ಕೆಡಬ್ಲ್ಯೂ–4 (ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)
ಕಾರ್ಯಪಾಲಕ ಅಭಿಯಂತರರು, ರಾಜರಾಜೇಶ್ವರಿ ನಗರ ವಿಭಾಗ, ಬೃಬೆಂಮಪಾ, ಬೆಂಗಳೂರು ಇವರು ಕೆಳತಿಳಿಸಿದ ನಿರ್ಮಾಣ ಕಾಮಗಾರಿಗಳನ್ನು ನಿರ್ವಹಿಸಲು ಅರ್ಹ ಬಿ.ಬಿ.ಎಂ.ಪಿ / ಕೆ.ಪಿ.ಡಬ್ಲ್ಯೂ.ಡಿ / ಸಿ.ಪಿ.ಡಬ್ಲ್ಯೂ.ಡಿ/ ಎಂಇಎಸ್ / ರೈಲ್ವೇಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸಂಸ್ಥೆಗಳಲ್ಲಿ ನೋಂದಾಯಿತ ಸೂಕ್ತ ದರ್ಜೆಯ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕೆಲಸದ ಹೆಸರು	ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ)
1)	ರಾಜರಾಜೇಶ್ವರಿ ನಗರದ ವಿಧಾನ ಸಭಾ ಕ್ಷೇತ್ರದಲ್ಲಿ ಕೊಳವೆ ಬಾವಿಗಳು ಕೊಳವೆ ಮಾರ್ಗಗಳ ಸಂಪರ್ಕ ಜಾಲದಿಂದ ನೀರು ಸರಬರಾಜಿನ ವರ್ಧನೆ ಮತ್ತು ಅಂತರ್‌ಜಲ ಸೌಲಭ್ಯಗಳು (ಎಲ್ಲಾ 9 ವಾರ್ಡ್‌ಗಳಲ್ಲಿ).	350.00

ಇಎಂಡಿ ರೂ.: ಸರ್ಕಾರಿ ಆದೇಶದ ಪ್ರಕಾರ ನಂ.ಎಫ್‌ಡಿ 675 ವೆಚ್ಚ–12/2020, ದಿನಾಂಕ: 22–12–2020ರ ಪ್ರಕಾರ ವಿನಾಯಿತಿ ನೀಡಲಾಗಿದೆ. ಟೆಂಡರ್‌ನ ಕಾರ್ಯಸೂಚಿ: 1. ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ದಿನಾಂಕ: 03–01–2022 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2. ವಿಚಾರಣೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 15–01–2022 ರಂದು ಸಂಜೆ 4:00 ಗಂಟೆಯವರೆಗೆ. 3. ಪೂರ್ವ ಬಿಡ್ ಸಭೆಯನ್ನು ದಿನಾಂಕ: 17–01–2022ರ ಬೆಳಗ್ಗೆ 11.00 ಗಂಟೆಗೆ ಮುಖ್ಯ ಅಭಿಯಂತರವರ ಕಚೇರಿ, ರಾಜರಾಜೇಶ್ವರಿ ನಗರ ವಲಯ ಇಲ್ಲಿ ನಡೆಸಲಾಗುವುದು. 4. ಟೆಂಡರ್‌ಗಳನ್ನು ಆನ್‌ಲೈನ್ ಮೂಲಕ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಸಲ್ಲಿಸುವ ದಿನಾಂಕ: 19–01–2022 ರಂದು ಸಂಜೆ 4:00 ಗಂಟೆಗೆ ಅಥವಾ ಮುಂಚಿತವಾಗಿ. 5. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 21–01–2022ರ ಸಂಜೆ 4:00 ಗಂಟೆಗೆ. 6. ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 24–01–2022ರ ಸಂಜೆ 4:00 ಗಂಟೆಗೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಅಥವಾ https://eproc.karnataka.gov.in ಇಲ್ಲಿಗೆ ಲಾಗಿನ್‌ಮಾಡಿ ಪಡೆಯಬಹುದು.
ಸಹಿ/–, ಕಾರ್ಯಪಾಲಕ ಅಭಿಯಂತರರು, ರಾಜರಾಜೇಶ್ವರಿ ನಗರ ವಿಭಾಗ, ಬೃಬೆಂಮಪಾ.
ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಪ್ರಧಾನ ಇಂಜಿನಿಯರ್ ರವರ ಕಛೇರಿ, ಪಿ.ಆರ್.ಎ.ಎಂ.ಸಿ.,
4ನೇ ಮಹಡಿ, ಪಿ.ಡಬ್ಲ್ಯೂ.ಡಿ., ಅನೆಕ್ಸ್ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು–560001
ಸಂಖ್ಯೆ. ಲೋಇ/05/PRAMC/2021–22/963 ದಿನಾಂಕ : 22–12–2021
ಅಲ್ಪಾವಧಿ ಟೆಂಡರ್ ಪ್ರಕಟಣೆ
ಯಾದಗಿರಿ ಜಿಲ್ಲೆಯ 03 ರಸ್ತೆ ಸುರಕ್ಷತಾ ಕಾಮಗಾರಿಗಳಿಗೆ ಕಾರ್ಯಪಾಲಕ ಇಂಜಿನಿಯರ್, ಪಿ.ಆರ್.ಎ.ಎಂ.ಸಿ., ರವರು ರಾಜ್ಯಪಾಲರ ಪರವಾಗಿ ಅಲ್ಪಾವಧಿ ಟೆಂಡರ್‌ಅನ್ನು ಆಹ್ವಾನಿಸಿರುತ್ತಾರೆ. ಹೆಚ್ಚಿನ ವಿವರಗಳನ್ನು ಕರ್ನಾಟಕ ಇ–ಪ್ರೊಕ್‌ನಿಂದ (www.eproc.karnataka.gov.in) ದಿನಾಂಕ : 23.12.2021 ಸಂಜೆ 05.30 ರಿಂದ ಪಡೆಯಬಹುದಾಗಿರುತ್ತದೆ.
ವಾ.ಸಂ.ಇ/ಬೆಂ.ನ/ಶ್ರೇಷ್ಠ/2504/2021–22 ಸಹಿ/– ಕಾರ್ಯಪಾಲಕ ಇಂಜಿನಿಯರ್, ಪಿಆರ್‌ಎಎಂಸಿ
ಕೋವಿಡ್–19 ಆತಂಕ ಬೇಡ: ಮುನ್ನೆಚ್ಚರಿಕೆ ಇರಲಿ
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಪೌರಾಡಳಿತ ಇಲಾಖೆ
ಪಟ್ಟಣ ಪಂಚಾಯತ ಕಾರ್ಯಾಲಯ, ಮುಳಗುಂದ
ಜಿಲ್ಲಾ:ಗದಗ ತಾ॥ ಗದಗ
ವೆಬ್: www.mulagundatown.mrc.gov.in ಇ–ಮೇಲ್: tpcmulgund@yahoo.in ದೂರವಾಣಿ: 08372–280128
ಕ್ರ.ಸಂ/ಪ.ಪಂ.ಮು/ತಾಂತ್ರೀಕ.ವಿ/ಮುಕ್ತಿ.ವಾಹನ.ಟೆಂಡರ್/ವಹಿ/ /2021–22 ದಿನಾಂಕ: / /2021
ಅಲ್ಪಾವದಿ ಟೆಂಡರ ಪ್ರಕಟಣೆ
ಕರ್ನಾಟಕ ಪಾರದರ್ಶಕ ಅಧಿನಿಯಮ 1999 & 2020ರಡಿ ಮುಳಗುಂದ ಪಟ್ಟಣ ಪಂಚಾಯತಿಯ ಸನ್ 2019–20ನೇ ಸಾಲಿನ 14ನೇ ಹಣಕಾಸು ಮತ್ತು ಸನ್ 2020–21ನೇ ಸಾಲಿನ 15ನೇ ಹಣಕಾಸು ಅನುದಾನದಲ್ಲಿ ಶವಸಂಸ್ಕಾರ್ ವಾಹನ ಪೂರೈಸಲು ಅರ್ಹ ಗುತ್ತಿಗೆದಾರರಿಂದ ಇ_ಪ್ರೂಕ್ಯೂರಮೆಂಟ್ ಮೂಲಕ ಟೆಂಡರ್ ಆವ್ಹಾನಿಸಲಾಗಿರುತ್ತದೆ. ಆಸಕ್ತ ಅರ್ಹ ಏಜನ್ಸಿದಾರರು ವಿವರಗಳಿಗೆ ಟೆಂಡರ್ ದಾಖಲೆಗಳನ್ನು ವೆಬ್‌ಸೈಟ್ https://eproc.karnataka.gov.in ನಲ್ಲಿ ಪಡೆಯಬಹುದು.

ಅ. ನಂ.	ಇಂಡೆಂಟ್ ವಿವರ	ಅನುದಾನದ ವಿವರ	ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)	ಮುಂಗಡ ಠೇವಣಿ ಹಣ (ರೂ.ಗಳಲ್ಲಿ)
1	Indent No. DMA/2021-22/ IND12795/CALL-3	ಸನ್ 2019–20 14ನೇ ಹಣಕಾಸು ಮತ್ತು ಸನ್ 2020–21ನೇ ಸಾಲಿನ 15ನೇ ಹಣಕಾಸು ಅನುದಾನದಲ್ಲಿ	16.50 ಲಕ್ಷ	41250.00

1. ಭರ್ತಿ ಮಾಡಿದ ಟೆಂಡರ್‌ಗಳನ್ನು ಸ್ವೀಕರಿಸಿದ ಕೊನೆಯ ದಿನಾಂಕ: 06/01/2022 ಸಾಯಂಕಾಲ 04:30ಘಂಟೆವರೆಗೆ.
2. ಭರ್ತಿ ಮಾಡಿದ ಟೆಂಡರ್ ತೆರೆಯುವ ದಿನಾಂಕ ಹಾಗೂ ಸಮಯ ದಿನಾಂಕ: 07/01/2022 ಬೆಳಿಗ್ಗೆ 11:00ಘಂಟೆವರೆಗೆ.
3. ಇ.ಎಂ.ಡಿ ಮೊತ್ತವನ್ನು ಇ_ಪ್ರೂಕ್ಯೂರಮೆಂಟ್ ಅಥವಾ ಎನ್.ಇ.ಎಫ್.ಟಿ ಚಲನ್ ಮುಖಾಂತರ ಪಾವತಿಸುವದು.

ಸಹಿ/– ಮುಖ್ಯಾಧಿಕಾರಿ (ಶ್ರೀ ಎಮ್ ಎಸ್ ಬೆಂತೂರು) ಪಟ್ಟಣ ಪಂಚಾಯತ, ಮುಳಗುಂದ
ಸಹಿ/– ಅಧ್ಯಕ್ಷರು (ಶ್ರೀ ಎಚ್ ಡಿ ಹಳ್ಳಿ ಉರ್ಫ ವಡ್ಡರ) ಪಟ್ಟಣ ಪಂಚಾಯತ, ಮುಳಗುಂದ
ವಾ.ಸಾ.ಇ/ಗದಗ/391/2021–22/ದೇಶಪಾಂಡೆಪಬ್ಲಿಸಿಟಿ

ಮೈಸೂರು ವಿಶ್ವವಿದ್ಯಾನಿಲಯ
(4.0 ಸ್ಕೇಲ್‌ನ 3.47 ಸಿಜಿಪಿಎಯೊಂದಿಗೆ ನ್ಯಾಕ್‌ನಿಂದ ಮರು ಮಾನ್ಯತೆ ಪಡೆದಿದೆ)
(ಎನ್‌ಐಆರ್‌ಎಫ್–2020 ವಿಶ್ವವಿದ್ಯಾನಿಲಯ ವಿಭಾಗದಲ್ಲಿ 27ನೇ ಸ್ಥಾನ ಮತ್ತು ಒಟ್ಟಾರೆ ವಿಭಾಗದಲ್ಲಿ 47ನೇ ಸ್ಥಾನ)
ವಿಶ್ವವಿದ್ಯಾನಿಲಯ ಕಾರ್ಯಸೌಧ, ಕ್ರಾಫರ್ಡ್ ಭವನ, ಮೈಸೂರು–570 005
website : www.uni-mysore.ac.in
ಸಂಖ್ಯೆ:ವಿಕ್ಷೇಪಾ.7/1(ಎ)/941(ಎ)/2021–22 ದಿನಾಂಕ: 18.12.2021
ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
https:www.eproc.karnataka.gov.in
ಮಾನ್ಯ ಕುಲಪತಿಗಳ ಅನುಮೋದನೆಯ ಮೇರೆಗೆ ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳಲ್ಲಿನ ನಿವಾಸಿಗಳಿಗೆ ಭೋಜನ ವ್ಯವಸ್ಥೆಯನ್ನು ಕಲ್ಪಿಸಲು ಅವಶ್ಯಕವಾಗಿರುವ ಅಡುಗೆ ಸಿಬ್ಬಂದಿಗಳ ಸೇವೆಯನ್ನು ಒಂದು ವರ್ಷದ ಅವಧಿಗೆ ಪಡೆಯುವ ಸಂಬಂಧ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯ ಅಧ್ಯಾದೇಶ 2000, ಅಧ್ಯಾಯ–2ರ ಅಧಿನಿಯಮ 3(1)ರಂತೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ ಸಲ್ಲಿಸಲು ಅಲ್ಪಾವಧಿ ಮರು ಟೆಂಡರ್‌ನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ.
ಅಲ್ಪಾವಧಿ ಮರು ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 07.01.2022 ಸಂಜೆ: 05:30 ಗಂಟೆ ವರೆಗೆ.
ಟೆಂಡರ್ ಇಂಡೆಂಟ್ ಸಂಖ್ಯೆ ಈ ಕೆಳಕಂಡಂತಿದೆ:
ಕ್ರ.ಸಂ. 1. ಟೆಂಡರ್ ವಿವರ: ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳಲ್ಲಿನ ನಿವಾಸಿಗಳಿಗೆ ಭೋಜನ ವ್ಯವಸ್ಥೆಯನ್ನು ಕಲ್ಪಿಸಲು ಅವಶ್ಯಕವಾಗಿರುವ ಅಡುಗೆ ಸಿಬ್ಬಂದಿಗಳ ಸೇವೆಯನ್ನು ಒಂದು ವರ್ಷದ ಅವಧಿಗೆ ಪಡೆಯಲು. **ಇಂಡೆಂಟ್ ಸಂಖ್ಯೆ:** MU/DSW/HOSTELS/ COOKS/2021-22/Call-3
ಸೂಚನೆ: ಹೆಚ್ಚಿನ ವಿವರಗಳನ್ನು ದೂರವಾಣಿ ಸಂಖ್ಯೆ.: 0821–2419318/ 386/429ರಲ್ಲಿ ಅಥವಾ ವೆಬ್‌ಸೈಟ್ https:www.eproc.karnataka.gov.in ನಲ್ಲಿ ಪಡೆಯಬಹುದಾಗಿದೆ.
ಸಹಿ/– ಕುಲಸಚಿವ
DIPR/DDMYS/MCA/717/2020-21

ಕ್ರಿಸ್‌ಮಸ್, ಹೊಸ ವರ್ಷಾಚರಣೆ ಮೇಲೆ ಕಠಿನೆರಳು • ಇತರೆ ಸಮಾರಂಭಗಳ ಮೇಲೆ ನಿರ್ಬಂಧ

ಓಮೈಕ್ರಾನ್ ರೂಪಾಂತರಿ 222ಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ/ಮುಂಬೈ: ದೇಶದಲ್ಲಿ ಓಮೈಕ್ರಾನ್ ರೂಪಾಂತರ ತಳಿಯ ಕೋವಿಡ್ ಪ್ರಕರಣಗಳ ಸಂಖ್ಯೆ ಬುಧವಾರ 222ಕ್ಕೆ ಏರಿಕೆಯಾಗಿದೆ. ದೆಹಲಿಯಲ್ಲಿ ಒಟ್ಟು 57 ಪ್ರಕರಣಗಳು ಮತ್ತು ಮಹಾರಾಷ್ಟ್ರದಲ್ಲಿ 61 ಪ್ರಕರಣಗಳು ಪತ್ತೆಯಾಗಿದೆ. ಎರಡೂ ಕಡೆ ಬುಧವಾರ ಕ್ರಮವಾಗಿ 125 ಮತ್ತು ಕೋವಿಡ್‌ನ 1201, ಹೊಸ ಪ್ರಕರಣಗಳು ಪತ್ತೆಯಾಗಿವೆ. ಎರಡೂ ಕಡೆಗಳಲ್ಲಿ 6 ತಿಂಗಳಲ್ಲಿ ಒಂದೇ ದಿನ ಪತ್ತೆಯಾದ ಗರಿಷ್ಠ ಪ್ರಕರಣಗಳ ಸಂಖ್ಯೆ ಇದು.

ದೆಹಲಿಯಲ್ಲಿ ಗುರುವಾರ ಒಟ್ಟು ಸಕ್ರಿಯ ಪ್ರಕರಣಗಳ ಸಂಖ್ಯೆ 624ಕ್ಕೆ ಏರಿಕೆಯಾಗಿದೆ. ಇದು ಐದು ತಿಂಗಳಲ್ಲೇ ಗರಿಷ್ಠ. ಕೋವಿಡ್ ಮತ್ತು ಓಮೈಕ್ರಾನ್ ಪ್ರಕರಣಗಳ ಸಂಖ್ಯೆ ಏರಿಕೆಯಾದ ಬೆನ್ನಲ್ಲೇ ದೆಹಲಿ ಸರ್ಕಾರವು ಹೊಸ ವರ್ಷಾಚರಣೆ, ಕ್ರಿಸ್‌ಮಸ್ ಆಚರಣೆ ಮತ್ತಿತರ ಸಮಾರಂಭಗಳ ಮೇಲೆ ನಿರ್ಬಂಧ ಹೇರಿದೆ. ಈ ಸಂಬಂಧ ದೆಹಲಿ ವಿಕೋಪ ನಿರ್ವಹಣಾ ಪ್ರಾಧಿಕಾರವು ಸುತ್ತೋಲೆ ಹೊರಡಿಸಿದೆ.

ಕ್ರಿಸ್‌ಮಸ್ ಮತ್ತು ಹೊಸ ವರ್ಷಾಚರಣೆಗೆ ಜನರು ಗುಂಪುಗೂಡುವುದನ್ನು ದೆಹಲಿ ಸರ್ಕಾರ ನಿಷೇಧಿಸಿದೆ. 'ಎಲ್ಲಾ ರೀತಿಯ ಧಾರ್ಮಿಕ ಸಮಾರಂಭಗಳು, ಸಾಮಾಜಿಕ ಸಮಾರಂಭಗಳು, ರಾಜಕೀಯ ಸಭೆ/ರ್‍ಯಾಲಿಗಳು, ಮನೋರಂಜನಾ ಕಾರ್ಯಕ್ರಮಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ಹಬ್ಬಕ್ಕೆ ಸಂಬಂಧಿಸಿದ ಸಾರ್ವಜನಿಕ ಸಮಾರಂಭಗಳನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಮದುವೆ, ಸಭೆ, ಪ್ರದರ್ಶನ ಮತ್ತು ಸಮ್ಮೇಳನಗಳಂತಹ ಕಾರ್ಯಕ್ರಮಗಳನ್ನು ನಡೆಸಬಹುದು. ಆದರೆ ಹೆಚ್ಚಿನ ಸಂಖ್ಯೆಯ ಜನರು ಸೇರುವಂತಿಲ್ಲ ಮತ್ತು ಕೋವಿಡ್ ನಿಯಂತ್ರಣ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು' ಎಂದು ಸುತ್ತೋಲೆಯಲ್ಲಿ ಸೂಚಿಸಲಾಗಿದೆ.

ಕೋವಿಡ್ ಸಾಂಕ್ರಾಮಿಕದ ನಡುವೆಯೂ, ಬ್ರಿಟನ್‌ನ ವಿನ್‌ಚೆಸ್ಟರ್‌ನ ಬೀದಿಯೊಂದಲ್ಲಿ ಕ್ರಿಸ್‌ಮಸ್ ಹಬ್ಬದ ಖರೀದಿಗಾಗಿ ಜನರು ಸೇರಿದ್ದರು –ಎಪಿ ಚಿತ್ರ

ಫ್ರಾನ್ಸ್, ಜರ್ಮನಿಯಲ್ಲಿ ಪ್ರಬಲಗೊಳ್ಳುವ ಭೀತಿ

ಬರ್ಲಿನ್, ಪ್ಯಾರಿಸ್ (ಪಿಟಿಐ, ರಾಯಿಟರ್ಸ್): ಫ್ರಾನ್ಸ್, ಜರ್ಮನಿ ಸೇರಿದಂತೆ ವಿಶ್ವದ ವಿವಿಧ ದೇಶಗಳಲ್ಲಿ ಕೊರೊನಾ ವೈರಸ್‌ನ ರೂಪಾಂತರ ತಳಿ 'ಓಮೈಕ್ರಾನ್' ವಿಸ್ತರಿಸುತ್ತಿದೆ. ಮುಂದಿನ ಮೂರು ವಾರಗಳಲ್ಲಿ ಜರ್ಮನಿಯಲ್ಲಿ ಸೋಂಕು ಪ್ರಬಲವಾಗಲಿದೆ ಎಂದು ಆರೋಗ್ಯಾಧಿಕಾರಿಗಳು ಹೇಳಿದ್ದಾರೆ. ದೇಶದಲ್ಲಿ ಬುಧವಾರ ಒಂದೇ ದಿನ 45,659 ಕೋವಿಡ್ ಪ್ರಕರಣಗಳು ವರದಿಯಾಗಿವೆ. ಡಿಸೆಂಬರ್ 28ರಿಂದ ಖಾಸಗಿ ಸಮಾರಂಭಗಳು, ನೈಟ್ ಕ್ಲಬ್, ಡಿಸ್ಕೊ, ಬಾರ್ ಹಾಗೂ ಫುಟ್ಬಾಲ್ ಪಂದ್ಯಗಳಿಗೆ ನಿರ್ಬಂಧ ಹೇರಲು ನಿರ್ಧರಿಸಲಾಗಿದೆ. ಫ್ರಾನ್ಸ್‌ನಲ್ಲಿ ಡಿಸೆಂಬರ್ ಅಂತ್ಯದ ವೇಳೆಗೆ ಪ್ರತಿನಿತ್ಯ 1 ಲಕ್ಷ ಹೊಸ ಪ್ರಕರಣಗಳು ವರದಿಯಾಗುವ ಸಾಧ್ಯತೆಯಿದೆ ಎಂದು ಅಂದಾಜಿಸಲಾಗಿದೆ. ಒಟ್ಟು ಪ್ರಕರಣಗಳಲ್ಲಿ ಓಮೈಕ್ರಾನ್ ಪ್ರಕರಣಗಳ ಪ್ರಮಾಣ ಶೇ 20ರಷ್ಟಿದ್ದು, ಪ್ಯಾರಿಸ್‌ನಲ್ಲಿ ಈ ಪ್ರಮಾಣ ಶೇ 35ರಷ್ಟಿದೆ ಎಂದು ಫ್ರಾನ್ಸ್ ಆರೋಗ್ಯ ಸಚಿವ ಒಲಿವರ್ ಹೇಳಿದ್ದಾರೆ.

ಹೊಸ ವರ್ಷದ ಮುನ್ನಾದಿನದ ದೊಡ್ಡ ಕಾರ್ಯಕ್ರಮಗಳನ್ನು ಈಗಾಗಲೇ ಲಂಡನ್ ಮತ್ತು ಎಡಿನ್‌ಬರ್ಗ್‌ನಲ್ಲಿ ರದ್ದುಗೊಳಿಸಲಾಗಿದೆ. ವೇಲ್ಸ್‌ನಲ್ಲಿ ಡಿ.26ರಿಂದ ಹೊಸ ನಿರ್ಬಂಧಗಳು ಜಾರಿಗೆ ಬರಲಿವೆ. ಆದರೆ, ಕುಟುಂಬದ ಕ್ರಿಸ್‌ಮಸ್ ಕಾರ್ಯಕ್ರಮಗಳಲ್ಲಿ ಭಾಗಿಯಾಗಲು ಅನುಕೂಲವಾಗುವಂತೆ, ಕ್ವಾರಂಟೈನ್ ಅವಧಿಯನ್ನು 10 ದಿನಗಳಿಂದ 7 ದಿನಗಳಿಗೆ ಇಳಿಸಿ ಬ್ರಿಟನ್ ಸರ್ಕಾರ ಆದೇಶಿಸಿದೆ.

ಲಸಿಕಾ ಕಾರ್ಯಕ್ರಮಕ್ಕೆ ವೇಗ

5 ವರ್ಷದಿಂದ 11 ವರ್ಷದೊಳಗಿನ ಮಕ್ಕಳಿಗೆ ಲಸಿಕೆ ನೀಡುವ ಕಾರ್ಯಕ್ರಮಕ್ಕೆ ಫ್ರಾನ್ಸ್ ಬುಧವಾರ ಚಾಲನೆ ನೀಡಿದೆ. 5ರಿಂದ 12 ವರ್ಷದೊಳಗಿನ ಮಕ್ಕಳಿಗೆ ಲಸಿಕೆ ನೀಡಲು ಫಿನ್ಲೆಂಡ್ ನಿರ್ಧರಿಸಿದೆ.

ಓಮೈಕ್ರಾನ್ ವಿರುದ್ಧ ಕೆಲಸ ಮಾಡಬಲ್ಲ 8 ಕೋಟಿ ಲಸಿಕೆ ಡೋಸ್‌ಗಳನ್ನು ಪೂರೈಸುವಂತೆ ಬಯೊಎನ್‌ಟೆಕ್ ಜೊತೆ ಜರ್ಮನಿ ಬುಧವಾರ ಒಪ್ಪಂದ ಮಾಡಿಕೊಂಡಿದೆ. ನೊವೊವ್ಯಾಕ್ಸ್‌ನ 40 ಲಕ್ಷ ಡೋಸ್, ವಾಲ್‌ನೆವಾ ಸಂಸ್ಥೆಯ 1.1 ಕೋಟಿ ಡೋಸ್‌ಗೂ ಬೇಡಿಕೆ ಸಲ್ಲಿಸಲಾಗಿದೆ. ಲಾಕ್‌ಡೌನ್ ತಡೆಯುವ ಉದ್ದೇಶದಿಂದ, 60 ವರ್ಷ ದಾಟಿದವರಿಗೆ 4ನೇ ಡೋಸ್ ಲಸಿಕೆ ನೀಡಲು ಇಸ್ರೇಲ್ ಸರ್ಕಾರ ಮುಂದಾಗಿದೆ.

ದೇಶವನ್ನು ಓಮೈಕ್ರಾನ್ ಬಾಧಿಸುತ್ತಿದ್ದು, ವೈರಾಣು ನಿರೋಧಕವಾಗಿ ಕೆಲಸ ಮಾಡಬಲ್ಲ 42 ಲಕ್ಷ ಮಾತ್ರೆಗಳನ್ನು ಖರೀದಿಸಲು ಬ್ರಿಟನ್ ನಿರ್ಧರಿಸಿದೆ

ಎಲ್ಲಿ ಏನಾಗುತ್ತಿದೆ?

- ಕೋವಿಡ್ ಪ್ರಕರಣಗಳು ಹೆಚ್ಚಿದ ಕಾರಣ, ಉತ್ತರ ಚೀನಾದ ಕ್ಸಿಯಾನ್ ನಗರದ 1.3 ಕೋಟಿ ಜನರನ್ನು ಮನೆಯಿಂದ ಹೊರಬರದಂತೆ ನಿರ್ಬಂಧಿಸಲಾಗಿದೆ
- ಫಿನ್ಲೆಂಡ್‌ನಲ್ಲಿ ಕ್ರಿಸ್‌ಮಸ್ ದಿನದಂದು ಬಾರ್‌ಗಳನ್ನು ರಾತ್ರಿ 9 ಗಂಟೆಗೆ ಬಂದ್ ಮಾಡಲು ಸರ್ಕಾರ ನಿರ್ಧರಿಸಿದೆ
- ಕೇರಳದಲ್ಲಿ 9 ಮಂದಿಯಲ್ಲಿ ಓಮೈಕ್ರಾನ್ ತಳಿಯ ವೈರಾಣು ಪತ್ತೆಯಾಗಿದೆ. ರಾಜ್ಯದಲ್ಲಿ ಓಮೈಕ್ರಾನ್‌ನ ಪ್ರಕರಣಗಳ ಸಂಖ್ಯೆ 24ಕ್ಕೆ ಏರಿಕೆಯಾಗಿದೆ
- ರಾಜಸ್ಥಾನದಲ್ಲಿ ನಾಲ್ಕು ಜನರಲ್ಲಿ ಓಮೈಕ್ರಾನ್ ತಳಿಯ ವೈರಾಣು ಕಾಣಿಸಿಕೊಂಡಿದೆ.
- ಕೋವಿಡ್ ಲಸಿಕೆ ಹಾಕಿಸಿಕೊಂಡ ಪ್ರಮಾಣಪತ್ರಗಳನ್ನು ಪೂರೈಸದಿದ್ದರೆ, ವೇತನ ನೀಡುವುದಿಲ್ಲ ಎಂದು ಪಂಜಾಬ್ ಸರ್ಕಾರವು ನೌಕರರಿಗೆ ತಿಳಿಸಿದೆ
- ಬ್ರಿಟನ್‌ನಲ್ಲಿ ಒಂದೇ ದಿನದಲ್ಲಿ 1.06 ಲಕ್ಷ ಕೋವಿಡ್ ಪ್ರಕರಣಗಳು ಪತ್ತೆಯಾಗಿವೆ

ದೆಹಲಿಯಲ್ಲಿ ಬಾರ್ ಮತ್ತು ರೆಸ್ಟೋರೆಂಟ್‌ಗಳನ್ನು ತಮ್ಮ ಸಾಮರ್ಥ್ಯದ ಶೇ 50ರಷ್ಟು ಆಸನಗಳನ್ನು ಮಾತ್ರವೇ ಭರ್ತಿ ಮಾಡಬಹುದು. ಮೆಟ್ರೋಗಳಲ್ಲಿ ಪ್ರತಿ ಕೋಚ್‌ನಲ್ಲಿ ಗರಿಷ್ಠ 30 ಜನರಷ್ಟೇ ಇರಬಹುದು ಎಂದು ಸುತ್ತೋಲೆಯಲ್ಲಿ ಹೇಳಲಾಗಿದೆ.

25 ಜಿಲ್ಲೆಯಲ್ಲಿ ಕೋವ್ಯಾಕ್ಸಿನ್ ಪೋಲು

ಕೊಪ್ಪಳ, ಬಳ್ಳಾರಿಯಲ್ಲಿ ಕೋವಿಶೀಲ್ಡ್ ಕೂಡ ವ್ಯರ್ಥ

• ವರುಣ ಹೆಗಡೆ

ಬೆಂಗಳೂರು: ರಾಜ್ಯದಲ್ಲಿ 'ಕೋವ್ಯಾಕ್ಸಿನ್' ಲಸಿಕೆಯು ಅಧಿಕ ಪ್ರಮಾಣದಲ್ಲಿ ಪೋಲಾಗುತ್ತಿದ್ದು, 10 ಜಿಲ್ಲೆಗಳಲ್ಲಿ ಶೇ 2ಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಲಸಿಕೆ ವ್ಯರ್ಥವಾಗಿದೆ.

ಈವರೆಗೆ 8.36 ಕೋಟಿಗೂ ಅಧಿಕ ಡೋಸ್‌ಗಳನ್ನು ಆದ್ಯತೆ ಅನುಸಾರ ನೀಡಲಾಗಿದೆ. ಸೀರಮ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಕಂಪನಿಯ 'ಕೋವಿಶೀಲ್ಡ್' ಲಸಿಕೆಯನ್ನು 7.38 ಕೋಟಿ ಡೋಸ್‌ಗಳಷ್ಟು ಒದಗಿಸಿದರೆ, 96.71 ಲಕ್ಷ ಡೋಸ್‌ಗಳಷ್ಟು ಭಾರತ್ ಬಯೋಟೆಕ್ ಕಂಪನಿಯ 'ಕೋವ್ಯಾಕ್ಸಿನ್' ಲಸಿಕೆ ವಿತರಿಸಲಾಗಿದೆ.

ಆರೋಗ್ಯ ಇಲಾಖೆಯ ಮಾಹಿತಿ ಪ್ರಕಾರ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ 'ಕೋವಿಶೀಲ್ಡ್' ಲಸಿಕೆಯ ವ್ಯರ್ಥವಾಗದಂತೆ ತಡೆಯಲಾಗಿದೆ. ಸೀಶೆಯಲ್ಲಿರುವ ಹೆಚ್ಚುವರಿ ಡೋಸ್‌ಗಳನ್ನೂ ಬಳಸಿಕೊಳ್ಳಲಾಗಿದೆ. ಆದರೆ, 'ಕೋವ್ಯಾಕ್ಸಿನ್' ಲಸಿಕೆಯು 25 ಜಿಲ್ಲೆಗಳಲ್ಲಿ ವ್ಯರ್ಥವಾಗಿದ್ದು, ಒಟ್ಟಾರೆ ಪೋಲು ಪ್ರಮಾಣಶೇ 1.77ರಷ್ಟಿದೆ.

1.29 ಲಕ್ಷಕ್ಕೂ ಅಧಿಕ ಡೋಸ್‌ಗಳು 'ಕೋವ್ಯಾಕ್ಸಿನ್' ಲಸಿಕೆ ವ್ಯರ್ಥವಾಗಿದೆ. ಬಾಗಲಕೋಟೆಯಲ್ಲಿ ಶೇ 6.23 ರಷ್ಟು ಡೋಸ್‌ಗಳು ಪೋಲಾಗಿದ್ದು, ರಾಜ್ಯದಲ್ಲಿಯೇ ಗರಿಷ್ಠ ಪ್ರಮಾಣದಲ್ಲಿ ವ್ಯರ್ಥ ಮಾಡಿದ ಜಿಲ್ಲೆಗಳ ಸಾಲಿನಲ್ಲಿ ಅಗ್ರಸ್ಥಾನದಲ್ಲಿದೆ. ಚಿಕ್ಕಮಗಳೂರು, ಉಡುಪಿ, ಉತ್ತರ ಕನ್ನಡ, ಬೆಳಗಾವಿ, ಕೋಲಾರ ಹಾಗೂ ಚಾಮರಾಜನಗರದಲ್ಲಿ 'ಕೋವಾಕ್ಸಿನ್' ಲಸಿಕೆ ವ್ಯರ್ಥವಾಗದಂತೆ ವಿತರಿಸಲಾಗಿದೆ.

18 ಜಿಲ್ಲೆಗಳಲ್ಲಿ ಪೋಲು ತಡೆ: 'ಕೋವಿಶೀಲ್ಡ್' ಲಸಿಕೆ ಕೊಪ್ಪಳ (ಶೇ 3.2) ಹಾಗೂ ಬಳ್ಳಾರಿಯಲ್ಲಿ (ಶೇ 2.43) ಹೆಚ್ಚಿನ ಪ್ರಮಾಣದಲ್ಲಿ ಪೋಲಾಗಿದೆ. ಉಡುಪಿ, ಚಿಕ್ಕಮಗಳೂರು, ಕೋಲಾರ ಸೇರಿದಂತೆ 18 ಜಿಲ್ಲೆಗಳಲ್ಲಿ ಈ ಲಸಿಕೆಯ ಪೋಲು ತಡೆಯಲಾಗಿದೆ.

4.72 ಕೋಟಿಗೂ ಅಧಿಕ ಮಂದಿ ಮೊದಲ ಡೋಸ್ ಲಸಿಕೆ ಪಡೆದುಕೊಂಡಿದ್ದಾರೆ. 3.63 ಕೋಟಿ ಮಂದಿ ಎರಡೂ ಡೋಸ್‌ಗಳನ್ನೂ ಹಾಕಿಸಿಕೊಂಡಿದ್ದಾರೆ. ಈ ವರ್ಷದ ಅಂತ್ಯದೊಳಗೆ 18 ವರ್ಷಗಳು ಮೇಲ್ಪಟ್ಟ ಎಲ್ಲರಿಗೂ ಎರಡು ಡೋಸ್ ಲಸಿಕೆ ವಿತರಿಸುವ ಗುರಿಯನ್ನು ರಾಜ್ಯ ಸರ್ಕಾರ ಹಾಕಿಕೊಂಡಿದೆ. ಸದ್ಯ 60 ಲಕ್ಷಕ್ಕೂ ಅಧಿಕ ಡೋಸ್‌ಗಳು ದಾಸ್ತಾನು ಇದೆ ಎಂದು ಇಲಾಖೆ ಮೂಲಗಳು ತಿಳಿಸಿವೆ.

'ಪೋಲು ತಡೆಗೆ ಕ್ರಮ'

'ಯಾವುದೇ ಲಸಿಕೆ ವಿತರಣೆ ವೇಳೆ ಕೆಲ ಡೋಸ್‌ಗಳು ವ್ಯರ್ಥವಾಗುವುದು ಸಾಮಾನ್ಯ. 'ಕೋವ್ಯಾಕ್ಸಿನ್' ಲಸಿಕೆ ಬಳಕೆಯ ಅವಧಿ ಹೆಚ್ಚಿಸಲಾಗಿದೆ. ಸೀಶೆಯ ಮುಚ್ಚಳ ತೆರೆದ ಬಳಿಕ 2ರಿಂದ 8 ಡಿಗ್ರಿ ಸೆಲ್ಸಿಯಸ್‌ನಲ್ಲಿ ಇರಿಸಿ, 28 ದಿನಗಳವರೆಗೆ ವಿತರಿಸಲು ಅವಕಾಶವಿದೆ. ಇದರಿಂದ ಮುಂದಿನ ದಿನಗಳಲ್ಲಿ ಪೋಲು ತಡೆ ಸಾಧ್ಯ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಆರೋಗ್ಯ ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದರು.

'ಕೋವಿಶೀಲ್ಡ್ ಲಸಿಕೆ ಒಂದು ಸೀಶೆಯಲ್ಲಿ 10 ಡೋಸ್, ಕೋವ್ಯಾಕ್ಸಿನ್ ಲಸಿಕೆಯು 20 ಡೋಸ್ ಇರುತ್ತದೆ. ನಿಗದಿತ ವೇಳೆಗೆ ಹೆಚ್ಚಿನ ಸಂಖ್ಯೆಯಲ್ಲಿ ಫಲಾನುಭವಿಗಳು ಬರದಿದ್ದಲ್ಲಿ ವ್ಯರ್ಥವಾಗುವ ಸಾಧ್ಯತೆ ಇರುತ್ತದೆ' ಎಂದು ವಿವರಿಸಿದರು.

ಅಂಕಿ-ಅಂಶಗಳು

7.38 ಕೋಟಿ ವಿತರಿಸಲಾದ 'ಕೋವಿಶೀಲ್ಡ್' ಲಸಿಕೆಯ ಡೋಸ್‌ಗಳು

96.71 ಲಕ್ಷ ವಿತರಿಸಲಾದ 'ಕೋವ್ಯಾಕ್ಸಿನ್' ಲಸಿಕೆಯ ಡೋಸ್‌ಗಳು

ಕೋವ್ಯಾಕ್ಸಿನ್: ಅಧಿಕ ಡೋಸ್ ಪೋಲು ಮಾಡಿದ ಜಿಲ್ಲೆಗಳು

ಜಿಲ್ಲೆ	ಪ್ರಮಾಣ (%)
ಬಾಗಲಕೋಟೆ	6.23
ಗದಗ	4.85
ಕೊಪ್ಪಳ	4.31
ಹಾವೇರಿ	4.01
ಮೈಸೂರು	3.81
ದಕ್ಷಿಣ ಕನ್ನಡ	3.45
ಧಾರವಾಡ	3.16
ಚಿತ್ರದುರ್ಗ	2.88
ಬೆಂಗಳೂರು ನಗರ	2.62

ಓಮೈಕ್ರಾನ್ ಹರಡುವಿಕೆ ತಡೆ: ಸೂಚನೆ

ಬೆಂಗಳೂರು: ರಾಜ್ಯದಲ್ಲಿ ಕೊರೊನಾ ವೈರಾಣುವಿನ ರೂಪಾಂತರಿ ಓಮೈಕ್ರಾನ್ ಹರಡುವಿಕೆ ತಡೆಗೆ ಸೋಂಕಿತರ ಸಂಪರ್ಕ ಪತ್ತೆ, ಪ್ರತ್ಯೇಕ ವಾಸಕ್ಕೆ ಒಳಪಡಿಸುವಿಕೆ ಸೇರಿದಂತೆ ವಿವಿಧ ಮುನ್ನೆಚ್ಚರಿಕಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು ಎಂದು ಆರೋಗ್ಯ ಇಲಾಖೆ ಸೂಚಿಸಿದೆ.

ಈ ಬಗ್ಗೆ ಇಲಾಖೆಯ ಆಯುಕ್ತ ಟಿ.ಎಚ್.ಅನಿಲ್ ಕುಮಾರ್ ಸುತ್ತೋಲೆ ಹೊರಡಿಸಿದ್ದಾರೆ. 'ರಾಜ್ಯದಲ್ಲಿ ಸದ್ಯ ಪ್ರತಿನಿತ್ಯ ಸರಾಸರಿ 300 ಕೋವಿಡ್ ಪ್ರಕರಣಗಳು ವರದಿಯಾಗುತ್ತಿವೆ. ಸೋಂಕು ದೃಢಪ್ರಮಾಣವು ಶೇ 0.25ರಿಂದ ಶೇ 0.30 ರಷ್ಟು ದೃಢಪಡುತ್ತಿದೆ. ಓಮೈಕ್ರಾನ್ ಪ್ರಕರಣಗಳು ಕರ್ನಾಟಕ ಸೇರಿ ದೇಶದ ವಿವಿಧ ರಾಜ್ಯಗಳಲ್ಲಿಯೂ ಕಾಣಿಸಿಕೊಂಡಿವೆ. ಹೀಗಾಗಿ, ಕೋವಿಡ್ ಮೂರನೇ ಅಲೆ ತಡೆಯಲು ನೇರ ಹಾಗೂ ಪರೋಕ್ಷ ಸಂಪರ್ಕಿತರನ್ನು ಪತ್ತೆ ಮಾಡಿ, ಪ್ರತ್ಯೇಕ ವಾಸಕ್ಕೆ ಒಳಪಡಿಸಬೇಕು' ಎಂದು ಹೇಳಿದ್ದಾರೆ.

'ವ್ಯಕ್ತಿಗೆ ಸೋಂಕು ದೃಢಪಟ್ಟ 24 ಗಂಟೆಗಳಲ್ಲಿ ಅವರ ನೇರ ಹಾಗೂ ಪರೋಕ್ಷ ಸಂಪರ್ಕಿತರನ್ನು ಗುರುತಿಸಬೇಕು. ನೇರ ಸಂಪರ್ಕಿತರಿಗೆ ಮೊದಲ ಹಾಗೂ ಎಂಟನೇ ದಿನದಂದು ಆರ್‌ಟಿ-ಪಿಸಿಆರ್ ಪರೀಕ್ಷೆ ನಡೆಸಬೇಕು. ಅದೇ ರೀತಿ, ಅಂತರರಾಷ್ಟ್ರೀಯ ಪ್ರಯಾಣಿಕರು ಹಾಗೂ ಗುರುತಿಸಲಾದ ಅಪಾಯಕಾರಿ ದೇಶಗಳಿಂದ ಬಂದವರನ್ನು ಮನೆಗಳಲ್ಲಿ ಪ್ರತ್ಯೇಕ ವಾಸಕ್ಕೆ ಒಳಪಡಿಸಿ, ಎಂಟನೇ ದಿನಕ್ಕೆ ಮತ್ತೊಮ್ಮೆ ಆರ್‌ಟಿ-ಪಿಸಿಆರ್ ಪರೀಕ್ಷೆ ನಡೆಸಬೇಕು. ಸೋಂಕಿತರಾದಲ್ಲಿ ಕೋವಿಡ್ ಮಾರ್ಗಸೂಚಿ ಅನುಸಾರ ಚಿಕಿತ್ಸೆ ನೀಡಬೇಕು' ಎಂದು ತಿಳಿಸಿದ್ದಾರೆ.

'ಆರೋಗ್ಯ ಕಾರ್ಯಕರ್ತರು, ಸಾರ್ವಜನಿಕ ಆರೋಗ್ಯ ತಪಾಸಣಾ ಅಧಿಕಾರಿಗಳು, ಆಶಾ ಕಾರ್ಯಕರ್ತೆಯರು, ಸಾರ್ವಜನಿಕ ಆರೋಗ್ಯ ಅಧಿಕಾರಿಗಳ ನೆರವಿನಿಂದ ಸೋಂಕು ಸಂಪರ್ಕಿತರನ್ನು ಪತ್ತೆ ಮಾಡಬೇಕು. ಜಿಲ್ಲಾ ಮಟ್ಟದಲ್ಲಿನ ವಾರ್ ರೂಮ್‌ಗಳನ್ನು ಮತ್ತೆ ಸಕ್ರಿಯಗೊಳಿಸಬೇಕು. ಸೋಂಕಿತರಿಗೆ ಚಿಕಿತ್ಸೆಯ ವಿಧಾನವನ್ನು ನಿರ್ಧರಿಸಿ, ದಾಖಲಿಸಬೇಕು. ಸಂಪರ್ಕಿತರ ಮೇಲೆ ನಿಗಾ ಸೇರಿದಂತೆ ವಿವಿಧ ಕಾರ್ಯಚಟುವಟಿಕೆಗೆ ತಂತ್ರಾಂಶಗಳ ನೆರವನ್ನು ಪಡೆದುಕೊಳ್ಳಬೇಕು' ಎಂದು ಸೂಚಿಸಿದ್ದಾರೆ.

19 ಜಿಲ್ಲೆಗಳಲ್ಲಿ ಪ್ರಕರಣ ಪತ್ತೆ

ಬೆಂಗಳೂರು: ರಾಜ್ಯದ 19 ಜಿಲ್ಲೆಗಳಲ್ಲಿ ಕೋವಿಡ್ ಸೋಂಕು ಪ್ರಕರಣಗಳು ಬುಧವಾರ ಪತ್ತೆಯಾಗಿದ್ದು, 321 ಮಂದಿ ಹೊಸದಾಗಿ ಸೋಂಕಿತರಾಗಿರುವುದು ದೃಢಪಟ್ಟಿದೆ.

ಒಂದು ದಿನದಲ್ಲಿ 97 ಸಾವಿರ ಮಾದರಿಗಳನ್ನು ಪರೀಕ್ಷಿಸಲಾಗಿದೆ. ಸೋಂಕು ದೃಢ ಪ್ರಮಾಣ ಶೇ 0.32ರಷ್ಟಿದೆ. ನಾಲ್ಕು ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 14 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬಾಗಲಕೋಟೆ, ಬಳ್ಳಾರಿ ಸೇರಿದಂತೆ 11 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ವರದಿಯಾಗಿಲ್ಲ.

ಬೆಂಗಳೂರು ನಗರದಲ್ಲಿ 211 ಮಂದಿಗೆ ಸೋಂಕು ತಗುಲಿದೆ. ದಕ್ಷಿಣ ಕನ್ನಡ, ಕೊಡಗಿನಲ್ಲಿ ತಲಾ 20, ಮೈಸೂರಿನಲ್ಲಿ 19, ಉತ್ತರ ಕನ್ನಡದಲ್ಲಿ 13 ಪ್ರಕರಣಗಳು ವರದಿಯಾಗಿವೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 10ಕ್ಕಿಂತ ಕಡಿಮೆ ಇವೆ. ಈವರೆಗೆ ವರದಿಯಾದ ಒಟ್ಟು ಪ್ರಕರಣಗಳ ಸಂಖ್ಯೆ 30.03 ಲಕ್ಷಕ್ಕೆ ಏರಿಕೆಯಾಗಿದೆ.

ಸೋಂಕಿತರಲ್ಲಿ 253 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಸಂಖ್ಯೆ 29.57 ಲಕ್ಷ ದಾಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 7,138ಕ್ಕೆ ಏರಿದೆ. ಬೆಂಗಳೂರಿನಲ್ಲಿ 5,740 ಸೋಂಕಿತರಿದ್ದಾರೆ.

ಆಮ್ಲಜನಕ ನಿರ್ವಹಣೆ–ತರಬೇತಿ ಕಾರ್ಯಕ್ರಮಕ್ಕೆ ಕೇಂದ್ರ ಸರ್ಕಾರ ಚಾಲನೆ

ನವದೆಹಲಿ (ಪಿಟಿಐ): ಕೋವಿಡ್ ಸಾಂಕ್ರಾಮಿಕದ ವೇಳೆಯಲ್ಲಿ ದೇಶ ಭಾರಿ ಆಮ್ಲಜನಕ ಕೊರತೆಯನ್ನು ಎದುರಿಸಿತ್ತು. ಇದನ್ನು ಗಮನದಲ್ಲಿಟ್ಟುಕೊಂಡು ವೈದ್ಯಕೀಯ ಆಮ್ಲಜನಕದ ವ್ಯರ್ಥವನ್ನು ತಪ್ಪಿಸಲು ಹಾಗೂ ತರ್ಕಬದ್ಧ ಬಳಕೆಯನ್ನು ಖಾತ್ರಿಪಡಿಸಲು ಆರೋಗ್ಯ ಕಾರ್ಯಕರ್ತರಿಗೆ ವೈದ್ಯಕೀಯ ಆಮ್ಲಜನಕದ ಸಮರ್ಥ ನಿರ್ವಹಣೆ ಬಗ್ಗೆ ತರಬೇತಿ ನೀಡುವ ಕಾರ್ಯಕ್ರಮಕ್ಕೆ ಕೇಂದ್ರ ಸರ್ಕಾರ ಬುಧವಾರ ಚಾಲನೆ ನೀಡಿದೆ.

ಇಲ್ಲಿನ 'ಏಮ್ಸ್'ನಲ್ಲಿ ನಡೆದ ರಾಷ್ಟ್ರೀಯ ಆಮ್ಲಜನಕ ಉಸ್ತುವಾರಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಕೇಂದ್ರದ ಆರೋಗ್ಯ ಖಾತೆ ರಾಜ್ಯ ಸಚಿವೆ ಭಾರತಿ ಪ್ರವೀಣ್ ಪವಾರ್ ಅವರು,'ಕೋವಿಡ್–19 ಸಾಂಕ್ರಾಮಿಕದ ವೇಳೆಯಲ್ಲಿ ದೇಶದಲ್ಲಿ ವೈದ್ಯಕೀಯ ಆಮ್ಲಜನಕಕ್ಕೆ ಬೇಡಿಕೆ ಹೆಚ್ಚಿತ್ತು. ಆಮ್ಲಜನಕವು ಕೇವಲ ಕೋವಿಡ್–19 ಸೋಂಕು ಮಾತ್ರವಲ್ಲದೇ ಇತರೆ ರೋಗಗಳ ಚಿಕಿತ್ಸೆಗೂ ಅತಿ ಅವಶ್ಯಕವಾಗಿದೆ. ಹಾಗಾಗಿ ಈ ಸಮಯದಲ್ಲಿ ಅದರ ತರ್ಕಬದ್ಧ ಬಳಕೆ ಕಡ್ಡಾಯ ಮತ್ತು ಅನಿವಾರ್ಯವಾಗಿದೆ' ಎಂದರು.

'ಆಮ್ಲಜನಕದ ವ್ಯರ್ಥವನ್ನು ತಪ್ಪಿಸುವ ನಿಟ್ಟಿನಲ್ಲಿ ಹಾಗೂ ಆಮ್ಲಜನಕ ನಿರ್ವಹಣೆಗಾಗಿ ಈ ಕಾರ್ಯಕ್ರಮದ ಉದ್ದೇಶ' ಎಂದು ಆರೋಗ್ಯ ಸಚಿವಾಲಯ ಹೇಳಿಕೆ ಬಿಡುಗಡೆ ಮಾಡಿದೆ.

ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
8 ಮತ್ತು 9ನೇ ಮಹಡಿ, ಇ ಮತ್ತು ಎಫ್ ಬ್ಲಾಕ್, ಕಾವೇರಿ ಭವನ, ಕೆ.ಹೆಚ್.ಬಿ. ಕಾಂಪ್ಲೆಕ್ಸ್, ಕೆಂಪೇಗೌಡ ರಸ್ತೆ, ಬೆಂಗಳೂರು–560009 ದೂರವಾಣಿ ಸಂಖ್ಯೆ: 2311 8888
ಈ–ಮೇಲ್ : cerghc@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ದಿನಾಂಕ : 22.12.2021

ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತದಿಂದ ಅರ್ಹ ಗುತ್ತಿಗೆದಾರರಿಂದ "1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ"ಯಡಿ 928 (ಜಿ+3) ಮಾದರಿಯ ಬಹುಮಹಡಿ ಮನೆಗಳನ್ನು ಮೂಲಭೂತ ಸೌಲಭ್ಯಗಳೊಂದಿಗೆ ನಿರ್ಮಿಸುವ ಕಾಮಗಾರಿಗಳಿಗೆ ಇಂಡೆಂಟ್ ಸಂಖ್ಯೆ: 46 (2ನೇ ಕರೆ) ಮತ್ತು 48 (2ನೇ ಕರೆ) ರಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್ (2ನೇ ಕರೆ) ಗಳನ್ನು ಆಹ್ವಾನಿಸಲಾಗಿದೆ.

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 11–01–2022 ಸಂಜೆ 4.00 ಗಂಟೆ.

ಕಾಮಗಾರಿಯ ಹೆಚ್ಚಿನ ವಿವರಗಳಿಗಾಗಿ ನಿಗಮದ ವೆಬ್‌ಸೈಟ್ https://eproc.karnataka.gov.in ನಲ್ಲಿ ಅಥವಾ ಮುಖ್ಯ ಇಂಜಿನಿಯರ್, ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ, 8 ಮತ್ತು 9ನೇ ಮಹಡಿ, ಕಾವೇರಿ ಭವನ, ಬೆಂಗಳೂರು, ದೂರವಾಣಿ: 080–023118888 ಇವರ ಕಛೇರಿಯಿಂದ ಕಛೇರಿ ಸಮಯದಲ್ಲಿ ಪಡೆಯಬಹುದಾಗಿದೆ.

ಸಹಿ/–
ಮುಖ್ಯ ಅಭಿಯಂತರರು
ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ, ಬೆಂಗಳೂರು.

ವಾ.ಸಾ.ಸಂ.ಇ/ಬೆಂ.ನಗರ/2505/ಆಕಾರ್/2021–22

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಬೆಂಗಳೂರು ನಗರ ಜಿಲ್ಲಾ ಪಂಚಾಯತಿ
ಕಾರ್ಯಪಾಲಕ ಅಭಿಯಂತರರ ಕಛೇರಿ, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಜಿಲ್ಲಾ ಪಂಚಾಯತಿ ಕಟ್ಟಡ, ಮೊದಲನೇ ಮಹಡಿ, ಎಸ್.ಕರಿಯಪ್ಪ ರಸ್ತೆ, (ಬನಶಂಕರಿ ದೇವಸ್ಥಾನದ ಹತ್ತಿರ) ಬನಶಂಕರಿ ಬೆಂಗಳೂರು – 560070.

ಸಂಖ್ಯೆ: ಕಾಅ/ಪಂರಾಇಂವಿ/ಬೆಂನ/ಎಇ–1/ಟೆಂಡರ್/39/2021–22 ದಿನಾಂಕ: 16.12.2021

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ನೋಟೀಸ್

ಕಾರ್ಯಪಾಲಕ ಅಭಿಯಂತರರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಕಛೇರಿಯಿಂದ Under MLA, MP, MGIRED, MP, RURBAN & Muzrai Grants ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ಅನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: 06.01.2022ರ ಸಂಜೆ 4.00 ಗಂಟೆಯವರೆಗೆ ಪಡೆದು ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿಯ ವಿವರಗಳನ್ನು ವೆಬ್‌ಸೈಟ್ ಮೂಲಕ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಿ ಅಥವಾ ವೆಬ್‌ಸೈಟ್ http://www.eproc.karnataka.gov.in ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಪ.ರಾ.ಇ.ವಿಭಾಗ, ಬೆಂ.ನ, ಬೆಂ
DIPR/DDU/Zen/RO-2488/2021-22

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

PUBLIC NOTICE

This is to inform public in general that Kotak Mahindra Bank Ltd has organized an auction in below mention respect of vehicles.

1. CB_SML S7 Bus
   YOM – 2029
   Reg No – KA51AD7430
   Minimum Reserve Price – 7,92,000/-
2. CB_VE_11_14_FULLY_BUILT
   YOM – 2019
   REG No – KA53D9643
   Minimum Reserve Price - 10,81,000/-
3. CB_VE_30_16_CAB_CHASSIS
   YOM – 2018
   REG No – KA51AC7864
   Minimum Reserve Price – 10,14,000/-
4. CB_HYDRAULIC_EXCAVATOR_EX_200
   YOM – 2017
   SI No – S20023702
   Minimum Reserve Price – 19,43,000/-
5. CB_PC300_Exc
   YOM – 2017
   SL No – N300369
   Minimum Reserve Price – 29,54,000/-

UNDER HYPOTHECATION WITH M/S KOTAK MAHINDRA BANK IS UNDER SALE IN ITS "AS IS WHERE IS CONDITION"

INTERESTED PARTIES CAN GIVE THEIR QUOTATIONS (ONLINE/ OFF LINE) WITHIN 15 DAYS FROM THIS PAPER PUBLICATION i.e. From 23.12.2021

(Please note that closing Auction date would not be a Weekly off / Holiday)

BRANCH ADDRESS:
KOTAK MAHINDRA BANK LTD.,
22, MG ROAD, BANGALORE
KARNATAKA – 560001
OR
Contact
Pradeep. S
Kotak Mahindra Bank Ltd.
Contact No / 080 - 61563913

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಕೇಂದ್ರ ಕಛೇರಿ, ಕಲಬುರಗಿ.
ಉಗ್ರಾಣ ಮತ್ತು ಖರೀದಿ ಇಲಾಖೆ ಸಾರಿಗೆ ಸದನ ಮುಖ್ಯ ರಸ್ತೆ ಕಲಬುರಗಿ–585102.

ಸಂಖ್ಯೆ : ಕಕರಸಾಸಂ/ಕೇಕ/ಉಖಿನಿ/470/2021–22 ದಿನಾಂಕ : 20–12–201

"ಇ"– ಹರಾಜು ಪ್ರಕಟಣೆ

ಕಕರಸಾ, ನಿಗಮದಲ್ಲಿ ಲಭ್ಯವಿರುವ ನಿರುಪಯುಕ್ತ ಸಾಮಗ್ರಿಗಳನ್ನು ಮತ್ತು ವಾಹನಗಳನ್ನು ಇ– ಹರಾಜು ಪ್ರಕ್ರಿಯೆಯ ಮೂಲಕ ಮೆ // ಮೆಟಲ್ ಸ್ಕ್ರ್ಯಾಪ್ ಟ್ರೇಡಿಂಗ್ ಕಾರ್ಪೋರೇಶನ್ ಬೆಂಗಳೂರ, (ಭಾರತ ಸರ್ಕಾರದ ಉದ್ಯಮ) ರವರ ಮುಖಾಂತರ ಮಾರಾಟ ಮಾಡಲಾಗುವುದು.

ಇ– ಹರಾಜು ಅನುಸೂಚಿ ಈ ಕೆಳಗಿನಂತಿರುತ್ತದೆ:
ನಿರುಪಯುಕ್ತ ಸಾಮಗ್ರಿಗಳು : 10.01.2022 ರಿಂದ 12.01.2022, ನಿರುಪಯುಕ್ತ ವಾಹನಗಳು : 13.01.2022

ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತಿಯುಳ್ಳವರು ಹೆಚ್ಚಿನ ವಿವರಗಳಿಗಾಗಿ ಮತ್ತು ನೊಂದಣಿಗಾಗಿ ವೆಬ್‌ಸೆಟ್: www.mstcecommerce.com ಗೆ ಸಂದರ್ಶಿಸಲು ಜೊತೆಗೆ ಮಾಹಿತಿ ಹಾಗೂ ಸ್ಪಷ್ಟೀಕರಣಕ್ಕಾಗಿ ಮೆ// ಎಂಎಸ್‌ಟಿಸಿ, ರವರ ಈ ಕೆಳಕಂಡ ವಿಳಾಸಕ್ಕೆ ಸಂಪರ್ಕಿಸಬಹುದಾಗಿದೆ.

ವಿಳಾಸ : ಮೆ // ಎಂಎಸ್‌ಟಿಸಿ ಲೀ., ಸಂ. 19/5, 19/6, 3ನೇ ಮಹಡಿ, ಕರೀಮ್ ಟಾವರ್, ಕನಿಂಗ್‌ಹ್ಯಾಮ್ ರೋಡ, ಬೆಂಗಳೂರು–560052. ದೂರವಾಣಿ ಸಂ. 080–22260054, 22266417, 22287356, ಫ್ಯಾಕ್ಸ್ ಸಂ. 080–22256365.

ಕಕರಸಾನಿಗಮಕ್ಕೆ ಸಂಪರ್ಕಿಸುವ ಮೊ. ಸಂ. 7760686172/7760992029.

ಸಹಿ/– ಉಗ್ರಾಣ ಮತ್ತು ಖರೀದಿ ನಿಯಂತ್ರಕರು
ವಾ.ಸಾ.ಸಂ.ಇ/ಕಲಬುರಗಿ/833/ಎಂ.ಸಿ.&ಎ/2021–22

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನೀಯರರವರ ಕಛೇರಿ
ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಯಾದಗಿರಿ

ಸಂಖ್ಯೆ:ಕಾಪಾಅ/ಗ್ರಾನೀಸಮತ್ತುನೈ/ವಿಯಾ/ಟೆ.ಪ್ರ/ಪಿ.ಬಿ/JJM/2021–22/1096 ದಿನಾಂಕ:21–12–2021

ಅಲ್ಪಾವಧಿ ಟೆಂಡರ ಪ್ರಕಟಣೆ (ದ್ವಿ ಲಕೋಟೆ) "ಇ–ಪ್ರೊಕ್ಯೂರ್‌ಮೆಂಟ್" ಮೂಲಕ

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನೀಯರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಯಾದಗಿರಿ ರವರಿಂದ ಕುಡಿಯುವ ನೀರು ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ ಅಹ್ವಾನಿಸಲಾಗಿದ್ದು ವಿವರ ಈ ಕೆಳಗಿನಂತಿದೆ.

1) ಕಾಮಗಾರಿಯ ವಿವರ: 1) THANGUNDA - Est Cost Rs.154.68 lakhs- Indent No.34684 & 2) HEDGIMADRA- Est Cost Rs.175.00 lakhs- Indent No.34690 in YADGIR TQ, 2) ಲೆಕ್ಕ ಶಿರ್ಷಿಕೆ: Jal Jeevan Mission-2021-22, 3) ಗುತ್ತಿಗೆದಾರರ, ಅರ್ಹತೆ : 3ನೇ ಹಾಗೂ ಮೇಲ್ಪಟ್ಟು ದರ್ಜೆ 4) ಟೆಂಡರ ಫಾರಂ ಪಡೆಯುವ ದಿನಾಂಕ: 22–12–2021 ರಿಂದ 30–12–2021. 5) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಂ.ಡಿ ಮೊತ್ತ : ಇ–ಪ್ರೊಕ್ಯೂರ್‌ಮೆಂಟ್ ಪ್ರಕಾರ. 6) ಟೆಂಡರ್ ಫಾರಂ ಸಲ್ಲಿಸುವ ಅಂತಿಮ ದಿನಾಂಕ: 30–12–2021 ಸಾಯಂಕಾಲ 4.30 ಗಂಟೆವರೆಗೆ. 7) ತಾಂತ್ರಿಕ ಬಿಡ್ಡ್ ತೆರೆಯುವ ದಿನಾಂಕ: 31–12–2021 ಸಾಯಂಕಾಲ 5.00 ಗಂಟೆಯ ನಂತರ. 8) ಆರ್ಥಿಕ ಬಿಡ್ಡುಗಳನ್ನು ತೆರೆಯುವ ದಿನಾಂಕ: 03–01–2022 ಬೆಳಿಗ್ಗೆ 11.00 ಗಂಟೆಯ ನಂತರ 9) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ರೈಲ್ವೇ ನಿಲ್ದಾಣದ ಹತ್ತಿರ ಯಾದಗಿರ. 10) ಅಂತರ್ಜಾಲ ತಾಣದ ವಿಳಾಸ: www.eproc.karnataka.gov.in.

ಸಹಿ/– ಕಾರ್ಯಪಾಲಕ ಇಂಜಿನೀಯರರು,
ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಯಾದಗಿರಿ.
ವಾ.ಸಾ.ಸಂ.ಇ/ಯಾದಗಿರಿ/288/ಎಂಸಿ&ಎ/2021–22

ಕರ್ನಾಟಕ ಸರ್ಕಾರ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ



ಶ್ರೀ ಬಸವರಾಜ ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

GECs - Innovation Destination for Generation NXT

ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು

ನಿಮ್ಮ ಕನಸಿನ ಭವಿಷ್ಯವನ್ನು ಕಟ್ಟಿಕೊಳ್ಳುವ ತಾಣ

ಉತ್ತಮ ತಾಂತ್ರಿಕ ಶಿಕ್ಷಣಕ್ಕಾಗಿ ಅತ್ಯುತ್ತಮ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು
ಭವಿಷ್ಯದ ತಂತ್ರಜ್ಞಾನದೊಂದಿಗೆ ವೃತ್ತಿ ರೂಪಿಸಿಕೊಳ್ಳಲು
CET ಮುಖಾಂತರ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಆಯ್ಕೆ ಮಾಡಿಕೊಳ್ಳಿ

ಸೂಪರ್ 30
ಎಲ್ಲಾ ಇಂಜಿನಿಯರಿಂಗ್ ಕಾಲೇಜುಗಳನ್ನು ಅತ್ಯುತ್ತಮ ಇಂಜಿನಿಯರಿಂಗ್ ಮತ್ತು ಸಂಶೋಧನಾ ಕೇಂದ್ರಗಳನ್ನಾಗಿ ಮೇಲ್ದರ್ಜೇಗೇರಿಸಲಾಗುತ್ತಿದೆ

ಸೌಲಭ್ಯಗಳು
ಅತ್ಯುತ್ತಮ ಹಾಗೂ ಆಧುನಿಕ ಪ್ರಯೋಗಾಲಯ ಸೌಲಭ್ಯಗಳು – ಕಾಲೇಜುಗಳಲ್ಲಿ ಮತ್ತು Industry Partner ಗಳ ಕೇಂದ್ರಸ್ಥಾನಗಳಲ್ಲಿ

ಜಾಗತಿಕ ಚಲನಶೀಲತೆ
ಅಂತಾರಾಷ್ಟ್ರೀಯ ಮಟ್ಟದ ಕೋರ್ಸುಗಳ ಉಪಯೋಗವನ್ನು ವಿದ್ಯಾರ್ಥಿಗಳು ಪಡೆಯಲು ಜಾಗತಿಕ ಸಂಸ್ಥೆಗಳೊಂದಿಗೆ (US,UK and Australia) ಒಡಂಬಡಿಕೆ

ಪ್ಲೇಸ್‌ಮೆಂಟ್ ಮತ್ತು ಇಂಟರ್ನ್‌ಶಿಪ್
ಹೆಸರಾಂತ ಕಂಪನಿಗಳಲ್ಲಿ Internships, Projects ಹಾಗೂ Industry Learning
ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮುಂಚೂಣಿ ಕಂಪನಿಗಳಲ್ಲಿ ಉದ್ಯೋಗಾವಕಾಶಗಳು

ಡಾ॥ ಸಿ.ಎನ್ ಅಶ್ವತ್ಥನಾರಾಯಣ
ಮಾನ್ಯ ಉನ್ನತ ಶಿಕ್ಷಣ, ಐ.ಟಿ.–ಬಿ.ಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು, ವಿದ್ಯಾರ್ಥಿಗಳೊಂದಿಗೆ ಸಂವಹನ ನಡೆಸುತ್ತಿರುವುದು.

ಡಿಜಿಟಲ್ ಕಲಿಕೆ
Internet ಮತ್ತು WiFi ಸೌಲಭ್ಯಗಳಿರುವ Smart Class Rooms
KARNATAKA LMS — ಯಾವುದೇ ಸಮಯದಲ್ಲಿ ಎಲ್ಲಿಂದಲಾದರೂ ಕಲಿಯಲು ಅತ್ಯುತ್ತಮ ಕಲಿಕಾ ಸಂಪನ್ಮೂಲಗಳು
ಪ್ರವೇಶ ಪಡೆದ ಎಲ್ಲಾ ವಿದ್ಯಾರ್ಥಿಗಳಿಗೂ ಉಚಿತ Tablet PCs

Internships and placements at
Infosys | Cognizant | BOSCH | LARSEN & TOUBRO | wipro | TCS TATA CONSULTANCY SERVICES | ORACLE | TOYOTA

"To protect and respect our varied culture and traditions" is the fundamental duty of every Citizen of our Country.
Wear Mask | Follow Physical Distance | Maintain Hand Hygiene | Covid-19 vaccination

ಶಾಸನ, ನೀತಿ ರಚನೆ ಚರ್ಚೆಯೇ ಆಗುತ್ತಿಲ್ಲ –ಜೆ.ಸಿ.ಮಾಧುಸ್ವಾಮಿ

ಹಾದಿ ತಪ್ಪಿದ ಕಲಾಪ: ಸದಸ್ಯರ ಕಳಕಳಿ

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣ ವಿಧಾನಸೌಧ): ವಿಧಾನಸಭೆಯ ಕಲಾಪದ ಚಟುವಟಿಕೆಗಳು ಹಾದಿ ತಪ್ಪುತ್ತಿರುವ ಬಗ್ಗೆ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಹಾಗೂ ಹಲವು ಸದಸ್ಯರು ಬುಧವಾರ ಕಳವಳ ವ್ಯಕ್ತಪಡಿಸಿದರು.

ಶೂನ್ಯವೇಳೆಯಲ್ಲಿ ಜೆಡಿಎಸ್‌ನ ಕೆ.ಎಂ.ಶಿವಲಿಂಗೇಗೌಡ ಅವರು ಕ್ಷೇತ್ರದ ವಿದ್ಯುತ್ ಬಿಲ್ ಸಮಸ್ಯೆ ಬಗ್ಗೆ ದೀರ್ಘವಾಗಿ ವಿಷಯ ಪ್ರಸ್ತಾಪಿಸಿದರು. ಇದಕ್ಕೆ ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ.ಮಾಧುಸ್ವಾಮಿ, 'ಶೂನ್ಯ ವೇಳೆಯಲ್ಲಿ ಈ ರೀತಿ ಸುದೀರ್ಘವಾಗಿ ಚರ್ಚಿಸುವುದು ಸರಿಯಲ್ಲ. ವಿಧಾನಸಭಾಧ್ಯಕ್ಷರು ಇದಕ್ಕೆಲ್ಲ ಅವಕಾಶ ಮಾಡಿಕೊಡಬಾರದು' ಎಂದು ಆಗ್ರಹಿಸಿದರು. 'ನಾನು ಅಸಹಾಯಕ' ಎಂದು ವಿಧಾನಸಭಾಧ್ಯಕ್ಷ ಕಾಗೇರಿ ಅಳಲು ತೋಡಿಕೊಂಡರು.

ಈ ವೇಳೆ ಕಾಂಗ್ರೆಸ್‌ನ ಕೆ.ಆರ್. ರಮೇಶ್ ಕುಮಾರ್, 'ಸಭಾಧ್ಯಕ್ಷರದ್ದು ಹೆಸರಿಗೆ ಮಾತ್ರ ಎತ್ತರದ ಪೀಠ. ಅತೀ ಹೆಚ್ಚು ಅಪವಾದ ಹಾಗೂ ಮಾನಸಿಕ ಹಿಂಸೆಗೆ ಗುರಿಯಾಗುವುದು ಈ ಪೀಠ. ಅವರ ನೆರವಿಗೆ ಯಾರೂ ಬರುವುದಿಲ್ಲ' ಎಂದರು.

'10 ದಿನಗಳ ಅಧಿವೇಶನದಲ್ಲಿ ಪ್ರಮುಖ ವಿಚಾರಗಳ ಬಗ್ಗೆಯೇ ಚರ್ಚೆ ಆಗುತ್ತಿಲ್ಲ. ಉತ್ತರ ಕರ್ನಾಟಕದ ಜ್ವಲಂತ ಸಮಸ್ಯೆಗಳ ಬಗ್ಗೆ ಗಂಭೀರ ಚರ್ಚೆಯೇ ಆಗಿಲ್ಲ. ಶೇ 40 ಕಮಿಷನ್ ಬಗ್ಗೆ ಪ್ರಸ್ತಾಪ ಮಾಡದಿದ್ದರೆ ವಿರೋಧ ಪಕ್ಷದವರಿಗೆ ಕಮಿಷನ್ ಸಿಕ್ಕಿದೆಯಾ ಎಂಬ ಮಾತು ಬರುತ್ತದೆ' ಎಂದರು.

ಜೆ.ಸಿ.ಮಾಧುಸ್ವಾಮಿ, 'ಪ್ರಶ್ನೋತ್ತರ ಅವಧಿಯಲ್ಲಿ ಪ್ರಸ್ತಾಪವಾದ ವಿಚಾರವೇ ಶೂನ್ಯ ವೇಳೆಯಲ್ಲಿ, ಗಮನ ಸೆಳೆಯುವ ಸೂಚನೆ ರೂಪದಲ್ಲೂ ಪ್ರಸ್ತಾಪ ಆಗುತ್ತಿದೆ. ಇದರಿಂದಾಗಿ, ಶಾಸನ ರಚನೆ, ನೀತಿ ನಿರೂಪಣೆ ಕೆಲಸಕ್ಕೆ ಸಮಯ ಕೊಡಲು ಆಗುತ್ತಿಲ್ಲ. ಪ್ರಮುಖ ವಿಚಾರಗಳ ಬಗ್ಗೆ ಚರ್ಚೆಯೇ ಆಗುತ್ತಿಲ್ಲ. ಹಾಗಿದ್ದರೆ ಈ ಮನೆ ಏಕೆ' ಎಂದು ಕಟುವಾಗಿ ಪ್ರಶ್ನಿಸಿದರು.

'ಮೌಲ್ಯಾಧಾರಿತ ಚರ್ಚೆಗೆ ನಮ್ಮ ಪಕ್ಷ ವಿರೋಧ ವ್ಯಕ್ತಪಡಿಸುತ್ತಿಲ್ಲ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಸಮಜಾಯಿಷಿ ನೀಡಿದರು.

'ಜೆಡಿಎಸ್ ಸದಸ್ಯರನ್ನು ಉದ್ದೇಶಿಸಿ ನಾವು ಮಾತನಾಡಿಲ್ಲ. ಮೂರು ದಿನಗಳಿಂದ ಕಲಾಪ ಹಾದಿ ತಪ್ಪುತ್ತಿರುವ ಬಗ್ಗೆ ಬೇಸರ ವ್ಯಕ್ತಪಡಿಸಿದೆವು' ಎಂದು ಮಾಧುಸ್ವಾಮಿ ಸ್ಪಷ್ಟಪಡಿಸಿದರು.

ಕಾಂಗ್ರೆಸ್‌ನ ಕೃಷ್ಣ ಬೈರೇಗೌಡ, 'ಕ್ಷೇತ್ರದ ನಾನಾ ಸಮಸ್ಯೆ ಹೇಳಿಕೊಳ್ಳಬಹುದು ಎಂದು ಶಾಸಕರು ಬರುತ್ತಾರೆ. ಚರ್ಚಿಸಲು ಅವಕಾಶ ಸಿಗದಿದ್ದರೆ ಯಾಕೆ ಬರಬೇಕು ಎಂಬ ಭಾವನೆ ಬರುತ್ತದೆ. ವರ್ಷಕ್ಕೆ ಕನಿಷ್ಠ 60 ದಿನ ಅಧಿವೇಶನ ನಡೆಸಬೇಕು. ಈಗ 30–35 ದಿನ ಮಾತ್ರ ನಡೆಯುತ್ತಿದೆ. ಅಧಿವೇಶನದ ಅವಧಿ ವಿಸ್ತರಿಸಿದರೆ ಎಲ್ಲ ವಿಷಯಗಳ ಚರ್ಚೆಗೆ ಅವಕಾಶ ಸಿಗುತ್ತದೆ. ಜಂಟಿ ಅಧಿವೇಶನವನ್ನು ಮೂರು ವಾರ ಹಾಗೂ ಬಜೆಟ್ ಅಧಿವೇಶನವನ್ನು ಒಂದು ತಿಂಗಳು ನಡೆಸಲು ತೀರ್ಮಾನ ಕೈಗೊಳ್ಳಿ' ಎಂದು ಸಲಹೆ ನೀಡಿದರು.

ಜೆಡಿಎಸ್‌ನ ಜಿ.ಟಿ.ದೇವೇಗೌಡ, 'ಶಾಸಕರ ಸಂಖ್ಯೆಯ ಆಧಾರದಲ್ಲಿ ಆಯಾ ಪಕ್ಷಗಳಿಗೆ ಸಮಯ ನಿಗದಿ ಮಾಡಿ' ಎಂದರು. ಕಾಂಗ್ರೆಸ್‌ನ ರಾಮಲಿಂಗಾ ರೆಡ್ಡಿ, 'ಲೋಕಸಭೆಯ ಮಾದರಿಯನ್ನೇ ಇಲ್ಲೂ ಅನುಸರಿಸಿ. ವಿರೋಧ ಪಕ್ಷದ ನಾಯಕರಿಗೆ ಬಿಟ್ಟು ಉಳಿದ ಸದಸ್ಯರಿಗೆ ಮೂರು ನಿಮಿಷಕ್ಕಿಂತ ಹೆಚ್ಚು ಮಾತನಾಡಲು ಅವಕಾಶ ನೀಡಬೇಡಿ' ಎಂದರು.

ಜೆಡಿಎಸ್‌ನ ಎ.ಟಿ.ರಾಮಸ್ವಾಮಿ, 'ಸದನ ರಾಜಕೀಯ ಮೇಲಾಟಕ್ಕೆ ಸಾಕ್ಷಿಯಾಗುತ್ತಿದೆ. ಅಭಿವೃದ್ಧಿ, ಆಡಳಿತ ವ್ಯವಸ್ಥೆ ಸುಧಾರಣೆ, ತೆರಿಗೆ ಸೋರಿಕೆ ಹಾಗೂ ಭ್ರಷ್ಟಾಚಾರ ವಿಷಯಗಳ ಬಗ್ಗೆ ಚರ್ಚೆ ಆಗುತ್ತಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

ಜಂಟಿ ಅಧಿವೇಶನ, ಸೇರಿ ಅಧಿವೇಶನದ ಅವಧಿ ಹೆಚ್ಚಿಸಲು ತೀರ್ಮಾನಿಸಲಾಗುವುದು. ಇದರಿಂದ ಅರ್ಥ ಪೂರ್ಣ ಚರ್ಚೆಗೆ ಹೆಚ್ಚಿನ ಸಮಯ ಸಿಗಲಿದೆ.
ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ಕಲಾಪ: ಕಾಗೇರಿಗೆ ಬಿಎಸ್‌ವೈ ಪಾಠ

ವಿಶ್ವೇಶ್ವರ ಹೆಗಡೆ ಕಾಗೇರಿ


ಯಡಿಯೂರಪ್ಪ

'ಒಂದು ವಾರದಿಂದ ಕಲಾಪ ದಿಕ್ಕು ತಪ್ಪಿದೆ. ಸದಸ್ಯರು ಮನಸ್ಸಿಗೆ ಬಂದಂತೆ ವರ್ತಿಸಿದಾಗ ಸಭಾಧ್ಯಕ್ಷರು ಬಿಗಿ ನಿಲುವು ತೆಗೆದುಕೊಳ್ಳಬೇಕಿತ್ತು. ಆ ಕೆಲಸ ಆಗಿಲ್ಲ. ಯಾವ ವಿಷಯದ ಬಗ್ಗೆ ಚರ್ಚೆ ನಡೆಸಬೇಕು ಎಂಬ ಬಗ್ಗೆ ಸಭಾಧ್ಯಕ್ಷರು,ಸಂಸದೀಯ ವ್ಯವಹಾರಗಳ ಸಚಿವರು ನಿರ್ಧರಿಸಬೇಕು. ಈ ವಿಷಯದಲ್ಲಿ ಇಬ್ಬರೂ ವಿಫಲರಾಗಿದ್ದೀರಿ' ಎಂದು ಬಿಜೆಪಿಯ ಬಿ.ಎಸ್.ಯಡಿಯೂರಪ್ಪ ಹೇಳಿದರು.

'ಈ ವಿಷಯದಲ್ಲಿ ನನ್ನನ್ನು ಮಾತ್ರ ಜವಾಬ್ದಾರಿ ಮಾಡುವುದು ಸರಿಯಲ್ಲ. ನನ್ನ ಸೂಚನೆಯನ್ನು ಮೀರಿ ಸದಸ್ಯರು ನಡೆದುಕೊಂಡ ಸಂದರ್ಭದಲ್ಲಿ ಸಚಿವರು, ವಿರೋಧ ಪಕ್ಷದ ನಾಯಕರು ಹಾಗೂ ಇತರ ಶಾಸಕರು ಎಚ್ಚರಿಕೆ ನೀಡುವ ಕೆಲಸ ಮಾಡಬೇಕಿತ್ತು' ಎಂದು ಕಾಗೇರಿ ಹೇಳಿದರು.

'ಬೆಳಗಾವಿ ಅಧಿವೇಶನ; ಫಲಶ್ರುತಿ ಇಲ್ಲ'

ಚನ್ನಮ್ಮನ ಕಿತ್ತೂರು (ಬೆಳಗಾವಿ ಜಿಲ್ಲೆ): 'ಬೆಳಗಾವಿಯಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿವೇಶನದಲ್ಲಿ ಕೇವಲ ಚರ್ಚೆಯಾಗುತ್ತಿದೆ. ಆದರೆ ಫಲಿತಾಂಶ ಬರುತ್ತಿಲ್ಲ' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಅಸಮಾಧಾನ ವ್ಯಕ್ತಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ವಿರೋಧ ಪಕ್ಷವಾಗಿ ಕಾಂಗ್ರೆಸ್ ತನ್ನ ಕೆಲಸ ಮಾಡಿದೆ. ನಮ್ಮ ಸಲಹೆಗೆ 'ನೋಡುತ್ತೇವೆ, ಮಾಡುತ್ತೇವೆ' ಎಂದು ಸರ್ಕಾರ ಹೇಳುತ್ತದೆ. ಹೀಗಾಗಿ, ಬೆಳಗಾವಿ ಅಧಿವೇಶನ ವಿಫಲ ಎನ್ನಬೇಕು' ಎಂದರು. 'ಕಿತ್ತೂರು ಕರ್ನಾಟಕ ವಿಷಯದಲ್ಲೂ ಹಾಗೇ ಆಗಿದೆ. ಘೋಷಣೆ ಮಾಡಿದರು, ದುಡ್ಡು ಕೊಡಬೇಕಲ್ಲ' ಎಂದು ಪ್ರಶ್ನಿಸಿದರು.

'ಎಂಇಎಸ್ ಕುರಿತು ಹೇಳುವುದೇನಿದೆ ? ಗಲಾಟೆ ಮಾಡಿದವರನ್ನು ಹಿಡಿದು ಒಳಗೆ ಹಾಕಬೇಕು' ಎಂದು ಹೇಳಿದರು.

ಸುದ್ದಿ 2 ನಿಮಿಷ

'ಸಿ ದರ್ಜೆ ದೇವಸ್ಥಾನಗಳ ಅಭಿವೃದ್ಧಿಗೆ ಅಭಿಯಾನ'

ಬೆಳಗಾವಿ: ರಾಜ್ಯದಲ್ಲಿರುವ 34,219 'ಸಿ' ದರ್ಜೆಯ ದೇವಾಲಯಗಳನ್ನು ಭಕ್ತರ ಸಹಕಾರದಲ್ಲಿ ಅಭಿವೃದ್ಧಿಪಡಿಸಲು ವಿಶೇಷ ಅಭಿಯಾನ ರೂಪಿಸಲಾಗುವುದು ಎಂದು ಮುಜರಾಯಿ ಸಚಿವೆ ಶಶಿಕಲಾ ಜೊಲ್ಲೆ ಭರವಸೆ ನೀಡಿದರು.

ವಿಧಾನ ಪರಿಷತ್‌ನಲ್ಲಿ ಬುಧವಾರ ಬಿಜೆಪಿಯ ಡಾ.ತೇಜಸ್ವಿನಿ ಗೌಡ ಪ್ರಶ್ನೆಗೆ ಅವರು, 'ರಾಜ್ಯದಲ್ಲಿ 'ಎ' ದರ್ಜೆಯ 205, 'ಬಿ' ದರ್ಜೆಯ 139 ಮತ್ತು 'ಸಿ' ದರ್ಜೆಯ 34,219 ದೇವಸ್ಥಾನಗಳಿವೆ. 'ಸಿ' ದರ್ಜೆಯ ದೇವಸ್ಥಾನಗಳಿಗೆ ಹೆಚ್ಚು ಆದಾಯವಿಲ್ಲ. ಆದ್ದರಿಂದ ವಾರ್ಷಿಕ ₹ 48,000 ತಸ್ತೀಕ್ ಅನುದಾನ ನೀಡಲಾಗುತ್ತಿದೆ' ಎಂದರು.

'ಎ' ಮತ್ತು 'ಬಿ' ದರ್ಜೆಯ ದೇವಸ್ಥಾನಗಳಿಗೆ ಸಾಕಷ್ಟು ವರಮಾನವಿದೆ. ದೇವಸ್ಥಾನಗಳ ಅಭಿವೃದ್ಧಿಗೆ ಸಾಮಾನ್ಯ ಸಂಗ್ರಹಣ ನಿಧಿಯಿಂದ ಅನುದಾನ ನೀಡಲಾಗುತ್ತಿದೆ. ಆರ್ಥಿಕ ಸಮಸ್ಯೆ ಎದುರಿಸುತ್ತಿರುವ 'ಸಿ' ದರ್ಜೆಯ ದೇವಸ್ಥಾನಗಳನ್ನು ಭಕ್ತರ ಸಹಕಾರ ಪಡೆದು ಅಭಿವೃದ್ಧಿಪಡಿಸಲಾಗುವುದು. ಅದಕ್ಕಾಗಿಯೇ ವಿಶೇಷ ಯೋಜನೆ ರೂಪಿಸಲಾಗುವುದು ಎಂದು ಹೇಳಿದರು.

'ಅರ್ಚಕರಿಗೆ ನೀಡುತ್ತಿರುವ ತಸ್ತೀಕ್ ಮೊತ್ತ ಹೆಚ್ಚಿಸಲು ಆರ್ಥಿಕ ಇಲಾಖೆಗೆ ಪ್ರಸ್ತಾವ ಸಲ್ಲಿಸಲಾಗುವುದು' ಎಂದು ತಿಳಿಸಿದರು.

ಕಾಶಿಯಾತ್ರೆಗೆ ಸಹಾಯಧನ: 'ಕಾಶಿ ಯಾತ್ರೆ ಕೈಗೊಳ್ಳುವ ರಾಜ್ಯದ ಜನರಿಗೆ ಸಹಾಯಧನ ನೀಡಲು ವಿಶೇಷ ಯೋಜನೆ ಜಾರಿಗೊಳಿಸಲು ಪ್ರಯತ್ನಿಸುತ್ತೇನೆ' ಎಂದು ಅವರು ಭರವಸೆ ನೀಡಿದರು.

ಎಂಟು ಮಸೂದೆಗಳಿಗೆ ಮೇಲ್ಮನೆ ಅಸ್ತು

ಬೆಳಗಾವಿ (ಸುವರ್ಣ ವಿಧಾನಸೌಧ): ವಿಧಾನಸಭೆಯಲ್ಲಿ ಅಂಗೀಕೃತವಾಗಿದ್ದ ಎಂಟು ಮಸೂದೆಗಳಿಗೆ ವಿಧಾನ ಪರಿಷತ್ ಬುಧವಾರ ಅಂಗೀಕಾರ ನೀಡಿತು.

ಕರ್ನಾಟಕ ನಗರ ಪಾಲಿಕೆಗಳ ಮತ್ತು ಕೆಲವು ಇತರ ಕಾನೂನು (ಎರಡನೇ ತಿದ್ದುಪಡಿ) ಮಸೂದೆ–2021, ಕರ್ನಾಟಕ ಭೂ ಕಂದಾಯ ತಿದ್ದುಪಡಿ ವಿಧೇಯಕ–2021, ಕರ್ನಾಟಕ ಕೆಲವು ಇನಾಮುಗಳ ರದ್ದಿಯಾತಿ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಮಸೂದೆ–2021, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ (ತಿದ್ದುಪಡಿ) ಮಸೂದೆ–2021, ಕರ್ನಾಟಕ ನಗರ ಪಾಲಿಕೆಗಳ ಮತ್ತು ಇತರ ಕೆಲವು ಕಾನೂನುಗಳ (ತಿದ್ದುಪಡಿ) ವಿಧೇಯಕ–2021, ಕರ್ನಾಟಕ ರಾಜ್ಯ ಆಯುಷ್ ಮಸೂದೆ–2021, ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ಎರಡನೇ ತಿದ್ದುಪಡಿ) ಮಸೂದೆ–2021 ಮತ್ತು ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯ ಮಸೂದೆ–2021ಕ್ಕೆ ವಿಧಾನ ಪರಿಷತ್ ಒಪ್ಪಿಗೆ ನೀಡಿತು.

ಹೊಸದಾಗಿ ಆಯುಷ್ ವಿಶ್ವವಿದ್ಯಾಲಯ ಸ್ಥಾಪಿಸಲು ಅವಕಾಶ ಕಲ್ಪಿಸುವ ಮಸೂದೆಯನ್ನು ಜೆಡಿಎಸ್‌ನ ಮರಿತಿಬ್ಬೇಗೌಡ ಸೇರಿದಂತೆ ಕೆಲವರು ವಿರೋಧಿಸಿದರು. ಕರ್ನಾಟಕ ನಗರ ಪಾಲಿಕೆಗಳು ಮತ್ತು ಇತರ ಕೆಲವು ಕಾನೂನುಗಳ ತಿದ್ದುಪಡಿ ಮಸೂದೆಯನ್ನು ವಿರೋಧಿಸಿ ಕಾಂಗ್ರೆಸ್ ಸದಸ್ಯರು ಸಭಾತ್ಯಾಗ ನಡೆಸಿದರು.

ವಿಧಾನಪರಿಷತ್ತಿನ ಬುಧವಾರದ ಕಲಾಪದಲ್ಲಿ ಕಂದಾಯ ಸಚಿವ ಆರ್‌. ಅಶೋಕ ಮಾತನಾಡಿದರು. ಮೊದಲ ಸಾಲಿನಲ್ಲಿ(ಎಡಭಾಗ) ಸಚಿವರಾದ ಬಿ.ಸಿ. ನಾಗೇಶ್, ಶಿವರಾಂ ಹೆಬ್ಬಾರ್, ವಿ.ಸೋಮಣ್ಣ, ಸಭಾನಾಯಕ ಕೋಟ ಶ್ರೀನಿವಾಸ ಪೂಜಾರಿ ಇದ್ದರು. ಸಭಾಪತಿ ಬಸವರಾಜ ಹೊರಟ್ಟಿ ಪೀಠದಲ್ಲಿದ್ದರು –ಪ್ರಜಾವಾಣಿ ಚಿತ್ರ

'ಕೃಷ್ಣಾ: ಅಧಿಸೂಚನೆ ಶೀಘ್ರವೇ ಪ್ರಕಟ'

ಪ್ರಜಾವಾಣಿ ವಾರ್ತೆ

ಬೆಳಗಾವಿ: ಕೃಷ್ಣಾ ಮೇಲ್ದಂಡೆ ಮೂರನೇ ಹಂತಕ್ಕೆ ಸಂಬಂಧಿಸಿದಂತೆ ನ್ಯಾಯಮಂಡಳಿಯ ಅಂತಿಮ ತೀರ್ಪಿನ ಅಧಿಸೂಚನೆ ಆದಷ್ಟು ಶೀಘ್ರ ಪ್ರಕಟವಾಗಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಶ್ವಾಸ ವ್ಯಕ್ತಪಡಿಸಿದರು.

ವಿಧಾನಸಭೆಯಲ್ಲಿ ಬುಧವಾರ ಉತ್ತರ ಕರ್ನಾಟಕದ ನೀರಾವರಿ ಯೋಜನೆಗಳ ಕುರಿತ ಚರ್ಚೆಯಲ್ಲಿ ಮಧ್ಯ ಪ್ರವೇಶಿಸಿ ಮಾತನಾಡಿದ ಅವರು, ಸುಪ್ರೀಂಕೋರ್ಟ್‌ನಲ್ಲಿ ಕೃಷ್ಣಾ ನದಿ ನೀರಿನ ತಕರಾರು ಕುರಿತು ವಿಚಾರಣೆ ನಡೆಯುತ್ತಿದ್ದು, ಮುಂದಿನ ವಿಚಾರಣೆ ಜನವರಿ 10 ಕ್ಕೆ ನಿಗದಿಯಾಗಿದೆ ಎಂದು ಅವರು ತಿಳಿಸಿದರು.

ವಿಧಾನಸಭೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾತನಾಡಿದರು

ಅಧಿಸೂಚನೆಯನ್ನು ಪ್ರಕಟಿಸುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಲು ಕೋರಿ ಕರ್ನಾಟಕ ಮತ್ತು ಮಹಾರಾಷ್ಟ್ರ ಸುಪ್ರೀಂಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿವೆ. ಸ್ಪಷ್ಟನೆ ನೀಡಲು ಸುಪ್ರೀಂಕೋರ್ಟ್, ಕೇಂದ್ರ ಸರ್ಕಾರಕ್ಕೂ ಸೂಚಿಸಿದೆ ಎಂದರು.

ಸುಪ್ರೀಂಕೋರ್ಟ್‌ನಲ್ಲಿ ಸಲ್ಲಿಸಿದ್ದ ಮೇಲ್ಮನವಿಯನ್ನು ತೆಲಂಗಾಣ ಹಿಂದಕ್ಕೆ ಪಡೆದಿದೆ. ಇದರಿಂದ ರಾಜ್ಯದ ಹಾದಿ ಸುಗಮವಾಗಿದೆ. ಕೇಂದ್ರವು ಆದಷ್ಟು ಬೇಗ ಸುಪ್ರೀಂಕೋರ್ಟ್‌ನಲ್ಲಿ ತನ್ನ ನಿಲುವು ಪ್ರಕಟಿಸಲಿದೆ ಎಂದೂ ಹೇಳಿದರು.

ಕಳಸಾ ಮತ್ತು ಬಂಡೂರಿ ಕುಡಿಯುವ ನೀರು ಪೂರೈಕೆ ಯೋಜನೆಗೆ 7.50 ಟಿಎಂಸಿ ಅಡಿ ನೀರಿನ ಅಗತ್ಯವಿದ್ದು, ಸದ್ಯಕ್ಕೆ 3.90 ಟಿಎಂಸಿ ಅಡಿ ನೀರು ಹಂಚಿಕೆಯಾಗಿದೆ. ಸುಪ್ರೀಂಕೋರ್ಟ್‌ನಲ್ಲಿ ಈ ಕುರಿತು ವ್ಯಾಜ್ಯ ಇದ್ದರೂ ಕುಡಿಯುವ ನೀರಿನ ಯೋಜನೆ ಅನುಷ್ಠಾನಕ್ಕೆ ಒಪ್ಪಿಗೆ ನೀಡಿದೆ. ಆದರೆ, 3.90 ಟಿಎಂಸಿ ಅಡಿ ಅಥವಾ 7.50 ಟಿಎಂಸಿ ಅಡಿ ನೀರಿನ ಬಳಕೆಗೆ ಯೋಜನೆ (ಡಿಪಿಎಆರ್) ರೂಪಿಸಬೇಕೋ ಎಂಬ ಗೊಂದಲ ನಿವಾರಿಸಿಕೊಳ್ಳಲು ಸ್ವಲ್ಪ ಕಾಲಾವಕಾಶ ಬೇಕಾಯಿತು. ಈಗ ಆ ಗೊಂದಲ ನಿವಾರಣೆಯಾಗಿದ್ದು, ಪರಿಷ್ಕೃತ ವಿಸ್ತೃತ ಯೋಜನಾ ವರದಿ ತಯಾರಿಸಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಪರಿಸರ ಇಲಾಖೆಯ ಒಪ್ಪಿಗೆ ಸಿಗುವ ನಿರೀಕ್ಷೆಯಲ್ಲಿದ್ದೇವೆ ಎಂದು ಬೊಮ್ಮಾಯಿ ಹೇಳಿದರು.

14.27 ಲಕ್ಷ ಎಕರೆ ಸರ್ಕಾರಿ ಜಮೀನು ಒತ್ತುವರಿ

ಒಂದನೇ ಪುಟದಿಂದ...

ಹರಿಪ್ರಸಾದ್ ಮಾತನಾಡಿ, 'ಕೆಲವು ಬಲಾಢ್ಯರು ನಗರ ಪ್ರದೇಶಗಳಲ್ಲಿನ ಸರ್ಕಾರಿ ಜಮೀನುಗಳನ್ನು ನಕಲಿ ದಾಖಲೆ ಸೃಷ್ಟಿಸಿ ಕಬಳಿಸುತ್ತಿದ್ದಾರೆ. ಇದಕ್ಕೆ ತಡೆ ಹಾಕಬೇಕು. ಬೆಂಗಳೂರಿನಲ್ಲಿ ಕೊಳೆಗೇರಿ ಪ್ರದೇಶದ ಜನರಿಗೆ ವಸತಿ ಸೌಕರ್ಯ ಕಲ್ಪಿಸಲು ಸರ್ಕಾರಿ ಜಮೀನು ಮೀಸಲಿಡಬೇಕು. ಕಾನೂನು ಮೀರಿ ಕೆಲವು ಸಂಘ ಸಂಸ್ಥೆಗಳಿಗೆ ಸರ್ಕಾರಿ ಜಮೀನುಗಳನ್ನು ಗುತ್ತಿಗೆಗೆ ನೀಡಲಾಗಿದೆ. ಅವುಗಳನ್ನು ವಾಪಸ್ ಪಡೆಯಬೇಕು' ಎಂದು ಆಗ್ರಹಿಸಿದರು.

ಬೆಂಗಳೂರಿನಲ್ಲಿ ಕೊಳೆಗೇರಿ ಜನರು ಮತ್ತು ಬಡವರಿಗೆ ವಸತಿಗಾಗಿ ಸರ್ಕಾರಿ ಜಮೀನು ಮೀಸಲಿಡುವುದಾಗಿ ಮತ್ತು ಸಂಘ ಸಂಸ್ಥೆಗಳಿಗೆ ಗುತ್ತಿಗೆಗೆ ನೀಡಿರುವ ಜಮೀನುಗಳನ್ನು ಮಾರ್ಗಸೂಚಿ ದರದ ಆಧಾರದಲ್ಲಿ ಶುದ್ಧ ಕ್ರಯಕ್ಕೆ ನೀಡುವುದಾಗಿ ಸಚಿವರು ಉತ್ತರಿಸಿದರು.

ಸೆಲ್ಫಿ ಸಮಯ ಬೆಳಗಾವಿಯಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿವೇಶನದಲ್ಲಿ ಸುವರ್ಣಸೌಧದ ಮುಂಭಾಗ ಬುಧವಾರ ಕೊಡವ ಸಮಾಜದ ಜನ ಸೆಲ್ಫಿ ತೆಗೆದುಕೊಳ್ಳುತ್ತಿರುವ ದೃಶ್ಯ ಗಮನ ಸೆಳೆಯಿತು -ಪ್ರಜಾವಾಣಿ ಚಿತ್ರ/ ರಂಜು ಪಿ

'ಗರ್ಭಗುಡಿಯ ಒತ್ತಡದಿಂದ ಮತಾಂತರ ನಿಷೇಧ'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ರಿಮೋಟ್ ಕಂಟ್ರೋಲ್‌ನಂತೆ ಬಿಜೆಪಿಯನ್ನು ನಿಯಂತ್ರಿಸುವ ಗರ್ಭಗುಡಿಯ ಸಂಘಟನೆಗಳ ಒತ್ತಡದಿಂದ ರಾಜ್ಯ ಸರ್ಕಾರ ಮತಾಂತರ ನಿಷೇಧ ಮಸೂದೆ ಮಂಡಿಸಿದೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಆರೋಪಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಈ ಮಸೂದೆಯನ್ನು ಬಿಜೆಪಿ ಮೇಲೆ ಹಿಡಿತವುಳ್ಳ ಸಂಘಟನೆಗಳ ನಾಯಕರನ್ನು ಖುಷಿಪಡಿಸಲು ತರಲಾಗಿದೆ. ಇದರಲ್ಲಿ ಜನರ ಹಿತ ರಕ್ಷಿಸುವ ಉದ್ದೇಶವೂ ಇಲ್ಲ' ಎಂದರು.

'ತರಾತುರಿಯಲ್ಲಿ ಏಕೆ ಮಂಡಿಸಿದ್ದಾರೆ? ಜನವರಿಯಲ್ಲಿ ನಡೆಯುವ ಅಧಿವೇಶನದಲ್ಲಿ ಮಂಡಿಸಲು ಅವಕಾಶವಿತ್ತು. ಮತಾಂತರ ನಿಷೇಧ ಮಸೂದೆಯನ್ನು ಜೆಡಿಎಸ್ ವಿರೋಧಿಸಲಿದೆ. ಇದರಲ್ಲಿ ಯಾವುದೇ ರಾಜಿ ಇಲ್ಲ' ಎಂದರು.

ಈ ಹಿಂದೆ ಬಿಜೆಪಿ ಸರ್ಕಾರ ಗೋಹತ್ಯೆ ನಿಷೇಧ ಕಾಯ್ದೆ ಜಾರಿಗೊಳಿಸಿತು. ಅದರಿಂದ ಜನರಿಗೆ ಏನು ಅನುಕೂಲವಾಗಿದೆ? ಗೋಶಾಲೆಗಳನ್ನು ಎಲ್ಲಿ ತೆರೆದಿದ್ದಾರೆ? ಗೋವುಗಳನ್ನು ಸಾಕುವ ರೈತರ ಬದುಕು ಏನಾಗಿದೆ? ಗೋರಕ್ಷಣೆಯ ಹೆಸರಿನಲ್ಲಿ ರೈತರನ್ನು ಸಂಕಷ್ಟಕ್ಕೆ ಸಿಲುಕಿಸಿದ್ದಾರೆ ಎಂದು ದೂರಿದರು.

'ಸಿದ್ದರಾಮಯ್ಯ ಗೊಬೆಲ್ ಇದ್ದಂತೆ'

'ಹಿಟ್ಲರ್ ಆಸ್ಥಾನದಲ್ಲಿ ಸುಳ್ಳು ಹೇಳುವುದನ್ನೇ ಕಾಯಕ ಮಾಡಿಕೊಂಡಿದ್ದ ಗೊಬೆಲ್‌ನಂತೆಯೇ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಸುಳ್ಳು ಹೇಳುತ್ತಿದ್ದಾರೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಟೀಕಿಸಿದ್ದಾರೆ.

ಸರಣಿ ಟ್ವೀಟ್ ಮಾಡಿರುವ ಅವರು, 'ಜೆಡಿಎಸ್ ಜಟ್ಟಿಗಳನ್ನು ಸೃಷ್ಟಿಸುವ ಪಕ್ಷ. ಜಟ್ಟಿಗಳನ್ನು ಎಗರಿಸಿಕೊಂಡು ಹೋಗುವ 'ಬ್ರೋಕರಪ್ಪ'ನ ಕುತಂತ್ರಕ್ಕೆ ಹೆದರುವ ಪ್ರಶ್ನೆಯೇ ಇಲ್ಲ. ಹಿಂದೆ ದೇವರಾಜ ಅರಸು ಅವರಿಗೆ ನರಕಯಾತನೆ ನೀಡಿದ್ದ ಕಾಂಗ್ರೆಸ್, ಈಗ 'ಅಭಿನವ ಅರಸು' ಎಂಬ ಪುಂಗಿ ಬಿಡುವ 'ಸುಳ್ಳು ಸಿದ್ದಪ್ಪ'ನಿಗೆ ಶರಣಾಗಿದೆ' ಎಂದು ಹೇಳಿದರು.

ಜೆಡಿಎಸ್ ಮುಳುಗುವ ಪಕ್ಷವಾ? ತೇಲುವ ಪಕ್ಷವಾ? ಎಂಬುದನ್ನು 2023ರ ವಿಧಾನಸಭೆ ಚುನಾವಣೆಯಲ್ಲಿ ಜನರೇ ತೋರಿಸುತ್ತಾರೆ. ಅಲ್ಲಿಯವರೆಗೆ ಸಿದ್ಧಸೂತ್ರಧಾರನ 'ಆಪರೇಷನ್ ಹಸ್ತವೆಂಬ ಅಸಹ್ಯ' ನಡೆಯಲಿ. ಜೆಡಿಎಸ್ ಜಗ್ಗುವುದಿಲ್ಲ ಎಂದು ಹೇಳಿದ್ದಾರೆ.

ನಾಯಕತ್ವ ಬದಲಾವಣೆ ಬಗ್ಗೆ ಪ್ರಲ್ಹಾದ ಜೋಶಿ ಸ್ಪಷ್ಟನೆ

₹3 ಲಕ್ಷದ ಸೂಟು ಹೊಲಿಸಿದರೆ ಮುಖ್ಯಮಂತ್ರಿ ಆಗುವುದಿಲ್ಲ; ಯತ್ನಾಳ ವಾಗ್ದಾಳಿ

'ಬಸವರಾಜ ಬೊಮ್ಮಾಯಿಯೇ ಚುನಾವಣೆವರೆಗೂ ಮುಖ್ಯಮಂತ್ರಿ'

ನವದೆಹಲಿ/ ಬೆಳಗಾವಿ: '2023ರ ವಿಧಾನಸಭಾ ಚುನಾವಣೆಯವರೆಗೂ ಬಸವರಾಜ ಬೊಮ್ಮಾಯಿ ಅವರೇ ಮುಖ್ಯಮಂತ್ರಿಯಾಗಿ ಮುಂದುವರಿಯಲಿದ್ದಾರೆ' ಎಂದು ಕೇಂದ್ರ ಗಣಿ ಮತ್ತು ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಹೇಳಿದ್ದಾರೆ.

ದೆಹಲಿಯಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಬಗ್ಗೆ ವರಿಷ್ಠರ ಮಟ್ಟದಲ್ಲಿ ನಡೆದಿಲ್ಲ. ಅಂತಹ ಪ್ರಸ್ತಾಪವೂ ಇಲ್ಲ ಎಂದು ತಿಳಿಸಿದರು.

'ತಾವು ಎಷ್ಟು ದಿನ ಮುಖ್ಯಮಂತ್ರಿ ಆಗಿರುತ್ತೇನೋ ಎಂಬುದಾಗಿ ಭಾವನಾತ್ಮಕ ಹೇಳಿದ್ದಾರೆ. ಆ ರೀತಿ ತತ್ವಜ್ಞಾನಿಯಂತೆ ಹಲವು ಬಾರಿ ಮಾತನಾಡಿದ್ದನ್ನು ಕೇಳಿದ್ದೇನೆ. ಇದಕ್ಕೆ ವಿಶೇಷ ಅರ್ಥ ಕಲ್ಪಿಸಬೇಕಾಗಿಲ್ಲ. ಅವರು ವಿದೇಶಕ್ಕೆ ಹೋಗುವ ಮಾಹಿತಿಯೂ ಇಲ್ಲ' ಎಂದರು.

₹ 3 ಲಕ್ಷದ ಸೂಟು ಹೊಲಿಸಿದರೆ ಸಿಎಂ ಆಗುವುದಿಲ್ಲ: 'ನಾಯಕತ್ವ ಬದಲಾವಣೆಯಾಗದು. ಒಬ್ಬರು ಮುಖ್ಯಮಂತ್ರಿ ಆಗುತ್ತೇನೆ ಎಂದು ಮೂರು ಲಕ್ಷದ ಸೂಟ್ ಹೊಲಿಸಿಕೊಂಡು ಓಡಾಡುತ್ತಿದ್ದಾರೆ. ಅವರ ಆಸೆ ಈಡೇರುವುದಿಲ್ಲ' ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದ್ದಾರೆ.

ಸುವರ್ಣ ವಿಧಾನಸೌಧದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ಮುಖ್ಯಮಂತ್ರಿ ಬದಲಾಗುತ್ತಾರೆ ಎಂಬ ಸಚಿವ ಕೆ.ಎಸ್.ಈಶ್ವರಪ್ಪ ಅವರ ಭವಿಷ್ಯ ಸುಳ್ಳಾಗಲಿದೆ ಎಂದರು.

ಭ್ರಷ್ಟರು, ಸುಳ್ಳು ಹೇಳುವವರು ಮತ್ತು ಶಾಸಕರಿಗೆ ಆಮಿಷವೊಡ್ಡುವವರನ್ನು ಮುಖ್ಯಮಂತ್ರಿ ಮಾಡಿದರೆ ರಾಜ್ಯದ ಸ್ಥಿತಿ ಏನಾಗಬೇಕು. ಸಚ್ಚಾರಿತ್ರ್ಯವುಳ್ಳವರು ಮುಖ್ಯಮಂತ್ರಿ ಆದರೆ, ರಾಜ್ಯಕ್ಕೂ ಪಕ್ಷಕ್ಕೂ ಹೆಸರು ಬರುತ್ತದೆ' ಎಂದರು.

ಬೊಮ್ಮಾಯಿ ಕೇಂದ್ರ ಸಚಿವ ರಾಗುತ್ತಾರೆ ಎಂದು ಒಬ್ಬರು ಹೇಳಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರು ಅವರಿಗೇನು ಪವರ್ ಆಫ್ ಅಟಾರ್ನಿ ಬರೆದುಕೊಟ್ಟಿದ್ದಾರೆಯೇ ಎಂದು ಪ್ರಶ್ನಿಸಿದರು.

'ಹೇಳಿದ್ದು ₹50 ಸಾವಿರ ಕೋಟಿ ಕೊಟ್ಟಿದ್ದು ₹8 ಸಾವಿರ ಕೋಟಿ'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಕಾಂಗ್ರೆಸ್ ನಡಿಗೆ ಕೃಷ್ಣೆಯ ಕಡೆಗೆ' ಎಂದು ಪಾದಯಾತ್ರೆ ಮಾಡಿ ಪ್ರತಿ ವರ್ಷ ₹10 ಸಾವಿರ ಕೋಟಿ ನೀಡುವುದಾಗಿ ಹೇಳಿದ್ದ ಕಾಂಗ್ರೆಸ್ ಸರ್ಕಾರ, ಐದು ವರ್ಷಗಳಲ್ಲಿ ₹8,076 ಕೋಟಿ ಕೊಟ್ಟರು. ಈಗ ಚುನಾವಣೆಗಾಗಿ 'ಮೇಕೆದಾಟು ಪಾದಯಾತ್ರೆ' ಆರಂಭಿಸಿದ್ದಾರೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ವಿಧಾನಸಭೆಯಲ್ಲಿ ಹರಿಹಾಯ್ದರು.

ಅವರು, ನಿಯಮ 69 ರಡಿ (ರಾಜ್ಯದಲ್ಲಿ ನನೆಗುದಿಗೆ ಬಿದ್ದಿರುವ ಕೃಷ್ಣಾ ಮೇಲ್ದಂಡೆ, ಮಹದಾಯಿ ತಿರುವು, ಕಾರಂಜಾ ಯೋಜನೆ, ಸಿಂಗಟಾಲೂರು ಏತ ನೀರಾವರಿ ಯೋಜನೆಗಳ ಅನುಷ್ಠಾನ) ಚರ್ಚೆಯಲ್ಲಿ ಮಾತನಾಡಿದರು.

ಕೃಷ್ಣಾ ಮೇಲ್ದಂಡೆಯ ಮೂರನೇ ಹಂತದ ಯೋಜನೆಗೆ ಈವರೆಗೆ ಎಲ್ಲ ಸರ್ಕಾರಗಳು ಸೇರಿ ₹13,320 ಕೋಟಿ ಮಾತ್ರ ಖರ್ಚು ಮಾಡಿವೆ. 1.34 ಲಕ್ಷ ಎಕರೆ ಭೂಮಿ ಸ್ವಾಧೀನ ಆಗಬೇಕಾಗಿದೆ. ಈ ದಿಸೆಯಲ್ಲಿ ಪ್ರಗತಿಯೇ ಆಗಿಲ್ಲ ಎಂದರು.

ಯೋಜನೆಯ ಮುಖ್ಯ ನಾಲೆಗಳು ಆಗಿವೆ, ವಿತರಣಾ ನಾಲೆಗಳು ಆಗಿಲ್ಲ. ಇದರಿಂದ ಹೊಲಗಳಿಗೆ ನೀರು ಹರಿಸಲು ಸಾಧ್ಯವಾಗಿಲ್ಲ. ಕೆಲವು ಕಡೆ ಪ್ರಾಯೋಗಿಕವಾಗಿ ನೀರು ಹರಿಸಿದ್ದು ಬಿಟ್ಟರೆ ಬೇರೆ ಏನೂ ಆಗಿಲ್ಲ ಎಂದು ಟೀಕಿಸಿದರು.

ಮಹದಾಯಿ ಯೋಜನೆಯಡಿ ಕಳಸಾ ಬಂಡೂರಿಗೆ ನೀರು ಹಂಚಿಕೆಯ ಅಧಿಕಾರವನ್ನು ಕೇಂದ್ರ ಜಲ ಆಯೋಗಕ್ಕೆ ಅಧಿಕಾರ ಕೊಟ್ಟವರು ಯಾರು? ಯೋಜನೆಗೆ ಅಡಿಗಲ್ಲು ಹಾಕಿ 14 ವರ್ಷವಾಗಿದೆ. ₹1000 ಕೋಟಿ ಖರ್ಚು ಮಾಡಿದ್ದರೂ ನೀರು ಕೊಡಲು ಆಗಿಲ್ಲ. ಸಮಗ್ರ ಯೋಜನಾ ವರದಿಯೂ ಆಗಿಲ್ಲ. ಅರಣ್ಯ ಇಲಾಖೆಯ ಅನುಮತಿಯೂ ಸಿಕ್ಕಿಲ್ಲ ಎಂದೂ ಹೇಳಿದರು.

ಈಗ ಮೇಕೆದಾಟು ಪಾದಯಾತ್ರೆಯನ್ನು ಕಾಂಗ್ರೆಸ್ ಹಮ್ಮಿಕೊಂಡಿದೆ. ಚುನಾವಣೆ ಹೆಸರಿನಲ್ಲಿ ಸುತ್ತಾಡಿ ಬರುತ್ತಾರೆ. ಜೆಡಿಎಸ್‌ನವರು ಈ ಹೋರಾಟ ಕೈಗೆತ್ತಿಕೊಳ್ಳುತ್ತಾರೆ ಎಂದು ಇವರು ಹೊರಟಿದ್ದಾರೆ ಎಂದು ಕಟಕಿಯಾಡಿದರು.

ಬಿಜೆಪಿಯ ಬಿ.ಎಸ್. ಯಡಿಯೂರಪ್ಪ, ಉತ್ತರ ಕರ್ನಾಟಕ ಅಭಿವೃದ್ಧಿಗೆ ನೀರಾವರಿ ಯೋಜನೆಗಳನ್ನು ಆದ್ಯತೆ ನೀಡಬೇಕು. ಇತರ ಕಾರ್ಯಗಳನ್ನು ಬದಿಗಿಟ್ಟು, ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಬೇಕು ಎಂದರು.

ಜೆಡಿಎಸ್‌ನ ಬಂಡೆಪ್ಪ ಕಾಶೆಂಪೂರ ಮಾತನಾಡಿ, 'ಕಾರಂಜಾ ಯೋಜನೆ 1972 ರಲ್ಲಿ ಆರಂಭಿಸಿದರೂ ಇನ್ನೂ ಪೂರ್ಣ ಆಗಿಲ್ಲ. ಕಾಲುವೆಗಳಲ್ಲಿ ನೀರು ಹರಿದಿಲ್ಲ. ಈ ವರ್ಷ ಮಳೆಯಿಂದ ಬೆಳೆ ನಾಶವಾಗಿದೆ. ಇನ್ನೂ ಪರಿಹಾರ ಸಿಕ್ಕಿಲ್ಲ, ನಾವು ಬೀದರ್‌ನವರು ಏನು ಪಾಪ ಮಾಡಿದ್ದೇವೆ' ಎಂದು ಪ್ರಶ್ನಿಸಿದರು.

ಎತ್ತಿನ ಹೊಳೆ ಯೋಜನೆಯಡಿ ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ 10 ಟಿಎಂಸಿ ಅಡಿ ನೀರು ಹರಿಸಲು ಸಾಧ್ಯವಿಲ್ಲ. ಹಣ ಯಾರದ್ದೋ ಕಿಸೆಗೆ ಹೋಗಿದೆ
ಎಚ್.ಡಿ.ಕುಮಾರಸ್ವಾಮಿ
ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ಭೂಸ್ವಾಧೀನ ಪ್ರಕ್ರಿಯೆ ಸ್ಥಗಿತ: ಕಾಂಗ್ರೆಸ್


ಎಂ.ಬಿ. ಪಾಟೀಲ

ಕೃಷ್ಣಾ ಮೇಲ್ದಂಡೆ ಯೋಜನೆಯ ಮೂರನೇ ಹಂತದ ಯೋಜನೆಯ ಭೂಸ್ವಾಧೀನ ಪ್ರಕ್ರಿಯೆ ಸ್ಥಗಿತಗೊಂಡಿದ್ದು, ಆ ಪ್ರಕ್ರಿಯೆ ನಡೆಸಿ ಸಮರೋಪಾದಿಯಲ್ಲಿ ಕಾಮಗಾರಿ ಪೂರ್ಣಗೊಳಿಸಬೇಕು ಎಂದು ಕಾಂಗ್ರೆಸ್‌ನ ಎಂ.ಬಿ. ಪಾಟೀಲ ಆಗ್ರಹಿಸಿದರು.

ಆಲಮಟ್ಟಿ ಅಣೆಕಟ್ಟಿನ ಎತ್ತರವನ್ನು ಹಂತ ಹಂತವಾಗಿ ಹೆಚ್ಚಿಸಲು ರಾಜ್ಯ ಸರ್ಕಾರ ಮುಂದಾಗಿದೆ. 519 ಅಡಿಯಿಂದ 521 ಅಡಿಗೆ, 521 ಅಡಿಯಿಂದ 523 ಅಡಿ... ಹೀಗೆ ಏರಿಸಲು ಯೋಜಿಸಿದೆ. ಈ ರೀತಿ ಹಂತ ಹಂತವಾಗಿ ಏರಿಸಿ ಯೋಜನಾ ವೆಚ್ಚ ದುಪ್ಪಟ್ಟು ಆಗಲಿದೆ. ಈ ಪ್ರಸ್ತಾವ ಕೈಬಿಟ್ಟು ಒಂದೇ ಸಲ ಅಣೆಕಟ್ಟಿನ ಎತ್ತರವನ್ನು 524 ಅಡಿಗೆ ಏರಿಸಬೇಕು ಎಂದು ಸಲಹೆ ನೀಡಿದರು.

ಕಾಂಗ್ರೆಸ್‌ನ ಈಶ್ವರ ಖಂಡ್ರೆ ಮಾತನಾಡಿ, ಸರ್ಕಾರ ಭರವಸೆ ನೀಡಿದಂತೆ ಕಲ್ಯಾಣ ಕರ್ನಾಟಕ ಮಂಡಳಿಯನ್ನು ರಚಿಸಿಲ್ಲ. 371(ಜೆ) ತಿದ್ದುಪಡಿ ಆದ ಮೇಲೆ ವಿಶೇಷ ಅನುದಾನ ನೀಡಬೇಕಿತ್ತು. ವಿಶೇಷ ಅನುದಾನ ನೀಡದೇ, ಘೋರ ಅನ್ಯಾಯ ಮಾಡಲಾಗಿದೆ ಮತ್ತು ಮಲತಾಯಿ ಧೋರಣೆ ತಾಳಲಾಗಿದೆ ಎಂದು ಕಿಡಿಕಾರಿದರು.

ಪ್ರತ್ಯೇಕ ಉಗ್ರರ ದಾಳಿ: ಇಬ್ಬರು ಸಾವು

ಶ್ರೀನಗರ: ಕಾಶ್ಮೀರ ಕಣಿವೆಯಲ್ಲಿ ಬುಧವಾರ ನಡೆದ ಎರಡು ಪ್ರತ್ಯೇಕ ಉಗ್ರರ ದಾಳಿಯಲ್ಲಿ ಎಎಸ್‌ಐ ಹಾಗೂ ನಾಗರಿಕರೊಬ್ಬರು ಮೃತಪಟ್ಟಿದ್ದಾರೆ.

ಶ್ರೀನಗರದ ಸಫಕದಾಲ್ ಬಡಾವಣೆಯ ನಿವಾಸಿ ರೂಫ್ ಅಹ್ಮದ್ ಖಾನ್ (45) ಉಗ್ರರ ದಾಳಿಗೆ ಬಲಿಯಾದವರು. 'ತಮ್ಮ ನಿವಾಸದ ಮುಂದೆ ನಿಂತಿದ್ದ ರೂಫ್ ಅಹ್ಮದ್ ಅವರ ಮೇಲೆ ಅಪರಿಚಿತ ಉಗ್ರರು ಏಕಾಏಕಿ ನಡೆಸಿದ ಗುಂಡಿನ ದಾಳಿ ನಡೆಸಿದ್ದು, ಗಾಯಗೊಂಡ ರೂಫ್ ಅಹ್ಮದ್ ಅವರನ್ನು ಇಲ್ಲಿನ ಎಸ್‌ಎಂಎಚ್‌ಎಸ್ ಆಸ್ಪತ್ರೆಗೆ ದಾಖಲಿಸುವ ವೇಳೆಗೆ ಮೃತಪಟ್ಟಿದ್ದರು' ಎಂದು ಪೊಲೀಸರು ತಿಳಿಸಿದರು.

ದಕ್ಷಿಣ ಕಾಶ್ಮೀರದ ಅನಂತನಾಗ್ ಜಿಲ್ಲೆಯ ಬಿಜ್‌ಬೆಹರಾ ಪ್ರದೇಶದಲ್ಲಿ ಬುಧವಾರ ಉಗ್ರರ ನಡೆಸಿದ ಗುಂಡಿನ ದಾಳಿಯಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಎಎಸ್‌ಐ ಮೊಹಮ್ಮದ್ ಅಶ್ರಫ್ ಅವರು ಮೃತಪಟ್ಟಿದ್ದಾರೆ.

'ಎದೆ ಹಾಗೂ ಕತ್ತಿನ ಭಾಗಕ್ಕೆ ಗುಂಡೇಟು ಬಿದ್ದು ತೀವ್ರ ಗಾಯಗೊಂಡಿದ್ದ ಎಎಸ್‌ಐ ಅಶ್ರಫ್ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಶ್ರೀನಗರದ ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಬದುಕುಳಿಯಲಿಲ್ಲ' ಎಂದು ಪೊಲೀಸರು ತಿಳಿಸಿದರು.

ಸಚಿವರನ್ನು ಆರೋಪಿಯಾಗಿ ಹೆಸರಿಸಲು ಕೋರಿ ಪಿಐಎಲ್

ನವದೆಹಲಿ: ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ಅಜಯ್ ಮಿಶ್ರಾ ಹಾಗೂ ಉತ್ತರ ಪ್ರದೇಶ ಉಪಮುಖ್ಯಮಂತ್ರಿ ಕೇಶವ ಪ್ರಸಾದ್ ಮೌರ್ಯ ಅವರನ್ನು ಲಖೀಂಪುರ ಖೇರಿ ಪ್ರಕರಣದಲ್ಲಿ ಆರೋಪಿಗಳನ್ನಾಗಿ ಹೆಸರಿಸುವಂತೆ ಕೋರಿ ಸುಪ್ರೀಂ ಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸಲ್ಲಿಸಲಾಗಿದೆ.

ಬಿಎಸ್‌ಎಫ್‌ನ ಮಾಜಿ ಯೋಧ ತೇಜ್ ಬಹದ್ದೂರ್ ಯಾದವ್ ಪಿಐಎಲ್ ಸಲ್ಲಿಸಿದ್ದು, ಪ್ರಕರಣ ಕುರಿತು ತನಿಖೆ ನಡೆಸಲು ಸುಪ್ರೀಂಕೋರ್ಟ್ ರಚಿಸಿರುವ ಎಸ್‌ಐಟಿಗೆ ನಿರ್ದೇಶನ ನೀಡುವಂತೆ ಕೋರಿದ್ದಾರೆ. ಈ ಪ್ರಕರಣದಲ್ಲಿ ಇಬ್ಬರು ಸಚಿವರ ಪಾತ್ರದ ಕುರಿತು ಕೂಡ ತನಿಖೆಗೆ ಆದೇಶಿಸಬೇಕು ಎಂದೂ ಕೋರಿದ್ದಾರೆ.

'ವೈಫಲ್ಯ ಮುಚ್ಚಿಕೊಳ್ಳಲು ಬಿಜೆಪಿ ಯತ್ನ'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಇಬ್ಬರು ಪ್ರೀತಿಸಿ ಮದುವೆಯಾದಾಗ ಬೇರೊಬ್ಬರು ದೂರು ನೀಡಿದರೆ ತನಿಖೆ ಮಾಡುತ್ತಾರಂತೆ. ತನಿಖೆ ಮುಗಿದ ನಂತರ ಇಬ್ಬರನ್ನೂ ಬೇರೆ ಮಾಡುತ್ತೀರಾ? ಬಿಜೆಪಿಯವರು ಅಂಬೇಡ್ಕರ್ ಹಾಗೂ ಬಸವಣ್ಣನವರ ತತ್ವ ಪಾಲನೆ ವಿಚಾರವಾಗಿ ಉತ್ತರಿಸಲಿ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಬುಧವಾರ ಸವಾಲೆಸೆದರು.

ಮತಾಂತರ ನಿಷೇಧ ಮಸೂದೆ ಮಂಡಿಸಿದ ಬಗ್ಗೆ ಇಲ್ಲಿ ಪ್ರತಿಕ್ರಿಯಿಸಿದ ಅವರು, 'ಶರಣರ ಸಂಸ್ಕೃತಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಬಿಜೆಪಿಯಿಂದ ದ್ರೋಹವಾಗಿದೆ. ಮಠಾಧಿಪತಿಗಳು ಕರೆ ಮಾಡಿ, ಏನಾಗುತ್ತಿದೆ ಎಂದು ಕಳವಳ ವ್ಯಕ್ತಪಡಿಸುತ್ತಿದ್ದಾರೆ' ಎಂದರು.

'ಪರಿಶಿಷ್ಟ ಜಾತಿ, ಪಂಗಡದ ಅನೇಕರು ಬೌದ್ಧ ಧರ್ಮ ಪಾಲಿಸುತ್ತಿದ್ದಾರೆ. ಮಲ್ಲಿಕಾರ್ಜುನ ಖರ್ಗೆ ಬೌದ್ಧ ಧರ್ಮ ನಂಬಿದ್ದಾರೆ. ಧರ್ಮಸ್ಥಳದಲ್ಲಿ ಧರ್ಮಾಧಿಕಾರಿ ಎಂದರೆ ಏನು? ಜೈನರ ಕೈಗೆ ಧರ್ಮಸ್ಥಳದ ನಿಯಂತ್ರಣ ಏಕೆ ಹೋಯಿತು? ಅವರು ಮಂಜುನಾಥ ಸ್ವಾಮಿ ಆರಾಧಿಸುತ್ತಾರೆ. ಇದು ಅವರವರ ಇಚ್ಛೆ' ಎಂದರು.

'ಬಿಟ್ ಕಾಯಿನ್, ಶೇ. 40 ಕಮಿಷನ್, ಕೋವಿಡ್ ಪರಿಹಾರ ನೀಡದಿರುವುದು, ರೈತರಿಗೆ ಪರಿಹಾರ ಸಿಗದ ವಿಚಾರ, ಉತ್ತರ ಕರ್ನಾಟಕದ ಸಮಸ್ಯೆಗಳನ್ನು ನಾವು ಚರ್ಚಿಸುವ ಮೊದಲು ಮಸೂದೆ ಮಂಡನೆಗೆ ಆತುರ ಏನಿತ್ತು? ಚುನಾವಣೆ ವೈಫಲ್ಯ ಮುಚ್ಚಿಕೊಳ್ಳಲು ಬಿಜೆಪಿಯವರು ಪ್ರಯತ್ನಿಸುತ್ತಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ದೇಶದಲ್ಲಿ ಕ್ರೈಸ್ತರ ಜನಸಂಖ್ಯೆ ಶೇ 2ರಷ್ಟಿದೆ. ಅವರ ಶಿಕ್ಷಣ ಸಂಸ್ಥೆಗೆ ಮಕ್ಕಳನ್ನು ಏಕೆ ಸೇರಿಸುತ್ತಾರೆ? ನೂರಾರು ಮಂದಿ ಅರ್ಜಿ ಹಾಕುತ್ತಿದ್ದಾರೆ. ಈವರೆಗೆ ಯಾವುದಾದರೂ ಬಲವಂತದ ಮತಾಂತರ ದೂರು ದಾಖಲಾಗಿದೆಯಾ? ಇದು ಕೇವಲ ಒಂದು ಸಮುದಾಯವನ್ನು ಗುರಿಯಾಗಿಸಿ ತೊಂದರೆ ನೀಡುವ ಪ್ರಯತ್ನವಾಗಿದೆ' ಎಂದು ಅವರು ಟೀಕಿಸಿದರು.

'ಕಾಗೇರಿ ಸ್ಪೀಕರ್ ಅಲ್ಲ. ಬಿಜೆಪಿ ನಾಯಕ. ಸ್ಪೀಕರ್ ಆಗಿ ಆ ಸ್ಥಾನಕ್ಕೆ ಅಗೌರವ ತರುತ್ತಿದ್ದಾರೆ. ಅದಕ್ಕೇ ಮಸೂದೆ ಪ್ರತಿ ಹರಿದು ಹಾಕಿದೆ. ಏನಾದರೂ ಮಾಡಿಕೊಳ್ಳಲಿ. ಇದು ನನ್ನ ರಾಜಕೀಯ ಬದ್ಧತೆ'
ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

'ಬಿಜೆಪಿ ಸರ್ಕಾರ ಮತಾಂತರ ನಿಷೇಧಕ್ಕೆ ಕಾಯ್ದೆ ಮಾಡಿ ಕಳ್ಳರಂತೆ ಜಾರಿಗೆ ತರಲು ಮುಂದಾಗಿದೆ. ರಾಜ್ಯದಲ್ಲಿ ಹಲವು ಜ್ವಲಂತ ಸಮಸ್ಯೆಗಳಿವೆ.
ಸಿದ್ದರಾಮಯ್ಯ,
ವಿಧಾನಸಭೆ ವಿರೋಧಪಕ್ಷದ ನಾಯಕ

ಮದುವೆ ವಯಸ್ಸು ಏರಿಕೆ ಮಸೂದೆ ಸದನ ಸಮಿತಿಗೆ

ನವದೆಹಲಿ (ಪಿಟಿಐ): ಕೇಂದ್ರ ಸಚಿವೆ ಸ್ಮೃತಿ ಇರಾನಿ ಅವರು ಲೋಕಸಭೆಯಲ್ಲಿ ಮಂಡಿಸಿದ, ಮಹಿಳೆಯರ ಮದುವೆಯ ಕನಿಷ್ಠ ವಯಸ್ಸನ್ನು 21ಕ್ಕೆ ಏರಿಸುವುದಕ್ಕೆ ಸಂಬಂಧಿಸಿದ ಮಸೂದೆಯನ್ನು ಸಮಗ್ರ ಪರಿಶೀಲನೆಗಾಗಿ ಸಂಸದೀಯ ಸಮಿತಿಗೆ ಒಪ್ಪಿಸಲಾಯಿತು.

ಮಹಿಳೆಯರ ಮದುವೆಯ ಕನಿಷ್ಠ ವಯಸ್ಸನ್ನು ಈಗಿನ 18 ವರ್ಷದಿಂದ 21 ವರ್ಷಕ್ಕೆ ಏರಿಸುವುದಕ್ಕೆ ಅವಕಾಶ ನೀಡುವ 'ಬಾಲ್ಯ ವಿವಾಹ ನಿಷೇಧ ತಿದ್ದುಪಡಿ ಮಸೂದೆ–2021' ಅನ್ನು ಮಂಡಿಸಿ ಮಂಗಳವಾರ ಮಾತನಾಡಿದ್ದ ಸಚಿವೆ ಇರಾನಿ, 'ದೇಶದ ಇತಿಹಾಸದಲ್ಲಿಯೇ ಇದು ನಿರ್ಣಾಯಕ ಹೆಜ್ಜೆಯಾಗಿದೆ' ಎಂದು ಹೇಳಿದ್ದರು.

ಉನ್ನತ ಶಿಕ್ಷಣ ಸಚಿವರಿಗೆ ಮುಖ್ಯಮಂತ್ರಿ ಸೂಚನೆ

'ಪಿಎಚ್‌.ಡಿಗಳ ಗುಣಮಟ್ಟ ವಿಶ್ಲೇಷಣೆ'

ಪ್ರಜಾವಾಣಿ ವಾರ್ತೆ

ಬೆಳಗಾವಿ: '10 ವರ್ಷಗಳಲ್ಲಿ ಪಿಎಚ್.ಡಿ ಪದವಿಗೆ ನೀಡಲಾದ ಪ್ರಬಂಧಗಳ ಗುಣಮಟ್ಟವನ್ನು ವಿಶ್ಲೇಷಣೆಗೆ ಒಳಪಡಿಸಬೇಕು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚಿಸಿದರು.

ತಾಲ್ಲೂಕಿನ ಹಿರೇಬಾಗೇವಾಡಿ ಸಮೀಪದ ಮಲ್ಲಪ್ಪನಗುಡ್ಡದಲ್ಲಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ (ಆರ್‌ಸಿಯು)ದ ಕಟ್ಟಡಗಳ ನಿರ್ಮಾಣಕ್ಕೆ ಭೂಮಿಪೂಜೆ, ಶಿಲಾನ್ಯಾಸ ಮತ್ತು ಸಂಗೊಳ್ಳಿರಾಯಣ್ಣ ಪ್ರಥಮದರ್ಜೆ ಘಟಕ ಮಹಾವಿದ್ಯಾಲಯದ 2ನೇ ಹಂತದ ಕಟ್ಟಡದ ಉದ್ಘಾಟನೆಯನ್ನು ಬುಧವಾರ ನೆರವೇರಿಸಿ ಅವರು ಮಾತನಾಡಿದರು.


ಬಸವರಾಜ ಬೊಮ್ಮಾಯಿ

'ಪಿಎಚ್.ಡಿ ಪ್ರಬಂಧಗಳಿಂದ ಉಪಯೋಗ ಇದೆಯೇ, ಇಲ್ಲವೇ? ಎಲ್ಲಿಂದ ಕಟ್ ಅಂಡ್ ಪೇಸ್ಟ್ ಮಾಡಿದ್ದಾರೆ ಎನ್ನುವುದನ್ನುಪರಿಶೀಲಿಸಬೇಕು' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣಗೆ ತಿಳಿಸಿದರು. 'ಯಾವುದಾದರೂ ಪಿಎಚ್.ಡಿ ಪ್ರಬಂಧ ಕೊಡಿ. ಎಲ್ಲಿಂದ ಕಾಪಿ ಮಾಡಿದ್ದಾರೆ ಎಂದು ಹೇಳಬಲ್ಲೆ. ಪಿಎಚ್.ಡಿ ಪದವಿಗಳಲ್ಲಿ ಸ್ವಂತಿಕೆ ಇರಬೇಕು. ಏನನ್ನೂ ಕೊಡುಗೆ ಕೊಡದಿದ್ದರೆ ಅದೆಂತಹ ಪ್ರಬಂಧ? ಅಂಥವನ್ನು ಎಸ್ಸೆಸ್ಸೆಲ್ಸಿ ಹುಡುಗರು ಬೇಕಾದರೂ ಸಿದ್ಧಪಡಿಸುತ್ತಾರೆ' ಎಂದರು.

'ಸ್ಪರ್ಧಾತ್ಮಕ ಜಗತ್ತಿನಲ್ಲಿ ವಿದ್ಯಾರ್ಥಿಗಳಿಗೆ ಜ್ಞಾನದ ಬಲ ನೀಡಲು ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಜಾರಿಗೊಳಿಸಲಾಗಿದೆ. ಪೂರಕವಾಗಿ ವಿ.ವಿ.ಯವರ ಮನಸ್ಥಿತಿಯೂ ಬದಲಾಗಬೇಕು. ಕ್ಯಾಂಪಸ್‌ನಿಂದ ಹೊರ ಬಂದು ಜಗತ್ತು ನೋಡಬೇಕು. ಸ್ವಾಭಿಮಾನ ಉಳಿಸಿಕೊಳ್ಳುವಂತಹ ಸಂಶೋಧನೆಗಳನ್ನು ಮಾಡಬೇಕು. ಈ ವಿಷಯದಲ್ಲಿ ಕುಲಪತಿಗಳು ಸೇರಿದಂತೆ ವಿಶ್ವವಿದ್ಯಾಲಯದವರು ಚರ್ಚೆಗೆ ಬರಲಿ' ಎಂದು ಸಲಹೆ ನೀಡಿದರು.

ಸಿ.ಎನ್. ಅಶ್ವತ್ಥನಾರಾಯಣ, 'ರಾಜ್ಯದ 7 ಎಂಜಿನಿಯರಿಂಗ್ ಕಾಲೇಜುಗಳನ್ನು ಐಐಟಿ ಮಾದರಿಯಲ್ಲಿ ಅಭಿವೃದ್ಧಿಪಡಿಸಲಾಗುವುದು' ಎಂದು ತಿಳಿಸಿದರು.

ಸಹಾಯಕ ಪ್ರಾಧ್ಯಾಪಕರ ಹುದ್ದೆಗಾಗಿ ಸ್ಪರ್ಧಾತ್ಮಕ ಪರೀಕ್ಷೆ

‘ಸಾಮಾನ್ಯ ಜ್ಞಾನ’ – ಮಾದರಿ ಪ್ರಶ್ನೋತ್ತರ

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿರುವ ಸಹಾಯಕ ಪ್ರಾಧ್ಯಾಪಕ ಹುದ್ದೆಗಳಿಗಾಗಿ ರಾಜ್ಯ ಸರ್ಕಾರ ಸ್ಪರ್ಧಾತ್ಮಕ ಪರೀಕ್ಷೆ ನಡೆಸುತ್ತಿದೆ. ಈ ಪರೀಕ್ಷೆಗೆ ಸಂಬಂಧಿಸಿದಂತೆ ‘ಸಾಮಾನ್ಯ ಜ್ಞಾನ’ ವಿಷಯ ಕುರಿತ ಮಾದರಿ ಪ್ರಶ್ನೋತ್ತರಗಳು ಇಲ್ಲಿವೆ.

ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 1,242 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕಾತಿ ಮಾಡಿಕೊಳ್ಳಲು ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿದ್ದು, ಈಗಾಗಲೇ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಪೂರ್ಣಗೊಂಡಿದೆ. ಸ್ಪರ್ಧಾತ್ಮಕ ಪರೀಕ್ಷೆಯ ದಿನಾಂಕ ಅಧಿಕೃತವಾಗಿ ಪ್ರಕಟವಾಗುವುದೊಂದು ಬಾಕಿ ಇದೆ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಈ ಹುದ್ದೆಗಳಿಗೆ ನೇಮಕಾತಿ ಪ್ರಾಧಿಕಾರವಾಗಿದೆ. ಅಧಿಸೂಚನೆಯಲ್ಲಿ ತಿಳಿಸಿರುವಂತೆ ಅಭ್ಯರ್ಥಿಗಳು ಕನ್ನಡ ಮತ್ತು ಇಂಗ್ಲಿಷ್ ವಿಷಯದಲ್ಲಿ ತಲಾ 100 ಅಂಕಗಳಿಗೆ ನಡೆಯಲಿರುವ ಪರೀಕ್ಷೆಯಲ್ಲಿ ತೇರ್ಗಡೆಯಾಗುವುದು ಕಡ್ಡಾಯ. 10ನೇ ತರಗತಿಯ ಮಟ್ಟದ ‘ನಿಮ್ಮಲ್ಲಿರುವ ವಿಷಯ ಜ್ಞಾನವನ್ನು’ ಪರೀಕ್ಷಿಸುವಂತಹ ಪ್ರಶ್ನೆಗಳಿರುತ್ತವೆ. ಇದಲ್ಲದೇ ಸಾಮಾನ್ಯಜ್ಞಾನ ಮತ್ತು ಐಚ್ಛಿಕ ವಿಷಯದ ಪತ್ರಿಕೆಗಳೂ ಇರುತ್ತವೆ.

ಉಳಿದಂತೆ ಸಾಮಾನ್ಯಜ್ಞಾನ ಪತ್ರಿಕೆಯು 50 ಅಂಕಗಳಿಗಾದರೆ ಐಚ್ಛಿಕ ವಿಷಯದ ಪತ್ರಿಕೆಯು 250 ಅಂಕಗಳಿಗೆ ಇರುತ್ತದೆ. ಸಾಮಾನ್ಯಜ್ಞಾನ ಪತ್ರಿಕೆಯು 6ನೇ ತರಗತಿಯಿಂದ 12ನೇ(ಪಿಯುಸಿ) ತರಗತಿಯವರೆಗಿರುವ ಇತಿಹಾಸ, ಭಾರತೀಯ ಅರ್ಥಶಾಸ್ತ್ರ, ಭಾರತೀಯ ಸಂವಿಧಾನ ಮತ್ತು ರಾಜಕೀಯ, ಭೂಗೋಳ, ವಿಜ್ಞಾನ, ಮಾನಸಿಕ ಸಾಮರ್ಥ್ಯ ಮತ್ತಿತರ ವಿಷಯಗಳ ಮೇಲೆ ಪ್ರಶ್ನೆಗಳನ್ನು ಕೇಳಲಾಗುತ್ತದೆ. ಈ ಎಲ್ಲ ಪ್ರಶ್ನೆಗಳೂ ಬಹು ಆಯ್ಕೆ ಪ್ರಶ್ನೆಗಳಾಗಿರುತ್ತವೆ.

ಸಾಮಾನ್ಯವಾಗಿ ಐಚ್ಛಿಕ ವಿಷಯದ ಪತ್ರಿಕೆಗಳಲ್ಲಿ ಸ್ನಾತಕೋತ್ತರ ಪದವಿಯ ಹಂತದ ವಿಷಯಗಳು ಪಠ್ಯವಾಗಿರುತ್ತವೆ. ಹೀಗಾಗಿ ಪಠ್ಯಕ್ರಮ ಆಧರಿಸಿ ಆಳವಾದ ಹಾಗೂ ವಿಮರ್ಶಾತ್ಮಕ ಅಧ್ಯಯನ ಬಹುಮುಖ್ಯ. ಈ ಅಂಕಣದಲ್ಲಿ ‘ಸಾಮಾನ್ಯ ಜ್ಞಾನ’ಕ್ಕೆ ಸಂಬಂಧಿಸಿದ ಕೆಲವು ಮಾದರಿ ಪ್ರಶ್ನೋತ್ತರಗಳನ್ನು ಕೊಡಲಾಗಿದೆ.



1. ಇತ್ತೀಚೆಗೆ ರಾಜ್ಯಸಭೆಯಲ್ಲಿ ಆಡಳಿತ ಪಕ್ಷದ ಸದಸ್ಯ ಕೆ. ಜೆ. ಆಲ್ಫೋನ್ಸ್ (K.J. Alphons) ‘ಸಂವಿಧಾನ ತಿದ್ದುಪಡಿ ಮಸೂದೆ -2021’ ಮಂಡಿಸಿದರು. ಈ ತಿದ್ದುಪಡಿ ಯಾವುದಕ್ಕೆ ಸಂಬಂಧಿಸಿದೆ?

ಎ. ಪ್ರಸ್ತಾವನೆ (ಪ್ರಿಯಾಂಬಲ್) ಬಿ. ಮೂಲಭೂತ ಹಕ್ಕುಗಳು
ಸಿ. ಮೂಲಭೂತ ಕರ್ತವ್ಯಗಳು ಡಿ. ವಿಧಾನಸಭಾ ಚುನಾವಣೆ

ಉತ್ತರ:ಎ

2. ಕೆಳಗಿನ ಹೇಳಿಕೆಗಳನ್ನು ಗಮನಿಸಿ

1. ಕಾಶಿಯಲ್ಲಿ 1916ರಲ್ಲಿ ಬನಾರಸ್ ಹಿಂದೂ ವಿಶ್ವ ವಿದ್ಯಾಲಯವನ್ನು ಉದ್ಘಾಟಿಸಲು ಬಂದ ಮಹಾತ್ಮ ಗಾಂಧೀಜಿ ಅಲ್ಲಿನ ಕಿರಿದಾದ ಮತ್ತು ಶುಚಿ ಇಲ್ಲದ ರಸ್ತೆ ಹಾಗೂ ವಾತಾವರಣ ನೋಡಿ ಬೇಸರ ವ್ಯಕ್ತಪಡಿಸಿದ್ದರು. ಇದಾಗಿ ಸುಮಾರು 105 ವರ್ಷಗಳ ತರುವಾಯ ‘ಭವ್ಯ ಕಾಶಿ ದಿವ್ಯ ಕಾಶಿಯ’ ಉದ್ಘಾಟನೆ ಮಾಡಲಾಗಿದೆ. ಗಂಗಾ ನದಿಯಿಂದ ವಿಶ್ವನಾಥನ ಧಾಮಕ್ಕೆ ನೇರ ಸಂಪರ್ಕ ಕಲ್ಪಿಸಲಾಗಿದೆ. ಹಿಂದಿನ 3 ಸಾವಿರ ಚದರ ಅಡಿ ಪ್ರದೇಶವನ್ನು 5 ಲಕ್ಷ ಚದರ ಅಡಿಗೆ ವಿಸ್ತರಿಸಿ ಹೊಸ ಕಾರಿಡಾರ್ ನಿರ್ಮಿಸಲಾಗಿದೆ.

2. 1669ರಲ್ಲಿ ಮೊಘಲ್‌ದೊರೆ ಔರಂಗಜೇಬ್ ನಾಶಗೊಳಿಸಿದ್ದ ಕಾಶಿ ವಿಶ್ವನಾಥ ದೇಗುಲ 1780ರಲ್ಲಿ ಮಹಾರಾಣಿ ಅಹಿಲ್ಯಾಬಾಯಿ ಹೋಳ್ಕರ್ ಅವಧಿಯಲ್ಲಿ ಪುನರ್ ನಿರ್ಮಾಣಗೊಂಡಿತ್ತು. ಬಳಿಕ 19ನೇ ಶತಮಾನದಲ್ಲಿ ಮಹಾರಾಜ ರಣಜಿತ್‌ಸಿಂಗ್ ‘ಚಿನ್ನದ ಕಳಶ’ ಅಳವಡಿಸಿದ್ದರು.

3. ವಾರಾಣಸಿ 18189 ನೇಕಾರ ಕುಟುಂಬಗಳ ತವರು. ಬನಾರಸ್ ರೇಷ್ಮೆ ಸೀರೆ ಎಂದರೆ ವಿಶ್ವಪ್ರಸಿದ್ಧ. ಇದರ ಪಕ್ಕದಲ್ಲಿಯೇ ಭಗವಾನ್ ಬುದ್ಧ ಮೊದಲು ಉಪದೇಶ ನೀಡಿದ ಸಾರನಾಥವೂ ಇದೆ. ಅಲ್ಲದೇ ರವಿದಾಸರ ಹುಟ್ಟೂರು ಹಾಗೂ ಸಂತರ ಕಬೀರರ ಕರ್ಮ ಭೂಮಿಯೂ ಆಗಿದೆ ಕಾಶಿ. ಹೀಗಾಗಿ ಸಹಜವಾಗಿಯೇ ಅಂತರರಾಷ್ಟ್ರೀಯ ಮಾನ್ಯತೆ ಇದೆ.

4. 108 ವರ್ಷಗಳ ತರುವಾಯ ಕೆನಡಾದಲ್ಲಿ ಸಿಕ್ಕಿದ್ದ ಮಾತಾ ಅನ್ನಪೂರ್ಣೇಶ್ವರಿ ಮೂರ್ತಿಯನ್ನು ಪುನಃ ತಂದು ಅದರ ಮೂಲಸ್ಥಾನದಲ್ಲಿ ಅಂದರೆ ವಿಶ್ವನಾಥನ ಸನ್ನಿಧಿಯ ಪಕ್ಕದಲ್ಲಿ ಮರುಪ್ರತಿಷ್ಠಾಪಿಸಲಾಗಿದೆ. ಈಗ ಏಕ ಕಾಲದಲ್ಲಿ ಲಕ್ಷಾಂತರ ಜನರು ಅನ್ನಪೂರ್ಣೇಶ್ವರಿ ಸನ್ನಿಧಾನದ ಪಕ್ಕದಲ್ಲಿರುವ ಭೋಜನಾಲಯದಲ್ಲಿ ಕುಳಿತು ಊಟ ಮಾಡಲು ವ್ಯವಸ್ಥೆ ಮಾಡಲಾಗಿದೆ.

ಮೇಲಿನ ಹೇಳಿಕೆಗಳಲ್ಲಿ ಯಾವ ಹೇಳಿಕೆಗಳು ಸರಿಯಾಗಿವೆ?

ಎ. ಹೇಳಿಕೆ 1 ರಿಂದ 4ರತನಕ ಎಲ್ಲವೂ ಸರಿಯಾಗಿದೆ
ಬಿ. ಹೇಳಿಕೆ 1, 3 ಮತ್ತು 4 ಮಾತ್ರ ಸರಿಯಾಗಿದೆ
ಸಿ. ಹೇಳಿಕೆ 1 ರಿಂದ 3ರ ತನಕ ಮಾತ್ರ ಸರಿಯಾಗಿದೆ
ಡಿ. ಮೇಲಿನ ಯಾವ ಹೇಳಿಕೆಯೂ ಸರಿಯಾಗಿಲ್ಲ.

ಉತ್ತರ:ಎ

3. ಸೆಕೆಂಡ್‌ಗೆ 47 ಕಿ. ಮೀ. ವೇಗದಲ್ಲಿ ಸಾಗುವ .... ಧೂಮಕೇತು, ಸರಿ ಸುಮಾರು 523 ಶತಕೋಟಿ ಕಿ. ಮೀ. ದೂರದಿಂದ ಭೂಮಿಯ ಬಳಿಗೆ ಬಂದು, ಇದೀಗ ದೂರ ಸರಿಯುತ್ತಿದೆ.

ಎ. ಲಿಯೋನಾರ್ಡೊ(Leonard) ಬಿ. ಹ್ಯಾಲಿ (Halley's Comet)
ಸಿ. ಟೆಂಪಲ್-1 (Tempel 1) ಡಿ. ಬೊರೆಲಿ (Borrelly)

ಉತ್ತರ:ಎ

4. ಭೂಮಿಯಿಂದ 400 ಕಿ.ಮೀ ಎತ್ತರದಲ್ಲಿರುವ ಕಕ್ಷೆಯಲ್ಲಿ ಬಾಹ್ಯಾಕಾಶ ಕೇಂದ್ರ ಸ್ಥಾಪಿಸಲು ಇಸ್ರೊ ನಿಶ್ಚಯಿಸಿದೆ. 20 ಟನ್ ತೂಕ ಹೊಂದಿರುವ ಈ ಬಾಹ್ಯಾಕಾಶ ಕೇಂದ್ರದಲ್ಲಿ ಗಗನ ಯಾತ್ರಿಗಳು 15 ರಿಂದ 20 ದಿನ ಇರುವ ವ್ಯವಸ್ಥೆ ಮಾಡಲಾಗುತ್ತದೆ. ಹಾಗಾದರೆ ಯಾವ ವರ್ಷದೊಳಗೆ ಈ ಯೋಜನೆ ಕಾರ್ಯರೂಪಕ್ಕೆ ಬರಲಿದೆ?

ಎ. 2025 ಬಿ. 2030
ಸಿ. 2035 ಡಿ. 2040

ಉತ್ತರ:ಬಿ

5. 2027 ರಿಂದ ಯುವ ಜನತೆ ಸಿಗರೇಟ್ ಸೇದದಂತೆ ನಿಷೇಧ ಹೇರಲು ಈ ಕೆಳಗಿನ ಯಾವ ರಾಷ್ಟ್ರ ಮುಂದಾಗಿದೆ?

ಎ. ಆಸ್ಟ್ರೇಲಿಯಾ ಬಿ. ಪಾಕಿಸ್ತಾನ
ಸಿ. ನ್ಯೂಜಿಲೆಂಡ್ ಡಿ. ಜಪಾನ್

ಉತ್ತರ:ಸಿ

6) ರಾಯಲ್ ಇನ್‌ಸ್ಟಿಟ್ಯೂಟ್ ಆಫ್ ಬ್ರಿಟಿಷ್ ಆರ್ಕಿಟೆಕ್ಟ್ ನೀಡುವ ‘ರಾಯಲ್ ಗೋಲ್ಡ್ ಮೆಡಲ್-2022’ ಪುರಸ್ಕಾರಕ್ಕೆ ಯಾರು ಆಯ್ಕೆಯಾಗಿದ್ದಾರೆ?

ಎ. ಬಾಲಕೃಷ್ಣ ದೋಷಿ ಬಿ. ಜೈನಾರಾಯಣ ಪಂಡಿತ
ಸಿ. ಶ್ರೀರಾಮ್ ಪ್ರೆಸ್ಟಿಜ್ ಡಿ. ನಾರಾಯಣ ಸ್ವಾಮಿ ಜೆ ಆರ್

ಉತ್ತರ:ಎ

ಮಾಹಿತಿ: Spardha Bharati UPSC, ಯೂಟ್ಯೂಬ್ ಚಾನೆಲ್

ನಿಮಗಿದು ಗೊತ್ತೆ?

ಖಾಸಗಿ ಮಸೂದೆ (ಪ್ರೈವೇಟ್ ಮೆಂಬರ್ ಬಿಲ್)

ಸಚಿವ ಸಂಪುಟದ ಸದಸ್ಯರಲ್ಲದ ಸಂಸದರು ಮಂಡಿಸುವ ಮಸೂದೆಗಳಿಗೆ ‘ಪ್ರೈವೇಟ್ ಮೆಂಬರ್ ಬಿಲ್’ ಅಥವಾ ಖಾಸಗಿ ಮಸೂದೆ ಎನ್ನುವರು. ಸಂಸತ್ ಅಧಿವೇಶನ ನಡೆಯುವಾಗ ಪ್ರತಿ ಶುಕ್ರವಾರ ಈ ರೀತಿಯ ಮಸೂದೆ ಮಂಡಿಸಲು ಅವಕಾಶ ನೀಡಲಾಗುತ್ತದೆ. ಸ್ವತಂತ್ರ ಭಾರತದಲ್ಲಿ ಈವರೆಗೆ ಕೇವಲ 14 ಬಿಲ್‌ಗಳು ಮಾತ್ರ ಎರಡೂ ಸದನದಲ್ಲಿ ಪಾಸ್ ಆಗಿ ಕಾನೂನುಗಳಾಗಿವೆ. 1970ರ ನಂತರ ಖಾಸಗಿ ಸದಸ್ಯರು ಮಂಡಿಸಿದ ಒಂದೇ ಒಂದು ಮಸೂದೆಯೂ ಪಾಸಾಗಿಲ್ಲ, ಕಾನೂನಾಗಿಲ್ಲ. 2014ರಲ್ಲಿ ಮಾತ್ರ, ರಾಜ್ಯಸಭೆಯಲ್ಲಿ ಟ್ರಾನ್ಸ್‌ಜೆಂಡರ್ ಬಿಲ್ ಪಾಸ್ ಆಗಿತ್ತು. ಆದರೆ ಅದು ಲೋಕಸಭೆಯಲ್ಲಿ ಪಾಸಾಗಿರಲಿಲ್ಲ.

14ನೇ ಲೋಕಸಭೆಯ ಅವಧಿಯಲ್ಲಿ 67 ಸಂಸತ್ ಸದಸ್ಯರು 328 ‘ಪ್ರೈವೇಟ್ ಮೆಂಬರ್ ಬಿಲ್‌ಗಳನ್ನು’ ಮಂಡಿಸಿದ್ದರು. ಆದರೆ ಅದರಲ್ಲಿ ಶೇ 96ರಷ್ಟು ಬಿಲ್‌ಗಳು ಒಂದೇ ಒಂದು ಚರ್ಚೆಯನ್ನು ನಡೆಸದೇ ಅನೂರ್ಜಿತಗೊಂಡಿದ್ದವು.

ಸತತ ಅಧ್ಯಯನವೇ ಸಾಧನೆಯ ಮಂತ್ರ

ಬಳ್ಳಾರಿ ಜಿಲ್ಲೆಯ ಸಿರಿಗೇರಿ ಗ್ರಾಮದ ಗರ್ಜಿಲಿಂಗಪ್ಪ, ಪ್ರಸ್ತುತ ದಕ್ಷಿಣಕನ್ನಡ ಜಿಲ್ಲೆಯಲ್ಲಿ ತೆರಿಗೆ ಇಲಾಖೆಯಲ್ಲಿ ಸಹಾಯಕ ಆಯುಕ್ತರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಕಡುಬಡತನದ ಕುಟುಂಬದಲ್ಲಿ ಬೆಳೆದ ಅವರು, ಶಿಕ್ಷಕಿಯೊಬ್ಬರ ಪ್ರೋತ್ಸಾಹದಿಂದ ಪ್ರಾಥಮಿಕ–ಪ್ರೌಢಶಿಕ್ಷಣ ಮುಗಿಸಿ, ಶಿಕ್ಷಕರೊಬ್ಬರ ನೆರವು ಹಾಗೂ ಮಾರ್ಗದರ್ಶನದಿಂದ ಪದವಿ ಮುಗಿಸಿ, ಸತತ ಪ್ರಯತ್ನಗಳ ಮೂಲಕ ಕೆಎಎಸ್ ಪಾಸ್ ಮಾಡಿದ್ದಾರೆ. ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಸಾಧನೆ ಮಾಡಿದವರ ಮಾತುಗಳಿಂದ ಪ್ರೇರಿತರಾಗಿ ತಾವು ಕೆಎಎಸ್ ಪಾಸ್ ಮಾಡಿದ ವಿವರವನ್ನು ಈ ಕಿರು ಸಂದರ್ಶನದಲ್ಲಿ ಹಂಚಿಕೊಂಡಿದ್ದಾರೆ.

ಶಿ.ಗು. ಹಿರೇಮಠ

ನಿಮ್ಮ ಶೈಕ್ಷಣಿಕ ಜೀವನ ಹೇಗಿತ್ತು?

ನಮ್ಮದು ಕಡುಬಡತನದ ಕುಟುಂಬ. ಅಪ್ಪ-ಅಮ್ಮ ಕೂಲಿ ಕೆಲಸ ಮಾಡುತ್ತಿದ್ದರು. ನನ್ನನ್ನು ಶಾಲೆಗೆ ಕಳುಹಿಸುವಷ್ಟು ಶಕ್ತರಾಗಿರಲಿಲ್ಲ. ಅವರು ಕೂಲಿ ಕೆಲಸಕ್ಕೆ ಹೋಗುವಾಗ ನನ್ನನ್ನು ಜೊತೆಗೆ ಕರೆದುಕೊಂಡು ಹೋಗುತ್ತಿದ್ದರು. ಹೀಗೆ ಕೂಲಿ ಕೆಲಸಕ್ಕೆ ಹೋಗುತ್ತಾ, ಅರ್ಧಕ್ಕೆ ಶಾಲೆ ಬಿಟ್ಟ ನನ್ನನ್ನು ಪುನಃ ಶಾಲೆ ಸೇರುವಂತೆ ಪ್ರೋತ್ಸಾಹಿಸಿದ್ದು ಶಿಕ್ಷಕಿ ಹಂಪಮ್ಮ. ಅವರ ನೆರವಿನಿಂದ ಸಿರುಗುಪ್ಪ ಗ್ರಾಮದ ಸರ್ಕಾರಿ ಶಾಲೆಯಲ್ಲಿ 1 ರಿಂದ 7ರವರೆಗೆ ಓದಿದೆ. ಸಂಡೂರು ತಾಲ್ಲೂಕಿನ ವಿಠಲಾಪುರದಲ್ಲಿ ಪ್ರೌಢಶಿಕ್ಷಣ ಪೂರೈಸಿದೆ. ಆ ಶಾಲೆಯ ಗಣಿತ ಶಿಕ್ಷಕ ರಾಣೆಪ್ಪ ಅವರು ನನಗೆ ಶಿಕ್ಷಣದ ಜೊತೆಗೆ, ಜೀವನದ ಮೌಲ್ಯಗಳನ್ನು ಕಲಿಸಿ, ಮಾರ್ಗದರ್ಶನ ನೀಡಿದರು. ಹೀಗೆ ಪರಿಶ್ರಮದೊಂದಿಗೆ ಪದವಿ ಪೂರೈಸಿದೆ. ಹಣದ ಕೊರತೆಯಿಂದ ಮುಂದಕ್ಕೆ ಓದಲಾಗಲಿಲ್ಲ. ನಂತರ ಹುಬ್ಬಳ್ಳಿಯ ಲಾಡ್ಜ್‌ವೊಂದರಲ್ಲಿ ರೂಮ್ ಬಾಯ್ ಆಗಿ ಕೆಲಸಕ್ಕೆ ಸೇರಿದೆ. ಈ ವಿಷಯ ತಿಳಿದ ರಾಣೆಪ್ಪ ಮೇಷ್ಟ್ರು, ನನ್ನನ್ನ ಕರೆಸಿ ಬ್ಯಾಂಕಿನಲ್ಲಿ ಶೈಕ್ಷಣಿಕ ಸಾಲ ಕೊಡಿಸಿ, ಉನ್ನತ ವ್ಯಾಸಂಗಕ್ಕೆ ಉತ್ತೇಜಿಸಿದರು. ಈ ಆರ್ಥಿಕ ಸಹಕಾರದಿಂದ ಬಿ.ಇಡಿ ಪದವಿ ಪಡೆದೆ. ಬಿ.ಇಡಿ ಓದುವಾಗ ಬಳ್ಳಾರಿಯ ಕೊಟ್ಟೂರು ಸ್ವಾಮಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯದ ಪ್ರೊ. ಸುರೇಶ ಬಾಬು ಅಗತ್ಯ ಪುಸ್ತಕಗಳನ್ನು ನೀಡಿದರು. ಅವರ ನೆರವು ಮರೆಯುವಂತಿಲ್ಲ. ಎಲ್ಲರ ಸಹಕಾರದಿಂದ 2008ರಲ್ಲಿ ಸಿರುಗುಪ್ಪ ತಾಲ್ಲೂಕಿನ ಕರೂರ ಗ್ರಾಮದ ಅಗಸರ ದ್ಯಾವಪ್ಪ ಸರ್ಕಾರಿ ಪ್ರೌಢಶಾಲೆಯಲ್ಲಿ ಶಿಕ್ಷಕನಾಗಿ ನೇಮಕಗೊಂಡೆ.

ಶಿಕ್ಷರಾಗಿದ್ದು ಸರಿ, ಸ್ಪರ್ಧಾತ್ಮಕ ಪರೀಕ್ಷೆ ಕಡೆಗೆ ಒಲವು ಮೂಡಿದ್ದು ಹೇಗೆ?

ಶಿಕ್ಷಕನಾಗಿ ಸೇರುವ ಪೂರ್ವದಲ್ಲಿ 2006 ರಲ್ಲಿ ಎಸ್.ಡಿ.ಎ ಪರೀಕ್ಷೆ ಬರೆದಿದ್ದೆ. ಅದೇ ವರ್ಷ ಕೆಎಎಸ್ ಪರೀಕ್ಷೆಯನ್ನೂ ಬರೆದಿದ್ದೆ. ಮನೆಯಲ್ಲಿ ಬಡತನವಿದ್ದ ಕಾರಣ ಸಂಸಾರ ಸಾಗಿಸಲು ತುಂಬಾ ಒದ್ದಾಡುತ್ತಿದ್ದೆ. ಯಾವುದಾದರೂ ಒಂದು ಕೆಲಸ ಬೇಕಾಗಿತ್ತು. ಪ್ರೌಢಶಾಲಾ ಶಿಕ್ಷಕನಾಗಿ ನೇಮಕವಾದಾಗ ನೆಮ್ಮದಿಯ ನಿಟ್ಟುಸಿರು ಬಿಟ್ಟೆ. ಹತ್ತು ವರ್ಷ ಶಿಕ್ಷಕನಾಗಿ ಕಾರ್ಯನಿರ್ವಹಿಸಿದೆ. ಆ ಸಂದರ್ಭದಲ್ಲಿ ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದ ಕೆಎಎಸ್ ಮತ್ತು ಐಎಎಸ್ ಪಾಸಾದವರ ಸಂದರ್ಶನಗಳನ್ನು ಓದುತ್ತಿದ್ದೆ. ಅಂಥವರ ಮಾತುಗಳು ನನ್ನ ಮನಸ್ಸಿಗೆ ಬಹಳ ಹಿಡಿಸಿದವು. ಕೆಎಎಸ್ ಪರೀಕ್ಷೆ ಬರೆಯಲು ಸ್ಫೂರ್ತಿ ನೀಡಿದವು. ಆ ಹೊತ್ತಿಗೆ ಮೂರು ಬಾರಿ ಕೆಎಎಸ್ ಬರೆದ ಅನುಭವವೂ ಇತ್ತು. ಮತ್ತೆ ನಿರಂತರ ಅಧ್ಯಯನದೊಂದಿಗೆ 2014ರಲ್ಲಿ ಕೆಎಎಸ್ ಪರೀಕ್ಷೆ ಪಾಸ್ ಮಾಡಿದೆ.

ಒಂದು ಕಡೆ ಶಿಕ್ಷಕ ವೃತ್ತಿ, ಇನ್ನೊಂದೆಡೆ ಕೆಎಎಸ್ ಪರೀಕ್ಷೆ ಎರಡನ್ನೂ ಹೇಗೆ ನಿಭಾಯಿಸಿದಿರಿ?

ನಾನು ಕೆಎಎಸ್ ಪರೀಕ್ಷೆ ಬರೆಯಲು ಪ್ರೋತ್ಸಾಹ ನೀಡಿದವರು ರಾಣೆಪ್ಪ ಶಿಕ್ಷಕರು. ಅವರು ಹೇಳುತ್ತಿದ್ದ ಸಮಯಪಾಲನೆ ನನ್ನ ನೆರವಿಗೆ ಬಂದಿತು. ಸಮಯ ಪಾಲನೆ ಜೊತೆಗೆ ಪರೀಕ್ಷೆ ಸಿದ್ಧತೆಗಾಗಿಯೇ ಸಮಯ ಮೀಸಲಿಟ್ಟೆ. ಶಾಲಾ ಅವಧಿಯ ನಂತರ ಕೆಎಎಸ್ ಪರೀಕ್ಷೆಗೆ ಓದುತ್ತಿದ್ದೆ. ಶನಿವಾರ ಮತ್ತು ಭಾನುವಾರದ ರಜೆ ದಿನಗಳನ್ನು ಅಧ್ಯಯನಕ್ಕಾಗಿ ಬಳಸಿಕೊಳ್ಳುತ್ತಿದ್ದೆ. ಓದು, ಮರು ಓದು, ನಿರಂತರ ಅಭ್ಯಾಸ.. ಇಂಥ ಪ್ರಯತ್ನಗಳು ಪರೀಕ್ಷೆಯ ಯಶಸ್ಸಿಗೆ ನೆರವಾದವು. ಕೆಲಸದ ನಡುವೆ ಸಮಯ ಸಿಗುತ್ತಿರಲಿಲ್ಲ. ನಾನೇ ಸಮಯ ಹೊಂದಿಸಿಕೊಳ್ಳುತ್ತಿದ್ದೆ.

ನಾಲ್ಕನೇ ಪ್ರಯತ್ನದಲ್ಲಿ ಕೆಎಎಸ್ ಪಾಸ್ ಮಾಡಿದಿರಿ. ಈ ಪಯಣದಲ್ಲಿ ಓದಿನ ನಿರಂತರತೆ ಹೇಗೆ ಕಾಪಾಡಿಕೊಂಡಿರಿ?

ಬಿ.ಇಡಿ ಪದವಿ ಮುಗಿದ ನಂತರ ಕೆಲಸಕ್ಕಾಗಿ ಹುಡುಕಾಡುತ್ತಿದ್ದೆ. ಜೊತೆ ಜೊತೆಗೆ ಸ್ಪರ್ಧಾತ್ಮಕ ಪರೀಕ್ಷೆಗೂ ತಯಾರಿ ನಡೆಸುತ್ತಿದ್ದೆ. ಕೆಎಎಸ್ ಪರೀಕ್ಷೆ ಬರೆಯಬೇಕೆಂಬ ತುಡಿತವಿತ್ತು. ಹಾಗೆಯೇ ಪರೀಕ್ಷೆ ಪಾಸ್ ಮಾಡಬೇಕೆಂಬ ಸ್ಪಷ್ಟಗುರಿ ಹಾಗೂ ಆತ್ಮವಿಶ್ವಾಸದೊಂದಿಗೆ ಮುನ್ನಡೆದೆ. ಮೊದಲು ಮುಖ್ಯ ಪರೀಕ್ಷೆಗೆ ಬೇಕಾದ ಅಧ್ಯಯನ ಸಾಮಗ್ರಿಗಳನ್ನು ಕಲೆ ಹಾಕಿದೆ. ಸ್ನೇಹಿತರೊಟ್ಟಿಗೆ ಕೆಎಎಸ್ ಪರೀಕ್ಷೆ ಕುರಿತು ಚರ್ಚಿಸುತ್ತಿದ್ದೆ. ಪದವಿಯಲ್ಲಿ



ಗರ್ಜಿಲಿಂಗಪ್ಪ

ಕನ್ನಡ ಸಾಹಿತ್ಯ ಒಂದು ವಿಷಯವಾಗಿ ಓದಿದ್ದರಿಂದ ನನಗೆ ಸ್ಪರ್ಧಾತ್ಮಕ ಪರೀಕ್ಷೆಗೆ ಅನುಕೂಲವಾಯಿತು. ಮುಖ್ಯ ಶಿಕ್ಷಕ ಕಲ್ಲಗುಡಿ ವಿರುಪಾಕ್ಷಿ ಹಾಗೂ ಹೊನ್ನುರವಲಿಯವರ ಮಾರ್ಗದರ್ಶನ, ನನಗೆ ತುಂಬಾ ನೆರವಾಯಿತು.

ಸಿವಿಲ್ ಸರ್ವೀಸ್ ಪರೀಕ್ಷೆ ಬರೆಯುತ್ತಿರುವ ಇಂದಿನ ಅಭ್ಯರ್ಥಿಗಳಿಗೆ ನಿಮ್ಮ ಸಲಹೆ ಏನು?

ಕೆಎಎಸ್, ಐಎಎಸ್ ಪರೀಕ್ಷೆ ಬರೆಯುವವರು ಅಧ್ಯಯನದ ಜೊತೆಗೆ, ಮಾನಸಿಕವಾಗಿ ಸಿದ್ಧತೆ ಮಾಡಿಕೊಳ್ಳಬೇಕು. ಅಧ್ಯಯನ– ಅಭ್ಯಾಸ ಕುರಿತು ನಿಖರವಾದ ಯೋಜನೆ ಹಾಕಿಕೊಳ್ಳಬೇಕು. ಅಧ್ಯಯನದ ವೇಳೆ ಎಂಥದ್ದೇ ಸಮಸ್ಯೆ ಎದುರಾದರೂ ಧೃತಿಗೆಡಬಾರದು. ಈಗಾಗಲೇ ಕೆಎಎಸ್ ಮತ್ತು ಐಎಎಸ್ ಪರೀಕ್ಷೆ ಉತ್ತೀರ್ಣರಾದವರ ಬಳಿ ಮಾರ್ಗದರ್ಶನ ಪಡೆಯಬೇಕು. ಈ ಪರೀಕ್ಷೆಗಳಲ್ಲಿ ನಪಾಸಾದವರ ಬಳಿ ಪರೀಕ್ಷೆಯ ಸಾಧಕ–ಬಾಧಕಗಳ ಬಗ್ಗೆ ಚರ್ಚಿಸಬೇಕು. ಬಹು ಮುಖ್ಯವಾಗಿ ಪರೀಕ್ಷೆಗೆ ಅಗತ್ಯವಾದ ಅಧ್ಯಯನ ಸಾಮಗ್ರಿಗಳನ್ನು ಅನುಕ್ರಮವಾಗಿ ಜೋಡಿಸಿಟ್ಟುಕೊಂಡು, ಸತತ ಅಧ್ಯಯನ ಕೈಗೊಳ್ಳಬೇಕು. ಓದಿದ್ದನ್ನು ಅರ್ಥವಾಗುವ ರೀತಿಯಲ್ಲಿ ಪರೀಕ್ಷೆಯಲ್ಲಿ ಪ್ರಸ್ತುತಪಡಿಸಬೇಕು. ಹಾಗೆ ಬರೆಯುವ ವಿಧಾನವನ್ನು ಕಲಿಯಬೇಕು. ನೂರು ಪುಟಗಳಷ್ಟು ಬರೆಯಬೇಕಾಗಿರುವುದರಿಂದ ಆಳವಾದ ಅಧ್ಯಯನ ಅಗತ್ಯ. ನಿರಂತರ ಓದಿನ ಜೊತೆಗೆ ಓದಿದ್ದನ್ನು ಪುನರಾವರ್ತನೆ ಖಂಡಿತ ಮಾಡಲೇಬೇಕು.

ಎಸ್‌ಸಿಸಿ ಪರೀಕ್ಷೆ: ಸರಿಯುತ್ತರಕ್ಕೆ ಲಿಂಕ್ ಇಲ್ಲಿದೆ...

ಕೇಂದ್ರ ಸರ್ಕಾರದ ಸಿಬ್ಬಂದಿ ಮತ್ತು ತರಬೇತಿ ಇಲಾಖೆ ಅಡಿ ಕಾರ್ಯನಿರ್ವಹಿಸುವ ಸ್ಟಾಫ್ ಸೆಲೆಕ್ಷನ್ ಕಮಿಷನ್ (ಎಸ್‌ಎಸ್‌ಸಿ) 2021ರ ಕಂಬೈನ್ಡ್ ಗ್ರ್ಯಾಜುಯೆಟ್ ಲೆವೆಲ್ (ಸಿಜಿಎಲ್)ಪರೀಕ್ಷೆಯ ಟೈಯರ್–1 ಪರೀಕ್ಷೆಯ ಸರಿ ಉತ್ತರಗಳನ್ನು ಪ್ರಕಟಿಸಿದೆ.

ಫಲಿತಾಂಶವನ್ನು ಅಧಿಕೃತ ವೆಬ್‌ಸೈಟ್‌ಗೆ ಲಾಗಿನ್ ಆಗಿ ಪಡೆಯಬಹುದು ಎಂದು ಎಸ್‌ಎಸ್‌ಸಿ ಪ್ರಕಟಣೆಯಲ್ಲಿ ತಿಳಿಸಿದೆ. ಮೊದಲ ಹಂತದ ಪರೀಕ್ಷೆ ದೇಶದ ನಾನಾ ಭಾಗಗಳಲ್ಲಿ ನಡೆದಿತ್ತು.

ನವೆಂಬರ್ 27ರಂದು ಫಲಿತಾಂಶ ಪ್ರಕಟವಾಗಿತ್ತು. ಸರಿ ಉತ್ತರಗಳನ್ನು ಆಸಕ್ತ ಅಭ್ಯರ್ಥಿಗಳು ಡೌನ್‌ಲೋಡ್ ಮಾಡಿಕೊಳ್ಳಬಹುದು. ಈ ಅವಕಾಶ ಜನವರಿ (2022) 7ರ ವರೆಗೆ ಮಾತ್ರ ಇರಲಿದೆ.

ಕೇಂದ್ರ ಸರ್ಕಾರದ ವಿವಿಧ ಇಲಾಖೆ ಹಾಗೂ ಸಚಿವಾಲಯಗಳಲ್ಲಿ ಖಾಲಿ ಇರುವ ಹಲವು ಹುದ್ದೆಗಳಿಗೆ ಸಿಜಿಎಲ್ ಮೂಲಕ ಅರ್ಹ ಅಭ್ಯರ್ಥಿಗಳ ಆಯ್ಕೆ ಮಾಡಲಾಗುವುದು. 30ಕ್ಕೂ ಹೆಚ್ಚು ವಿಭಾಗಗಳಲ್ಲಿ ಗ್ರೂಪ್ ಬಿ ಮತ್ತು ಸಿ ವರ್ಗಗಳ ಹಲವು ಹುದ್ದೆಗಳು ಖಾಲಿ ಇದ್ದವು.

ಹೆಚ್ಚಿನ ಮಾಹಿತಿಗೆ ಈ ವೆಬ್‌ಸೈಟ್ ಲಿಂಕ್: www.ssc.nic.in

ಪ್ರಜಾವಾಣಿ ಉದ್ಯೋಗ ವಾರ್ತೆ

ಬಿಇಎಲ್‌ನಲ್ಲಿ ಎಂಜಿನಿಯರ್ ಹುದ್ದೆಗಳಿಗೆ ಅರ್ಜಿ

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (ಬಿಇಎಲ್) 2021ನೇ ಸಾಲಿನ ನೇಮಕಾತಿ ಕುರಿತಂತೆ ವೆಬ್‌ಸೈಟ್‌ನಲ್ಲಿ ಅಧಿಕೃತ ಮಾಹಿತಿ ಹೊರಡಿಸಿದೆ. ಆಸಕ್ತರು ಅರ್ಜಿ ಸಲ್ಲಿಸಬಹುದು.

- ಹುದ್ದೆಗಳು: ಪ್ರಾಜೆಕ್ಟ್ ಎಂಜಿನಿಯರ್
- ಹುದ್ದೆಗಳ ಸಂಖ್ಯೆ: 36
- ಸ್ಥಳ: ಬೆಂಗಳೂರು ಮತ್ತು ಇತರೆ ಕಡೆ
- ವಿದ್ಯಾರ್ಹತೆ: ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಬಿಇ, ಬಿಟೆಕ್, ಎಂಬಿಎ, ಪಿಜಿ ಡಿಪ್ಲೊಮಾ, ಬಿಆರ್ಕ್ ಪದವಿ ಪಡೆದಿರಬೇಕು.
- ವಯೋಮಿತಿ: ಪ್ರಾಜೆಕ್ಟ್ ಎಂಜಿನಿಯರ್‌ಗೆ 28 ವರ್ಷ ಮೀರಿರಬಾರದು. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ 5 ವರ್ಷ ವಿನಾಯಿತಿ, ಒಬಿಸಿ ಅಭ್ಯರ್ಥಿಗಳಿಗೆ 3 ವರ್ಷ ಹಾಗೂ ಅಂಗವಿಕಲ ಅಭ್ಯರ್ಥಿಗಳಿಗೆ 10 ವರ್ಷ ವಿನಾಯಿತಿ ಇದೆ.
- ಆಯ್ಕೆ ಪ್ರಕ್ರಿಯೆ: ಪದವಿ ಅಂತಿಮ ವರ್ಷದ ಅಂಕಗಳ ಸರಾಸರಿ ಹಾಗೂ ವೈಯಕ್ತಿಕ ಸಂದರ್ಶನ.
- ಅರ್ಜಿ ಶುಲ್ಕ: ಪ್ರಾಜೆಕ್ಟ್ ಎಂಜಿನಿಯರ್ ಹುದ್ದೆಯ ಒಬಿಸಿ ಅಭ್ಯರ್ಥಿಗಳಿಗೆ ₹ 500 ಇದೆ. ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಹಾಗೂ ಅಂಗವಿಕಲ ಅಭ್ಯರ್ಥಿಗಳಿಗೆ ಯಾವುದೇ ಅರ್ಜಿ ಶುಲ್ಕವಿಲ್ಲ.
- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಡಿಸೆಂಬರ್ 26, 2021
- ಹೆಚ್ಚಿನ ಮಾಹಿತಿಗೆ: https://bel-india.in

ಕೃಷಿ ಸಂಶೋಧನಾ ಸಂಸ್ಥೆಯಲ್ಲಿ 641 ಹುದ್ದೆಗಳಿಗೆ ಅರ್ಜಿ

ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯಲ್ಲಿ ಖಾಲಿ ಇರುವ ಟೆಕ್ನಿಷಿಯನ್ ಹುದ್ದೆಗಳ ನೇಮಕಾತಿಗೆ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

- ಹುದ್ದೆಗಳ ಸಂಖ್ಯೆ: 641
- ವಿದ್ಯಾರ್ಹತೆ: ಹುದ್ದೆಗಳಿಗೆ ಅನುಗುಣವಾಗಿ ಎಸ್‌ಎಸ್‌ಎಲ್‌ಸಿ ವಿದ್ಯಾರ್ಹತೆಯನ್ನು ಪೂರ್ಣಗೊಳಿಸಿರಬೇಕು.
- ವೇತನ: ಭಾರತ ಸರ್ಕಾರದ ನಿಯಮಗಳ ಅನ್ವಯ ₹21,700 ಆರಂಭಿಕ ವೇತನ ನೀಡಲಾಗುವುದು.
- ವಯೋಮಿತಿ: ಕನಿಷ್ಠ 18, ಗರಿಷ್ಠ 35 ವರ್ಷದವರಾಗಿರಬೇಕು. ಎಸ್‌ಸಿ, ಎಸ್‌ಟಿ ಅಭ್ಯರ್ಥಿಗಳಿಗೆ 5 ವರ್ಷ, ಇತರೆ ಹಿಂದುಳಿದ ವರ್ಗದ ಅಭ್ಯರ್ಥಿಗಳಿಗೆ 3 ವರ್ಷ, ಅಂಗವಿಕಲರಿಗೆ 10 ವರ್ಷಗಳ ವಯೋಮಿತಿಯಲ್ಲಿ ಸಡಿಲಿಕೆ ಇರುತ್ತದೆ.
- ಅರ್ಜಿ ಶುಲ್ಕ: ಸಾಮಾನ್ಯ / ಒಬಿಸಿ ಅಭ್ಯರ್ಥಿಗಳಿಗೆ ₹1000 ಹಾಗೂ ಮಹಿಳೆಯರು, ಎಸ್‌ಸಿ, ಎಸ್‌ಟಿ, ಮಾಜಿ ಸೈನಿಕ ಅಭ್ಯರ್ಥಿಗಳಿಗೆ ₹300.
- ನೇಮಕಾತಿ ಪ್ರಕ್ರಿಯೆ: ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ಆನ್‌ಲೈನ್ ಪರೀಕ್ಷೆ ನಡೆಸಿ ಆಯ್ಕೆ ಮಾಡಲಾಗುತ್ತದೆ.
- ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಮೂಲಕ.
- ಅರ್ಜಿ ಸಲ್ಲಿಸಲು ಕೊನೆಯ ದಿನ: ಜನವರಿ 10, 2022
- ಹೆಚ್ಚಿನ ಮಾಹಿತಿಗೆ: https://www.iari.res.in

ವಿಜಯಪುರ, ಬಾಗಲಕೋಟೆ ಹಾಲು ಒಕ್ಕೂಟದಲ್ಲಿ ಹುದ್ದೆಗಳು



ವಿಜಯಪುರ, ಬಾಗಲಕೋಟೆ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತದಲ್ಲಿ ಖಾಲಿ ಇರುವ 39 ಹುದ್ದೆಗಳ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ವಿಜಯಪುರ, ಬಾಗಲಕೋಟೆ ಜಿಲ್ಲಾ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸಬೇಕು. ಆಸಕ್ತ ಅಭ್ಯರ್ಥಿಗಳು ಅರ್ಜಿಗಳನ್ನು ಆನ್‌ಲೈನ್ ಮೂಲಕವೇ ಸಲ್ಲಿಸಬೇಕು. ಇತರೆ ವಿಧಾನದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

- ಹುದ್ದೆಗಳ ಸಂಖ್ಯೆ: 39
- ವಿದ್ಯಾರ್ಹತೆ ಹಾಗೂ ವೇತನ: ಸಂಬಂಧಿತ ಹುದ್ದೆಗಳ ಶೈಕ್ಷಣಿಕ ವಿದ್ಯಾರ್ಹತೆ ಹಾಗೂ ವೇತನ ಶ್ರೇಣಿಗಾಗಿ ಈ ಕೆಳಗೆ ನೀಡಿರುವ ವೆಬ್‌ಸೈಟ್‌ನ ಅಧಿಸೂಚನೆಯನ್ನು ನೋಡಿ ತಿಳಿಯಬಹುದು.
- ವಯೋಮಿತಿ: ಸಾಮಾನ್ಯ ಅಭ್ಯರ್ಥಿಗಳು: ಕನಿಷ್ಠ 18, ಗರಿಷ್ಠ 35, ಒಬಿಸಿ ಅಭ್ಯರ್ಥಿಗಳು: ಕನಿಷ್ಠ 18, ಗರಿಷ್ಠ 38, ಎಸ್‌ಸಿ ಹಾಗೂ ಎಸ್‌ಟಿ ಅಭ್ಯರ್ಥಿಗಳು: ಕನಿಷ್ಠ 18, ಗರಿಷ್ಠ 40
- ನೇಮಕಾತಿ ಪ್ರಕ್ರಿಯೆ: ಲಿಖಿತ ಪರೀಕ್ಷೆಯ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು. ಕನ್ನಡ ಭಾಷೆ, ಇಂಗ್ಲಿಷ್, ಸಾಮಾನ್ಯ ಜ್ಞಾನ, ಸಹಕಾರ, ಸಹಕಾರಿ ಕಾನೂನು, ಭಾರತೀಯ ಸಂವಿಧಾನ, ಕಂಪ್ಯೂಟರ್, ಹಾಲು ಒಕ್ಕೂಟಕೆ ಸಂಬಂಧಿಸಿದ ವಿಷಯಗಳ ಮೇಲಿನ ಪ್ರಶ್ನೆಪತ್ರಿಕೆಯನ್ನು ನೀಡಲಾಗುವುದು.
- ಅರ್ಜಿ ಸಲ್ಲಿಕೆ ಕಡೆ ದಿನಾಂಕ: ಜನವರಿ 20, 2022
- ಒಕ್ಕೂಟದ ಅಧಿಕೃತ ವೆಬ್ ಸೈಟ್: https://bimul.coop

❦ ಸುಭಾಷಿತ ❦

ತುಕ್ಕು ಹಿಡಿದ ಕಬ್ಬಿಣದಂತೆ ನಶಿಸಿ ಹೋಗಬೇಡಿ. ತೇದ ಗಂಧ ಸೂಸುವ ಪರಿಮಳವನ್ನು ಬಿಟ್ಟುಹೋಗಿ.

– ಸರ್ ಎಂ. ವಿಶ್ವೇಶ್ವರಯ್ಯ

ಚುನಾವಣಾ ಆಯೋಗಕ್ಕೆ 'ಸಮನ್ಸ್' ಒಪ್ಪಿತ ನಡವಳಿಕೆಗಳ ಉಲ್ಲಂಘನೆ

ಪ್ರಧಾನ ಮಂತ್ರಿಯವರ ಕಚೇರಿಯ (ಪಿಎಂಒ) ಅಧಿಕಾರಿಗಳ ಜೊತೆಗಿನ ಸಭೆಗೆ ಕೇಂದ್ರ ಚುನಾವಣಾ ಆಯೋಗದ ಅತ್ಯುನ್ನತ ಅಧಿಕಾರಿಗಳು ಹಾಜರಾಗಬೇಕು ಎಂದು ಕೇಂದ್ರ ಸರ್ಕಾರದ ಸಚಿವಾಲಯವೊಂದು ಹಿಂದಿನ ತಿಂಗಳು ಹೇಳಿತು. ಈ ರೀತಿ ಹೇಳಿದ್ದು, ಸಾರ್ವಜನಿಕವಾಗಿ ಒಪ್ಪಿತ-ವಾಗಿರುವ ನಡತೆಗಳ ಗಂಭೀರ ಉಲ್ಲಂಘನೆಗೆ ಸಮ. ಈ ಸಭೆಯನ್ನು 'ಅನೌಪಚಾರಿಕ ಮಾತುಕತೆ' ಎಂದು ಹೇಳಲಾಗಿದ್ದರೂ, ಚುನಾವಣಾ ಆಯೋಗದ ಅಧಿಕಾರಿಗಳು ಸಭೆಗೆ ಹಾಜರಾಗಿದ್ದು ಕೂಡ ತಪ್ಪು. ಕೇಂದ್ರ ಕಾನೂನು ಸಚಿವಾಲಯದ ಅಧಿಕಾರಿಯೊಬ್ಬರು ಚುನಾವಣಾ ಆಯೋಗಕ್ಕೆ ಪತ್ರ ಬರೆದು, ಪ್ರಧಾನ ಮಂತ್ರಿಯವರ ಪ್ರಧಾನ ಕಾರ್ಯದರ್ಶಿ ಪಿ.ಕೆ. ಮಿಶ್ರಾ ಅವರು, ಮುಖ್ಯ ಚುನಾವಣಾ ಆಯುಕ್ತರು (ಸಿಇಸಿ) ಮಾತುಕತೆಯಲ್ಲಿ ಉಪಸ್ಥಿತರಿರಬೇಕು ಎಂದು 'ಬಯಸಿದ್ದಾರೆ' ಎಂದು ಹೇಳಿದರು. ಈ ಪತ್ರವು ಕೇಂದ್ರ ಸರ್ಕಾರದಿಂದ ಚುನಾವಣಾ ಆಯೋಗಕ್ಕೆ ರವಾನಿಸಿದ ಸಮನ್ಸ್ ರೀತಿಯಲ್ಲಿತ್ತು. ಪತ್ರದ ಧಾಟಿಯ ಕುರಿತು ಮುಖ್ಯ ಚುನಾವಣಾ ಆಯುಕ್ತ ಸುಶೀಲ್ ಚಂದ್ರ ಅವರು ಅಸಮಾಧಾನ ವ್ಯಕ್ತಪಡಿಸಿದರು. ಮುಖ್ಯ ಸಭೆಯಿಂದ ಅವರು ದೂರ ಉಳಿದರು. ಆದರೆ, ಮಿಶ್ರಾ ಜೊತೆಗೆ ಆನಂತರ 'ಅನೌಪಚಾರಿಕ'ವಾಗಿ ವರ್ಚುವಲ್ ವೇದಿಕೆ ಮೂಲಕ ನಡೆದ ಮಾತುಕತೆಯಲ್ಲಿ ತಮ್ಮ ಇಬ್ಬರು ಸಹೋದ್ಯೋಗಿ ಚುನಾವಣಾ ಆಯುಕ್ತರ ಜೊತೆ ಭಾಗಿಯಾಗಲು ತೀರ್ಮಾನಿಸಿದರು. ಮಾತುಕತೆಯಲ್ಲಿ ಪಾಲ್ಗೊಳ್ಳುವಂತೆ ಸೂಚಿಸಿ ಬರೆದ ಪತ್ರ ಹಾಗೂ ನಂತರ ಮಾತುಕತೆಯಲ್ಲಿ ಚುನಾವಣಾ ಆಯುಕ್ತರು ಪಾಲ್ಗೊಂಡಿದ್ದು ಅಹಿತಕರ ಪ್ರಶ್ನೆಗಳನ್ನು ಎತ್ತುತ್ತವೆ. ಚುನಾವಣಾ ಆಯೋಗದ ಸ್ಥಿತಿ ಮತ್ತು ಅದು ಸರ್ಕಾರದ ಜೊತೆ ಹೊಂದಿರುವ ಸಂಬಂಧದ ಕುರಿತ ಪ್ರಶ್ನೆಗಳು ಇವು. ಇಡೀ ಪ್ರಸಂಗದ ಕುರಿತು ಕೇಂದ್ರ ಕಾನೂನು ಸಚಿವಾಲಯ ನಂತರದಲ್ಲಿ ನೀಡಿರುವ ವಿವರಣೆಯು ಪ್ರಶ್ನೆಗಳಿಗೆ ತೃಪ್ತಿಕರ ಉತ್ತರ ಕೊಡುವುದಿಲ್ಲ.

ಕೇಂದ್ರ ಕಾನೂನು ಸಚಿವಾಲಯವು ಚುನಾವಣಾ ಆಯೋಗಕ್ಕೆ ಕಳುಹಿಸಿದ್ದ ಪತ್ರವು ಕೋರಿಕೆಯ ಮಾದರಿಯಲ್ಲಿ ಇರಲಿಲ್ಲ; ಒಂದು ಸಮನ್ಸ್‌ನಂತೆ ಇತ್ತು

ಚುನಾವಣಾ ಆಯೋಗವು ಸಾಂವಿಧಾನಿಕ ಸಂಸ್ಥೆ. ಯಾವುದೇ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಅತ್ಯುನ್ನತ ಮಟ್ಟದ ಸ್ವಾಯತ್ತ ಸ್ಥಾನ ಈ ಸಂಸ್ಥೆಗೆ ಇರಬೇಕು. ಇದು ಯಾವುದೇ ಸರ್ಕಾರಗಳ ಮರ್ಜಿಗೆ ಒಳಗಾಗದೆ, ಸ್ವತಂತ್ರವಾಗಿ ಕೆಲಸ ಮಾಡಬೇಕು. ರಾಜಕೀಯ ಪಕ್ಷಗಳು ಅಥವಾ ಇನ್ನಾವುದೇ ಪರೋಕ್ಷ ಅಧಿಕಾರ ಕೇಂದ್ರಗಳ ಪ್ರಭಾವಕ್ಕೆ ಕೂಡ ಈ ಸಂಸ್ಥೆಯು ಒಳಗಾಗಬಾರದು. ಮುಕ್ತ ಹಾಗೂ ನ್ಯಾಯ ಸಮ್ಮತವಾಗಿ ಚುನಾವಣೆ ನಡೆಸುವ ಅತ್ಯಂತ ಗುರುತರ ಹೊಣೆ ಈ ಸಂಸ್ಥೆಯ ಮೇಲೆ ಇರುತ್ತದೆಯಾದ ಕಾರಣ, ಸಂಸ್ಥೆ ಕೂಡ ಮುಕ್ತವಾಗಿ ಮತ್ತು ನಿರ್ಭೀತಿಯಿಂದ ಕೆಲಸ ನಿರ್ವಹಿಸಬೇಕು. ತಾನು ಮುಕ್ತವಾಗಿ, ಯಾವ ಪ್ರಭಾವಕ್ಕೂ ಒಳಗಾಗದೆ ಕೆಲಸ ಮಾಡುತ್ತಿದ್ದೇನೆ ಎಂಬುದನ್ನು ಸಂಸ್ಥೆಯು ಸಾರ್ವಜನಿಕರಿಗೆ ಗೊತ್ತುಮಾಡಬೇಕು ಕೂಡ. ಸರ್ಕಾರದ ಯಾವುದೇ ಅಧಿಕಾರಿಯು ಚುನಾವಣಾ ಆಯೋಗದ ಪ್ರಮುಖರನ್ನು ಸಭೆಗೆ ಬರುವಂತೆ ಸೂಚಿಸುವಂತೆ ಇಲ್ಲ. ಚುನಾವಣಾ ಆಯುಕ್ತರು ಯಾವುದೇ ವಿಷಯದ ಬಗ್ಗೆ ಸರ್ಕಾರಕ್ಕೆ ವಿವರ ನೀಡಲು ಹೋಗುವುದಿಲ್ಲ. ಸರ್ಕಾರದ ಜೊತೆ ಮಾತುಕತೆ ನಡೆಸುವ ಸಂದರ್ಭ ಇದ್ದಾಗ ಆಯೋಗದ ಕೆಳ ಹಂತದ ಅಧಿಕಾರಿಗಳು ಆ ಕೆಲಸ ನಿಭಾಯಿಸುತ್ತಾರೆ. ಹೀಗಿದ್ದರೂ, ಆಯೋಗಕ್ಕೆ ಕಳುಹಿಸಿದ್ದ ಪತ್ರವು ಕೋರಿಕೆಯ ಮಾದರಿಯಲ್ಲಿ ಇರಲಿಲ್ಲ; ಒಂದು ಸಮನ್ಸ್‌ನಂತೆ ಇತ್ತು.

ಈ ಪತ್ರವು ಚುನಾವಣಾ ಆಯೋಗವನ್ನು ಅಧೀನ ಸಂಸ್ಥೆ ಎಂಬಂತೆ ಕಂಡಿತ್ತು. ಅಂದರೆ, ಸಂಸ್ಥೆಯ ಸ್ವಾತಂತ್ರ್ಯ ಹಾಗೂ ಅದರ ಅಧಿಕಾರಕ್ಕೆ ಬೆಲೆ ಕೊಟ್ಟಿರಲಿಲ್ಲ. ಪ್ರಜಾತಂತ್ರ ವ್ಯವಸ್ಥೆಯು ಚಲನಶೀಲವಾಗಿ ಇರಲು ಅತ್ಯಗತ್ಯವಾಗಿರುವ ಸಂಸ್ಥೆಗಳನ್ನು ದುರ್ಬಲಗೊಳಿಸುವ ಸರ್ಕಾರದ ಪ್ರಯತ್ನಗಳ ಭಾಗವಾಗಿ ಈ ಪತ್ರವನ್ನು ಕಾಣಬೇಕು. ಚುನಾವಣಾ ಆಯೋಗಕ್ಕೆ ನಿಗದಿ ಮಾಡಲಾಗಿರುವ ಮಹತ್ವದ ಜವಾಬ್ದಾರಿಯ ಕಾರಣದಿಂದಾಗಿ ಆ ಸಂಸ್ಥೆಗೆ ವಿಶೇಷವಾದ ಘನತೆ ಇದೆ. ಅದು ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಿಭಾಯಿಸಬೇಕಿರುವ ಕರ್ತವ್ಯ ಬಹಳ ವಿಶೇಷವಾದುದು. ಸಂಸ್ಥೆಯ ಘನತೆಯನ್ನು ಕಾಯಬೇಕಿರುವುದು ಬಹುಮುಖ್ಯ. ಹಾಗೆಯೇ, ಸಂಸ್ಥೆಗೆ ಕೊಡಬೇಕಿರುವ ಗೌರವಕ್ಕೆ ಚ್ಯುತಿ ಬಾರದಂತೆಯೂ ನೋಡಿಕೊಳ್ಳಬೇಕು. ಈಚಿನ ವರ್ಷಗಳಲ್ಲಿ ಚುನಾವಣಾ ಆಯೋಗವು ಉದ್ದೇಶಪೂರ್ವಕವಾಗಿ ಅಥವಾ ತಿಳಿಯದೇ ಮಾಡಿದ ಕೆಲವು ಕೃತ್ಯಗಳಿಗಾಗಿ ತೀಕ್ಷ್ಣ ಟೀಕೆಗಳಿಗೆ ಗುರಿಯಾಗಿದೆ. ಆಯೋಗದ ಕೆಲವು ನಡೆಗಳು ಆಡಳಿತದಲ್ಲಿ ಇರುವ ಪಕ್ಷಕ್ಕೆ ಸಹಾಯವಾಗುವಂತೆ ಇದ್ದವು ಎಂಬ ಅಭಿಪ್ರಾಯವೂ ವ್ಯಕ್ತವಾಗಿದೆ. ಚುನಾವಣಾ ವೇಳಾಪಟ್ಟಿ ಪ್ರಕಟಿಸುವುದು, ದಿನಾಂಕಗಳ ಘೋಷಣೆ, ಮಾದರಿ ನೀತಿ ಸಂಹಿತೆಯ ವಿಚಾರವಾಗಿ ಕೈಗೊಂಡ ಕೆಲವು ತೀರ್ಮಾನಗಳು ವಿವಾದಕ್ಕೆ ದಾರಿ ಮಾಡಿಕೊಟ್ಟಿದ್ದೂ ಇದೆ. ಚುನಾವಣಾ ಆಯುಕ್ತರು ಸಭೆಯೊಂದರಲ್ಲಿ ಪಾಲ್ಗೊಳ್ಳಬೇಕು ಎಂದು ಸರ್ಕಾರ ಬಯಸಿದ್ದೇ ತಪ್ಪು. ಆಯೋಗವು ಮಾತುಕತೆಗೆ ಹೋಗಿದ್ದೂ ತಪ್ಪು. ಅದರಲ್ಲೂ ಮುಖ್ಯವಾಗಿ, ದೇಶದ ಪ್ರಮುಖ ರಾಜ್ಯಗಳ ವಿಧಾನಸಭಾ ಚುನಾವಣೆ ಹತ್ತಿರವಾಗುತ್ತಿರುವ ಸಂದರ್ಭದಲ್ಲಿ ಹೀಗೆ ಮಾಡಿದ್ದು ದೊಡ್ಡ ತಪ್ಪು.

ದಿನದ ಟ್ವೀಟ್

ಸತ್ಯಾಂಶ ಗೊತ್ತಾಗಬೇಕು

ಸುವರ್ಣಸೌಧಕ್ಕೆ ಮಾಧ್ಯಮಗಳನ್ನು ನಿರ್ಬಂಧಿಸಿದ ಬಗ್ಗೆ ಸ್ಪೀಕರ್ ಅವರು ತಮಗೇನೂ ಗೊತ್ತಿಲ್ಲ ಎಂದಿದ್ದಾರೆ. ಹಾಗಾದರೆ, ನಿರ್ಬಂಧ ಹೇರಿದವರು ಯಾರು? ಸ್ಪೀಕರ್ ಅವರಿಗೆ ಗೊತ್ತಿಲ್ಲದೆ ನಿರ್ಬಂಧದ ಸಂದೇಶ ಮಾಧ್ಯಮಗಳಿಗೆ ಕೊಟ್ಟವರು ಯಾರು? ಈ ಬಗ್ಗೆ ಜನರಿಗೆ ಸತ್ಯಾಂಶ ಗೊತ್ತಾಗಬೇಕಿದೆ.

ಎಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ಕಿಡಿನುಡಿ

ವಿಶ್ವವಿದ್ಯಾಲಯಗಳಲ್ಲಿ ವಸೂಲಿಬಾಜಿ ನಿಲ್ಲಬೇಕು. ಅಲ್ಲಿನ ಪರಿಸರ ವಿದ್ಯಾರ್ಜನೆಗೆ ಪೂರಕವಾಗಿ ಜ್ಞಾನದೇಗುಲಗಳಾಗಬೇಕು. ಆಮೂಲಾಗ್ರ ಬದಲಾವಣೆ ಆಗಬೇಕು. ಕೆಲವು ವಿಶ್ವವಿದ್ಯಾಲಯಗಳಿಗೆ ಪ್ರವೇಶಿಸಿದರೆ ಬ್ಯಾಂಕ್‌ಗೆ ಹೋದಂತೆ ಅನಿಸುತ್ತದೆ. ಈ ಮಾತಿನಲ್ಲಿ ಹಲವು ಅರ್ಥಗಳಿವೆ.



ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಸೋಮವಾರ, 23-12-1996

- **ಸಿಪಿಪಿ ನಾಯಕತ್ವಕ್ಕೆ ಸೆಣಸಾಟ: ಉಭಯ ಬಣಗಳ ಬಿಗಿ ಪಟ್ಟು**

ನವದೆಹಲಿ, ಡಿ. 22 (ಯುಎನ್‌ಐ, ಪಿಟಿಐ)– ಕಾಂಗ್ರೆಸ್ ಸಂಸದೀಯ ಪಕ್ಷದ (ಸಿಪಿಪಿ) ಅಧ್ಯಕ್ಷ ಸ್ಥಾನಕ್ಕೆ ಒಮ್ಮತ ಅಭ್ಯರ್ಥಿಗೆ ಬದಲಾಗಿ ಚುನಾವಣೆ ನಡೆಯಬೇಕೆಂದು ಮಾಜಿ ಪ್ರಧಾನಿ ಪಿ.ವಿ.ನರಸಿಂಹರಾವ್ ಬೆಂಬಲಿಗರು ಪಟ್ಟು ಹಿಡಿದಿರುವುದರಿಂದ ಅಧ್ಯಕ್ಷ ಸೀತಾರಾಂ ಕೇಸರಿ ಹಾಗೂ ರಾವ್ ಬಣಗಳ ನಡುವೆ ಹಣಾಹಣಿ ನಡೆಯುವ ಸಂಭವವಿದೆ.

ಕಾಂಗ್ರೆಸ್ ಅಧ್ಯಕ್ಷ ಸೀತಾರಾಂ ಕೇಸರಿ ಅವರಿಗೆ ಪಕ್ಷದ ಹಿರಿಯ ನಾಯಕರು ಹಾಗೂ ರಾಜ್ಯ ಘಟಕಗಳ ನಾಯಕರ ಬೆಂಬಲ ಇದೆ ಎನ್ನಲಾಗಿದ್ದು, ಅವರೇ ಸಿಪಿಪಿ ನಾಯಕತ್ವಕ್ಕೆ ಒಮ್ಮತದ ಅಭ್ಯರ್ಥಿ ಎನ್ನಲಾಗುತ್ತಿದೆ.

- **ರಂಗ ಸರ್ಕಾರಕ್ಕೆ ಬೆದರಿಕೆ ಇಲ್ಲ: ಪ್ರಧಾನಿ**

ಕಲ್ಲಿಕೋಟೆ, ಡಿ. 22 (ಪಿಟಿಐ)– ಕಾಂಗ್ರೆಸ್ ಪಕ್ಷದಲ್ಲಿನ ಇತ್ತೀಚಿನ ಬೆಳವಣಿಗೆಯಿಂದ ಸಂಯುಕ್ತ ರಂಗ ಸರ್ಕಾರದ ಸ್ಥಿರತೆಗೆ ಒದಗಬಹುದಾದ ಬೆದರಿಕೆಯ ಕುರಿತು ತಮಗೆ ಯಾವುದೇ ಆತಂಕವಿಲ್ಲ ಎಂದು ಪ್ರಧಾನಿ ಎಚ್.ಡಿ.ದೇವೇಗೌಡ ಅವರು ತಿಳಿಸಿದ್ದು, ಆರ್ಥಿಕ ಸುಧಾರಣೆ ಮುಂದುವರಿಸಿಕೊಂಡು ಹೋಗುವ ತಮ್ಮ ದೃಢ ನಿರ್ಧಾರವನ್ನು ಪುನರುಚ್ಚರಿಸಿದ್ದಾರೆ.

'ದೆಹಲಿ ಗದ್ದುಗೆ ಬಗ್ಗೆ ನನಗೆ ಚಿಂತೆಯಿಲ್ಲ. ಆದರೆ 13 ರಾಜಕೀಯ ಪಕ್ಷಗಳು ನನಗೆ ವಹಿಸಿರುವ ಕಾರ್ಯದ ಬಗ್ಗೆ ಹೆಚ್ಚು ಮುತವರ್ಜಿಯಿದೆ' ಎಂದು ನಗರಕ್ಕೆ ಭೇಟಿ ನೀಡಿರುವ ಅವರು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

50 ವರ್ಷಗಳ ಹಿಂದೆ

ಗುರುವಾರ, 23-12-1971

- **ಆರ್ಥಿಕರಂಗ ಪುನಶ್ಚೇತನಕ್ಕೆ ಐದು ಅಂಶಗಳ ಸಮಗ್ರ ಯೋಜನೆ: ಕೇಂದ್ರದ ಸೂಚನೆ**

ನವದೆಹಲಿ, ಡಿ. 22– ಅಪಾರವಾದ ನಿರಾಶ್ರಿತರ ವಲಸೆ ಮತ್ತು ಪಾಕಿಸ್ತಾನವು ಈಚೆಗೆ ನಡೆಸಿದ ಆಕ್ರಮಣಗಳಿಂದ ಅನೇಕ ಸಮಸ್ಯೆಗಳು ಎದುರಾಗಿ ಈಗಾಗಲೇ ಆರ್ಥಿಕರಂಗದ ಮೇಲೆ ಅಪಾರ ಒತ್ತಡ ಬಿದ್ದಿರುವುದರಿಂದ ಆರ್ಥಿಕರಂಗವನ್ನು ಪುನಶ್ಚೇತನಗೊಳಿಸಲು ಮತ್ತು ಪ್ರಗತಿಯ ವೇಗವು ಕಡಿಮೆಯಾಗುತ್ತಿರುವುದನ್ನು ತಡೆಯಲು ಐದು ಅಂಶಗಳ ಸಮಗ್ರ ಯೋಜನೆಯೊಂದನ್ನು ಯೋಜನಾ ಆಯೋಗ ಮತ್ತು ಸರ್ಕಾರವು ಇಂದು ಸೂಚಿಸಿತು.

ನಾಲ್ಕನೇ ಪಂಚವಾರ್ಷಿಕ ಯೋಜನೆಯ ಮಧ್ಯಂತರ ಸಮೀಕ್ಷೆಯ ಪತ್ರವನ್ನು ಯೋಜನಾ ಸಚಿವ ಶ್ರೀ ಸಿ.ಸುಬ್ರಹ್ಮಣ್ಯಂ ಇಂದು ಲೋಕಸಭೆಯಲ್ಲಿ ಮಂಡಿಸಿ, ಬೆಲೆಗಳ ಸ್ಥಿರತೆ, ಸ್ವಾಲಂಬನೆ ಸಾಧನೆ, ಉತ್ಪಾದನೆ ಏರಿಕೆ, ಮಿತವ್ಯಯ ಸಾಧನೆ ಮತ್ತು ಹೆಚ್ಚು ಉಳಿತಾಯ ಹಾಗೂ ಸಂಪನ್ಮೂಲಗಳನ್ನು ಶೇಖರಿಸಲು ಕರೆ ನೀಡಿದರು.

ಗ್ರಾಹಕರು ತಮ್ಮ ಹಕ್ಕು ಅರಿತರೆ ಸಾಲದು, ವರ್ತನೆಯ ಬಗ್ಗೆಯೂ ಗಮನ ನೀಡಬೇಕು

ಬದಲಾಗಬೇಕಿದೆ ಬಳಕೆದಾರರ ಧೋರಣೆ

ವಿಶ್ಲೇಷಣೆ

ವೈ.ಜಿ.ಮುರಳೀಧರನ್

ನಮ್ಮ ದೇಶದಲ್ಲಿ ಬಳಕೆದಾರರ ಹಿತವನ್ನು ರಕ್ಷಿಸುವ ಉದ್ದೇಶವನ್ನಿಟ್ಟುಕೊಂಡು ಜಾರಿಗೆ ಬಂದಿರುವ ಕಾನೂನುಗಳಿಗೆ ಬರವಿಲ್ಲ. ಕೌಟಿಲ್ಯನ ಕಾಲದಿಂದ ಇತ್ತೀಚಿನ ಗ್ರಾಹಕ ಸಂರಕ್ಷಣಾ ಅಧಿನಿಯಮ– 2019ರವರೆಗೆ ಕನಿಷ್ಠ ಒಂದು ಡಜನ್ ಕಾನೂನುಗಳನ್ನು ಹೆಸರಿಸಬಹುದು. ಕೆಲವು ಕಾನೂನುಗಳು ನೇರವಾಗಿ ಬಳಕೆದಾರರ ಹಿತವನ್ನು ದೃಷ್ಟಿಯಲ್ಲಿಟ್ಟುಕೊಂಡು ರಚಿಸಿದ್ದರೆ, ಮತ್ತೆ ಕೆಲವು ಪರೋಕ್ಷವಾಗಿ ಬಳಕೆದಾರರ ಹಿತವನ್ನು ರಕ್ಷಿಸುವ ಅಂಶಗಳನ್ನು ಹೊಂದಿವೆ. ಇಷ್ಟಾದರೂ ಈ ಕಾನೂನುಗಳು ನಿರೀಕ್ಷಿತ ಫಲ ನೀಡಿದಂತಿಲ್ಲ. ಕಾರಣ, ಬಳಕೆದಾರರ ಹಿತವನ್ನು ಕಾನೂನುಗಳಿಂದಷ್ಟೇ ರಕ್ಷಿಸಲು ಸಾಧ್ಯವಿಲ್ಲ. ಬಳಕೆದಾರರ ವರ್ತನೆ ಬದಲಾಯಿಸುವ ದಿಸೆಯಲ್ಲಿ ನಮ್ಮ ಸಾರ್ವಜನಿಕ ನೀತಿ ರೂಪುಗೊಳ್ಳಬೇಕಿದೆ. ಬಳಕೆದಾರರ ವರ್ತನೆಯೇ ಅವರಿಗೆ ಮುಳುವಾಗಿದೆ ಎಂಬುದಕ್ಕೆ ಬಹಳಷ್ಟು ಉದಾಹರಣೆಗಳನ್ನು ನೀಡಬಹುದು.

ಬಳಕೆದಾರರಿಗೆ ಸುರಕ್ಷತೆಯ ಹಕ್ಕನ್ನು ನೀಡಿದ್ದು, ವಿವಿಧ ಕಾನೂನುಗಳಲ್ಲಿ ಅದಕ್ಕೆ ಪೂರಕವಾದ ಅಂಶಗಳನ್ನು ಸೇರಿಸಲಾಗಿದೆ. ಉದಾಹರಣೆಗೆ ದ್ವಿಚಕ್ರ ವಾಹನ ಅಥವಾ ಕಾರಿನ ಚಾಲಕರ ವರ್ತನೆಯನ್ನು ಗಮನಿಸಿ. ದ್ವಿಚಕ್ರ ವಾಹನ ಸವಾರರ ಹಿತರಕ್ಷಣೆಗಾಗಿ ಭಾರತೀಯ ಮಾನಕ ಬ್ಯೂರೊದಿಂದ (ಬಿಐಎಸ್) ಮಾನ್ಯತೆ ಪಡೆದ ಹೆಲ್ಮೆಟ್ ಹಾಗೂ ಕಾರು ಚಾಲಕರಿಗೆ ಮತ್ತು ಮುಂದಿನ ಸೀಟಿನಲ್ಲಿ ಕುಳಿತಿರುವವರಿಗೆ ಸೀಟ್‌ಬೆಲ್ಟ್ ಕಡ್ಡಾಯಗೊಳಿಸಲಾಗಿದೆ. ಆದರೆ ಇದನ್ನು ಬಳಸುವವರು ಎಷ್ಟು ಮಂದಿ? ರಸ್ತೆ ಅಪಘಾತದಲ್ಲಿ ಗಾಯಗೊಂಡವರಲ್ಲಿ ಅಥವಾ ಸತ್ತವರಲ್ಲಿ ಹೆಲ್ಮೆಟ್ ಇಲ್ಲದಿರುವವರ ಸಂಖ್ಯೆಯೇ ಹೆಚ್ಚಾಗಿದೆ. ಅದೇ ರೀತಿ ಸೀಟ್‌ಬೆಲ್ಟ್ ಧರಿಸದೆ ಮರಣ ಹೊಂದಿದ ಕಾರು ಚಾಲಕರ ಸಂಖ್ಯೆಯೂ ಹೆಚ್ಚಾಗಿದೆ. ಬಿಐಎಸ್ ಮಾನ್ಯತೆ ಇಲ್ಲದ, ಕಡಿಮೆ ಬೆಲೆಗೆ ದೊರೆಯುವ ಹೆಲ್ಮೆಟ್ ಧರಿಸಿ ಪ್ರಾಣ ಕಳೆದುಕೊಂಡಿರುವವರೂ ಇದ್ದಾರೆ. ಇಷ್ಟಾದರೂ ವಾಹನ ಬಳಕೆದಾರರು ಸುರಕ್ಷತೆಗೆ ಪ್ರಾಮುಖ್ಯ ನೀಡದಿರಲು ಕಾರಣ ಅವರ ವರ್ತನೆ. ಕಾನೂನು ಉಲ್ಲಂಘಿಸುವ ಪ್ರತಿಯೊಬ್ಬ ಬಳಕೆದಾರನನ್ನೂ ಶಿಕ್ಷೆಗೆ ಗುರಿಪಡಿಸುವುದು ಅಸಾಧ್ಯ. ವ್ಯಕ್ತಿಯ ನಿಜವಾದ ವ್ಯಕ್ತಿತ್ವ ಪ್ರಕಟವಾಗುವುದು ಯಾರೂ ಅವರನ್ನು ಗಮನಿಸುತ್ತಿಲ್ಲದ ಸಂದರ್ಭದಲ್ಲಿ. ಟ್ರಾಫಿಕ್ ಪೊಲೀಸ್ ಕಂಡ ಕೂಡಲೇ ರಸ್ತೆ ಬದಲಿಸುವ ವಾಹನ ಸವಾರರ ಸಂಖ್ಯೆ ಕಡಿಮೆಯೇನಲ್ಲ.

ಬಳಕೆದಾರರು ತಾವು ಖರೀದಿಸುವ ಯಾವುದೇ ಸರಕು ಅಥವಾ ಸೇವೆಯ ಬಗ್ಗೆ ಸಂಪೂರ್ಣ ಮಾಹಿತಿ ಪಡೆಯುವ ಹಕ್ಕು ಇದ್ದರೂ ಆ ಹಕ್ಕನ್ನು ಎಷ್ಟು ಬಳಕೆದಾರರು ಉಪಯೋಗಿಸುತ್ತಾರೆ? ಸಿಗರೇಟ್, ತಂಬಾಕು, ಗುಟ್ಕಾ ಇತ್ಯಾದಿ ಪೊಟ್ಟಣಗಳ ಮೇಲೆ ಮುದ್ರಿಸಬೇಕಾದ ಮಾಹಿತಿ ಅಥವಾ ಚಿತ್ರಗಳ ಬಗ್ಗೆ ನಾಲ್ಕಾರು ಕಾನೂನುಗಳಿವೆ. ಬಳಕೆದಾರರು ಈ ಮಾಹಿತಿ ಅಥವಾ ಚಿತ್ರಗಳಿಗೆ ಮಹತ್ವ ನೀಡಿದ್ದರೆ, ಸಿಗರೇಟ್, ತಂಬಾಕು ಸೇವನೆ ಈ ಪ್ರಮಾಣದಲ್ಲಿ ಇರುತ್ತಿರಲಿಲ್ಲ. ಆಹಾರ ಪದಾರ್ಥಗಳ ಪೊಟ್ಟಣದ ಮೇಲೆ ವಿವರವಾದ ಮಾಹಿತಿ ಪ್ರಕಟಿಸಬೇಕೆಂಬ ಕಾನೂನು ಇದೆ. ಇಷ್ಟಾದರೂ ಬಳಕೆದಾರರು ವಿಪರೀತ ಸಕ್ಕರೆ ಮತ್ತು ಕೊಬ್ಬಿನಾಂಶ ವಿರುವ ಆಹಾರ ಪದಾರ್ಥ ಸೇವಿಸುವುದೇಕೆ?

ಆನ್‌ಲೈನ್ ಮೂಲಕ ಖರೀದಿಸುವುದು ಈಗ ಹೆಚ್ಚು ಪ್ರಚಲಿತ. ಇದರಿಂದ ಕೆಲವು ಅನುಕೂಲಗಳಿದ್ದರೂ ಕಂಡ ಸರಕನ್ನು ಬಳಕೆದಾರರು ವಿವೇಚನೆಯಿಲ್ಲದೆ ಕೂಡಲೇ ಕ್ಲಿಕ್ ಮಾಡಿ ಆರ್ಡರ್ ಮಾಡುವುದು ಎಷ್ಟು ಅಪಾಯಕಾರಿ ಎಂಬುದು ತಿಳಿದಿದ್ದರೂ ಅದೇ ತಪ್ಪನ್ನು ಮಾಡುತ್ತಾರೆ. ಇದಕ್ಕೆ ಕೆಲವೊಮ್ಮೆ ಕಾರಣ ಬಳಕೆದಾರರು ಹಣ ನೀಡುವ ಮಾದರಿ. ನಗದು ಹಣವನ್ನು ನೀಡುವಾಗ ಇರುವ ನೋವು ಕ್ರೆಡಿಟ್, ಡೆಬಿಟ್ ಕಾರ್ಡ್ ಅಥವಾ ಇತರೆ ಆನ್‌ಲೈನ್ ವ್ಯವಸ್ಥೆ ಮೂಲಕ ಹಣ ನೀಡುವಾಗ ಇರುವುದಿಲ್ಲ ಎಂಬ ಮಾತಿದೆ. ಆನ್‌ಲೈನ್ ಮಾರಾಟ ವೆಬ್‌ಸೈಟ್‌ಗಳು ಸಹ ಈ ಕೊಳ್ಳುಬಾಕ ಸಂಸ್ಕೃತಿಗೆ ಕಾರಣ. ಬಳಕೆದಾರರು ಒಂದು ನಿರ್ದಿಷ್ಟ ಸರಕು ಖರೀದಿಸಲು ವೆಬ್‌ಸೈಟ್ ತೆರೆದರೂ ವಹಿವಾಟು ಮುಗಿಸಿ ಹಣ ಪಾವತಿಗೆ ಒಪ್ಪಿಗೆ ನೀಡುವ ಹೊತ್ತಿಗೆ ಆ ಉದ್ದೇಶಿತ ಸರಕನ್ನು ಹೊರತುಪಡಿಸಿ ಬೇಡವಾಗಿದ್ದ ಹಲವು ಸರಕುಗಳನ್ನು ಖರೀದಿಸಿರುತ್ತಾರೆ. ಇದೊಂದು ಮಾಯಾಜಾಲ. ಬಳಕೆದಾರರ ಮಾನಸಿಕ ಸ್ಥಿತಿಗತಿ ಹಾಗೂ ಅವರ ವರ್ತನೆಯನ್ನು ಆಳವಾಗಿ ಅಭ್ಯಾಸ ಮಾಡಿರುವವರು ಈ ವೆಬ್‌ಸೈಟ್ ರೂಪಿಸಿರುತ್ತಾರೆ.

ನಿಮ್ಮ ಮೊಬೈಲ್ ಆನ್ ಮಾಡಿ ನಿಮ್ಮ ಸ್ನೇಹಿತರೊಂದಿಗೆ ಯಾವುದೋ ಹೋಟೆಲ್, ಆಹಾರ, ಬಟ್ಟೆ, ಪಾದರಕ್ಷೆ ಇತ್ಯಾದಿ ಬಗ್ಗೆ ಮಾತನಾಡಿದರೆ ಸಾಕು ಕೆಲವೇ ನಿಮಿಷಗಳಲ್ಲಿ ನಿಮ್ಮ ಮೊಬೈಲ್‌ಗೆ ಅವುಗಳ ತಯಾರಕರಿಂದ ಮೆಸೇಜ್ ಅಥವಾ ಕರೆ ಬರುತ್ತದೆ. ಆ ಸರಕು ನಿಮ್ಮ ಮನೆಯ ಹತ್ತಿರ ಯಾವ ಅಂಗಡಿಯಲ್ಲಿ ಲಭ್ಯ ಎಂಬುದನ್ನೂ ತೋರಿಸುತ್ತದೆ. ಇದು ಹೇಗೆ ಸಾಧ್ಯವಾಯಿತು? ಇದರ ಹಿಂದೆ ಡೇಟಾ ಅನಲೆಟಿಕ್ಸ್ ಪರಿಣತರ ಕೈವಾಡವಿದೆ.

'ಹೆಚ್ಚು ಬಡ್ಡಿಯ ಆಮಿಷಕ್ಕೆ ಒಳಗಾಗಬೇಡಿ. ನಿಮ್ಮ ಅಮೂಲ್ಯವಾದ ಹಣವನ್ನು ಹಾಳು ಮಾಡಿಕೊಳ್ಳಬೇಡಿ' ಎಂದು ಸರ್ಕಾರ ಬಳಕೆದಾರರನ್ನು ಪದೇ ಪದೇ ಎಚ್ಚರಿಸುತ್ತಿದ್ದರೂ ಮೋಸಕ್ಕೆ ಒಳಗಾಗುವವರ ಸಂಖ್ಯೆ ಹೆಚ್ಚುತ್ತಲೇ ಇದೆ. 'ನಿಮ್ಮ ಬ್ಯಾಂಕ್ ಖಾತೆ ಸಂಖ್ಯೆ, ಪಾಸ್‌ವರ್ಡ್ ಇತ್ಯಾದಿಯನ್ನು ಯಾರೊಂದಿಗೂ ಹಂಚಿಕೊಳ್ಳಬೇಡಿ' ಎಂಬ ಎಚ್ಚರಿಕೆ ನೀಡುತ್ತಿದ್ದರೂ, ಬ್ಯಾಂಕ್‌ಗಳು ನಿಮ್ಮ ಮೊಬೈಲ್‌ಗೆ ಮೆಸೇಜ್ ಕಳುಹಿಸುತ್ತಿದ್ದರೂ ವಂಚಕರು ಕರೆ ಮಾಡಿದ ಕೂಡಲೇ ಅವೆಲ್ಲವನ್ನೂ ಹಂಚಿಕೊಳ್ಳುವ ಬಳಕೆದಾರರು ಇದ್ದಾರೆ. 'ಈ ಯೋಜನೆಯಲ್ಲಿ ನಿಮ್ಮನ್ನು ಆಯ್ಕೆ ಮಾಡಲಾಗಿದೆ, ನಿಮ್ಮ ಖಾತೆಗೆ ಹಣ ಪಾವತಿಸುತ್ತೇವೆ' ಎಂಬ ಇ-ಮೇಲ್ ನೋಡಿದ ತಕ್ಷಣ ಅದನ್ನು ಅನುಮಾನಿಸುವುದನ್ನು ಬಿಟ್ಟು, ಬಳಕೆದಾರರು ಅವರು ಕೇಳಿದ್ದೆಲ್ಲವನ್ನೂ ನೀಡುವುದೇಕೆ? ಸಾಮಾನ್ಯರ ಮಾತು ಹಾಗಿರಲಿ, ಸರ್ಕಾರದ ಉನ್ನತ ಅಧಿಕಾರಿಗಳೂ ಈ ಬಲೆಗೆ ಬಿದ್ದಿರುವುದು ವರದಿಯಾಗಿದೆ.

ಬಳಕೆದಾರರಿಗೆ ಕುಂದುಕೊರತೆ ದಾಖಲಿಸುವ ಮತ್ತು ಪರಿಹಾರ ಪಡೆಯುವ ಹಕ್ಕನ್ನು ನೀಡಲಾಗಿದೆ. ಗ್ರಾಹಕ ಸಂರಕ್ಷಣಾ ಕಾನೂನು ಮಾತ್ರವಲ್ಲ ಇತರೆ ಕಾನೂನುಗಳಲ್ಲೂ ಇದಕ್ಕೆ ಅವಕಾಶವಿದೆ. ಆಹಾರ ಕಲಬೆರಕೆ, ತೂಕ ಮತ್ತು ಅಳತೆ, ಹಣದ ವ್ಯವಹಾರದಲ್ಲಿ ವಂಚನೆಯಂತಹವುಗಳಿಗೆ ಒಳಗಾಗಿರುವ ಎಷ್ಟು ಬಳಕೆದಾರರು ಈ ಹಕ್ಕನ್ನು ಉಪಯೋಗಿಸಿಕೊಂಡಿದ್ದಾರೆ? ಗ್ರಾಹಕ ಸಂರಕ್ಷಣಾ ಕಾನೂನು ಜಾರಿಗೆ ಬಂದ 35 ವರ್ಷಗಳಲ್ಲಿ ಕರ್ನಾಟಕದ ಜಿಲ್ಲಾ ಗ್ರಾಹಕ ವ್ಯಾಜ್ಯ ಪರಿಹಾರ ವೇದಿಕೆಗಳಲ್ಲಿ (ಈಗ ಆಯೋಗ) ಈ ವರ್ಷದ ನವೆಂಬರ್‌ವರೆಗೆ ದಾಖಲಾಗಿರುವ ದೂರುಗಳ ಸಂಖ್ಯೆ 2,25,896 ಮತ್ತು ರಾಜ್ಯ ಆಯೋಗದಲ್ಲಿ ಕೇವಲ 64,879 ದೂರುಗಳನ್ನು ಬಳಕೆದಾರರು ದಾಖಲಿಸಿದ್ದಾರೆ. ಇದರಲ್ಲಿ ಒಬ್ಬರೇ ಒಂದಕ್ಕಿಂತ ಹೆಚ್ಚು ಬಾರಿ ದೂರು ದಾಖಲಿಸಿದವರೂ ಇದ್ದಾರೆ. ಗ್ರಾಹಕ ಸಂರಕ್ಷಣಾ ಕಾನೂನು ಬಗ್ಗೆ ಅರಿವು ಇಲ್ಲದಿರುವುದು ಒಂದು ಕಾರಣವಾದರೆ, ಈ ಆಯೋಗಗಳಲ್ಲಿ ಅನುಸರಿಸಬೇಕಾದ ಕ್ರಮವು ಸಿವಿಲ್ ನ್ಯಾಯಾಲಯಕ್ಕಿಂತ ಹೆಚ್ಚು ಕ್ಲಿಷ್ಟಕರವಾಗಿರುವುದು ಮತ್ತೊಂದು ಕಾರಣ. ಕುಂದುಕೊರತೆ ದಾಖಲಿಸುವ ಹಕ್ಕನ್ನು ಉಪಯೋಗಿಸಿ-ಕೊಳ್ಳುವಲ್ಲಿ ಬಳಕೆದಾರರು ಹಿಂದೇಟು ಹಾಕುತ್ತಿರುವುದಕ್ಕೆ ಬಳಕೆದಾರರ ವರ್ತನೆಯೂ ಕಾರಣವಾಗಿದೆ. ದೂರು ದಾಖಲಿಸಿದರೂ ಹೆಚ್ಚಿನ ಮೊತ್ತದ ಪರಿಹಾರ ದೊರೆಯುವುದಿಲ್ಲವೆಂದೋ ಅಥವಾ ಅದಕ್ಕೆ ಸಮಯವಿಲ್ಲವೆಂದೋ ಸುಮ್ಮನಿದ್ದುಬಿಡುವ ಬಳಕೆದಾರರೇ ಹೆಚ್ಚು.

ಬಳಕೆದಾರರ ವರ್ತನೆಯ ಮೇಲೆ ಜಾಹೀರಾತುಗಳು ದುಷ್ಪರಿಣಾಮ ಬೀರಿರಬಹುದಾದ ಸಾಧ್ಯತೆ ಇದೆ. ಜಾಹೀರಾತುಗಳೇ ಬೇಡವೆಂದು ಇದರ ಅರ್ಥವಲ್ಲ. ಆದರೆ ಬಳಕೆದಾರರನ್ನು ಆಕರ್ಷಿಸಿ ಅವರನ್ನು ತಪ್ಪುದಾರಿಗೆ ಎಳೆಯುವ ಜಾಹೀರಾತುಗಳು ಕೂಡ ಇವೆ. ತಾವು ಜಾಹೀರಾತನ್ನು ನಂಬುವುದಿಲ್ಲವೆಂದೇ ಹೇಳುವ ಬಳಕೆದಾರರಿಗೆ ಅವರ ಸುಪ್ತ ಮನಸ್ಸಿನಲ್ಲಿರುವುದು ಗೋಚರಿಸುವುದಿಲ್ಲ. ಜಾಹೀರಾತುಗಳಿಂದ ಪ್ರೇರಣೆ-ಗೊಳ್ಳದ ಬಳಕೆದಾರರು ಇಲ್ಲವೆಂದೇ ಹೇಳಬಹುದು. ಜಾಹೀರಾತಿನಲ್ಲಿನ ಮಾಹಿತಿ ಎಷ್ಟು ನಿಖರ ಎಂಬುದನ್ನು ಪರೀಕ್ಷಿಸುವ ಮನೋಭಾವವನ್ನು ಬಳಕೆದಾರರು ಬೆಳೆಸಿಕೊಳ್ಳದಿದ್ದರೆ, ವಂಚನೆಗೆ ಒಳಗಾಗುವ ಅಪಾಯ ಇರುತ್ತದೆ. ಮಾರಾಟಗಾರರು ಇರುವುದು ಸರಕುಗಳನ್ನು ಮಾರುವುದಕ್ಕೆ ಎಂದು ಇಷ್ಟು ದಿನ ನಂಬಿದ್ದೆವು. ಆದರೆ ಈಗ ಚಿನ್ನವನ್ನು ಕೊಳ್ಳುವ 'ಮಾರಾಟಗಾರರ' ಸಂಖ್ಯೆ ಹೆಚ್ಚಾಗಿದೆ. ಇದರ ಹಿಂದಿನ ಉದ್ದೇಶವನ್ನು ಬಳಕೆದಾರರು ಅರ್ಥ ಮಾಡಿಕೊಳ್ಳಬೇಕಲ್ಲವೇ?

ಕೇಂದ್ರ ಸರ್ಕಾರವು ಪ್ರತಿವರ್ಷ ಡಿಸೆಂಬರ್ 24ರಂದು 'ರಾಷ್ಟ್ರೀಯ ಗ್ರಾಹಕ' ದಿನವನ್ನು ಆಚರಿಸುತ್ತದೆ. ಈ ವರ್ಷ 'ಗ್ರಾಹಕರೇ ನಿಮ್ಮ ಹಕ್ಕುಗಳನ್ನು ಅರಿತುಕೊಳ್ಳಿ' ಎಂಬ ಘೋಷವಾಕ್ಯದೊಂದಿಗೆ ಆಚರಿಸಲಾಗುತ್ತಿದೆ. ಬಳಕೆದಾರರು ತಮ್ಮ ಹಕ್ಕುಗಳನ್ನು ಅರಿತರೆ ಸಾಲದು, ಅವರು ತಮ್ಮ ವರ್ತನೆಯ ಬಗ್ಗೆಯೂ ಗಮನ ಹರಿಸಿದಾಗ ಮಾತ್ರ ಹಕ್ಕುಗಳಿಗೆ ಬೆಲೆ ಬರುತ್ತದೆ.

ಲೇಖಕ: ಗ್ರಾಹಕ ಹಕ್ಕುಗಳ ತಜ್ಞ

ಚುರುಮುರಿ



ಹೊಸ ವರ್ಷಕ್ಕೆ...

• ಬಿ.ಎನ್.ಮಲ್ಲೇಶ್

'ಏನ್ರಲೆ, ಹೊಸ ವರ್ಷ ಹತ್ರ ಬಂತು, ಪಾರ್ಟಿ ಎಲ್ಲಿ, ಏನ್ಕತೆ?' ದುಬ್ಬೀರ ಹರಟೆಕಟ್ಟೆ ಗೆಳೆಯರನ್ನು ಕೇಳಿದ.

'ಲೇಯ್, ನಮಗೆ ಹೊಸ ವರ್ಷ ಅಂದ್ರೆ ಉಗಾದಿ. ಎಣ್ಣೆ ನೀರು ಹಾಕ್ಕಂಡು ಹೋಳಿಗೆ, ವರ್ಷದಡುಕು ಮಾಡಿ ಉಂಡ ಮೇಲೇ ವರ್ಷಾರಂಭ...' ಕೊಟ್ರೇಶಿ ವಾದಿಸಿದ.

'ಇರ್ಲಿ ಬಿಡೋ... ಉಗಾದಿಗೆ ಎಣ್ಣೆ ನೀರು, ಇದಕ್ಕೆ ಎಣ್ಣೆಗೆ ನೀರು... ಅಷ್ಟೇ ವ್ಯತ್ಯಾಸ' ಗುಡ್ಡೆ ನಕ್ಕ.

'ನಾನು ಹೊಸ ವರ್ಷದಿಂದ ಗುಂಡು ಹಾಕೋದನ್ನ ಬಿಡಬೇಕು ಅಂತ ಮಾಡೀನಪ್ಪ...' ಸಣ್ಣೀರ ವೈರಾಗ್ಯ ಪ್ರದರ್ಶಿಸಿದ.

'ಹೌದಾ? ಭಾರಿ ಆತಲ್ಲಲೆ, ನಾನು ಹೊಸ ವರ್ಷದಿಂದ ಟಿ.ವಿ ನ್ಯೂಸ್ ನೋಡೋದು ಬಿಡಬೇಕು ಅಂತ ಮಾಡಿದ್ದೀನಿ, ಆರೋಗ್ಯದ ದೃಷ್ಟಿಯಿಂದ...' ತಾನೂ ಒಂದು ಸೇರಿಸಿದ ದುಬ್ಬೀರ.

'ನಾನಂತೂ ಸಿಟ್ಟು ಸೆಡವು ಮಾಡ್ಕಳಾದು ಬಿಡಬೇಕಂತ ಮಾಡೀನಪ್ಪ...' ಪರಮೇಶಿ ಹೇಳಿದ.

'ಏನ್ರಲೆ, ಒಬ್ಬೊಬ್ರು ಒಂದೊಂದು ಬಿಡಂಗೆ ಕಾಣ್ತೀರಿ? ನಾನು ಈ ದರಿದ್ರ ರಾಜಕೀಯನೇ ಬಿಡಬೇಕು ಅನ್ಕಂಡಿದ್ದೀನಿ... ನೋಡಿ ನೋಡಿ ಸಾಕಾಗೇತಿ' ಗುಡ್ಡೆ ಮುಖ ಕಿವುಚಿದ.

'ತೆಪರ ನೀನೇನು ಬಿಡಬೇಕು ಅಂತ ಮಾಡಿದ್ದೀಯೋ?' ಕೊಟ್ರೇಶಿ ಕೊಕ್ಕೆ ಹಾಕಿದ.

'ಅವನು ಬಿಟ್ರೆ ಹೆಂಡ್ತೀನೇ ಬಿಡಂಗೆ ಕಾಣ್ತಾನಪ್ಪ, ತೀರಾ ದಿನಾ ಯಾವನ್ ಹೊಡ್ತ ತಿಂತಾನೆ ಅಲ್ವ?...' ಗುಡ್ಡೆ ಕಿಚಾಯಿಸಿದ.

ತೆಪರೇಸಿಗೆ ಸಿಟ್ಟು ಬಂತು. ಆದರೂ ಕೂಲಾಗಿ 'ಎಲ್ರೂ ಹೇಳಿದ್ದು ಮುಗೀತಾ? ನಾನೂ ಹೊಸ ವರ್ಷದಿಂದ ಒಂದು ಬಿಡಬೇಕಂತ ಮಾಡೀನಿ' ಎಂದ.

'ಹೌದಾ? ಏನನ್ನ?'

'ನಿಮ್ ತರ ಸುಳ್ಳು ಹೇಳೋದನ್ನ...!'

ಸಂಗತ

ಮಾನವೀಯತೆಯ ಅಮೃತ ಸಿಂಚನ

ಪ್ರತಿಷ್ಠೆಗಾಗಿ ಕೆಲವರು ಮಾಡುವ ವೆಚ್ಚದಲ್ಲಿ ಒಂದಿಷ್ಟು ಉಳಿತಾಯ ಮಾಡಿದರೂ ಶೂನ್ಯದತ್ತ ದೃಷ್ಟಿ ನೆಟ್ಟಿರುವ ನೊಂದ ಜೀವಗಳಿಗೆ ಸಾಂತ್ವನ ನೀಡಲು ಸಾಧ್ಯವಿದೆ

• ಪ. ರಾಮಕೃಷ್ಣ ಶಾಸ್ತ್ರಿ

ಪುತ್ತೂರಿನ ಖಾಸಗಿ ಚಿಕಿತ್ಸಾಲಯವೊಂದಕ್ಕೆ ದಾಖಲಾಗಿದ್ದ ಒಬ್ಬ ಬಡ ಮಹಿಳೆಗೆ ಅಲ್ಲಿಂದ ಬಿಡುಗಡೆಯಾಗಬೇಕಿದ್ದರೆ ಐದು ಲಕ್ಷ ರೂಪಾಯಿ ಪಾವತಿ ಮಾಡಬೇಕಿತ್ತು. ಕಿತ್ತು ತಿನ್ನುವ ಬಡತನದ ಬದುಕು. ಅಷ್ಟೊಂದು ಹಣ ಹೊಂದಿಸಲು ಸಾಧ್ಯವೇ ಇರಲಿಲ್ಲ. ಆಗ ಸಾಮಾಜಿಕ ಜಾಲತಾಣದಲ್ಲಿ ಆ ಮಹಿಳೆಯ ದುಃಸ್ಥಿತಿಯನ್ನು ವಿವರಿಸಿ, ಸಹೃದಯರಿಂದ ಧನಸಹಾಯ ಅಪೇಕ್ಷಿಸುವ ಮನವಿಯನ್ನು ಯಾರೋ ಹರಿಯಬಿಟ್ಟರು. ಒಂದೆರಡು ದಿನದ ಬಳಿಕ ಅದೇ ಜಾಗದಲ್ಲಿ ಆ ಮಹಿಳೆಯ ಇನ್ನೊಂದು ಮನವಿಯೂ ಎಲ್ಲೆಡೆ ಸಂಚರಿಸಿತು. 'ದಯವಿಟ್ಟು ಯಾರೂ ಇನ್ನು ನನ್ನ ಖಾತೆಗೆ ಹಣ ಕಳುಹಿಸಬೇಡಿ. ಖಾತೆಯನ್ನು ಸ್ಥಗಿತಗೊಳಿಸಿದ್ದೇನೆ. ನನಗೆ ಬೇಕಾಗಿದ್ದುದು ಐದು ಲಕ್ಷ ರೂಪಾಯಿ. ಆದರೆ ಈಗಾಗಲೇ ಹದಿನೈದು ಲಕ್ಷ ಬಂದು ಸೇರಿದೆ. ನಮಗಿನ್ನು ಹಣ ಬೇಕಾಗಿಲ್ಲ' ಎಂದು ಆಕೆ ಕೋರಿಕೊಂಡಿದ್ದಳು.

ಉಡುಪಿ ಜಿಲ್ಲೆಯಲ್ಲಿ ಮಗುವೊಂದಕ್ಕೆ ವಿಶೇಷ ಕಾಯಿಲೆ. ಅದಕ್ಕೆ ವಿಶಿಷ್ಟ ಚುಚ್ಚುಮದ್ದು ವಿದೇಶದಿಂದ ತರಿಸಿಕೊಟ್ಟರೆ ಮಾತ್ರ ಮಗು ಬದುಕುವ ಸಾಧ್ಯತೆ ಇತ್ತು. ಚುಚ್ಚುಮದ್ದಿನ ಬೆಲೆ ಹದಿನಾರು ಕೋಟಿ ರೂಪಾಯಿ! ಕೇಂದ್ರ ಸರ್ಕಾರವು ಕಸ್ಟಮ್ಸ್ ಸುಂಕ ರಿಯಾಯಿತಿಗೆ ಮಾತ್ರ ಒಪ್ಪಿತು. ಆಗಲೂ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ ಮನವಿಗೆ ಸ್ಪಂದಿಸಿ ಸಾಕಷ್ಟು ಹಣ ಬಂದರೂ ಚಿಕಿತ್ಸೆಗೆ ಮೊದಲು ಮಗು ಇಹಲೋಕ ತ್ಯಜಿಸಿತು. ಸಂಗ್ರಹಿಸಿದ ಹಣವನ್ನು ಮಗುವಿನ ಪೋಷಕರು ಸ್ವಂತಕ್ಕೆ ಬಳಸಿಕೊಳ್ಳಲಿಲ್ಲ. ಅದನ್ನು ಸಮಾಜದ ಇನ್ನಷ್ಟು ಕಷ್ಟಪೀಡಿತರಿಗೆ ಹಂಚಿಬಿಟ್ಟರು.

ಮಾನವೀಯತೆ ಇನ್ನೂ ಅಮೃತೋಪಮವಾಗಿ ಬದುಕಿದೆ ಎನ್ನುವುದಕ್ಕೆ ಇಂತಹ ಉದಾಹರಣೆಗಳು ಅನೇಕ. ಚಿತ್ರವಿಚಿತ್ರ ಬಗೆಯ ವೇಷಗಳನ್ನು ಧರಿಸಿ ಕಲಾವಿದರೊಬ್ಬರು ಹಣ ಸಂಗ್ರಹಿಸಿ ಬಡ ಮಕ್ಕಳ ಚಿಕಿತ್ಸೆಗೆ ನೀಡಿದ ಸಹಾಯಧನ ₹ 80 ಲಕ್ಷ ದಾಟಿದೆ ಎಂಬ ಸುದ್ದಿಯೂ ನಮ್ಮ ಮುಂದಿದೆ. ಬೇರೆಯವರ ಕಷ್ಟದಲ್ಲಿ ಕರಗಿ ಅವರ ಮೈಗೆ ಸುಖದ ಸಿಂಚನ ಹನಿಸಬಲ್ಲ ಹೃದಯಗಳು ಬತ್ತಿಲ್ಲ, ಬರಡಾಗಿಲ್ಲ. ಯಾರದೋ ಕಷ್ಟದ ಸಂದೇಶವನ್ನು ಓದಿದ ತಕ್ಷಣ ಸ್ಪಂದಿಸಿ ತಮ್ಮ ಕೊಡುಗೆಯನ್ನು ಕಳುಹಿಸಿಕೊಡುವವರು ತಮ್ಮ ಹಣ ಸದ್ವಿನಿಯೋಗವಾಗಿದೆಯೇ, ತಮ್ಮ ಹೆಸರು ದಾಖಲಾಗಿದೆಯೇ ಎಂದೂ ನೋಡುವುದಿಲ್ಲ. ಅವರು ಅಜ್ಞಾತರಾಗಿಯೇ ಉಳಿಯುತ್ತಾರೆ.

ತಮಗಾಗಿಯೇ ಬದುಕದೆ ಇನ್ನೊಬ್ಬರ ಹಿತಕ್ಕಾಗಿ ಬದುಕಿದ ಅದೆಷ್ಟೋ ಮಂದಿ ನಮ್ಮ ಕಣ್ಣಮುಂದಿದ್ದಾರೆ. ತ.ಸು. ಶಾಮರಾಯರು, ವೆಂಕಣ್ಣಯ್ಯನವರು ಬಹಳಷ್ಟು ಮಂದಿ ವಿದ್ಯಾರ್ಥಿಗಳಿಗೆ ವಾರಾನ್ನ ನೀಡಿ ಓದಲು ನೆರವಾದರು. 'ಇಲ್ಲಿರುವುದಾವುದೂ ನಿನ್ನದೆನಬೇಡ, ನೀನಿಲ್ಲಿ ಮಾಡಿರುವ ಸತ್ಕಾರ್ಯ ಉಳಿಯುವುದು, ಹುಟ್ಟು– ಸಾವಿನ ನಡುವೆ ನಿನ್ನದೆನುತ್ತಿದ್ದ ದೇಹವೂ ನಿನ್ನದಾಗದೆ ಕಡೆಗೆ ಅಳಿಯುವುದು' ಎಂಬ ಅನುಭಾವಿಗಳ ಮಾತು ನೆನಪಾಗುತ್ತದೆ. ಕಷ್ಟದಲ್ಲಿ ಬಸವಳಿದವರ ಬಗೆಗೆ ಅಯ್ಯೋ ಎನ್ನದ ನಾಲಿಗೆಯುಂಟೆ? ಅಯ್ಯೋ ಎಂದು ಮರುಗಿದರೆ ಫಲವಿಲ್ಲ ಕಷ್ಟಕ್ಕೆ ಹೆಗಲನಿತ್ತರೆ ಜನ್ಮ ಸಾರ್ಥಕವಯ್ಯ ಎಂದು ಶರಣರು ಹೇಳಿದರು.

ಮಂಗಳೂರಿನ ಸರ್ಕಾರಿ ಆಸ್ಪತ್ರೆಗೆ ನೂರಾರು ಮಂದಿ ಬಂದು ಒಳರೋಗಿಗಳಾಗಿ ದಾಖಲಾಗುತ್ತಾರೆ. ರೋಗಿಗಳ ನೆರವಿಗಾಗಿಯೂ ಕೆಲವು ಜನರು ಬಂದಿರುತ್ತಾರೆ. ಅವರಿಗೆ ಆಸ್ಪತ್ರೆಯಿಂದ ಅನ್ನಾಹಾರ ಸಿಗುವುದಿಲ್ಲ. ಕೆಲವರು ಹೋಟೆಲ್‌ನಲ್ಲಿ ಊಟ ಮಾಡುವಷ್ಟು ಸಂಪನ್ನರಾಗಿರುವುದಿಲ್ಲ. ರೋಗಿಗಳ ಜೊತೆ ಬಂದವರಿಗಾಗಿ ಊಟವನ್ನು ಬುತ್ತಿ ಕಟ್ಟಿ ತಂದುಕೊಡುವ ಅದೆಷ್ಟೋ ಕುಟುಂಬಗಳು ಸಮೀಪದಲ್ಲೇ ಇವೆ. ತಮ್ಮ ದುಡಿಮೆಯ ಒಂದು ಪಾಲನ್ನು ಇಂಥವರ ಉದರ ಪೋಷಣೆಗೆ ಬಳಸುವ ಈ ವ್ಯಕ್ತಿಗಳು ಎಂದಿಗೂ ಸುದ್ದಿಯಾಗುವುದಿಲ್ಲ, ರಾಜ್ಯೋತ್ಸವ ಪ್ರಶಸ್ತಿಗೆ ಅವರೆಂದಿಗೂ ಅರ್ಜಿ ಹಾಕುವುದಿಲ್ಲ. ತಮ್ಮ ಆತ್ಮತೃಪ್ತಿಗಾಗಿ ನಿತ್ಯ ನಿರಂತರ ಇಂತಹ ಕೆಲಸಗಳನ್ನು ಸದ್ದುಗದ್ದಲವಿಲ್ಲದೆ ಮಾಡಿಕೊಂಡು ಬರುತ್ತಿದ್ದಾರೆ.

ಅದೆಷ್ಟೋ ಮಂದಿ ತಮ್ಮ ಹುಟ್ಟುಹಬ್ಬದಲ್ಲಿ ಮಾಡುತ್ತಿದ್ದ ಖರ್ಚಿನ ಮೊತ್ತವನ್ನು ಅನಾಥಾಶ್ರಮಗಳಿಗೆ ಕೊಡುತ್ತಾರೆ. ಮಕ್ಕಳಿಂದ ಪರಿತ್ಯಕ್ತರಾದ ವೃದ್ಧರಿಗೆ ಸಾಂತ್ವನ ನೀಡಲು ಬಳಸುತ್ತಿದ್ದಾರೆ. ಹಣವಂತರು ಪ್ರತಿಷ್ಠೆಗಾಗಿ ಮಾಡುವ ವೆಚ್ಚದಲ್ಲಿ ಒಂದಿಷ್ಟು ಉಳಿತಾಯ ಮಾಡಿದರೂ ಶೂನ್ಯದತ್ತ ದೃಷ್ಟಿ ನೆಟ್ಟಿರುವ ನೊಂದ ಜೀವಗಳಿಗೆ ಸಾಂತ್ವನ ನೀಡಲು ಸಾಧ್ಯವಿದೆ. ಇತ್ತೀಚೆಗೆ ಮಹಿಳೆಯೊಬ್ಬಳು 800 ಬೀದಿನಾಯಿಗಳಿಗೆ ದಿನವೂ ಊಟ ಹಾಕಲು ತನ್ನ ದುಡಿಮೆಯನ್ನು ವಿನಿಯೋಗಿಸುತ್ತಿರುವ ಸುದ್ದಿ ಮಂಗಳೂರಿನಲ್ಲಿ ಗಮನ ಸೆಳೆದಿತ್ತು. ನಾನಾ ಬಗೆಯ ಭಕ್ಷ್ಯಭೋಜ್ಯಗಳನ್ನು ಮಾಡಿಸಿ ಅದ್ದೂರಿಯ ಸಮಾರಂಭ ಮಾಡಿದ ಸ್ಥಳಗಳಲ್ಲಿ ಉಂಡು ತೇಗಿದವರು ಅಲ್ಲಿ ಕೊರತೆ ಹುಡುಕಬಹುದು. ಆದರೆ ಹೊತ್ತಿನ ತುತ್ತಿಗೂ ಪರದಾಡುತ್ತಿರುವವರಿಗೆ ತಿಳಿಗಂಜಿ ನೀಡಿದರೂ ಅದು ಮೃಷ್ಟಾನ್ನವಾಗುತ್ತದೆ.

ಹೀಗಾಗಿ ಕಷ್ಟ ಬಂದಿತೆಂದು ದಾರಿಗಾಣದೆ ಯಾರೂ ಅಳಬೇಕಾದ ಪ್ರಮೇಯವಿಲ್ಲ ಎನಿಸುತ್ತದೆ. ಮಾನವೀಯ ಪ್ರಜ್ಞೆಯ ಹೃದಯಗಳ ಒಳಗೆ ಅಮೃತಸದೃಶವಾದ ಭಾವ ಜೀವಂತವಾಗಿರುವಷ್ಟು ಕಾಲವೂ ಚಿಂತೆ ಮಾಡುವ ಅಗತ್ಯವಾದರೂ ಏನಿದೆ? ಇಂದಿನ ಸಾಮಾಜಿಕ ಜಾಲತಾಣಗಳು ಈ ದಿಸೆಯಲ್ಲಿ ಯಾರದೋ ಸಂಕಷ್ಟದ ಸುದ್ದಿಯನ್ನು ಮಿಡಿಯುವ ಹೃದಯಗಳ ಬಳಿಗೆ ತಲುಪಿಸಿ ಅಂತಃಕರಣವನ್ನು ಮೀಟುತ್ತಿವೆ. ನನಗೆ ಯಾರೂ ಇಲ್ಲ ಎಂಬ ನಿರಾಶೆಯ ಭಾವ ತಳೆದವರಿಗೆ ಬೆಳಕಿನ ಬಾಗಿಲು ತೆರೆಯುತ್ತವೆ. ನಿರ್ಜೀವ ಶಿಲೆಯೊಂದರ ಆಗರಕ್ಕೆ ಹಣ ಸುರಿದು ಮಹಾದಾನಿಗಳಾಗುವ ಬದಲು ಬದುಕಿದ್ದವರ ಹಿತಕ್ಕೆ ನೀಡುವ ಸಾಂತ್ವನ ಮಹತ್ವಪೂರ್ಣವಾಗುತ್ತದೆ ಎಂಬುದನ್ನು ಯಾರೂ ಬೋಧಿಸದೆ ಕಲಿತುಕೊಂಡವರು ನಮ್ಮಲ್ಲಿ ಇನ್ನೂ ಇದ್ದಾರೆ.

ವಾಚಕರ ವಾಣಿ

ಮಾರಾಟಗಾರರು ಸಮಗ್ರ ಮಾಹಿತಿ ನೀಡಬಲ್ಲರೇ?

ರೈತರಿಗೆ ತಂತ್ರಜ್ಞಾನ ತಲುಪಿಸಿ ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿಯವರು ಕೃಷಿ ಪರಿಕರ ಮಾರಾಟಗಾರರಿಗೆ ಹೇಳಿದ್ದಾರೆ (ಪ್ರ.ವಾ., ಡಿ. 21). ಇದೇ ವೇಳೆ ವಿಶ್ವವಿದ್ಯಾಲಯದ ವಿಸ್ತರಣಾ ನಿರ್ದೇಶಕರು ನೇರ ಮಾರಾಟದ ಬಗ್ಗೆಯೂ ಪ್ರಸ್ತಾಪಿಸಿದ್ದಾರೆ. ತಕ್ಕ ತಿಳಿವಳಿಕೆಯ ಆಯ್ಕೆ ಅಥವಾ ನಿರ್ಧಾರ ಬರೀ ಮಾಹಿತಿಯಿಂದಷ್ಟೇ ಸಿಗುವುದಿಲ್ಲ. ಇನ್ನು ಕೃಷಿ ಪರಿಕರಗಳ ಪೂರೈಕೆ ಅಥವಾ ಮಾರಾಟ ವ್ಯಾಪಾರಕ್ಕೆ ಸಂಬಂಧಿಸಿದ ವಿಷಯ. ಈ ಎರಡನ್ನೂ ಮಾಡಲು ಹೋದ ಕೃಷಿ ಇಲಾಖೆ ಯಶಸ್ವಿಯಾಗಿದೆಯೇ?

ಕೃಷಿ ಕ್ಲಿನಿಕ್‌ಗಳನ್ನು ಡಿಪ್ಲೊಮಾ ಪಡೆದವರೂ ಆರಂಭಿಸಬಹುದಿತ್ತು. ಆ ಯೋಜನೆ ಹಳತು. 2012 ಮತ್ತು 2015ರಲ್ಲಿ ಪರಿಶೀಲಿಸಿದ ಬಳಿಕವೂ ಅದು ವೇಗ ಪಡೆದಿಲ್ಲ. ಈಗ ಮಾರಾಟಗಾರರು ಪ್ರಮಾಣಪತ್ರ ಪಡೆದ ಮೇಲೆ ಅಂಗಡಿಗೆ ಮಾನ್ಯತೆ ಸಿಗುತ್ತದೆಯಾದರೂ ಅವರು ಉತ್ಪನ್ನಗಳ ಬಗೆಗೆ ಮಾಹಿತಿ ನೀಡಬಲ್ಲರಷ್ಟೆ. ಅದು ಸಮಗ್ರ, ಸಾಕ್ಷ್ಯಾಧಾರಿತ, ಪಕ್ಷಪಾತರಹಿತ ಜ್ಞಾನ ಆಗಿರಲಿಕ್ಕಿಲ್ಲ.

ತಂತ್ರಜ್ಞಾನವನ್ನು ಕೃಷಿಕರಿಗೆ ಸಕಾಲದಲ್ಲಿ ವರ್ಗಾಯಿಸಲು ಆಗುತ್ತಿಲ್ಲ ಎಂಬುದನ್ನು ಒಪ್ಪಿಕೊಂಡಿರುವ ಕುಲಪತಿಯವರು, ತಮ್ಮ ವಿಶ್ವವಿದ್ಯಾಲಯ ಆ ಕುರಿತು ನೇರವಾಗಿ ಏನು ಮಾಡಲಿದೆ ಎಂಬುದನ್ನು ಮೊದಲು ಹೇಳಲಿ.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಕೋಲ್ಕತ್ತದಲ್ಲಿ ಮಮತಾ 'ಸುನಾಮಿ'

ಕೋಲ್ಕತ್ತ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಮಮತಾ 'ಸುನಾಮಿ' ಎಲ್ಲಾ ರಾಜಕೀಯ ಪಕ್ಷಗಳನ್ನು ಬಹುತೇಕ ಅಳಿಸಿಹಾಕಿದೆ. ಈ ಚುನಾವಣಾ ಫಲಿತಾಂಶವು 2014 ಮತ್ತು 2019ರ ಮೋದಿ ಅಲೆಯನ್ನೂ ಮರೆಸಿದೆ.

ಚುನಾವಣೆಯಲ್ಲಿ ಸೋಲು– ಗೆಲುವು ಸಾಮಾನ್ಯ. ಆದರೆ, ರಾಷ್ಟ್ರೀಯ ಪಕ್ಷಗಳಾದ ಬಿಜೆಪಿ, ಕಾಂಗ್ರೆಸ್ ಮತ್ತು ಮೂರು ದಶಕಗಳವರೆಗೂ ಪಶ್ಚಿಮ ಬಂಗಾಳವನ್ನು ಆಳಿದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮಣ್ಣು ಮುಕ್ಕಿದ ಪರಿ ರಾಜಕೀಯ ವೀಕ್ಷಕರನ್ನು ದಂಗುಬಡಿಸಿದೆ.

ಮುಂದೊಂದು ದಿನ ಪಶ್ಚಿಮ ಬಂಗಾಳದಲ್ಲಿ ಅಧಿಕಾರ ಹಿಡಿಯುವ ಕನಸು ಕಾಣುತ್ತಿದ್ದ ಬಿಜೆಪಿಗೆ ಮರ್ಮಾಘಾತವಾಗಿದೆ. ಚುನಾವಣೆಯಲ್ಲಿ ಆಡಳಿತಾರೂಢ ಟಿಎಂಸಿ ಅಕ್ರಮ ಎಸಗಿದೆ ಎಂದು ಬಿಜೆಪಿ ಮತ್ತು ಇತರ ಪಕ್ಷಗಳು ಮಾಡಿರುವ ಅರೋಪವು ಸೋತ ಪಕ್ಷಗಳು ಸಾಮಾನ್ಯವಾಗಿ ಮಾಡುವ ಅರೋಪದ ಪಟ್ಟಿಗೆ ಸೇರುತ್ತದೆಯೇ ವಿನಾ ಹೆಚ್ಚಿನ ತೂಕ ಕಾಣುವುದಿಲ್ಲ.

ರಮಾನಂದ ಶರ್ಮಾ, ಬೆಂಗಳೂರು

ತಿಳಿದೂ ಮಾಡುವ ಕೊಲೆಗೆ ಸಮ

ಇತ್ತೀಚೆಗೆ ಶೌಚಗುಂಡಿಯಲ್ಲಿ ಮತಪಟ್ಟ ಪೌರಕಾರ್ಮಿಕನ (ಪ್ರ.ವಾ., ಡಿ. 21) ಬಗ್ಗೆ ತಿಳಿದು ದುಃಖವಾಗಿದೆ. ಮನುಷ್ಯರನ್ನು ಹೀಗೆ ಶೌಚಗುಂಡಿಗೆ ಇಳಿಸುವುದು ಅಪರಾಧ. ಶೌಚಗುಂಡಿಯನ್ನು ಕೇವಲ ಯಂತ್ರಗಳಿಂದ ಸ್ವಚ್ಛ-ಪಡಿಸಬೇಕೆಂಬ ಕಾನೂನು ಇದ್ದರೂ ಸಂಬಂಧಪಟ್ಟ ಅಧಿಕಾರಿಗಳು ಈ ವಿಷಯದಲ್ಲಿ ತಲೆಕೆಡಿಸಿಕೊಳ್ಳದಿರುವುದು ವಿಷಾದದ ಸಂಗತಿ. ಇನ್ನೂ ಕೆಲವರು ಪೌರಕಾರ್ಮಿಕರಿಗೆ 'ನಿನ್ನ ಕೆಲಸವೇ ಅದು, ನೀನು ಮಾಡಲೇಬೇಕು' ಎಂದು ಹೇಳಿರುವುದೂ ವರದಿಯಾಗಿದೆ.

ನಗರ– ಪಟ್ಟಣಗಳಲ್ಲೇ ಹೀಗಾದರೆ ಗ್ರಾಮಗಳ ಚಿತ್ರಣ ಹೇಗಿರಬಹುದು. ಊಹಿಸಲು ಅಸಾಧ್ಯ. ಇದರಿಂದ ರೋಸಿಹೋದ ನೊಂದ ವ್ಯಕ್ತಿಯೇನಾದರೂ ಬೇರೆ ಮತಕ್ಕೆ ಸೇರಿಕೊಂಡ ಎನ್ನಿ, ಆಗ ಇದೊಂದು ಬಲವಂತದ ಮತಾಂತರ ಎಂದು ಯಾರೋ 'ನೈತಿಕ ಪೊಲೀಸರು' ಕೊಟ್ಟ ದೂರಿನನ್ವಯ ಆತನನ್ನು ಮತ್ತೆ 'ಘರ್ ವಾಪಸಿ' ಮಾಡಿ, 'ನಿನ್ನ ಕೆಲಸವೇ ಅದು' ಎನ್ನುತ್ತಾ ಮತ್ತದೇ ಶೌಚಗುಂಡಿ ಶುಚಿಗೊಳಿಸಲು ಹಚ್ಚುತ್ತಾರೆ.

ಇದುವರೆಗೂ ಅನೇಕರು ಇದೇ ರೀತಿ ಸತ್ತಿದ್ದಾರೆ. ಇದು ಕಾನೂನುಬಾಹಿರ ಕೃತ್ಯವಾಗಿದ್ದು, ತಿಳಿದೂ ಮಾಡುವ ಕೊಲೆಗೆ ಸಮ. ಆದರೆ ಈವರೆಗೆ ಒಬ್ಬರಿಗಾದರೂ ಶಿಕ್ಷೆ ಆಗಿದೆಯೇ?

ರವಿಕಿರಣ್ ಶೇಖರ್, ಬೆಂಗಳೂರು

ಗಣಿತ ದಿನವನ್ನು ಮಹತ್ವದ್ದಾಗಿಸಬೇಕು

ಶ್ರೀನಿವಾಸ ರಾಮಾನುಜನ್ ಅವರು ಗಣಿತಕ್ಕೆ ನೀಡಿದ ಕೊಡುಗೆ ಮತ್ತು ಅವರ ಸಾಧನೆಗಳನ್ನು ಗುರುತಿಸಿ ಪ್ರತಿವರ್ಷ ಡಿಸೆಂಬರ್ 22 ರಂದು (ಅವರ ಹುಟ್ಟುಹಬ್ಬದ ಸವಿ ನೆನಪಿಗಾಗಿ) ರಾಷ್ಟ್ರೀಯ ಗಣಿತ ದಿನವನ್ನು ಆಚರಿಸಲಾಗುತ್ತದೆ.

ಗಣಿತ ದಿನ ಆಚರಣೆಯಂದು ಶಾಲೆಗಳಲ್ಲಿ ಶಿಬಿರಗಳ ಮೂಲಕ ಗಣಿತ ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ತರಬೇತಿ ಆಯೋಜಿಸಬೇಕು. ಗಣಿತ ಕ್ಷೇತ್ರಕ್ಕೆ ಕೊಡುಗೆ ನೀಡಿರುವ ನಮ್ಮದೇ ದೇಶದ ಗಣಿತ ತಜ್ಞ ಶ್ರೀನಿವಾಸ ರಾಮಾನುಜನ್ ಅವರ ಕೊಡುಗೆಗಳನ್ನು ಯುವ ಪೀಳಿಗೆಗೆ ತಿಳಿಸಬೇಕು. ಜತೆಗೆ ಯುವ ಪೀಳಿಗೆಯಲ್ಲಿ ಸ್ವಯಂ ಕಲಿಕೆ ಮತ್ತು ತಾರ್ಕಿಕ ಕೌಶಲಗಳನ್ನು ಅಭಿವೃದ್ಧಿಪಡಿಸಲು ಪ್ರೋತ್ಸಾಹಿಸುವ ಮೂಲಕ ಈ ದಿನವನ್ನು ಮಹತ್ವದ್ದಾಗಿಸಬೇಕು.

ವೀರೇಶ ಎಸ್.ಎಸ್, ಬನ್ನಿಹಟ್ಟಿ, ಬಳ್ಳಾರಿ

ಸೌಕರ್ಯ ಹೆಚ್ಚಿಸುವ ಕುರಿತು ಮಾತನಾಡೋಣ

ಶಾಲಾ ಮಕ್ಕಳಿಗೆ ಮೊಟ್ಟೆ ನೀಡಬೇಕೋ ಬೇಡವೋ ಎಂದು ಚರ್ಚೆ ಮಾಡುವುದಕ್ಕಿಂತ ಇದನ್ನು ಅವರವರ ಇಷ್ಟಕ್ಕೆ ಬಿಟ್ಟು ಶಿಕ್ಷಣ ಕ್ಷೇತ್ರದ ನಿಜವಾದ ಸಮಸ್ಯೆಗಳ ಬಗ್ಗೆ ಗಮನಹರಿಸೋಣ. ಶಾಲೆಗಳಿಗೆ ಸುಸಜ್ಜಿತ ಕಟ್ಟಡ, ಶೌಚಾಲಯ, ಕ್ರೀಡಾಂಗಣ, ಗ್ರಂಥಾಲಯ ಒದಗಿಸುವುದರ ಕುರಿತು ಆಸ್ಥೆ ವಹಿಸೋಣ. ಉತ್ತಮ ಶಿಕ್ಷಕರನ್ನು ನೇಮಿಸಿ, ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಿದರೆ ಅದಕ್ಕಿಂತ ಭಾಗ್ಯ ಮತ್ತೊಂದಿಲ್ಲ. ಮೂಲ ಸೌಕರ್ಯಗಳ ಕೊರತೆ ನೀಗುವ ಬಗ್ಗೆ ಆರೋಗ್ಯಕರ ಚರ್ಚೆ ನಡೆಯಲಿ. ಅದು ಬಿಟ್ಟು, ಮೊಟ್ಟೆ ವಿಷಯ ಮುಂದಿಟ್ಟುಕೊಂಡು ಗಲಾಟೆ ಎಬ್ಬಿಸುವುದು ಸರಿ ಇಲ್ಲ.

ಎಂ. ಪರಮೇಶ್ವರ, ಮದ್ದಿಹಳ್ಳಿ, ಹಿರಿಯೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಪ್ರಧಾನಮಂತ್ರಿ ಗರೀಬ್ ಕಲ್ಯಾಣ ಯೋಜನೆ ಅಡಿ ಬೇಳೆಕಾಳು ಪೂರೈಕೆ

ಸಂಸ್ಕರಣೆ, ಪೂರೈಕೆಯಲ್ಲಿ ಹಲವು ನ್ಯೂನತೆ

● ಶ್ರೀಗಿರೀಶ್ ಜಾಲಿಹಾಳ್, ನಿತಿನ್ ಸೇಠಿ

ಸರ್ಕಾರದ ಕಲ್ಯಾಣ ಕಾರ್ಯಕ್ರಮಗಳ ಅಡಿಯಲ್ಲಿ ಬಡವರು ಮತ್ತು ಸೈನಿಕರಿಗೆ ಪೂರೈಕೆ ಮಾಡುವ ಬೇಳೆಕಾಳುಗಳ ಹರಾಜಿನಲ್ಲಿ ಕೇಂದ್ರದ ಎನ್‌ಡಿಎ ಸರ್ಕಾರವು ಅಳವಡಿಸಿಕೊಂಡಿರುವ ಅಪಾರದರ್ಶಕ ನಿಯಮಗಳಿಂದಾಗಿ, ಬೊಕ್ಕಸಕ್ಕೆ ಕೋಟ್ಯಂತರ ರೂಪಾಯಿ ನಷ್ಟವಾಗಿದ್ದರೆ, ಗಿರಣಿಗಳಿಗೆ ಭರ್ಜರಿ ಲಾಭವಾಗಿದೆ.

ಕೇಂದ್ರ ಸರ್ಕಾರದ 'ನ್ಯಾಷನಲ್ ಅಗ್ರಿಕಲ್ಚರಲ್ ಕೋಆಪರೇಟಿವ್ ಮಾರ್ಕೆಟಿಂಗ್ ಫೆಡರೇಶನ್ ಆಫ್ ಇಂಡಿಯಾ ಲಿಮಿಟೆಡ್' (ಎನ್‌ಎಎಫ್‌ಇಡಿ) ಸಂಸ್ಥೆಯು ದ್ವಿದಳ ಧಾನ್ಯಗಳನ್ನು ಖರೀದಿಸಿ, ಅವನ್ನು ಬೇಳೆ ಮಾಡಲು ಗಿರಣಿಗಳಿಗೆ ಗುತ್ತಿಗೆ ನೀಡುತ್ತದೆ. 2017ರಿಂದ ಸಾವಿರಾರು ಹರಾಜು ಪ್ರಕ್ರಿಯೆ ನಡೆಸಿದ್ದರೂ, ದ್ವಿದಳ ಧಾನ್ಯಗಳ ಬದಲಿಗೆ ಗಿರಣಿಗಳು ವಾಪಸ್ ನೀಡಬೇಕಿರುವ ಬೇಳೆಯ ಕನಿಷ್ಠ ಪ್ರಮಾಣ ನಿಗದಿಮಾಡಿಲ್ಲ. ಗಿರಣಿ ಮಾಲೀಕರು ಹೆಚ್ಚುವರಿ ಲಾಭ ಮಾಡಿಕೊಳ್ಳುತ್ತಿದ್ದರೂ, ಅದನ್ನು ಪತ್ತೆಮಾಡುವ ಕಾರ್ಯತಂತ್ರ ರೂಪಿಸುವಲ್ಲಿ ಸಂಸ್ಥೆ ವಿಫಲವಾಗಿದೆ.

ಕಳೆದ 4 ವರ್ಷಗಳಲ್ಲಿ 5.4 ಲಕ್ಷ ಟನ್ ದ್ವಿದಳಧಾನ್ಯವನ್ನು ಸಂಸ್ಕರಣೆ ಮಾಡಲಾಗಿದೆ. ಹರಾಜು ನೀತಿಯಲ್ಲಿನ ನ್ಯೂನತೆಯ ಕಾರಣ ಸರ್ಕಾರದ ಬೊಕ್ಕಸಕ್ಕೆ ₹4,600 ಕೋಟಿ ನಷ್ಟವಾಗಿದೆ. ಬೇಳೆಕಾಳುಗಳ ಗುಣಮಟ್ಟವನ್ನೂ ಕಾಯ್ದುಕೊಂಡಿಲ್ಲ ಎಂಬುದು ಆರ್‌ಟಿಐ ಹಾಗೂ ಸರ್ಕಾರಿ ಜಾಲತಾಣಗಳ ದಾಖಲೆಗಳಿಂದ ಗೊತ್ತಾಗಿದೆ. ಪ್ರಧಾನಮಂತ್ರಿ ಗರೀಬ್ ಕಲ್ಯಾಣ್ ಯೋಜನೆ (ಪಿಎಂಜಿಕೆಎವೈ) ಅಡಿಯಲ್ಲಿ ಲಾಕ್‌ಡೌನ್ ವೇಳೆ ವಿವಿಧ ರಾಜ್ಯಗಳಿಗೆ ಪೂರೈಕೆಯಾದ ಇಂತಹ ದ್ವಿದಳಧಾನ್ಯಗಳ ಗುಣಮಟ್ಟದ ಬಗ್ಗೆ ಕೆಲವು ರಾಜ್ಯ ಸರ್ಕಾರಗಳು ಕೇಂದ್ರಕ್ಕೆ ದೂರು ನೀಡಿದ ಬಳಿಕ ಹರಾಜು ಪ್ರಕ್ರಿಯೆಯ ವಿಷಯ ಚರ್ಚೆಗೆ ಬಂದಿತು.

ಒಟಿಆರ್ ಪದ್ಧತಿ: 2015ರಲ್ಲಿ ದ್ವಿದಳ ಧಾನ್ಯಗಳ ದರ ದಾಖಲೆಯ ಮಟ್ಟಕ್ಕೆ ಏರಿದ್ದರಿಂದ, ಖರೀದಿ ಪ್ರಕ್ರಿಯೆಯ ಉಸ್ತುವಾರಿಯನ್ನು ಎನ್‌ಎಎಫ್‌ಇಡಿಗೆ ವಹಿಸಲಾಯಿತು. ಹೆಚ್ಚು ಹೆಚ್ಚು ಬೇಳೆಕಾಳು ಬೆಳೆಯುವಂತೆ ಇದು ರೈತರ ಮನವೊಲಿಸಿತು. 2017ರಲ್ಲಿ, ಹೆಚ್ಚುವರಿ ದಾಸ್ತಾನನ್ನು ಸರ್ಕಾರದ ಕಲ್ಯಾಣ ಕಾರ್ಯಕ್ರಮಗಳ ಅಡಿಯಲ್ಲಿ ವಿವಿಧ ರಾಜ್ಯಗಳಿಗೆ ಪೂರೈಸುವ ಪ್ರಸ್ತಾಪವನ್ನು ಸರ್ಕಾರದ ಮುಂದೆ ಇರಿಸಿತು. ಕಚ್ಚಾ ದ್ವಿದಳಧಾನ್ಯಗಳನ್ನು ಖರೀದಿಸಿ, ಸಂಸ್ಕರಿತ ಬೇಳೆಕಾಳನ್ನು ರಾಜ್ಯಗಳಿಗೆ ಪೂರೈಸುವ ನಿರ್ಧಾರವಾಯಿತು.

2017ಕ್ಕೂ ಮುನ್ನ, ಹರಾಜಿನಲ್ಲಿ ಕಡಿಮೆ ಮೊತ್ತಕ್ಕೆ ಬಿಡ್ ಸಲ್ಲಿಸುವ ಗಿರಣಿಯವರಿಗೆ ಗುತ್ತಿಗೆ ನೀಡಲಾಗುತ್ತಿತ್ತು. ದ್ವಿದಳ ಧಾನ್ಯಗಳ ಸಂಸ್ಕರಣೆ ವೇಳೆ ಲಭ್ಯವಾಗುವ ಬೇಳೆಯ ಪ್ರಮಾಣ, ಸಂಸ್ಕರಣೆ, ಪ್ಯಾಕಿಂಗ್ ಮತ್ತು ಪೂರೈಕೆ ವೆಚ್ಚ ಮತ್ತು ಸಂಸ್ಕರಣೆ ವೇಳೆ ಸಿಗುವ ಹೊಟ್ಟು, ನುಚ್ಚು ಮತ್ತಿತರ ಉಪ ಉತ್ಪನ್ನಗಳಿಂದ ಬರುವ ಆದಾಯ ಹಾಗೂ ತಮ್ಮ ಲಾಭವನ್ನು ಲೆಕ್ಕಹಾಕಿ ಗಿರಣಿಯವರು ಬಿಡ್ ಮೊತ್ತವನ್ನು ನಮೂದಿಸಬೇಕಾಗಿತ್ತು. ಅತ್ಯಂತ ಕಡಿಮೆ ಮೊತ್ತ ನಮೂದಿಸಿದವರಿಗೆ ಗುತ್ತಿಗೆ ದೊರೆಯುತ್ತಿತ್ತು.

ಆದರೆ ಎನ್‌ಎಡಿಇಎಫ್, ಈ ಹರಾಜು ಪ್ರಕ್ರಿಯೆಯನ್ನು 2017ರಲ್ಲಿ ಬದಲಾಯಿಸಿತು. ಕಚ್ಚಾ ಬೇಳೆಕಾಳು ಮತ್ತು ಸಂಸ್ಕರಿತ ಬೇಳೆಕಾಳುಗಳ ನಡುವಿನ ಅನುಪಾತ (ಔಟ್ ಟರ್ನ್ ರೇಷಿಯೊ-ಒಟಿಆರ್) ನಮೂದಿಸುವಂತೆ ಕೇಳಲಾಯಿತು. (ಉದಾಹರಣೆಗೆ 100 ಟನ್ ದ್ವಿದಳ ಧಾನ್ಯಗಳಿಗೆ ಬದಲಾಗಿ ಅಂದಾಜು 80 ಟನ್ ಬೇಳೆ ನೀಡುವ ಪದ್ಧತಿ). ಯಾರು ಹೆಚ್ಚಿನ ಪ್ರಮಾಣದ ಸಂಸ್ಕರಿತ ಬೇಳೆಕಾಳು ಪೂರೈಸುತ್ತೇವೆ ಎಂದು ನಮೂದಿಸುತ್ತಾರೋ ಅವರಿಗೆ ಗುತ್ತಿಗೆ ನೀಡುವ ಪದ್ಧತಿಯನ್ನು ಜಾರಿಗೆ ತರಲಾಯಿತು. ಈ ಪದ್ಧತಿಯಲ್ಲಿ ಸರ್ಕಾರವು ದ್ವಿದಳ ಧಾನ್ಯಗಳನ್ನು ಮಾತ್ರ ಗಿರಣಿಗಳಿಗೆ ಪೂರೈಸುತ್ತವೆ. ಸಂಸ್ಕರಣೆ ವೇಳೆ ದೊರೆಯುವ ಉಪ ಉತ್ಪನ್ನಗಳನ್ನು ಮಾರಿ, ಗಿರಣಿಗಳು ಲಾಭ ಮಾಡಿಕೊಳ್ಳಬೇಕು. ಸರ್ಕಾರವು ಗಿರಣಿಗಳಿಗೆ ಯಾವುದೇ ರೀತಿಯ ಶುಲ್ಕ ನೀಡುವುದಿಲ್ಲ.

ಎಚ್ಚರಿಕೆಗಳ ಕಡೆಗಣನೆ: ಎನ್‌ಎಎಫ್‌ಇಡಿ ಅಳವಡಿಸಿಕೊಂಡಿರುವ ಒಟಿಆರ್ ಹರಾಜು ಪದ್ಧತಿಯಲ್ಲಿನ ನ್ಯೂನತೆಗಳ ಬಗ್ಗೆ ಈ ಹಿಂದೆಯೇ ಸಿಎಜಿ ಸೇರಿದಂತೆ ಹಲವು ಸಂಸ್ಥೆಗಳು ಆಕ್ಷೇಪ ವ್ಯಕ್ತಪಡಿಸಿದ್ದವು. 2015ರಲ್ಲೂ ಇಂಥದ್ದೇ ಪದ್ಧತಿಯ ಅಡಿ ಭತ್ತವನ್ನು ಒಕ್ಕಿ, ಅಕ್ಕಿ ನೀಡುವ ಗುತ್ತಿಗೆಯಲ್ಲಿ ಅಕ್ಕಿಗಿರಣಿ ಮಾಲೀಕರಿಗೆ ಹೆಚ್ಚು ಲಾಭವಾಗಿದೆ ಎಂಬುದಾಗಿ ಸಿಎಜಿ 2015ರಲ್ಲೇ ಎಚ್ಚರಿಕೆ ನೀಡಿತ್ತು. 'ಕಡಿಮೆ ಒಟಿಆರ್ ನಿಗದಿಪಡಿಸುವುದರಿಂದ ಸಂಸ್ಕರಣೆ ಮಾಡುವವರ ಬಳಿ ಹೆಚ್ಚುವರಿ ಅಕ್ಕಿ ಉಳಿದುಕೊಂಡು, ಬೊಕ್ಕಸಕ್ಕೆ ₹2,000 ಕೋಟಿ ನಷ್ಟಕ್ಕೆ ಕಾರಣವಾಗಿದೆ' ಎಂದು ತಿಳಿಸಿತ್ತು.

ಹರಾಜು ಪದ್ಧತಿ ವಿಷಯವು 2020ರಲ್ಲಿ ಕೇಂದ್ರೀಯ ಜಾಗೃತ ಆಯೋಗದ ಎದುರು ಬಂದಿತ್ತು. ₹1,000 ಕೋಟಿ ನಷ್ಟಕ್ಕೆ ಈ ಹರಾಜು ಪ್ರಕ್ರಿಯೆ ಕಾರಣವಾಗಿದ್ದು, ಸಮಗ್ರ ಲೆಕ್ಕಪರಿಶೋಧನೆಗೆ ಆಗ್ರಹ ಹೇಳಿಬಂದಿತ್ತು. ಆದರೆ ಈ ವಿಚಾರದಲ್ಲಿ ಯಾವ ಬೆಳವಣಿಗೆಯೂ ಆಗಿಲ್ಲ.

ಕೇಂದ್ರ ಸರ್ಕಾರದ ಮುಂಚೂಣಿ ಸಂಶೋಧನಾ ಸಂಸ್ಥೆ 'ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಪೋಸ್ಟ್ ಹಾರ್ವೆಸ್ಟಿಂಗ್ ಎಂಜಿನಿಯರಿಂಗ್ ಅಂಡ್ ಟೆಕ್ನಾಲಜಿ'ಯು (ಸಿಐಪಿಎಚ್‌ಇಟಿ) ಹರಾಜು ಪ್ರಕ್ರಿಯೆ ಕುರಿತು ಕೇಂದ್ರ ಸರ್ಕಾರಕ್ಕೆ ಈ ಹಿಂದೆ ವರದಿ ಸಲ್ಲಿಸಿತ್ತು. ಈ ವರದಿಯ ಪರಿಣಾಮವಾಗಿ, ಇಡೀ ಪ್ರಕ್ರಿಯೆಯ ಪರಾಮರ್ಶೆ ನಡೆಸಲು, ಸಂಬಂಧಿತ ಏಜೆನ್ಸಿಗಳನ್ನು ಒಳಗೊಂಡ ಸಮಿತಿಯನ್ನು ಸರ್ಕಾರ ನೇಮಿಸಿತ್ತು. ಈ ಸಮಿತಿ ಮೂರು ಬಾರಿ ಸಭೆ ಸೇರಿದ್ದರೂ, ಶಿಫಾರಸು ಅಂತಿಮಗೊಳಿಸಿಲ್ಲ. ಈ ನಡುವೆ ಮತ್ತೊಂದು ವರ್ಷದ ಧಾನ್ಯ ಖರೀದಿ ಮತ್ತು ಸಂಸ್ಕರಣೆ ಪ್ರಕ್ರಿಯೆಗೆ ಎನ್‌ಎಎಫ್‌ಇಡಿ ಸಿದ್ಧವಾಗಿದೆ.

ಗಿರಣಿಗಳಿಂದ ಪೂರೈಕೆ: ಕನಿಷ್ಠ ಪ್ರಮಾಣ ನಿಗದಿ ಇಲ್ಲ

ಎನ್‌ಎಎಫ್‌ಇಡಿ ಅನುಸರಿಸುತ್ತಿರುವ ಒಟಿಆರ್ ಹರಾಜು ವಿಧಾನದಲ್ಲೇ ನ್ಯೂನತೆ ಇದೆ. ಗಿರಣಿಗಳು ಪಡೆದುಕೊಳ್ಳುವ ಕಾಳುಗಳ ಒಂದು ಘಟಕವನ್ನು ಸಂಸ್ಕರಿಸಿದಾಗ, ದೊರೆಯುವ ಬೇಳೆಯಲ್ಲಿ ಎನ್‌ಎಎಫ್‌ಇಡಿಗೆ ವಾಪಸ್ ನೀಡಬೇಕಾದ ಬೇಳೆಯ ಕನಿಷ್ಠ ಪ್ರಮಾಣವನ್ನು ನಿಗದಿ ಮಾಡಿಲ್ಲ. ಹೀಗಾಗಿ ಕಾಳುಗಳ ಒಂದು ಘಟಕವನ್ನು ಸಂಸ್ಕರಿಸಿದಾಗ ತಮಗೆ ದೊರೆಯುವ ಬೇಳೆಯ ಪ್ರಮಾಣಕ್ಕಿಂತಲೂ, ಕಡಿಮೆ ಪ್ರಮಾಣವನ್ನು ಗಿರಣಿಗಳು ಎನ್‌ಎಎಫ್‌ಇಡಿಗೆ ಪೂರೈಸುತ್ತಿವೆ. ಇದರಿಂದ ಗಿರಣಿಗಳ ಬಳಿ ಗಣನೀಯ ಪ್ರಮಾಣದ ಬೇಳೆ ಉಳಿಯುತ್ತಿದೆ. ಸಂಸ್ಕರಣದ ವೇಳೆ ದೊರೆಯುವ ಉಪಉತ್ಪನ್ನಗಳ ಜತೆಗೆ, ತಮ್ಮ ಬಳಿ ಉಳಿಯುವ ಬೇಳೆಯನ್ನೂ ಗಿರಿಣಿಗಳು ಮಾರುಕಟ್ಟೆಯಲ್ಲಿ ಮಾರಾಟ ಮಾಡಬಹುದು. ಈ ಮೂಲಕ ಗಿರಣಿಗಳು ಹೆಚ್ಚು ಲಾಭ ಮಾಡಿಕೊಳ್ಳುತ್ತಿವೆ.

2018ರಲ್ಲಿ ತಮಿಳುನಾಡು ಸರ್ಕಾರವು ಒಟಿಆರ್ ಹರಾಜು ವಿಧಾನದಲ್ಲಿಯೇ ತೊಗರಿ ಬೇಳೆಯನ್ನು ಸಂಸ್ಕರಿಸಲು ಗಿರಣಿಗಳಿಗೆ ಗುತ್ತಿಗೆ ನೀಡಿತ್ತು. ಸರ್ಕಾರದ ಗೋದಾಮುಗಳಿಂದ ಪಡೆದುಕೊಂಡ ಧಾನ್ಯವನ್ನು ಸಂಸ್ಕರಿಸಿ, ಅದರ ಶೇ 68ರಷ್ಟು ಪ್ರಮಾಣದ ಬೇಳೆಯನ್ನು ನೀಡಲು ಗಿರಣಿಗಳು ಒಪ್ಪಂದ ಮಾಡಿಕೊಂಡಿದ್ದವು. ಆದರೆ ಲಾಕ್‌ಡೌನ್ ಅವಧಿಯಲ್ಲಿ ಕೇಂದ್ರ ಸರ್ಕಾರದ ಎನ್‌ಎಎಫ್‌ಇಡಿಯ ಗೋದಾಮುಗಳಿಂದ ಪಡೆದುಕೊಂಡ ತೊಗರಿಕಾಳನ್ನು ಸಂಸ್ಕರಿಸಿ, ಅದರ ಶೇ 61ರಷ್ಟು ಪ್ರಮಾಣದ ತೊಗರಿ ಬೇಳೆಯನ್ನು ವಾಪಸ್ ನೀಡಲು ಗಿರಣಿಗಳು ಒಪ್ಪಿಕೊಂಡಿವೆ. ತಮಿಳುನಾಡು ಸರ್ಕಾರವು ನಿಗದಿ ಮಾಡಿದ್ದಕ್ಕಿಂತ 7 ಶೇಕಡಾವಾರು ಅಂಶಗಳಷ್ಟು ಕಡಿಮೆ ಬೇಳೆಯನ್ನು ಪಡೆದುಕೊಳ್ಳಲು ಎನ್‌ಎಎಫ್‌ಇಡಿ ಒಪ್ಪಿಕೊಂಡಿದೆ. ಗಿರಣಿಗಳಿಗೆ ಹೆಚ್ಚು ಲಾಭ ಮಾಡಿಕೊಳ್ಳಲು ಈ ಮೂಲಕ ಅವಕಾಶ ಮಾಡಿಕೊಡಲಾಗಿದೆ.

ಈ ಬಗ್ಗೆ ವೆಚ್ಚಗಳ ಇಲಾಖೆಯು ಆಕ್ಷೇಪ ವ್ಯಕ್ತಪಡಿಸಿದೆ. ಜತೆಗೆ ಈ ವಿಧಾನಕ್ಕೆ ಹಲವು ಸುಧಾರಣೆಗಳನ್ನು ಶಿಫಾರಸು ಮಾಡಿದೆ. ಆದರೆ ಈ ಶಿಫಾರಸುಗಳನ್ನು ಗ್ರಾಹಕ ವ್ಯವಹಾರಗಳ ಇಲಾಖೆಯು ಕಡೆಗಣಿಸಿದೆ. ಹೀಗೆ ಮಾಡುವ ಮೂಲಕ, ಒಟಿಆರ್ ಹರಾಜು ವಿಧಾನವು ಕಾರ್ಯಸಾಧುವೇ ಎಂಬುದನ್ನು ಪರಿಶೀಲಿಸಲು ಇದ್ದ ಅವಕಾಶವನ್ನೂ ತಡೆಯಲಾಗಿದೆ.

ಒಟಿಆರ್ ಹರಾಜು ವಿಧಾನದಲ್ಲಿ ಗಿರಣಿಗಳು ನೀಡಬೇಕಾದ ಬೇಳೆಯ ಕನಿಷ್ಠ ಪ್ರಮಾಣವನ್ನು ಏಕೆ ನಿಗದಿ ಮಾಡಿಲ್ಲ ಎಂದು ಎನ್‌ಎಎಫ್‌ಇಡಿಯನ್ನು ಪ್ರಶ್ನಿಸಲಾಗಿದೆ. ಅದಕ್ಕೆ ಎನ್‌ಎಎಫ್‌ಇಡಿ, 'ಕಾಳುಗಳನ್ನು ಖರೀದಿಸಬೇಕಾದ ಸ್ಥಳ-ಗೋದಾಮು, ಗಿರಣಿಗೆ ಒಯ್ಯಬೇಕಾದ, ಸಂಸ್ಕರಿಸಿದ ಬೇಳೆಕಾಳುಗಳನ್ನು ಪೂರೈಸಬೇಕಾದ ಸ್ಥಳಗಳ ನಡುವಣ ಅಂತರ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಭಿನ್ನವಾಗಿರುತ್ತದೆ. ಹೀಗಾಗಿ ಗಿರಣಿಗಳು ನೀಡಬೇಕಾದ ಬೇಳೆಯ ಕನಿಷ್ಠ ಪ್ರಮಾಣವನ್ನು ಈ ಗುತ್ತಿಗೆಗಳಲ್ಲಿ ನಿಗದಿ ಮಾಡಿಲ್ಲ' ಎಂದು ಉತ್ತರಿಸಿದೆ.

ಫಲಾನುಭವಿಗಳಿಗೆ ಕಳಪೆ ಬೇಳೆ

2017ರಲ್ಲಿ ಎನ್‌ಎಎಫ್‌ಇಡಿ, ತನ್ನ ಒಟಿಆರ್ ಹರಾಜು ವಿಧಾನದಲ್ಲಿ ಬದಲಾವಣೆ ಮಾಡಿಕೊಂಡಿದೆ. ಕೇಂದ್ರ ಸರ್ಕಾರದ ವಿವಿಧ ಯೋಜನೆಗಳ ಫಲಾನುಭವಿಗಳಿಗೆ ಕಳಪೆ ಗುಣಮಟ್ಟದ ಬೇಳೆಕಾಳುಗಳು ಪೂರೈಕೆಯಾಗಲು ಈ ಬದಲಾವಣೆಯೇ ಪ್ರಧಾನ ಕಾರಣ.

ಈ ಮೊದಲು ಜಾರಿಯಲ್ಲಿದ್ದ ಒಟಿಆರ್ ಹರಾಜು ವಿಧಾನದಲ್ಲಿ ಗುತ್ತಿಗೆ ಪಡೆದ ಗಿರಣಿಗಳು ಎನ್‌ಎಎಫ್‌ಇಡಿ ಗೋದಾಮಿನಿಂದ ಕಾಳುಗಳನ್ನು ಸಂಗ್ರಹಿಸಿಕೊಳ್ಳಬೇಕಿತ್ತು. ಆನಂತರ ಅವನ್ನು ಸಂಸ್ಕರಿಸಿ, ಸಂಬಂಧಿತ ಗೋದಾಮಿಗೆ ವಿತರಣೆ ಮಾಡಬೇಕಿತ್ತು. ಆದರೆ, 2017ರಲ್ಲಿ ಈ ನಿಯಮಗಳಿಗೆ ಬದಲಾವಣೆ ತರಲಾಯಿತು. ಬೇಳೆ ಖರೀದಿ ಮತ್ತು ವಿತರಣೆಗೆ ಎರಡು ರೀತಿಯ ವಿಧಾನಗಳ ಆಯ್ಕೆಯ ಅವಕಾಶ ನೀಡಲಾಯಿತು. ಗಿರಣಿಗಳು ತಮಗೆ ಅಗತ್ಯವಿರುವ ಕಾಳುಗಳನ್ನು ಎನ್‌ಎಎಫ್‌ಇಡಿ ಗೋದಾಮಿನಿಂದ ಸಂಗ್ರಹಿಸಿ, ಸಂಸ್ಕರಿಸಿ ನಂತರ ವಿತರಣೆ ಮಾಡಬಹುದಿತ್ತು. ಆದರೆ ಎನ್‌ಎಎಫ್‌ಇಡಿಯಿಂದ ಪಡೆದುಕೊಳ್ಳುವ ಕಾಳುಗಳ ಮಾರುಕಟ್ಟೆ ಬೆಲೆಯ ಶೇ 100ರಷ್ಟು ಮೊತ್ತವನ್ನು ಭದ್ರತಾ ಠೇವಣಿಯಾಗಿ ಇರಿಸಬೇಕು. ಇದು ಮೊದಲನೇ ಆಯ್ಕೆ. ಶೇ 100ರಷ್ಟು ಭದ್ರತಾ ಠೇವಣಿ ಇರಿಸಿಬೇಕಿದ್ದ ಕಾರಣ ಗಿರಣಿಗಳು ಈ ಆಯ್ಕೆಯಿಂದ ದೂರ ಉಳಿದವು.

ಗಿರಣಿಗಳು ತಾವು ಪೂರೈಸಬೇಕಿರುವ ಬೇಳೆಯ ಪ್ರಮಾಣವನ್ನು ಮುಕ್ತ ಮಾರುಕಟ್ಟೆಯಿಂದ ಖರೀದಿಸಬೇಕು. ಅವನ್ನು ರಾಜ್ಯ ಸರ್ಕಾರಗಳ ಗೋದಾಮುಗಳಿಗೆ ವಿತರಿಸಬೇಕು. ಬೇಳೆ ಖರೀದಿಗೆ ತಗುಲಿದ ವೆಚ್ಚ ಕುರಿತ ಬಿಲ್ ಅನ್ನು ಸರ್ಕಾರಕ್ಕೆ ಸಲ್ಲಿಸಬೇಕು. ಒಟಿಆರ್ ಹರಾಜು ಒಪ್ಪಂದದಲ್ಲಿ ಸೂಚಿಸಿದಷ್ಟು ಕಾಳುಗಳನ್ನು ಎನ್‌ಎಎಫ್‌ಇಡಿ ಗೋದಾಮಿನಿಂದ ಪಡೆದುಕೊಳ್ಳಬೇಕು. ಇದು ಎರಡನೇ ಆಯ್ಕೆ.

2017ರಲ್ಲಿ ಗುತ್ತಿಗೆ ಪಡೆದುಕೊಂಡ ಬಹುತೇಕ ಗಿರಣಿಗಳು ಎರಡನೇ ವಿಧಾನವನ್ನು ಆಯ್ಕೆ ಮಾಡಿಕೊಂಡಿವೆ. ಈ ವಿಧಾನದಲ್ಲಿ ಲಾಭದ ಪ್ರಮಾಣ ಅಧಿಕವಾಗಿರುವ ಕಾರಣ ಇದೇ ವಿಧಾನವನ್ನು ಅನುಸರಿಸಿಕೊಂಡು ಬರುತ್ತಿವೆ. ಮುಕ್ತ ಮಾರುಕಟ್ಟೆಯಿಂದ ಕಳಪೆ ಗುಣಮಟ್ಟದ ಬೇಳೆಯನ್ನು ಕಡಿಮೆ ಬೆಲೆಗೆ ಖರೀದಿಸಿ, ವಿತರಣೆ ಮಾಡಿವೆ. ಅದರ ಬದಲಿಗೆ ಎನ್‌ಎಎಫ್‌ಇಡಿ ಗೋದಾಮಿನಿಂದ ಗುಣಮಟ್ಟದ ಕಾಳುಗಳನ್ನು ಪಡೆದುಕೊಂಡಿವೆ. ಈ ಗುಣಮಟ್ಟದ ಕಾಳುಗಳನ್ನು ಬಳಸಿಕೊಂಡು, ಗಿರಣಿಗಳು ಹೆಚ್ಚು ಲಾಭ ಮಾಡಿಕೊಂಡಿವೆ.

ಗಿರಣಿಗಳು ಹೀಗೆ ಪೂರೈಸಿದ ಕಳಪೆ ಗುಣಮಟ್ಟದ ಬೇಳೆಯನ್ನು ಹಲವು ರಾಜ್ಯ ಸರ್ಕಾರಗಳು ವಾಪಸ್ ಮಾಡಿವೆ. 2020ರಲ್ಲಿ ದೆಹಲಿ ಒಂದು ಬಾರಿ ಬೇಳೆಕಾಳುಗಳನ್ನು ವಾಪಸ್ ಮಾಡಿದೆ. ಮೇ ತಿಂಗಳಿನಲ್ಲಿ ಪಂಜಾಬ್ ಸರ್ಕಾರವು 46 ಟನ್ ಬೇಳಕಾಳುಗಳನ್ನು ವಾಪಸ್ ಮಾಡಿದೆ. ಗುಜರಾತ್ ಸರ್ಕಾರವೂ ಈ ಬಗ್ಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ.

ಆದರೆ, 'ಲಾಕ್‌ಡೌನ್ ಅವಧಿಯಲ್ಲಿ ತುರ್ತಾಗಿ ಬೇಳೆಕಾಳುಗಳನ್ನು ವಿತರಿಸಿಬೇಕಿದ್ದ ಕಾರಣ, ಮುಕ್ತಮಾರುಕಟ್ಟೆಯಿಂದ ಖರೀದಿ ಮಾಡಿ ವಿತರಣೆ ಮಾಡಲು ಗಿರಣಿಗಳಿಗೆ ಅವಕಾಶ ನೀಡಲಾಗಿತ್ತು' ಎಂದು ಎನ್‌ಎಎಫ್‌ಇಡಿ ಹೇಳಿದೆ. ಆದರೆ 2017ರಿಂದಲೂ ಎನ್‌ಎಎಫ್‌ಇಡಿ ಇದೇ ವಿಧಾನವನ್ನು ಅನುಸರಿಸಿಕೊಂಡು ಬರುತ್ತಿದೆ.

2020ರಲ್ಲಿ ಗುಜರಾತ್ ಸರ್ಕಾರವು, 'ನಮಗೆ ಪೂರೈಕೆಯಾದ ಕಡಲೆಬೇಳೆಯಲ್ಲಿ ಶೇ 21ರಷ್ಟು ವಿತರಣೆಗೆ ಅಯೋಗ್ಯವಾಗಿದೆ. ಇದರ ಬದಲಿಗೆ ಗುಣಮಟ್ಟದ ಬೇಳೆ ನೀಡಿ. ಗಿರಣಿಗಳಿಂದ ಬೇಳೆಕಾಳನ್ನು ಟ್ರಕ್‌ಗಳಿಗೆ ತುಂಬಿಸುವಾಗ ಮತ್ತು ರಾಜ್ಯ ಸರ್ಕಾರದ ಗೋದಾಮುಗಳಲ್ಲಿ ಇಳಿಸುವಾಗ ಗುಣಮಟ್ಟ ಪರಿಶೀಲಿಸುವ ವ್ಯವಸ್ಥೆಯನ್ನು ಜಾರಿಗೆ ತನ್ನಿ' ಎಂದು ಎನ್‌ಎಎಫ್‌ಇಡಿಯನ್ನು ಕೇಳಿಕೊಂಡಿತ್ತು.

ಆದರೆ ಎನ್‌ಎಎಫ್‌ಇಡಿ ಈ ಮನವಿಯನ್ನು ತಳ್ಳಿಹಾಕಿತ್ತು. 'ನಾವು ರೈತರಿಂದ ಗುಣಮಟ್ಟದ ಕಾಳುಗಳನ್ನು ಕನಿಷ್ಠ ಬೆಂಬಲ ಬೆಲೆ ಯೋಜನೆ ಅಡಿ ಖರೀದಿಸುತ್ತೇವೆ. ಅವುಗಳಿಂದ ಸಂಸ್ಕರಿಸಿದ ಗುಣಮಟ್ಟದ ಬೇಳೆಯನ್ನೇ ಗಿರಣಿಗಳು ರಾಜ್ಯ ಸರ್ಕಾರಗಳಿಗೆ ವಿತರಿಸುತ್ತವೆ. ಗಿರಣಿಗಳಿಂದ ಟ್ರಕ್‌ಗಳಿಗೆ ತುಂಬಿಸುವಾಗ ಬೇಳೆಯ ಗುಣಮಟ್ಟ ಪರಿಶೀಲನೆ ಸಾಧ್ಯವಿಲ್ಲ. ರಾಜ್ಯ ಸರ್ಕಾರಗಳು ತಮ್ಮ ಗೋದಾಮಿನಲ್ಲಿ ಅವನ್ನು ಇಳಿಸಿಕೊಂಡ ನಂತರವೇ ಗುಣಮಟ್ಟವನ್ನು ಪರಿಶೀಲಿಸಿಕೊಳ್ಳಬೇಕು' ಎಂದು ಹೇಳಿತ್ತು.

ಆಧಾರ: ರಿಪೋರ್ಟರ್ಸ್ ಕಲೆಕ್ಟಿವ್ ವರದಿ ● ಈ ವರದಿಯ ಇಂಗ್ಲಿಷ್ ಅವತರಣಿಕೆಯು 'ದಿ ವೈರ್'ನಲ್ಲಿ ಪ್ರಕಟವಾಗಿದೆ

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 4

ಶಿವಪುರಾಣದಿಂದ ಸುಜ್ಞಾನ ಪ್ರಾಪ್ತಿ

ಶಿವಮಹಾಪುರಾಣವನ್ನು ಬರೆದ ವ್ಯಾಸರ ಮುತ್ತಾತ ವಸಿಷ್ಠಮಹರ್ಷಿ. ವಸಿಷ್ಠರ ಮಗ ಶಕ್ತಿಮಹರ್ಷಿ. ಶಕ್ತಿಮಹರ್ಷಿ ಮಗ ಪರಾಶರ. ಪರಾಶರ ಮತ್ತು ಬೆಸ್ತಕುಲದ ಸತ್ಯವತಿ ಮಗನೇ ವೇದವ್ಯಾಸ. ವೇದ ವ್ಯಾಸರಿಗೆ ನಾಲ್ವರು ಮಕ್ಕಳು. ಅವರೇ ಧೃತರಾಷ್ಟ್ರ, ಪಾಂಡು, ವಿಧುರ ಮತ್ತು ಶುಕ. ವ್ಯಾಸರ ಮಗ ಶುಕಮುನಿಯೇ ತಮ್ಮ ತಂದೆ ಬರೆದ ಭಾಗವತಪುರಾಣವನ್ನ ಜಗತ್ತಿಗೆ ತಿಳಿಸಿದ್ದು. ವ್ಯಾಸರ ಪರಮಶಿಷ್ಯ ಮತ್ತು ಶಿವಪುರಾಣವನ್ನ ಜಗತ್ತಿಗೆ ತಿಳಿಸಿದ ಸೂತಮುನಿ ತಂದೆ ಲೋಮಹರ್ಷನ. ಸೂತಮುನಿಯಿಂದ ಶಿವಪುರಾಣ ಕೇಳಿದ ಶೌನಕಮುನಿ ತಂದೆಯೆ ವೇದಋಷಿ ಗೃತ್ಸಮದ.

ನಮ್ಮ ಹಿಂದೂ ಪುರಾಣಗಳು ನಾಮಕಾವಸ್ತೆ ಕಥೆಗಳೂ ಅಲ್ಲ, ಚರ್ವಿತಚರ್ವಣಗಳೂ ಅಲ್ಲ. ನಮ್ಮ ಪುರಾಣ ಪುಣ್ಯಕಥೆಗಳು ಈ ದೇಶದ ಸಂಸ್ಕೃತಿಯ ಇತಿಹಾಸವನ್ನ ಹೇಳುತ್ತವೆ. ಇದನ್ನ ಆದಿಯಿಂದ ಕ್ರಮವಾಗಿ ನೋಡಿದರೆ, ಸಮಗ್ರ ಚರಿತ್ರಾ ರೂಪ ಕಾಣಿಸುತ್ತೆ. ಇಂಥ ಭವ್ಯ, ಅಷ್ಟೇ ಶ್ರೀಮಂತ ಸಂಸ್ಕೃತಿಯ ಇತಿಹಾಸ ನೋಡಲು ನಮಗೆ ಸಣ್ಣ ಮಸ್ತಿಷ್ಕ ಸಾಲುವುದಿಲ್ಲ. ಹಿಂದೂ ಸಂಸ್ಕೃತಿಯ ವಿರಾಟರೂಪ ನೋಡಬೇಕಾದರೆ, ವ್ಯಾಸರಿಗಿದ್ದಂಥ ಮಹಾಬುದ್ಧಿ ಬೇಕು. ಹಾಗೇ, ವಿಶಾಲ ಮನಸ್ಸು ಸಹ ಅಗತ್ಯ. ಹಿಂದೂ ಧರ್ಮದ ಪುರಾಣ ಪುಣ್ಯಕಥೆಗಳನ್ನ ಕೇಳುವುದರಿಂದ ಎಂಥ ಅಲ್ಪಮತಿಯೂ ಬುದ್ಧಿವಂತನಾಗುತ್ತಾನೆ. ಎಂಥ ಮಹಾಪಾಪಿಯೂ ಪುಣ್ಯವಂತನಾಗುತ್ತಾನೆ. ಅದರಲ್ಲೂ ವೇದವ್ಯಾಸರ ಶಿವಪುರಾಣ ಕೇಳಿದರಂತೂ ಏಳೇಳು ಜನ್ಮದ ಪಾಪ ಕಳೆದು, ಏಳೇಳು ಜನ್ಮದ ಪುಣ್ಯ ಪ್ರಾಪ್ತಿಯಾಗುತ್ತೆ.

> ಶಿವಪುರಾಣ ಕೇಳಿದವರ ಆಧಿದೈವಿಕ, ಆಧ್ಯಾತ್ಮಿಕ ಮತ್ತು ಆಧಿಭೌತಿಕ ಎಂಬ ಮೂರು ಕ್ಲೇಶಗಳು ಪರಿಹಾರವಾಗುತ್ತವೆ.

ಶಿವಪುರಾಣ ಕೇಳಿದವರ ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕ ಎಂಬ ಮೂರು ವಿಧದ ಕ್ಲೇಶಗಳನ್ನ ಪರಿಹರಿಸಿ, ಅವರ ಬದುಕಲ್ಲಿ ಸುಖವುಂಟುಮಾಡುತ್ತಂತೆ. ಶಿವನಲ್ಲದೆ, ಬ್ರಹ್ಮ-ವಿಷ್ಣು ಸಹಿತ ಎಲ್ಲಾ ಮುಕ್ಕೋಟಿ ದೇವತೆಗಳಿಗೂ ಶಿವಪುರಾಣ ಪ್ರಾಣಕ್ಕಿಂತ ಪ್ರಿಯವಾದದ್ದು. ಭೂಲೋಕವಲ್ಲದೆ, ಪರಲೋಕದಲ್ಲೂ ಸುಖವಾಗಿರಬೇಕಾದರೆ, ಶಿವಪುರಾಣವನ್ನ ಕೇಳಬೇಕೆಂದು ಸ್ಕಂದ ಪುರಾಣದಲ್ಲೆ, ಶಿವಪುರಾಣದ ಮಹಿಮೆಯನ್ನ ಬಹಳಷ್ಟು ಕೊಂಡಾಡಲಾಗಿದೆ. ಸಾವಿರ ಅಶ್ವಮೇಧಯಾಗಗಳು, ನೂರು ವಾಜಪೇಯಿಯಾಗಗಳನ್ನ ಮಾಡಿದರೆ ಸಿಗುವ ಫಲಗಳೆಲ್ಲಾ ಶಿವಪುರಾಣ ಕೇಳುವುದರಿಂದಲೇ ಬರುವುದು. ಶಿವಪುರಾಣ ಕೇಳುವುದರಿಂದ ಸಿಗುವ ಪುಣ್ಯಫಲಗಳಲ್ಲಿ, ಯಾವ ಯಜ್ಞ-ಯಾಗಗಳು ಸಾಟಿಯಾಗಲಾರವು. ಗಂಗಾದಿ ಪುಣ್ಯನದಿಗಳಲ್ಲಿ ಸ್ನಾನ ಮಾಡಿದರೂ, ಅಯೋಧ್ಯಾ-ಮಥುರಾದಂಥ ಏಳು ಪವಿತ್ರವಾದ ಸ್ಥಳಗಳಿಗೆ ಹೋದರೂ ಸಹ, ಶಿವಪುರಾಣದಿಂದ ಸಿಗುವ ಪುಣ್ಯವನ್ನು ಸರಿಗಟ್ಟಲಾರವು ಅನ್ನುತ್ತಾನೆ ಸೂತಮುನಿ.

ಭೂಲೋಕದಲ್ಲೆ ಅತ್ಯುತ್ತಮವಾದ ಶೈವಪುರಾಣವು ಮನುಷ್ಯನ ಕಿವಿಗೆ ಬೀಳೋವರೆಗೆ ಜ್ಞಾನವಿಲ್ಲದವನಂತೆ ಸಂಸಾರಬಂಧನದಲ್ಲಿ ತೊಳಲಾಡುತ್ತಿರುತ್ತಾನೆ. ಶಿವಪುರಾಣವನ್ನ ಭಕ್ತಿಯಿಂದ ಎಲ್ಲಿಯವರೆಗೆ ಕೇಳುವುದಿಲ್ಲವೋ, ಅಲ್ಲಿಯವರೆಗೆ ಮನುಷ್ಯ ಪಾಪಿಷ್ಠನಾಗಿರುತ್ತಾನೆ. ಎಂಥ ಅಜ್ಞಾನಿಯೂ ಶಿವಪುರಾಣ ಕೇಳಿದ ಕೂಡಲೇ ಜ್ಞಾನೋದಯವಾಗಿ, ಜೀವನ್ಮುಕ್ತಿ ಪಡೆಯುತ್ತಾನೆ. ಇಂಥ ಸದ್ಗತಿ ಕೊಡುವ ಶಿವಪುರಾಣವನ್ನ ಸಂಪೂರ್ಣವಾಗಿ ಯಾರೂ ಭಕ್ತಿಯಿಂದ ಪಠಣಮಾಡುವರೋ, ಅವರು ಜೀವನ್ಮುಕ್ತರಾಗುತ್ತಾರೆ. ಈ ಲೋಕದಲ್ಲಿಯಲ್ಲದೆ, ಪರಲೋಕದಲ್ಲೂ ಸುಖವಾಗಿರಬೇಕೆಂದರೆ, ಶಿವತತ್ವಗಳಿಂದ ಪರಿಪೂರ್ಣವಾದ ಶಿವಪುರಾಣವನ್ನ ಕೇಳಬೇಕು.

ಏಳು ಸಂಹಿತೆಗಳಿಂದಾದ ಶಿವಪುರಾಣ ಪರಬ್ರಹ್ಮ ಸ್ವರೂಪವಾಗಿದೆ. ಇದರಲ್ಲಿ ಒಟ್ಟು ಇಪ್ಪತ್ತನಾಲ್ಕು ಸಾವಿರ ಶ್ಲೋಕಗಳಿವೆ. ಇದನ್ನ ಭಕ್ತಿ, ಜ್ಞಾನ, ವೈರಾಗ್ಯಗಳಿಂದ ಮತ್ತು ಸಾವಧಾನ ಮನಸ್ಸಿನಿಂದ ಕೇಳಬೇಕು. ಇಂತಹ ಶಿವಪುರಾಣವನ್ನ ಆಸ್ವಾದಿಸಲು ಯಾವಾಗಲೂ ಸಂತೋಷಚಿತ್ತನಾಗಿರುತ್ತೇನೆ. ಯಾವಾಗಲೂ ಶಿವಪುರಾಣವನ್ನ ಸ್ಮರಿಸಿ, ನಮಸ್ಕರಿಸುತ್ತೇನೆ. ಇದರಿಂದ ಪರಶಿವನು ಪ್ರಸನ್ನನಾಗಿ ತನಗೆ ಅವನ ಪಾದಕಮಲಗಳಲ್ಲಿರುವಂಥ ಭಕ್ತಿಯನ್ನು ಅನುಗ್ರಹಿಸುತ್ತಾನೆ ಎಂದು ಸೂತಮುನಿ ಸ್ಪಷ್ಟೋಕ್ತಿಯಲ್ಲಿ ಹೇಳುತ್ತಾನೆ. ●

ಗುಂಡಣ್ಣ

ದಿನ ಭವಿಷ್ಯ

ಗುರುವಾರ ಡಿಸೆಂಬರ್ 23, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಹೇಮಂತ ಋತು ಮಾರ್ಗಶಿರ (ಧನುರ್ಮಾಸ) ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಮೂಲ ಚತುರ್ಥಿ ಗಂ. 20-51 (ಹ. 3-04) ಗುರುವಾರ ನಿತ್ಯ ನಕ್ಷತ್ರ ಆಶ್ಲೇಷಾ ಗಂ. 43-10 (ರಾ. 11-59) ವೈಧೃತಿ ನಾಮ ಯೋಗ ಗಂ. 9-43 ಬಾಲವ ಕರಣ ಗಂ. 20-51 ವಿಷ ಗಂ. 13-10 ಅಮೃತ ಗಂ. 38-21 ರಾಹುಕಾಲ ಮ ಗಂ. 1-30 ರಿಂದ 3-00 ಗುಳಿಕ ಕಾಲ ಬೆ ಗಂ 9-00 ರಿಂದ 10-30 ಯಮಗಂಡ ಕಾಲ ಬೆ ಗಂ 6-00 ರಿಂದ 7-30 : ಸೂರ್ಯೋದಯ: 6-41 ಸೂರ್ಯಾಸ್ತ: 5-55 ಅದೃಷ್ಟ ಸಂಖ್ಯೆ 2, 6

ಮೇಷ: ನಿಜವಾದ ಭಾವನೆಗಳಿಂದ ಪ್ರಾಮಾಣಿಕವಾಗಿರಲು ಸಾಧ್ಯ. ಅನಿರೀಕ್ಷಿತ ಬೆಳವಣಿಗೆಯಿಂದ ಉದ್ಯೋಗದಲ್ಲಿ ಹೆಚ್ಚಿನ ಅಧಿಕಾರ. ನ್ಯಾಯಾಲಯದಲ್ಲಿನ ವ್ಯವಹಾರಗಳಲ್ಲಿ ಸಕಾರಾತ್ಮಕ ನಿರ್ಣಯ ಹೊರಬೀಳುವುದು.

ವೃಷಭ: ಬರವಣಿಗೆ ಮತ್ತು ಮುದ್ರಣ ಕ್ಷೇತ್ರಗಳಲ್ಲಿ ತೊಡಗಿಕೊಂಡವರಿಗೆ ಉತ್ತಮ ಅವಕಾಶ. ರಂಗ/ ಚಲನಚಿತ್ರ ಕಲಾವಿದರಿಗೆ ಎಲ್ಲಿಲ್ಲದ ಬೇಡಿಕೆ ಮತ್ತು ಗೌರವಾದರಗಳು ದೊರಕುವ ಸಂಭವವಿದೆ.

ಮಿಥುನ: ಅತಿಯಾದ ಉತ್ಸಾಹದಿಂದ ವೃತ್ತಿ ಜೀವನದಲ್ಲಿ ಹೊಸ ತಿರುವು ಪಡೆಯುವಿರಿ. ಯಾವುದೇ ಸಮಸ್ಯೆಯನ್ನು ಸುಲಭವಾಗಿ ನಿಭಾಯಿಸಬಲ್ಲಿರಿ. ಪಿತ್ರಾರ್ಜಿತ ಆಸ್ತಿ ದೊರಕುವ ಸಂಭವ. ದೇವತಾ ದರ್ಶನ ಭಾಗ್ಯವಿದೆ.

ಕರ್ಕಾಟಕ: ಕನಸುಗಳನ್ನು ನನಸು ಮಾಡಲು ಶ್ರಮ ವಹಿಸಬೇಕಾಗುವುದು. ಬೇಳೆಕಾಳು ಮುಂತಾದ ದ್ವಿದಳ ಧಾನ್ಯಗಳ ಸಗಟು ವ್ಯಾಪಾರದಲ್ಲಿ ತೊಡಗಿಕೊಂಡವರಿಗೆ ಉತ್ತಮ ಲಾಭ. ಮಕ್ಕಳ ಉದ್ಯೋಗಕ್ಕಾಗಿ ಶ್ರಮ ವಹಿಸಬೇಕಾದೀತು.

ಸಿಂಹ: ನಿಮ್ಮ ವೃತ್ತಿ ಕೌಶಲ ಹಾಗೂ ಜಾಣ್ಮೆ ಎಲ್ಲರ ಮೆಚ್ಚುಗೆಗೆ ಪಾತ್ರವಾಗುವುದು. ಹಣವನ್ನು ಹೂಡಿಕೆಯಲ್ಲಿ ತೊಡಗಿಸಲು ಅತ್ಯಂತ ಪ್ರಶಸ್ತ ಕಾಲ. ವ್ಯಾಪಾರ ವಹಿವಾಟನಿಂದಾಗಿ ಉತ್ತಮ ಲಾಭ ದೊರಕುವ ಸಾಧ್ಯತೆ.

ಕನ್ಯಾ: ನಿಮ್ಮ ವೈಯಕ್ತಿಕ ಉದ್ಯೋಗದಲ್ಲಿ ಹೆಚ್ಚಿನ ಯಶಸ್ಸು. ನೌಕರಿಯಲ್ಲಿರುವವರಿಗೆ ಪದೋನ್ನತಿ/ ಉದ್ಯೋಗ ಬದಲಾವಣೆಯ ಸಾಧ್ಯತೆ. ರಾಜಕೀಯ ವ್ಯಕ್ತಿಗಳೊಂದಿಗೆ ವಿಶೇಷ ಸಮಾಲೋಚನೆ ಮಾಡುವಿರಿ.

ತುಲಾ: ಈ ದಿನ ಬಹಳ ಶಾಂತತೆಯಿಂದ ಕೂಡಿದ ನೆಮ್ಮದಿಯ ದಿನವಾಗಿರುವುದು. ಹೊಸ ಯೋಜನೆಯನ್ನು ರೂಪಿಸಲು ಸಕಾಲ. ಆಸಕ್ತಿ ವಿಷಯಗಳಿಂದಾಗಿ ಗೌರವಾನ್ವಿತ ಹುದ್ದೆ ಲಭಿಸುವ ಸಾಧ್ಯತೆ.

ವೃಶ್ಚಿಕ: ತಾಂತ್ರಿಕ ವಿದ್ಯೆಯಲ್ಲಿ ತೊಡಗಿಕೊಂಡವರಿಗೆ ಹೆಚ್ಚಿನ ಯಶಸ್ಸು. ಕಾರ್ಮಿಕವರ್ಗದವರಿಗೆ ಬಿಡುವಿಲ್ಲದ ಕೆಲಸ. ಒತ್ತಡದಿಂದಾಗಿ ದೇಹಾಯಾಸ. ಸರ್ಕಾರಿ ಕೆಲಸಗಳಿಗಾಗಿ ಅಲೆದಾಡುವ ಸಂಭವ.

ಧನು: ಎಲ್ಲಾ ತರಹದಲ್ಲೂ ಶುಭದಿನವಾಗಿದ್ದು ತರಕಾರಿ ಮುಂತಾದ ಹಸಿರು ಉತ್ಪನ್ನಗಳಿಗೆ ಉತ್ತಮ ಬೆಲೆ ದೊರೆತು ಲಾಭ ದೊರಕಲಿದೆ. ಮಕ್ಕಳೊಂದಿಗೆ ಸಂತಸದ ದಿನವಾಗಿರುವುದು. ಬಂಧು ಮಿತ್ರರ ಆಗಮನ.

ಮಕರ: ಕಚೇರಿಯಲ್ಲಿ ಸಾಧನೆಯ ಕೆಲಸಗಳನ್ನು ಮಾಡುವಿರಿ. ಕೆಲಸ ಕಾರ್ಯಗಳನ್ನು ಚುರುಕು ಮಾಡಬೇಕಾಗುವುದು. ಕುಟುಂಬದ ವಿಷಯಗಳ ಬಗ್ಗೆ ಹಿರಿಯರೊಂದಿಗೆ ಮಾತುಕತೆ ಸಾಧ್ಯತೆ.

ಕುಂಭ: ಹಳೆಯ ಸಮಸ್ಯೆಗಳನ್ನು ಕೆದಕುವ ಬದಲು ಪರಿಹಾರ ಕಂಡುಕೊಳ್ಳುವ ಪ್ರಯತ್ನ ಮಾಡುವಿರಿ. ವೃತ್ತಿ ಜೀವನದ ಬಗ್ಗೆ ಅಪಾರವಾದ ವಿಶ್ವಾಸವಿದೆ. ಮೇಲಧಿಕಾರಿಗಳಿಂದ ಕಿರಿಕಿರಿಯ ಸಾಧ್ಯತೆ ಇದ್ದು, ದಿನದಾಂತ್ಯಕ್ಕೆ ತಿಳಿಗೊಳ್ಳುವುದು.

ಮೀನ: ಮಹಿಳಾ ರಾಜಕಾರಣಿಗಳಿಗೆ ಪಕ್ಷ ರಾಜಕಾರಣದಲ್ಲಿ ಎಲ್ಲಿಲ್ಲದ ಘನತೆ ಗೌರವಗಳು ಪ್ರಾಪ್ತವಾಗುವುವು. ಮನೆಯವರ ಆರೋಗ್ಯದಲ್ಲಿ ಉತ್ತಮ ಸುಧಾರಣೆ. ವಿದ್ಯಾರ್ಥಿಗಳಿಗೆ ಓದಿನಲ್ಲಿ ಹೆಚ್ಚಿನ ಆಸಕ್ತಿ ಮೂಡಿ ಉನ್ನತಿ.

ನಿಮ್ಮ ಜನ್ಮದಿನ 23-ಡಿಸೆಂಬರ್ ಇಂದು ಅತ್ಯಂತ ಶುಭದಾಯಕ. ನಿಮ್ಮ ನೇರ ನಡೆನುಡಿಯಿಂದಾಗಿ ವೈಷಮ್ಯವನ್ನು ಎದುರಿಸಬೇಕಾದೀತು. ಮೃದು ಸ್ವಭಾವವನ್ನು ಸ್ವಲ್ಪ ಮಟ್ಟಿಗೆ ರೂಢಿಸಿ. ಮಕ್ಕಳ ವಿದ್ಯಾಭ್ಯಾಸ ಉತ್ತಮವಾಗಿದ್ದು ವಿದೇಶಗಳಲ್ಲಿ ನೆಲೆಸುವ ಸಾಧ್ಯತೆ. ಸಣ್ಣಪುಟ್ಟ ವಿಚಾರಗಳಿಗೂ ವಿರೋಧಿಗಳು ಹುಟ್ಟಿಕೊಳ್ಳುವ ಸಾಧ್ಯತೆ ಕಂಡುಬರುವುದು.

ಬೆರಗಿನ ಬೆಳಕು

ಗುರುರಾಜ ಕರಜಗಿ

ಶಾಸ್ತ್ರ-ವಿಜ್ಞಾನಗಳ ಚಿರಂತನತೆ

ಜಗ ಬೆಳೆದು ಚಿಗುರುತಿರೆ ಶಾಸ್ತ್ರ ಕರಟಿರಲಹುದೆ ? |
ನಿಗಮಸಂತತಿಗೆ ಸಂತತಿಯಾಗದಿಹುದೆ? ||
ಬಗೆಬಗೆಯ ಜೀವಸತ್ತ್ವ ವಿಕಾಸವಾಗುತಿರ- |
ಲೊಗೆವುದೈ ವಿಜ್ಞಾನ – ಮಂಕುತಿಮ್ಮ || 525 ||

ಪದ-ಅರ್ಥ: ಕರಟಿರಲಹುದೆ = ಕರಟಿರಲು(ಮುರುಟಿರಲು, ಕರಡಾಗಿರಲು, ಒಣಗಿರಲು) + ಅಹುದೆ, ಒಗೆವುದು = ಹುಟ್ಟುವುದು.

ವಾಚ್ಯಾರ್ಥ: ಜಗತ್ತು ಬೆಳೆದು ಚಿಗುರುತ್ತಿರುವಾಗ ಶಾಸ್ತ್ರಗಳು ಒಣಗಿರುವುದು ಸಾಧ್ಯವೆ? ಶಾಸ್ತ್ರಗಳಿಗೆ ಹೊಸ ಶಾಸ್ತ್ರಗಳು ಬರಲಾರವೆ? ಬಗೆಬಗೆಯ ಜೀವನ ಸತ್ವಗಳು ವಿಕಾಸವಾಗುವಾಗ ಹುಟ್ಟುವುದೆ ವಿಜ್ಞಾನ.

ವಿವರಣೆ: ನಮ್ಮ ಮನೆಯ ಹತ್ತಿರ ಒಂದು ದೊಡ್ಡ ಸಂಪಿಗೆಯ ಮರವಿತ್ತು. ಸಾವಿರಾರು ಹೂವುಗಳು ಅರಳಿ, ಇಡೀ ಪ್ರದೇಶಕ್ಕೆ ಸುವಾಸನೆಯನ್ನು ಬೀರುತ್ತಿದ್ದವು. ಒಂದು ದಿನ ಮರದ ಎಲೆಗಳು ಅಕಾಲದಲ್ಲಿ ಉದುರತೊಡಗಿದವು. ಏನು ಕಾರಣವಿರಬೇಕು ಎಂದು ಎಲ್ಲರೂ ಚಿಂತಿಸಿದರು. ಕೆಲವರು ಎಲೆಗಳ ಮೇಲೆ ಔಷಧಿಗಳನ್ನು ಸಿಂಪಡಿಸಿದರು. ಯಾವ ಪ್ರಯೋಜನವೂ ಆಗಲಿಲ್ಲ. ದಿನಕಳೆದಂತೆ ಮರ ಒಣಗುತ್ತ ಬಂದಿತು. ಮರತಜ್ಞರು ಬಂದು ಪರೀಕ್ಷಿಸಿ, ಮರದ ಬೇರಿಗೆ ಹುಳ ಹಿಡಿದಿದ್ದರಿಂದ ಮರ ಒಣಗುತ್ತಿದೆಯೆಂದೂ, ಅದಿನ್ನು ಉಳಿಯಲಾರದೆಂದು ಹೇಳಿ ಹೋದರು. ಕೆಲವೇ ತಿಂಗಳಲ್ಲಿ ಮರ ಬಿದ್ದು ಹೋಯಿತು. ಅಷ್ಟು ದೊಡ್ಡ ಮರದ ಉಳಿವು ಅವಲಂಬಿಸಿದ್ದು ಬೇರಿನ ಶಕ್ತಿಯನ್ನು ಎಲ್ಲಿಯವರೆಗೂ ಕಣ್ಣಿಗೆ ಕಾಣದ ಬೇರು ಸಾರಸರ್ವಸ್ವವನ್ನು ನೆಲದಿಂದ ಹೀರಿ ಇಡೀ ಮರಕ್ಕೆ ಪೂರೈಸುತ್ತಿತ್ತೋ, ಅಲ್ಲಿಯವರೆಗೆ ಮರ ಜೀವಂತವಾಗಿತ್ತು. ಎಂದು ಬೇರು ಶಕ್ತಿರಹಿತವಾಯಿತೋ ಅಂದೇ ಮರದ ಬೆಳವಣಿಗೆ, ಇರುವಿಕೆ ನಾಶವಾಗಿತ್ತು.

ಒಂದು ಮರಕ್ಕೇ ಹೀಗೆ ಬೇರು ಜೀವಮೂಲವಾಗಿರುವಾಗ, ಈ ಬೃಹತ್ ಪ್ರಪಂಚಕ್ಕೆ ಆಧಾರವಾಗಿರುವ, ಚಿಂತನೆಯ ಮೂಲಗಳಾಗಿರುವ, ಶಾಸ್ತ್ರಗಳು ಒಣಗಿರಲು ಸಾಧ್ಯವೆ? ಪ್ರಪಂಚ ಸದಾಕಾಲ ಚಿಗುರುತ್ತಲೇ ಇದೆ, ವಿಸ್ತಾರವಾಗುತ್ತಲೇ ಇದೆ. ಅದು ಹಾಗೆ ಬೆಳೆಯುತ್ತಿದ್ದರೆ, ಅದರ ಮೂಲವಾದ ಶಾಸ್ತ್ರಗಳು, ಚಿಂತನೆಗಳು ಗಟ್ಟಿಯಾಗಿವೆ ಎಂದರ್ಥ. ಅಂದಿದ್ದ ಶಾಸ್ತ್ರಗಳು ಹಾಗೆಯೇ ಇರುವುದು ಸಾಧ್ಯವಿಲ್ಲ. ಅವುಗಳಿಗೆ ಹೊಸ ಸಾಂದರ್ಭಿಕ ಚಿಂತನೆಗಳು, ಆಲೋಚನೆಗಳು ಸೇರಿ ಹೊಸ ಶಾಸ್ತ್ರಗಳಾಗುತ್ತವೆ. ಅದನ್ನು ಕಗ್ಗ ಸುಂದರವಾಗಿ 'ನಿಗಮಸಂತತಿಗೆ ಸಂತತಿಯಾಗದಿಹುದೆ?' ಎಂದು ಕೇಳುತ್ತದೆ. ಅಂದಿನ ನಿಗಮಗಳ ಸಂತತಿಗೆ ಹೊಸ ಕಾಲಧರ್ಮದ ವಿಚಾರಗಳು ಸೇರಿ ನವೀನ ನಿಗಮಗಳ ಸಂತತಿ ಸಮಾಜವನ್ನು ಪೋಷಿಸುತ್ತವೆ.

ಪ್ರಪಂಚ ಬೆಳೆಯುತ್ತಿದ್ದಂತೆ, ಹೊಸ ಹೊಸ ವಿಷಯಗಳ ಅವಿಷ್ಕಾರವಾಗುತ್ತದೆ. ಜ್ಞಾನದ ಅಂಚು ಹಿಗ್ಗುತ್ತಲೇ ಹೋಗುತ್ತದೆ. ಮನುಷ್ಯ ಈಗ ಭೂಮಿಯ ಪಾತಾಳಕ್ಕೇ ಇಳಿದು, ಸೂರ್ಯಮಂಡಲದಾಚೆ ದೃಷ್ಟಿ ಹರಿಸಿ, ಸಮುದ್ರದ ಆಳಕ್ಕೆ ಹೋಗಿ, ತನ್ನ ಅರಿವಿನ ಪರಿಧಿಗೆ ಬಂದ ಎಲ್ಲ ಜೀವಿಗಳ ವೈವಿಧ್ಯವನ್ನು ಗುರುತಿಸಿ, ಅಧ್ಯಯನ ಮಾಡಿದ್ದಾನೆ. ಮನುಷ್ಯನ ದೇಹದ ಪ್ರತಿ ಕಣಕಣವನ್ನು ಕಂಡು ಅದರ ವ್ಯವಸ್ಥೆಯನ್ನು ತಿಳಿಯಲು ಪ್ರಯತ್ನಿಸಿದ್ದಾನೆ. ಇದೇ ವಿಜ್ಞಾನ. ವಿಜ್ಞಾನವೆಂದರೆ ಬರೀ ಪ್ರಯೋಗಶಾಲೆಯಲ್ಲಿ ಮಾಡುವ ಕ್ರಿಯೆಗಳಲ್ಲ. ವಿಜ್ಞಾನವೆಂದರೆ, ವಿಶೇಷ ಜ್ಞಾನ. ವಿ-ಜ್ಞಾನ. ಅದು ಯಾವ ಕ್ಷೇತ್ರದಲ್ಲೇ ಆಗಬಹುದು. ವಿಷಯವನ್ನು ತಲಸ್ಪರ್ಶಿಯಾಗಿ ತಿಳಿಯುವುದು ವಿಶೇಷ ಜ್ಞಾನ. ಹೀಗೆ ವಿವಿಧ ಜೀವಸತ್ವಗಳ ತಿಳಿವಳಿಕೆ ಹೆಚ್ಚಾಗುವುದೆ ವಿಜ್ಞಾನದ ಹುಟ್ಟು. ❖

ಪದಬಂಧ 4816

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಅಂಗೈ ರೇಖೆಗಳನ್ನು ನೋಡಿ ಭವಿಷ್ಯ ಹೇಳುವುದು (6)
4.ಆನಂದಾನುಭವಕ್ಕೆ ಉಂಟಾದ ಅಡ್ಡಿ (4)
5.ರಥದಲ್ಲಿ ಕುಳಿತು ಯುದ್ಧ ಮಾಡುವವನು (3)
7.ಕತ್ತರಿಸುವ ಸಾಧನವಿದು (3)
10.ಮೂರು ಮೂಲೆಗಳಿರುವ ಆಕೃತಿ (3)
11.ಈತ ತಿರುಪೆ ಬೇಡುವವನು (3)
13.ಅದೇ ತಾನೆ ಮೂಡುತ್ತಿರುವ ಸೂರ್ಯ (4)
15.ಪ್ರೇಮಿಗಳ ಹುಸಿ ಜಗಳ (6)

ಮೇಲಿಂದ ಕೆಳಕ್ಕೆ

1.ಇದು ಒಜ್ಜೆಯಲ್ಲ ಬಿಡಿ! (3)
2.ಕೆರಳಿದವನ ಮೆಟ್ಟು! (2)
3.ಯುಕ್ತಿ ಅಥವಾ ಹಂಚಿಕೆ (4)
6.ಕಾವ್ಯ ರಚಿಸುವವಳು (4)
7.ಜ್ಞಾನೇಂದ್ರಿಯ ಅಥವಾ ಸಾಮಗ್ರಿ ಎಂದರೂ ಆದೀತು (3)
8.ಕನ್ನಡಿಗನಿಗೆ ಸಿಕ್ಕಿರುವ ರಿಬೇಟ್! (4)
9.ಆಡಳಿತವನ್ನು ಹೀಗೆ ಹೇಳಿ (4)
12.ಜಗಳಕ್ಕೊಂದು ಪರ್ಯಾಯ ಪದ (3)
14.ಅವಿರತ ಪ್ರಯತ್ನದಲ್ಲಿರುವ ಬ್ರಾಹ್ಮಣ! (2)



4815ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮಿಡುಕಲಾಡಿ 4.ಮೆಲುಕು
5.ಕಾವಡಿ 6.ಕರಂಡ 8.ಜನ
9.ಗಾಲಿ 10.ಕನಸು 14.ಭಿಕ್ಷುಕ
15.ಪರೋಕ್ಷ 16.ವಿಚಾರಗೇಡಿ

ಮೇಲಿಂದ ಕೆಳಕ್ಕೆ:
1.ಮಿಹಿರ
2.ಕರತಾಡನ 3.ಡಿಕಾವು
4.ಮೆಡಿಕ
7.ರಂಗೋಲಿ 8.ಜತನ
9.ಗಾಢಾಂಧಕಾರ 11.ಸುಭಿಕ್ಷ
12.ಕುಕವಿ 13.ಮುನ್ನುಡಿ

ಸುಡೊಕು 5202

	9			5			2	1
3		5	2		1	7	9	
	1			9				5
5		7			9	1		
	6			2			8	
9		8	6			5		2
1		2		8			6	
			5		6	2		3
6		3		4			5	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5201 ಸುಡೊಕು

6	3	4	2	9	7	1	5	8
9	1	2	5	3	8	4	6	7
8	5	7	4	6	1	3	2	9
2	9	3	7	8	4	6	1	5
1	4	8	9	5	6	7	3	2
5	7	6	1	2	3	8	9	4
3	6	9	8	4	5	2	7	1
7	8	5	6	1	2	9	4	3
4	2	1	3	7	9	5	8	6

ರಫೇಲ್: ಎಂಬಿಡಿಎಗೆ ₹8.54 ಕೋಟಿ ದಂಡ

ಪ್ರಜಾವಾಣಿ ವಾರ್ತೆ

ನವದೆಹಲಿ (ಪಿಟಿಐ): ರಫೇಲ್ ಯುದ್ಧವಿಮಾನ ಪೂರೈಕೆ ಒಪ್ಪಂದದ ಅಡಿ, ಯುರೋಪಿನ ಕ್ಷಿಪಣಿ ಅಭಿವೃದ್ಧಿ ಸಂಸ್ಥೆ ಎಂಬಿಡಿಎಗೆ ರಕ್ಷಣಾ ಸಚಿವಾಲಯವು ₹8.54 ಕೋಟಿ (10 ಲಕ್ಷ ಯೂರೊ) ದಂಡ ವಿಧಿಸಿದೆ. ಖರೀದಿ ಮಾಡುವ ದೇಶದಲ್ಲಿ ಹೂಡಿಕೆ ಮಾಡಬೇಕು ಎಂಬ ನಿಯಮ ಅನುಷ್ಠಾನದಲ್ಲಿ ವಿಳಂಬ ಧೋರಣೆ ಅನುಸರಿಸಿದ್ದಕ್ಕೆ ಸಂಸ್ಥೆ ವಿರುದ್ಧ ಈ ಕ್ರಮ ಕೈಗೊಳ್ಳಲಾಗಿದೆ.

ರಫೇಲ್ ಯುದ್ಧವಿಮಾನ ತಯಾರಿಸುವ ಫ್ರಾನ್ಸ್‌ನ ಡಾಸೊ ಏವಿಯೇಷನ್ ಸಂಸ್ಥೆಗೆ ಎಂಬಿಡಿಎ ಸಂಸ್ಥೆಯು ಕ್ಷಿಪಣಿಗಳನ್ನು ಪೂರೈಕೆ ಮಾಡುತ್ತದೆ. 2016ರಲ್ಲಿ, ಭಾರತ–ಫ್ರಾನ್ಸ್ ನಡುವೆ 36 ರಫೇಲ್ ಯುದ್ಧ ವಿಮಾನ ಖರೀದಿ ಒಪ್ಪಂದ ಏರ್ಪಟ್ಟಿತ್ತು.

ಖರೀದಿ ಮಾಡುವ ದೇಶದಲ್ಲಿ ಹೂಡಿಕೆ ಮಾಡುವ ನಿಯಮವು ಇದರ ಭಾಗವಾಗಿತ್ತು. 2019ರ ಸೆಪ್ಟೆಂಬರ್ ಹಾಗೂ 2022ರ ಸೆಪ್ಟೆಂಬರ್ ನಡುವೆ ಒಪ್ಪಂದ ಮೌಲ್ಯದ ಶೇ 50ರಷ್ಟನ್ನು ಭಾರತದಲ್ಲಿ ಹೂಡಿಕೆ ಮಾಡಬೇಕಿತ್ತು. ಈ ಬಗ್ಗೆ ಕಳೆದ ಸೆಪ್ಟೆಂಬರ್‌ನಲ್ಲಿ ಸಿಎಜಿ ಗಮನ ಸೆಳೆದಿತ್ತು.

ನಿಯಮಾವಳಿಯಂತೆ ಎಂಬಿಡಿಎ ಸಂಸ್ಥೆಯು ಈಗಾಗಲೆ ದಂಡ ಪಾವತಿಸಿದೆ. ಜೊತೆಗೆ, ರಕ್ಷಣಾ ಸಚಿವಾಲಯದ ವಿರುದ್ಧ ಪ್ರತಿಭಟನೆಯನ್ನು ದಾಖಲಿಸಿರುವುದಾಗಿ ಹೇಳಿದೆ.

‘ಪ್ರಳಯ’ ಕ್ಷಿಪಣಿಯ ಪ್ರಯೋಗ ಯಶಸ್ವಿ

ಬಾಲಾಸೋರ್ (ಒಡಿಶಾ): ಸ್ವದೇಶಿ ನಿರ್ಮಿತ, ಗರಿಷ್ಠ 500 ಕಿ.ಮೀ ಅಂತರದ ಗುರಿಯನ್ನು ತಲುಪಬಲ್ಲ, ನೆಲದಿಂದ ನೆಲಕ್ಕೆ ಉಡಾಯಿಸುವ ‘ಪ್ರಳಯ’ ಕ್ಷಿಪಣಿಯ ಪರೀಕ್ಷಾರ್ಥ ಪ್ರಯೋಗವನ್ನು ಬುಧವಾರ ಯಶಸ್ವಿಯಾಗಿ ನಡೆಸಲಾಯಿತು.

ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯು (ಡಿಆರ್‌ಡಿಒ) ಇದನ್ನು ಅಭಿವೃದ್ಧಿಪಡಿಸಿದ್ದು, ಘನ ಪ್ರೊಪೆಲ್ಲೆಂಟ್ ರಾಕೆಟ್ ಮೋಟಾರ್, ಹೊಸ ತಂತ್ರಜ್ಞಾನ ಅಳವಡಿಸಲಾಗಿದೆ. ಅತ್ಯಾಧುನಿಕ ದಿಕ್ಸೂಚಿ ಮತ್ತು ಇತರೆ ಸೌಲಭ್ಯಗಳಿವೆ ಎಂದು ಹೇಳಿಕೆಯಲ್ಲಿ ತಿಳಿಸಿದೆ.

ಕ್ಷಿಪಣಿಯ ಎಲ್ಲ ಉದ್ದೇಶಗಳ ಕಾರ್ಯ ತೃಪ್ತಿಕರವಾಗಿದೆ. ಉಡಾವಣೆ ಸ್ಥಳದಲ್ಲಿ ಅಳವಡಿಸಿದ್ದ ಎಲ್ಲ ಸಂವೇದಿಗಳು ಕ್ಷಿಪಣಿಯ ವೇಗವನ್ನು ಗುರುತಿಸಿ, ದಾಖಲಿಸಿವೆ ಎಂದು ತಿಳಿಸಿದೆ.

‘ಪ್ರಳಯ’ ಕ್ಷಿಪಣಿಯ ಪರೀಕ್ಷಾರ್ಥ ಪ್ರಯೋಗ ಬುಧವಾರ ನಡೆಯಿತು

ಬುಧವಾರ ಬೆಳಿಗ್ಗೆ ಒಡಿಶಾದ ಕರಾವಳಿಯಲ್ಲಿನ ಎ.ಪಿ.ಜೆ ಅಬ್ದುಲ್ ಕಲಾಂ ದ್ವೀಪದಿಂದ ಪರೀಕ್ಷಾರ್ಥ ಪ್ರಯೋಗ ನಡೆಯಿತು. ಕ್ಷಿಪಣಿಯ ವ್ಯಾಪ್ತಿಯು 350 ರಿಂದ 500 ಕಿ.ಮೀ. ಇದ್ದು, ನಿಗದಿತ ಗುರಿಯನ್ನು ಕ್ಷಿಪಣಿ ಪರಿಪೂರ್ಣವಾಗಿ ತಲುಪಿದೆ ಎಂದು ವಿವರಿಸಿದೆ.

ಕ್ಷಿಪಣಿಯ ಪರೀಕ್ಷಾರ್ಥ ಪ್ರಯೋಗದ ಮೂಲಕ ಡಿಆರ್‌ಡಿಒ ಹೊಸ ಮೈಲಿಗಲ್ಲು ಸಾಧಿಸಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಟ್ವೀಟ್ ಮಾಡಿದ್ದಾರೆ. ಡಿಆರ್‌ಡಿಒ ಅಧ್ಯಕ್ಷ ಮತ್ತು ರಕ್ಷಣಾ ಇಲಾಖೆಯ ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗದ ಕಾರ್ಯದರ್ಶಿ ಡಾ.ಜಿ.ಸತೀಶ್ ರೆಡ್ಡಿ, ಅತ್ಯಾಧುನಿಕ ಕ್ಷಿಪಣಿಯು ರಕ್ಷಣಾ ವ್ಯವಸ್ಥೆಗೆ ಹೆಚ್ಚಿನ ಬಲ ನೀಡಲಿದೆ ಎಂದು ತಿಳಿಸಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಪಕ್ಷಗಳಿಂದ ಮಹಿಳೆಯರ ಓಲೈಕೆ

ಲಖನೌ (ಪಿಟಿಐ): ‘ಮಹಿಳೆಯರ ಮತ ಸೆಳೆಯುವ ಉದ್ದೇಶದಿಂದ ಮಾತ್ರ ಕಾಂಗ್ರೆಸ್ ಮತ್ತು ಬಿಜೆಪಿ ಮಹಿಳಾ ಸಬಲೀಕರಣದ ಕುರಿತು ಮಾತನಾಡುತ್ತಿವೆ’ ಎಂದು ಬಹುಜನ ಸಮಾಜ ಪಕ್ಷದ (ಬಿಎಸ್‌ಪಿ) ಮುಖ್ಯಸ್ಥೆ ಮಾಯಾವತಿ ಬುಧವಾರ ಟೀಕಿಸಿದ್ದಾರೆ.

ಉತ್ತರ ಪ್ರದೇಶದ ಪ್ರಯಾಗರಾಜ್‌ನಲ್ಲಿ ಮಂಗಳವಾರ ನಡೆದ ಸ್ವಸಹಾಯ ಸಂಘಗಳ ಸಮಾವೇಶದಲ್ಲಿ ಮಾತನಾಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರು ಬಿಜೆಪಿಯನ್ನು ಬೆಂಬಲಿಸುವಂತೆ ಮಹಿಳೆಯರಿಗೆ ಕರೆ ನೀಡಿದ್ದರು. ಜೊತೆಗೆ ಮಹಿಳೆಯರ ಕಲ್ಯಾಣಕ್ಕಾಗಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಕೈಗೊಂಡಿರುವ ಕ್ರಮಗಳ ಕುರಿತು ಮಾತನಾಡಿದ್ದರು. ಈ ಹಿನ್ನೆಲೆಯಲ್ಲಿ ಮಾಯಾವತಿ ಅವರು ಸರಣಿ ಟ್ವೀಟ್‌ಗಳ ಮೂಲಕ ಪ್ರತಿಕ್ರಿಯೆ ನೀಡಿದ್ದಾರೆ.

‘ದೇಶದ ಒಟ್ಟು ಜನಸಂಖ್ಯೆಯಲ್ಲಿ ಅರ್ಧದಷ್ಟು ಮಹಿಳೆಯರೇ ಇದ್ದಾರೆ. ಆದರೂ ಅವರು ತಮ್ಮ ಹಕ್ಕುಗಳಿಂದ ವಂಚಿತರಾಗಿದ್ದಾರೆ. ಡಾ. ಅಂಬೇಡ್ಕರ್ ಅವರು ಮಹಿಳೆಯರ ಸಬಲೀಕರಣಕ್ಕೆ ದೊಡ್ಡ ಕೊಡುಗೆ ನೀಡಿದ್ದಾರೆ. ಈಗ ಅವರನ್ನು ಅನುಕರಿಸುತ್ತಿರುವುದು ಬಿಎಸ್‌ಪಿ ಮಾತ್ರ. ಬಿಎಸ್‌ಪಿ ಆಡಳಿತದಲ್ಲಿ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಕ್ಷೇತ್ರದಲ್ಲಿ ಮಹಿಳೆಯರ ಜೀವನದಲ್ಲಿ ಬದಲಾವಣೆ ತರಲು ಶ್ರಮಿಸಲಾಯಿತು. ಈಗ ಅದನ್ನು ಪ್ರತಿಪಕ್ಷಗಳು ಬಳಸಿ ಕೊಳ್ಳಲು ಪ್ರಯತ್ನಿಸುತ್ತಿವೆ’ ಎಂದಿದ್ದಾರೆ.

ಲೋಕಸಭೆಯಲ್ಲಿ ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ನೀಡುವ ವಿಚಾರ ಹಲವು ವರ್ಷಗಳಿಂದ ಮೂಲೆ ಹಿಡಿದಿದೆ. ಇದನ್ನು ಸಾಧ್ಯವಾಗಿಸದ ಪಕ್ಷಗಳು, ಮಹಿಳಾ ಸಬಲೀಕರಣದ ಬಗ್ಗೆ ಮಾತನಾಡುತ್ತಾರೆ ಎಂದರು.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

‘ನನ್ನ ಬಳಿ ಸೋದರಿಯರಿದ್ದಾರೆ’

ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್ ನೆಲೆ ಕಳೆದುಕೊಂಡಿದೆ ಎಂಬ ಟೀಕೆಗಳಿಗೆ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರು ಹಿಂದಿ ಚಿತ್ರ ‘ದೀವಾರ್’ನ ಸಂಭಾಷಣೆ ಮೂಲಕ ಪ್ರತ್ಯುತ್ತರ ನೀಡಿದ್ದಾರೆ. ‘ಮೇರೆ ಪಾಸ್ ಬೆಹೆನ್ ಹೈ’(ನನ್ನ ಬಳಿ ಸೋದರಿಯರಿದ್ದಾರೆ) ಎಂದು ಅವರು ಹೇಳಿದ್ದಾರೆ.

ಪತ್ರಕರ್ತ ಜೊತೆ ತಾವು ನಡೆಸಿದ ಸಂಭಾಷಣೆಯ ವಿಡಿಯೊವನ್ನು ಅವರು ಟ್ವೀಟ್ ಮಾಡಿದ್ದಾರೆ. ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್‌ಗೆ ನೆಲೆಯೇ ಇಲ್ಲ ಆದರೂ ಕಾಂಗ್ರೆಸ್ ತನ್ನ ರ‍್ಯಾಲಿಗಳಲ್ಲಿ ಮಹಿಳೆಯರ ಕುರಿತು ಮಾತನಾಡುತ್ತಿದೆ ಎಂದು ಪ್ರತಿಪಕ್ಷಗಳು ನಡೆಸುತ್ತಿರುವ ಟೀಕೆ ಕುರಿತು ಪತ್ರಕರ್ತರೊಬ್ಬರು ಪ್ರಶ್ನೆ ಕೇಳಿದ್ದಾರೆ. ಆಗ ಪ್ರಿಯಾಂಕಾ, ‘ದೀವಾರ್ ಚಿತ್ರದಲ್ಲಿ ಅಮಿತಾಭ್ ಬಚ್ಚನ್ ಅವರು ಶಶಿ ಕಪೂರ್‌ಗೆ ಹೇಳುವ ಸಂಭಾಷಣೆ ಕೇಳಿದ್ದೀರಾ? ಅಮಿತಾಭ್ ಅವರು ಶಶಿ ಕಪೂರ್‌ಗೆ ‘ನನ್ನ ಬಳಿ ಗಾಡಿ ಇದೆ, ಬಂಗಲೆ ಇದೆ’ ಎನ್ನುತ್ತಾರೆ. ಅದಕ್ಕೆ ಶಶಿ ಕಪೂರ್ ‘ನನ್ನ ಬಳಿ ಅಮ್ಮ ಇದ್ದಾರೆ’ ಎಂದು ಉತ್ತರಿಸುತ್ತಾರೆ. ಹಾಗೆಯೇ, ನನ್ನ ಬಳಿ ಸೋದರಿಯರಿದ್ದಾರೆ’ ಎಂದು ಉತ್ತರಿಸಿದ್ದಾರೆ.

‘ರಾಜಕಾರಣದಲ್ಲಿ ಸೋದರಿಯರು ಬದಲಾವಣೆ ತರುತ್ತಾರೆ. ನಾನು ಹುಡುಗಿ, ಆದರೆ ಹೋರಾಡಬಲ್ಲೆ’ ಎಂದು ವಿಡಿಯೊ ಅಡಿಬರಹ ನೀಡಿದ್ದಾರೆ.

ಪಕ್ಷದಿಂದ ಅಸಹಕಾರ: ಹರೀಶ್ ರಾವತ್

ಡೆಹ್ರಾಡೂನ್ (ಪಿಟಿಐ): ‘ಪಕ್ಷದಿಂದ ಸಹಕಾರ ದೊರೆಯುತ್ತಿಲ್ಲ’ ಎಂದು ಮುಂಬರಲಿರುವ ಉತ್ತರಾಖಂಡ ಚುನಾವಣೆಗೆ ಕಾಂಗ್ರೆಸ್ ಪ್ರಚಾರದ ಉಸ್ತುವಾರಿ ಆಗಿರುವ ಹಿರಿಯ ನಾಯಕ ಹರೀಶ್ ರಾವತ್ ಅಸಹಾಯಕತೆ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಅವರು, ‘ಚುನಾವಣೆಯ ಸಾಗರದಲ್ಲಿ ನಾನು ಈಜುವ ವೇಳೆ ನನಗೆ ಸಹಾಯ ಹಸ್ತ ನೀಡಬೇಕಿರುವ ಸಂಸ್ಥೆಯೇ (ಪಕ್ಷ) ಸಹಕಾರ ನೀಡದೇ ಇರುವುದು ಮತ್ತು ಋಣಾತ್ಮಕ ಪಾತ್ರ ವಹಿಸುತ್ತಿರುವುದು ನನಗೆ ವಿಚಿತ್ರ ಎನಿಸುತ್ತಿದೆ. ನನ್ನ ಕೈಗಳನ್ನು ಕಟ್ಟಿಹಾಕಲಾಗುತ್ತಿದೆ. ಸಾಕು ಹರೀಶ್ ರಾವತ್, ನೀನು ತುಂಬಾ ಸಮಯದಿಂದ ಈಜುತ್ತಿರುವೆ ಎಂದು ನನ್ನ ಒಳದನಿ ಹೇಳುತ್ತಿದೆ’ ಎಂದು ಬರೆದಿದ್ದಾರೆ. ಹರೀಶ್ ರಾವತ್ ಅವರು ಕಾಂಗ್ರೆಸ್ ತೊರೆಯುವ ಬಗ್ಗೆ ಈ ಟ್ವೀಟ್‌ನಲ್ಲಿ ಸುಳಿವು ನೀಡಿದ್ದಾರೆ ಎಂದು ಪರಿಣಿತರು ವಿಶ್ಲೇಷಿಸಿದ್ದಾರೆ.

ಜನತಂತ್ರದ ಹಬ್ಬ 2021

ಗೋವಾ: ಕಾಂಗ್ರೆಸ್‌ಗೆ ಬಿಜೆಪಿ ನಾಯಕ

ಪಣಜಿ (ಪಿಟಿಐ): ಗೋವಾ ಬಿಜೆಪಿಯ ಮಾಜಿ ಶಾಸಕ ಕಾರ್ಲೋಸ್ ಅಲ್ಮೆಡಾ ಬುಧವಾರ ಕಾಂಗ್ರೆಸ್ ಸೇರಿದರು. ಮಂಗಳವಾರವಷ್ಟೇ ಅವರು ಬಿಜೆಪಿ ಸದಸ್ಯತ್ವ ಮತ್ತು ಶಾಸಕಾಂಗ ಸಭೆಗೆ ರಾಜೀನಾಮೆ ನೀಡಿದ್ದರು.

ಗೋವಾ ಕಾಂಗ್ರೆಸ್ ಉಸ್ತುವಾರಿ ದಿನೇಶ್ ಗುಂಡೂರಾವ್, ಗೋವಾ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಗಿರೀಶ್ ಚೋಡಂಕರ್ ಮತ್ತು ವಿರೋಧ ಪಕ್ಷದ ನಾಯಕ ದಿಗಂಬರ್ ಕಾಮತ್ ಅವರ ಉಪಸ್ಥಿತಿಯಲ್ಲಿ ಅಲ್ಮೆಡಾ ಕಾಂಗ್ರೆಸ್ ಸೇರಿದರು.

ಅಲ್ಮೆಡಾ ಅವರ ಆಗಮನ ಕಾಂಗ್ರೆಸ್‌ಗೆ ಬಲ ತುಂಬಲಿದೆ. ಬಿಜೆಪಿ ಶಾಸಕ ಅಲೀನಾ ಸಲ್ದಾನ ಬಿಜೆಪಿ ತೊರೆದ ಬಳಿಕ, ಬಿಜೆಪಿ ಮತ್ತು ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿರುವ ಎರಡನೇ ಶಾಸಕ ಅಲ್ಮೆಡಾ. ಗೋವಾ ಜನರು ಬಿಜೆಪಿಯನ್ನು ಎಂದಿಗೂ ಅಧಿಕಾರಕ್ಕೆ ತರುವುದಿಲ್ಲ ಎಂದು ಚೋಡಂಕರ್ ಹೇಳಿದ್ದಾರೆ.

ಎಸ್‌ಪಿ ಆಡಳಿತದಲ್ಲಿ ಹಬ್ಬಕ್ಕೆ ಅವಕಾಶ ಇರಲಿಲ್ಲ: ಯೋಗಿ

ಸಮಾಜವಾದಿ ಪಕ್ಷ ಅಧಿಕಾರದಲ್ಲಿ ಇದ್ದಾಗ ಹಿಂದೂಗಳಿಗೆ ಹಬ್ಬಗಳನ್ನು ಆಚರಿಸಲು ಅನುವು ಮಾಡುತ್ತಿರಲಿಲ್ಲ. ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಪರಿಸ್ಥಿತಿ ಬದಲಾಯಿತು ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಬುಧವಾರ ಹೇಳಿದರು.

ಸೋನಭದ್ರದಲ್ಲಿ ಸಾರ್ವಜನಿಕ ರ‍್ಯಾಲಿ ಉದ್ದೇಶಿಸಿ ಮಾತನಾಡಿದ ಅವರು ಹೀಗೆ ಹೇಳಿದರು. ಹಿಂದಿನ ಸರ್ಕಾರ ಇದ್ದಾಗ ಕಾವಡ್ ಯಾತ್ರೆ ಮತ್ತು ದುರ್ಗಾ ಪೂಜೆ ಆಚರಿಸುವಂತಿರಲಿಲ್ಲ, ಈಗ ಭಕ್ತರು ಕಾವಡ್ ಯಾತ್ರೆ ನಡೆಸುತ್ತಿದ್ದಾರೆ. ಅಯೋಧ್ಯೆಯಲ್ಲಿ ರಾಮ ಭಕ್ತರ ಮೇಲೆ ಗುಂಡು ಹಾರಿಸಲು ಎಸ್‌ಪಿ ಸರ್ಕಾರ ಆದೇಶಿಸಿತ್ತು. ಬಿಜೆಪಿ ಸರ್ಕಾರ ರಾಮ ಮಂದಿರ ನಿರ್ಮಿಸುತ್ತಿದೆ. ಕಾಶಿ ವಿಶ್ವನಾಥ ಧಾಮ ಕೂಡಾ ವೈಭವ ಪಡೆಯುತ್ತಿದೆ ಎಂದರು.

ಸಂಸತ್ ಅಧಿವೇಶನ • 9 ಮಸೂದೆಗಳಿಗೆ ಅಂಗೀಕಾರ

ಅನಿರ್ದಿಷ್ಟ ಅವಧಿಗೆ ಮುಂದೂಡಿಕೆ

ನವದೆಹಲಿ (ಪಿಟಿಐ): ಬೆಲೆ ಏರಿಕೆ, ಲಖೀಂಪುರ ಖೇರಿ ಹಿಂಸಾಚಾರ ಪ್ರಕರಣಗಳನ್ನು ಮುಂದಿಟ್ಟುಕೊಂಡು ವಿರೋಧ ಪಕ್ಷಗಳಿಂದ ಪ್ರತಿಭಟನೆಗಳಿಗೆ ಸಾಕ್ಷಿಯಾಗಿದ್ದ ಸಂಸತ್‌ನ ಉಭಯ ಸದನಗಳ ಚಳಿಗಾಲದ ಅಧಿವೇಶನವನ್ನು ಬುಧವಾರ ಅನಿರ್ದಿಷ್ಟಾವಧಿಗೆ ಮುಂದೂಡಲಾಯಿತು.

ಕೃಷಿ ಕಾನೂನುಗಳ ವಾಪಸ್ ಪಡೆಯುವ ಮಸೂದೆ, ಚುನಾವಣಾ ಕಾಯ್ದೆಗಳ ತಿದ್ದುಪಡಿ ಮಸೂದೆ ಸೇರಿದಂತೆ 9 ಮಸೂದೆಗಳನ್ನು ಪ್ರಸಕ್ತ ಅಧಿವೇಶನದಲ್ಲಿಯೇ ಅಂಗೀಕರಿಸಲಾಯಿತು.

ಓಂ ಬಿರ್ಲಾ

ನವೆಂಬರ್ 29ರಂದು ಆರಂಭವಾಗಿದ್ದ ಅಧಿವೇಶನ ನಿಗದಿಯಂತೆ ಗುರುವಾರ (ಡಿ.23) ಮುಕ್ತಾಯಗೊಳ್ಳಬೇಕಿತ್ತು. ಆದರೆ, ಒಂದು ದಿನ ಮುಂಚಿತವಾಗಿಯೇ ಅಂತ್ಯಗೊಂಡಿತು.

ಜನನ ನಿರ್ದೇಶನಾಲಯ ಮತ್ತು ಸಿಬಿಐ ನಿರ್ದೇಶಕರ ಅಧಿಕಾರಾವಧಿಯನ್ನು ಐದು ವರ್ಷಗಳಿಗೆ ವಿಸ್ತರಿಸುವ ಮಸೂದೆ, ಮಹಿಳೆಯರ ಮದುವೆಯ ಕನಿಷ್ಠ ವಯಸ್ಸನ್ನು 18ರಿಂದ 21ಕ್ಕೆ ಹೆಚ್ಚಿಸುವ ಮಸೂದೆ ಸೇರಿದಂತೆ ಒಟ್ಟು 12 ಮಸೂದೆಗಳನ್ನು ಸರ್ಕಾರ ಪ್ರಸಕ್ತ ಅಧಿವೇಶನದಲ್ಲಿ ಮಂಡಿಸಿತ್ತು.

ಲೋಕಸಭೆ ಕಲಾಪ ಅರಂಭಗೊಳ್ಳುತ್ತಿದ್ದಂತೆಯೇ, ಸ್ಪೀಕರ್ ಓಂ ಬಿರ್ಲಾ ಅವರು ಸಮಾರೋಪ ಭಾಷಣ ಓದಿದರು.

‘ವಿರೋಧ ಪಕ್ಷಗಳ ಸದಸ್ಯರ ಪ್ರತಿಭಟನೆಗಳಿಂದಾಗಿ ಕಲಾಪಕ್ಕೆ ಪದೇಪದೇ ಅಡ್ಡಿಯುಂಟಾಯಿತು. ಇದರಿಂದಾಗಿ ಅಮೂಲ್ಯವಾದ 18 ಗಂಟೆ, 48 ನಿಮಿಷಗಳಷ್ಟು ಅವಧಿ ವ್ಯರ್ಥವಾಯಿತು. ಲೋಕಸಭೆಯ ಕಲಾಪ ಒಟ್ಟಾರೆ ಶೇ 82ರಷ್ಟು ಫಲದಾಯಕವಾಗಿದೆ’ ಎಂದು ಸ್ಪೀಕರ್ ಬಿರ್ಲಾ ಹೇಳಿದರು.

ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ, ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಹಾಗೂ ಇತರ ಸದಸ್ಯರು ಅಧಿವೇಶನದ ಕೊನೆಯ ದಿನದ ಕಲಾಪದಲ್ಲಿ ಪಾಲ್ಗೊಂಡಿದ್ದರು.

ರಾಜ್ಯಸಭೆ: ಸಭಾಪತಿ ಎಂ.ವೆಂಕಯ್ಯ ನಾಯ್ಡು ಅವರು ರಾಜ್ಯಸಭೆಯನ್ನು ಸಹ ಬುಧವಾರ ಅನಿರ್ದಿಷ್ಟಾವಧಿಗೆ ಮುಂದೂಡಿದರು. ‘ಪದೇಪದೇ ಉಂಟಾದ ಅಡ್ಡಿಗಳಿಂದಾಗಿ ತನ್ನ ಸಾಮರ್ಥ್ಯಕ್ಕಿಂತ ಕಡಿಮೆ ಮಟ್ಟದಲ್ಲಿ ರಾಜ್ಯಸಭೆಯ ಕಲಾಪ ನಡೆಯಿತು’ ಎಂದು ಅವರು ವಿಷಾದಿಸಿದರು.

‘ಪ್ರಸಕ್ತ ಅಧಿವೇಶನ ನಡೆದ ರೀತಿಯ ಬಗ್ಗೆ ಹೆಚ್ಚು ಮಾತನಾಡಲು ಹೋಗುವುದಿಲ್ಲ. ಆದರೆ, ಈ ಅಧಿವೇಶನ ಇನ್ನಷ್ಟು ಉತ್ತಮವಾಗಿ ಸಾಗಬಹುದಿತ್ತು. ಈ ಬಗ್ಗೆ ಪ್ರತಿಯೊಬ್ಬ ಸದಸ್ಯ ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದು ಒತ್ತಾಯಿಸುತ್ತೇನೆ’ ಎಂದರು.

ಅಯೋಧ್ಯೆ ಭೂಮಿ ಖರೀದಿ ವಿಷಯ ಪ್ರಸ್ತಾಪಕ್ಕೆ ಖರ್ಗೆ ಯತ್ನ

ನವದೆಹಲಿ: ರಾಮಮಂದಿರ ವಿವಾದ ಕುರಿತಂತೆ ಸುಪ್ರೀಂ ಕೋರ್ಟ್‌ನ ತೀರ್ಪಿನ ನಂತರ ಅಯೋಧ್ಯೆಯಲ್ಲಿ ಕೆಲವು ರಾಜಕಾರಣಿಗಳು, ಅಧಿಕಾರಿಗಳು ಭೂಮಿ ಖರೀದಿಸಿದ್ದಾರೆ ಎಂಬ ವಿಷಯವನ್ನು ರಾಜ್ಯಸಭೆಯಲ್ಲಿ ಪ್ರಸ್ತಾಪಿಸಲು ಕಾಂಗ್ರೆಸ್ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಬುಧವಾರ ಮುಂದಾದರು.

ಪತ್ರಿಕಾ ವರದಿಯನ್ನು ಉಲ್ಲೇಖಿಸಿದ ಅವರು, ‘ಶಾಸಕರು, ಮೇಯರ್, ಸ್ಥಳೀಯ ಸಂಸ್ಥೆಯ ಆಯುಕ್ತರು, ಅಧಿಕಾರಿಗಳು ಭೂಮಿ ಖರೀದಿಸಿದ್ದಾರೆ ಎಂಬುದನ್ನು ಸದನ ಗಮನಿಸಿರಬೇಕು’ ಎಂದು ಸಭಾಪತಿಯವರನ್ನು ಉದ್ದೇಶಿಸಿ ಹೇಳಿದರು.

‘ಇದಕ್ಕೆ ಪ್ರತಿಕ್ರಿಯಿಸಿದ ಸಭಾಪತಿ ಎಂ.ವೆಂಕಯ್ಯನಾಯ್ಡು, ‘ವಿಷಯ ಪ್ರಸ್ತಾಪಕ್ಕೆ ಮೊದಲು ನೋಟಿಸ್ ನೀಡಬೇಕು. ಪತ್ರಿಕಾ ವರದಿಯನ್ನು ಕಲಾಪದಲ್ಲಿ ಓದಲು ಅವಕಾಶವಿಲ್ಲ’ ಎಂದರು.

ಈ ಹಂತದಲ್ಲಿ ಜೈರಾಂ ರಮೇಶ್, ಆಂಬಿಕಾ ಸೋನಿ, ಶಕ್ತಿಸಿಂಗ್ ಗೊಹಿಲ್ ಅವರು ಖರ್ಗೆ ಬೆಂಬಲಕ್ಕೆ ನಿಂತರು. ಆದರೆ, ವಿಷಯದ ಪ್ರಸ್ತಾಪಕ್ಕೆ ಸಭಾಪತಿಗಳು ಅನುಮತಿ ನೀಡಲಿಲ್ಲ.

‘ಜನರ ಧ್ವನಿಯಾಗುವಲ್ಲಿ ವಿಪಕ್ಷಗಳು ವಿಫಲ’

ನವದೆಹಲಿ: ‘ವಿರೋಧ ಪಕ್ಷಗಳು ಸಂಸತ್‌ನ ಪ್ರಸಕ್ತ ಚಳಿಗಾಲದ ಅಧಿವೇಶನದ ಕಲಾಪಕ್ಕೆ ಪದೇಪದೇ ಅಡ್ಡಿಪಡಿಸಿದವು. ಜನರು ಎದುರಿಸುತ್ತಿರುವ ಸಮಸ್ಯೆಗಳನ್ನು ಪ್ರಸ್ತಾಪಿಸದೇ ಅವರು ತಮ್ಮ ಜವಾಬ್ದಾರಿ ನಿರ್ವಹಿಸುವಲ್ಲಿ ವಿಫಲವಾದವು’ ಎಂದು ಬಿಜೆಪಿ ಬುಧವಾರ ಟೀಕಿಸಿದೆ. ‘ಮುಂಬರುವ ಚುನಾವಣೆಗಳಲ್ಲಿ ಸೋಲಿನ ಭೀತಿ ವಿರೋಧ ಪಕ್ಷಗಳನ್ನು ಕಾಡುತ್ತಿತ್ತು. ಈ ಕಾರಣಕ್ಕೆ ಅವು ಜನರನ್ನು ಬಾಧಿಸುತ್ತಿರುವ ವಿಷಯಗಳತ್ತ ಗಮನ ಹರಿಸಲಿಲ್ಲ’ ಎಂದು ಬಿಜೆಪಿಯ ಮುಖ್ಯ ವಕ್ತಾರರೂ ಆಗಿರುವ ರಾಜ್ಯಸಭಾ ಸದಸ್ಯ ಅನಿಲ್ ಬಲೂನಿ ಟೀಕಿಸಿದರು.

11 ಖಾಸಗಿ ಸಂಸ್ಥೆಗಳಿಗೆ ಸಿಐಎಸ್‌ಎಫ್‌ನಿಂದ ಭದ್ರತೆ

ನವದೆಹಲಿ (ಪಿಟಿಐ): ರಿಲಯನ್ಸ್ ಇಂಡಸ್ಟ್ರಿ, ಟಾಟಾ ಸ್ಟೀಲ್, ಇನ್ಫೊಸಿಸ್ ಸೇರಿದಂತೆ 11 ಖಾಸಗಿ ಸಂಸ್ಥೆಗಳು ಹಾಗೂ 64 ವಿಮಾನ ನಿಲ್ದಾಣಗಳಿಗೆ ಕೇಂದ್ರ ಕೈಗಾರಿಕಾ ಭದ್ರತಾ ಪಡೆಯು (ಸಿಐಎಸ್‌ಎಫ್) ರಕ್ಷಣೆ ಒದಗಿಸುತ್ತಿದೆ ಎಂದು ಕೇಂದ್ರ ಗೃಹ ಖಾತೆಯ ರಾಜ್ಯ ಸಚಿವ ನಿತ್ಯಾನಂದ ರಾಯ್ ಬುಧವಾರ ಹೇಳಿದ್ದಾರೆ.

‘ಬೆದರಿಕೆ ಕಾರಣ ಭದ್ರತೆ ಮತ್ತು ನಿರ್ವಹಣೆಯ ಬದ್ಧತೆಗಾಗಿ ಸಿಐಎಸ್‌ಎಫ್ ನಿಯೋಜನೆಯನ್ನು ಪರಿಗಣಿಸಲಾಗುತ್ತದೆ. ಪ್ರಸ್ತುತ ಎಲೆಕ್ಟ್ರಾನಿಕ್ಸ್ ಹಾಗೂ ಮಾಹಿತಿ ತಂತ್ರಜ್ಞಾನ ಕ್ಷೇತ್ರದ 11 ಖಾಸಗಿ ಕಂಪನಿಗಳಿಗೆ ಭದ್ರತೆ ನೀಡಲು ಸಿಐಎಸ್‌ಎಫ್ ನಿಯೋಜಿಸಲಾಗಿದೆ’ ಎಂದು ಅವರು ರಾಜ್ಯಸಭೆಯಲ್ಲಿ ಲಿಖಿತ ಪ್ರಶ್ನೆಯೊಂದಕ್ಕೆ ಉತ್ತರಿಸಿದ್ದಾರೆ.

ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಯಲ್ಲಿ ಕೈಗಾರಿಕಾ ಸಂಸ್ಥೆ, ಬೆಂಗಳೂರು, ಮೈಸೂರು ಮತ್ತು ಪುಣೆಯಲ್ಲಿರುವ ಇನ್ಫೊಸಿಸ್ ಸಂಸ್ಥೆ, ಹರಿದ್ವಾರದಲ್ಲಿರುವ ಪತಂಜಲಿ ಆಹಾರ ಮತ್ತು ಗಿಡಮೂಲಿಕೆ ಉದ್ಯಾನ, ಮುಂಬೈನಲ್ಲಿರುವ ರಿಲಯನ್ಸ್ ಕಾರ್ಪೊರೇಟ್ ಉದ್ಯಾನ ಆವರಣ, ಜಾಮ್‌ನಗರದ ರಿಲಯನ್ಸ್ ಇಂಡಸ್ಟ್ರಿ, ನಯರಾ ಎನರ್ಜಿ, ಕಲಿಂಗನಗರದ ಟಾಟಾ ಸ್ಟೀಲ್, ಹೈದರಾಬಾದ್‌ನ ಭಾರತ್ ಬಯೋಟೆಕ್, ಮುಂಬೈನ ಛತ್ರಪತಿ ಶಿವಾಜಿ ವಿಮಾನನಿಲ್ದಾಣದ ಹೋಟೆಲ್ ಟರ್ಮಿನಲ್ ಐಸಗಳಿಗೆ ಸಿಐಎಸ್‌ಎಫ್ ಭದ್ರತೆ ನೀಡಲಾಗುತ್ತಿದೆ.

ಸಂಕ್ಷಿಪ್ತ ಸುದ್ದಿ

ಅಮೆರಿಕ: ಜನಸಂಖ್ಯೆ ಏರಿಕೆ ಪ್ರಮಾಣದಲ್ಲಿ ಕುಸಿತ

ವಾಷಿಂಗ್ಟನ್ (ಎಪಿ): ಕೋವಿಡ್‌ನಿಂದ ಜಾಗತಿಕವಾಗಿರುವ ಅಮೆರಿಕದಲ್ಲಿ ಜನಸಂಖ್ಯೆ ಏರಿಕೆ ಪ್ರಮಾಣ ದಾಖಲೆಯ ಪ್ರಮಾಣದಲ್ಲಿ ಕುಗ್ಗಿದ್ದು, ಏರಿಕೆ ಪ್ರಮಾಣ ಕೇವಲ ಶೇ 0.1ರಷ್ಟಾಗಿದೆ.

‘2020ರ ಜುಲೈ ಮತ್ತು 2021ರ ಜುಲೈ ಅವಧಿಯಲ್ಲಿ ಜನಸಂಖ್ಯೆ 3,92,665 ರಷ್ಟು ಮಾತ್ರ ಏರಿಕೆ ಕಂಡಿದೆ’ ಎಂದು ಅಮೆರಿಕದ ಜನಗಣತಿ ಮಂಡಳಿಯು ಅಂಕಿ ಅಂಶ ಬಿಡುಗಡೆ ಮಾಡಿದೆ.

ಅಮೆರಿಕದ ಜನಸಂಖ್ಯೆ ಏರಿಕೆಯು ಹಲವು ವರ್ಷಗಳಿಂದ ತಳಮಟ್ಟದಲ್ಲೇ ಇದೆ. 1937ರ ನಂತರ ಇದೇ ಮೊದಲ ಬಾರಿಗೆ ಜನಸಂಖ್ಯೆಯು ವಾರ್ಷಿಕ 10 ಲಕ್ಷದಷ್ಟು ಕಡಿಮೆಯಾಗಿದೆ.

‘ಕಡಿಮೆ ಇರಲಿದೆ ಎಂದು ನಿರೀಕ್ಷಿಸಿದ್ದೆವು. ಇಷ್ಟು ಕಡಿಮೆ ಎಂದು ಅಂದಾಜಿಸಿರಲಿಲ್ಲ. ಕೋವಿಡ್ ಎಲ್ಲ ರೀತಿ ಪರಿಣಾಮ ಬೀರಿದೆ ಎಂಬುದಕ್ಕೆ ಇದು ಸಾಕ್ಷಿ’ ಎಂದು ಬ್ರೂಕಿಂಗ್ಸ್ ಮೆಟ್ರೊಪಾಲಿಟನ್ ನೀತಿ ನಿರೂಪಣಾ ಸಂಸ್ಥೆಯ ಹಿರಿಯ ಅಧಿಕಾರಿ ವಿಲಿಯಂ ಫ್ರೇ ಅವರು ಪ್ರತಿಕ್ರಿಯಿಸಿದರು.

‘ಅಮೆರಿಕದಲ್ಲಿ ವಯಸ್ಸರ ಜನಸಂಖ್ಯೆಯು ಹೆಚ್ಚಿದೆ. ಅಂದರೆ, ಹೆರಿಗೆ ವಯಸ್ಸಿನ ಮಹಿಳೆಯರು ಕಡಿಮೆ. ಯುವದಂಪತಿ ಮಗು ಹೊಂದುವುದನ್ನು ಮುಂದೂಡುತ್ತಿದ್ದಾರೆ ಅಥವಾ ಒಂದೇ ಮಗು ಹೊಂದಲು ಬಯಸುತ್ತಿದ್ದಾರೆ’ ಎಂದು ಹೇಳಿದರು.

ಮಡಗಾಸ್ಕರ್: ಹಡಗು ಮುಳುಗಿ 64 ಸಾವು

ಅಂಟಾನಾನಾರಿವೊ(ಎಎಫ್‌ಪಿ): ದ್ವೀಪರಾಷ್ಟ್ರ ಮಡಗಾಸ್ಕರ್‌ನ ಈಶಾನ್ಯದ ಕರಾವಳಿ ಸಮುದ್ರದಲ್ಲಿ ಸರಕು ಸಾಗಣೆಯ ಸಣ್ಣ ಹಡಗೊಂದು ಮುಳುಗಿದ್ದು, ಮೃತಪಟ್ಟವರ ಸಂಖ್ಯೆ 64ಕ್ಕೆ ಏರಿದೆ. ಬುಧವಾರ 25 ಮಂದಿಯ ಶವ ಪತ್ತೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹಡಗಿನಲ್ಲಿ ನಿಯಮಬಾಹಿರವಾಗಿ ಪ್ರಯಾಣಿಕರನ್ನು ಕರೆದೊಯ್ಯಲಾಗುತ್ತಿತ್ತು. ಹಡಗಿನಲ್ಲಿ 130 ಜನರಿದ್ದರು. ಮೃತರಲ್ಲಿ ಐದು ಮಕ್ಕಳೂ ಸೇರಿದ್ದಾರೆ ಎಂದು ತಿಳಿಸಿದ್ದಾರೆ. 45 ಪ್ರಯಾಣಿಕರನ್ನು ರಕ್ಷಿಸಲಾಗಿದೆ. 15 ಮಂದಿ ಇನ್ನೂ ನಾಪತ್ತೆಯಾಗಿದ್ದಾರೆ. ಬದುಕುಳಿದವರಿಗಾಗಿ ಶೋಧ ಕಾರ್ಯ ಮುಂದುವರಿದಿದೆ ಎಂದು ತಿಳಿಸಿದ್ದಾರೆ.

ಈ ಮಧ್ಯೆ, ಅಪಘಾತ ಸ್ಥಳಕ್ಕೆ ತೆರಳುತ್ತಿದ್ದ ಮಲಗಾಸಿ ಸರ್ಕಾರದ ಸಚಿವರಿದ್ದ ಹೆಲಿಕಾಪ್ಟರ್ ಪತನವಾಗಿದೆ. ಸಚಿವರು ಪಾರಾಗಿದ್ದು, 12 ಗಂಟೆ ಕಾಲ ಈಜಿ ತೀರ ಪ್ರದೇಶ ತಲುಪಿದ್ದಾರೆ.

ಮ್ಯಾನ್ಮಾರ್: ಗಣಿ ಭೂಕುಸಿತ, 70 ಮಂದಿ ನಾಪತ್ತೆ

ಯಾಂಗೂನ್ (ಎಪಿ): ಉತ್ತರ ಮ್ಯಾನ್ಮಾರ್‌ನ ಕಚಿನ್ ರಾಜ್ಯದ ಪಕಂತ್‌ನ ಗಣಿಯಲ್ಲಿ ಬುಧವಾರ ಭೂಕುಸಿತವಾಗಿದ್ದು, 70 ಮಂದಿ ನಾಪತ್ತೆಯಾಗಿದ್ದಾರೆ. ಇವರಿಗಾಗಿ ಶೋಧಕಾರ್ಯ ನಡೆದಿದೆ.

ಗಯಾನಾರ್ ರಕ್ಷಣಾ ತಂಡದ ಕ್ಯೊ ಟಾ ಅವರು, ‘ಶೋಧ ಕಾರ್ಯ ನಡೆದಿದೆ. ಅಕ್ಕಪಕ್ಕದ ಗಣಿಗಳ ಮಣ್ಣು ತ್ಯಾಜ್ಯ 60 ಮೀಟರ್‌ನಷ್ಟು ಕುಸಿದಿದೆ. ಐವರು ಮಹಿಳೆಯರು ಮಣ್ಣಿನೊಳಗೆ ಸಿಲುಕಿದ್ದರು. ಒಬ್ಬನ ಶವವನ್ನು ತೆಗೆಯಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪಾಕ್, ಅಫ್ಗನ್‌ನ 3,117 ಮಂದಿಗೆ ಭಾರತೀಯ ಪೌರತ್ವ

ನವದೆಹಲಿ (ಪಿಟಿಐ): ಕಳೆದ ನಾಲ್ಕು ವರ್ಷಗಳಲ್ಲಿ ಪಾಕಿಸ್ತಾನ ಮತ್ತು ಅಫ್ಗಾನಿಸ್ತಾನದಿಂದ 8,244 ಮುಸ್ಲಿಮೇತರರು ಭಾರತೀಯ ಪೌರತ್ವಕ್ಕಾಗಿ ಅರ್ಜಿ ಸಲ್ಲಿಸಿದ್ದಾರೆ. ಈ ಪೈಕಿ 3,117 ಮಂದಿಗೆ ಪೌರತ್ವ ನೀಡಲಾಗಿದೆ’ ಎಂದು ಕೇಂದ್ರ ಗೃಹ ಖಾತೆಯ ರಾಜ್ಯ ಸಚಿವ ನಿತ್ಯಾನಂದ ರಾಯ್ ರಾಜ್ಯಸಭೆಗೆ ತಿಳಿಸಿದರು.

‘2018ರಿಂದ 2021ರ ಅವಧಿಯಲ್ಲಿ ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ಅಫ್ಗಾನಿಸ್ತಾನ ಮೂಲದ ಹಿಂದೂ, ಸಿಖ್, ಜೈನ್ ಬೌದ್ಧ ಕ್ರೈಸ್ತ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ 8,244 ಮಂದಿ ಭಾರತೀಯ ಪೌರತ್ವಕ್ಕಾಗಿ ಅರ್ಜಿ ಸಲ್ಲಿಸಿದ್ದಾರೆ’ ಎಂದರು.

1ನೇ ವರ್ಷದ ಪುಣ್ಯಸ್ಮರಣೆ

ಶ್ರೀ ಎಂ.ಆರ್. ವೆಂಕಟೇಶ್‌ರವರು
ನಿವೃತ್ತ ಎಇಆರ್, ಬಿಬಿಎಂಪಿ ಬೆಂಗಳೂರು
ಮರಣ : 23–12–2020

ನೀವು ನಮ್ಮನ್ನು ಅಗಲಿ ಇಂದಿಗೆ ಒಂದು ವರ್ಷ ಕಳೆದರೂ ಸದಾ ನಿಮ್ಮ ನೆನಪು ನಮ್ಮೊಡನೆ ಮನದಲ್ಲಿ ಅಚ್ಚಳಿಯದೆ ಉಳಿದಿದೆ. ಭಗವಂತನು ನಿಮ್ಮ ಆತ್ಮಕ್ಕೆ ಶಾಂತಿಯನ್ನು ನೀಡಲೆಂದು ಪ್ರಾರ್ಥಿಸುವ

ಪತ್ನಿ, ಮಕ್ಕಳು ಹಾಗೂ ಬಂಧು–ಮಿತ್ರರು

ಪುಣ್ಯಸ್ಮರಣೆ



ಶ್ರೀ ಜಿ. ಎಂ. ನಾಗರಾಜ್
ಜನನ: 23–04–1951 ಮರಣ: 23–12–2017

ನಿಮ್ಮ ಮಾರ್ಗದರ್ಶನ ನಮಗೆ ದಾರಿ ದೀಪ ಭಗವಂತ ನಿಮ್ಮ ಆತ್ಮಕ್ಕೆ ಚಿರಶಾಂತಿ ಕರುಣಿಸಲೆಂದು ಪ್ರಾರ್ಥಿಸುವ
ಶ್ರೀಮತಿ ಎಂ. ವಿಜಯಲಕ್ಷ್ಮಿ

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

WORK FROM HOME ಮನೆಯಿಂದಲೇ ಕುಳಿತು ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲಿಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8095377333/ 8095377444

ಕರ್ನಾಟಕವಾದ್ಯಂತ ಹೆಸರಾಂತ ಕಂಪನಿ ಹಾಗೂ ಆಫೀಸ್ ಕೆಲಸಕ್ಕೆ ಯುವಕ/ಯುವತಿಯರು ಬೇಕಾಗಿದ್ದಾರೆ. ವಸತಿಯೊಂದಿಗೆ Salary+ OT. 17,800/- 68,000/- 8884666597, 8884666594.

ತಕ್ಷಣ ಬೇಕಾಗಿದ್ದಾರೆ: ಕರ್ನಾಟಕದಾದ್ಯಂತ ಕಂಪನಿ, ಆಫೀಸ್ ಕೆಲಸಗಳಿಗೆ ಯುವಕ ಯುವತಿಯರು. 10th, Degree. ವಸತಿಯೊಂದಿಗೆ ಸಂಬಳ 17,800- 19,200. PH:8197389603

TATA ಮೋಟಾರ್ಸ್, TOYOTA, ಪ್ರಿಟಾನಿಯಾ ಆನ್‌ಲೈನ್ ಕಂಪನಿಗಳಿಗೆ SSLC, PUC, Degree,ITI ಆದವರು (ವಿದ್ಯಾರ್ಹತೆಯಿಲ್ಲದವರಿಗೂ) ನೇರನೇಮಕಾತಿ 18,000- 56,000/- ವಸತಿಯೊಂದಿಗೆ. 7204853296, 7204396011

ಖಾಸಗಿ ಬ್ಯಾಂಕ್‌ಗಳಲ್ಲಿ ಕೆಲಸಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ sslc puc degree ಸಂಬಳ 15000 to 28000 ಸಂಪರ್ಕಿಸಿ 9980814578, 9980812378

ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟರ್ಸ್, ಹೊಂಡ ಕಂಪನಿಗಳಿಗೆ 10ನೇ, ಪಿಯುಸಿ, ಡಿಗ್ರಿ, ಡಿಪ್ಲೊಮಾದವರು 16,600- 62000/-(ಆನ್‌ಲೈನ್ ಮನೆಯಲ್ಲಿಯೇ ಕೆಲಸ) ವಸತಿಯೂಒಂದಿಗೆ 8123884588, 8123884788

ಮಹಿಳಾ (11,000-13,000)/ ಪುರುಷರ್ (13,000-15,000) ಹೆಲ್ಪರ್ / ಗಂಡಸರು ಬೇಕಾಗಿದ್ದಾರೆ, ಊಟ ವಸತಿ ಸೌಲಭ್ಯವಿದೆ. ಉಡುಪಿ. 9901402916

★ಮನೆಯಿಂದಲೇ ಮೊಬೈಲ್★ ತಯಾರಿಸಿ ನಮಗೆ ಮಾರಿಕೆ ಪ್ರತಿದಿನ 500 ರಿಂದ 1000 ಸಂಪಾದಿಸಿ. ತಿರುವನಂತಪುರಂ, ಬೆಂಗಳೂರು. 8792252077, ಶಿವಮೊಗ್ಗ. 9008013895

GLOBAL INTERNATIONAL Friendship Club Regd M&F Daily Earn 10,000 To 15,000 PF& ESI Benefits with Food & Room. Whatsapp 9513045046/ 7022770604

Multiple Vacancy

REQUIRED, TEAM Leader & Field executive For Banking Loan Collections. Contact: Timings (9 Am-6 Pm) 8951450742, 7019700755, 080-41155671.

Part-Time Jobs

ಕನ್ನಡ ಮತ್ತುಇಂಗ್ಲಿಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿ ಯರಿಗೆ ವಯಸ್ಸಾದವರು ಮನೆಯಲ್ಲಿಯೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಭವಿಷ್ಯ

Astrology

★॥ಶ್ರೀಅನ್ನಪೂರ್ಣೇಶ್ವರಿದೇವಿ ಆರಾಧಕರಿಂದ॥★ ಸ್ತ್ರೀಪುರುಷ ವಶೀಕರಣ, ಸಂಬಂಧ ವಶೀಕರಣ, ಸಾಲಬಾಧೆ,ಮಾಟಮಂತ್ರ ಯಾವುದೇ ಸಮಸ್ಯೆಗಳಿಗೆ ಕೇವಲ 30 ನಿಮಿಷದಲ್ಲಿ ಪರಿಹಾರ. ಬ್ರಹ್ಮಾನಂದ ಗುರೂಜಿ. 8050061378

★॥ಕೇರಳ ಆದ ನಂತರ ಕಾಣಿಕೆ॥★ ವಶೀಕರಣ ಆಗಬೇಕಾದವರಿಗೆ ಹತ್ತುವುದಾಗಿ, ತಿನ್ನಿಸುವುದಾಗಿ, ಬಟ್ಟೆ,ಫೋಟೋ,ಕೂದಲು ಇಲ್ಲದಿದ್ದರೂ ಸ್ತ್ರೀಪುರುಷ ಲೈಂಗಿಕ ವಶೀಕರಣ,7 ಗಂಟೆಯಲ್ಲಿ ಪರಿಹಾರ. 9482529984

ವಶೀಕರಣ ಸ್ಪೆಶಲಿಸ್ಟ್ ಕೊಳ್ಳೇಗಾಲದ ಪ್ರಖ್ಯಾತ ದೈವಾಂಶ ಮಂತ್ರ ಮಾಂತ್ರಿಕರು ಇಷ್ಟಪಟ್ಟವರು ನಿಮ್ಮವರಾಗಲು ನಿಮ್ಮ ಸಕಲ ಸಮಸ್ಯೆಗಳಿಗೆ ಪರಿಹಾರ ಆಗದಿದ್ದಲ್ಲಿ ನಿಮ್ಮ ಹಣ ವಾಪಸ್ 9535883556

★ವಶೀಕರಣ ಸ್ಪೆಷಲಿಸ್ಟ್★ ಗಂಡ ಹೆಂಡತಿ ಕಲಹ, ಪ್ರೇಮವಿವಾಹ, ಸಂತಾನ, ಸ್ತ್ರೀಪುರುಷ ಆಕೃತಿಕ ಸಂಬಂಧ ಇನ್ನಿತರ ಸಮಸ್ಯೆಗಳಿಗೆ ಫೋನಿನ ಮುಖಾಂತರ ಪರಿಹಾರ 9538276534

ಶ್ರೀಗಣಪತಿ ಜ್ಯೋತಿಷ್ಯಾಲಯ: 3100ಗೆ ಸ್ತ್ರೀಪುರುಷ ವಶೀಕರಣ, ಪ್ರಭಾವ ವಶೀಕರಣ ಕೇರಳ ಕೊಳ್ಳೇಗಾಲ ಮಾಂತ್ರಿಕರು ದಯಾನಂದ ದೀಕ್ಷಿತರು ಫೋನಿನ ಮೂಲಕ ಪರಿಹಾರ. Ph:9900981165

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ, ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಪ್ರವಾಸ

Travel

★ಶ್ರೇಯಸ್ ಟೂರ್ಸ್★ 28.12.2021 15ದಿನಗಳು 32,000 (ಅಂದಾಜು) ಮಧ್ಯಪ್ರದೇಶ ರಾಜ್ಯ ಪ್ರವಾಸ (ಅಮರಕಂಟಕ ಸಹಿತ). 28.12.2021 16ದಿನಗಳು 32,000 ಅಯೋಧ್ಯ ರಾಜ್ಯ ತೆಲಂಗಾಣ ರಾಜ್ಯದ 49ಸ್ಥಳಗಳು. 21.01.2022 13ದಿನಗಳು 28,000 (ಅಹಮದಾಬಾದ್ ನಿಂದ) ಅಖಂಡ ಗುಜರಾತ್ ರಾಜ್ಯ ಪ್ರವಾಸ (ಕಚ್‌ಬುಚ್ ಸಹಿತ). 15.02.2022 6ದಿನಗಳು 26,000 (ಡೆಹ್ರಾಡೂನ್‌ನಿಂದ) ಸ್ಪೋಟ್ಲೆಂಡ್,ಡಿಲಿ,ನೈನಿತಾಲ್, ಭೀಮ್‌ತಾಲ್,ಅಲ್ಮೋರಾ, ಜಾಗೇಶ್ವರ,ಮುಕ್ತೇಶ್ವರ,ಜಿಮ್ ಕಾರ್ಬೆಟ್.22.02.2022 10ದಿನಗಳು 30,000 (ಬೆಂಗಳೂರಿನಿಂದ) ಪುರಿ,ಕೋನಾರ್ಕ್,ಭುವನೇಶ್ವರ, ಜಾಜ್ ಪುರ,ಕಟಕ್,ಕೊಲ್ಕತ್ತಾ, ಗಂಗಾಸಾಗರ್. 01.03.2022 12ದಿನಗಳು 34,000 (ಬೆಂಗಳೂರಿನಿಂದ) ಚಂಡೀಗಢ್, ಸಿಮ್ಲಾ,ಕುಲುಮನಾಲಿ, ರೋಹ್ಟಂಗ್‌ಪಾಸ್,ಡಾಲ್‌ಹೌಸಿ, ಧರ್ಮಶಾಲ, ವಾಘಾಬಾರ್ಡರ್, ಅಮೃತಸರ್,ಕುರುಕ್ಷೇತ್ರ. 01.03.2022 10ದಿನಗಳು 50,000 (ಬೆಂಗಳೂರಿನಿಂದ) ಅಖಂಡ ನೇಪಾಳರಾಷ್ಟ್ರ (ಮುಕ್ತಿನಾಥಸಹಿತ) 9743351212, 9206979202, 9902050065, 7406112334

ವಿಜಯವಾಡ, ಭದ್ರಾಚಲಂ, ವಾಸವಿಪೆನುಗೊಂಡ, ಪಂಚರಾಮಮಂದಿರಗಳು 07.02.2022 ರಿಂದ 10 ದಿನಗಳು, ನೈಮಿಶಾರಣ್ಯ, ಕಾಶಿ,ಗಯಾ, ಪ್ರಯಾಗ, ಅಯೋಧ್ಯ 14.02.2022 ರಿಂದ 7 ದಿನಗಳು. ಸೋಮನಾಥ್, ದ್ವಾರಕಾ, ಉಜ್ಜಯಿನಿ, ಓಂಕಾರೇಶ್ವರ್, ಮಾತ್ರಗಯಾ 21.02.2022 ರಿಂದ 15/10 ದಿನಗಳು, ದೆಹಲಿ,ಅಮೃತಸರ್, ವೈಷ್ಣೋದೇವಿ, ಶಕ್ತಿಪೀಠಗಳು, ಕುಲು,ಮನಾಲಿ, 04.03.2022 ರಿಂದ 12 ದಿನಗಳು. ಸಂಪರ್ಕಿಸಿ: 26508925, 9980993631 ಶ್ರೀಚೈತನ್ಯ ಟ್ರಾವಲ್ಸ್, ಚಾಮರಾಜಪೇಟೆ, ಬೆಂಗಳೂರು-18

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರಕಟವಾಗುವ ಮಾಹಿತಿ ಬಗ್ಗೆ ಓದುಗರು ತಾವೇ ಖಚಿತಪಡಿಸಿಕೊಳ್ಳಬೇಕು. ಜಾಹೀರಾತಿನಲ್ಲಿನ ವಿವರಗಳಿಗೆ ಪತ್ರಿಕೆ ಜವಾಬ್ದಾರರಲ್ಲ.
ಇತಿ ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH ಪ್ರಜಾವಾಣಿ
BOOK YOUR CLASSIFIEDS ONLINE
5 EASY STEP
5 Easy steps to book your ads
LOG INTO WWW.DHCLASSIFIEDS.COM
CHOOSE THE CATEGORY
CHOOSE THE AD DATES
COMPOSE THE MATTER
CONFIRM AND PAY
TO BOOK YOUR CLASSIFIEDS ADS ONLINE
JOB LOST REAL ESTATE NAME CHANGE EDU HEALTH
MATRI AUTO ASTRO NOTICE TRAVEL
condition apply*
WWW.DHCLASSIFIEDS.COM
For more information Contact:
9880856233 | 9731810277 | 9901641752 | 9845114560 | 9886213331
Email: dhclassifieds@deccanherald.co.in

ಪ್ರೊ ಕಬಡ್ಡಿ ಲೀಗ್: ಅಭಿಷೇಕ್ ಸಿಂಗ್ ಮಿಂಚಿನ ಆಟ; ಯು ಮುಂಬಾ ತಂಡಕ್ಕೆ ಗೆಲುವು

ಬೆಂಗಳೂರಿಗೆ ‘ಮೊದಲ’ ಆಘಾತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಭಿಷೇಕ್ ಸಿಂಗ್ ಅವರ ಅಮೋಘ ಆಟದ ಬಲದಿಂದ ಯು ಮುಂಬಾ ತಂಡವು ಬುಧವಾರ ಆರಂಭವಾದ ಪ್ರೊ ಕಬಡ್ಡಿ ಲೀಗ್ ಟೂರ್ನಿಯ ಮೊದಲ ಪಂದ್ಯದಲ್ಲಿ ಜಯಭೇರಿ ಬಾರಿಸಿತು. ಬೆಂಗಳೂರು ಬುಲ್ಸ್ ಸೋಲಿನ ಕಹಿಯುಂಡಿತು.

ವೈಟ್‌ಫೀಲ್ಡ್‌ನ ಶೆರಟನ್ ಗ್ರ್ಯಾಂಡ್ ಹೋಟೆಲ್‌ನಲ್ಲಿ ನಡೆಯುತ್ತಿರುವ ಟೂರ್ನಿಯ ಉದ್ಘಾಟನ ಪಂದ್ಯದಲ್ಲಿ ಅಭಿಷೇಕ್ ಸಿಂಗ್ ಗಳಿಸಿದ 19 ಪಾಯಿಂಟ್‌ಗಳ ಬಲದಿಂದ ಮುಂಬಾ ತಂಡವು 46–30ರಿಂದ ಬೆಂಗಳೂರಿನ ಎದುರು ಜಯಿಸಿತು.

ಬೆಂಗಳೂರು ತಂಡದ ನಾಯಕ ಪವನ್ ಶೆರಾವತ್ ಮತ್ತು ರೈಡರ್ ಚಂದ್ರನ್ ರಂಜೀತ್ ಅವರ ಸೂಪರ್ 10 ಗಳಿಸಿದರೂ ಮುಂಬಾ ತಂಡದ ರಕ್ಷಣಾ ಪಡೆಯು ತಿರುಗೇಟು ನೀಡಿತು. ಬುಲ್ಸ್ ತಂಡವು ಪಂದ್ಯದಲ್ಲಿ ಉತ್ತಮ ಆರಂಭ ಮಾಡಿತು. 4–10 ಮುನ್ನಡೆ ಸಾಧಿಸಿತು. ಆದರೆ, ಬುಲ್ಸ್ ದಾಳಿಗೆ ತಕ್ಕ ರಕ್ಷಣಾ ತಂತ್ರ ಹೆಣೆದ ಮುಂಬೈನ ಅಭಿಷೇಕ್ ಒಂದರ ಹಿಂದೆ ಒಂದು ಪಾಯಿಂಟ್ ಗಳಿಸಿ ಬೆಂಗಳೂರಿನ ಮೇಲೆ ಒತ್ತಡ ಹೆಚ್ಚಿಸಿದರು. ಅವರ ಚಾಣಾಕ್ಷ ಆಟದ ಮುಂದೆ ಪವನ್ ಪಡೆಯು ಬಸವಳಿಯಿತು.

ಆದರೆ, ಬುಲ್ಸ್ ತಂಡದ ರಂಜಿತ್ ಎರಡು ಸೂಪರ್ ರೇಡ್‌ಗಳ ಮೂಲಕ ಮಿಂಚಿದರು. ಅದಕ್ಕೂ ತಿರುಗೇಟು ನೀಡಿದ ಅಭಿಷೇಕ್ ಸೂಪರ್ ರೇಡ್‌ನಲ್ಲಿ ನಾಲ್ಕು ಪಾಯಿಂಟ್‌ಗಳನ್ನು ಜೇಬಿಗಿಳಿಸಿಕೊಂಡರು. ಇದರಿಂದಾಗಿ ಮುಂಬಾ ತಂಡವು ಮತ್ತೆ ಮುನ್ನಡೆಯತ್ತ ಹೊರಳಿತು. ಅರ್ಧವಿರಾಮದ ವೇಳೆಗೆ ಮುಂಬಾ ತಂಡವು 24–17ರಿಂದ ಮುನ್ನಡೆ ಸಾಧಿಸಿತು.

ವಿರಾಮದ ನಂತರ ಅವಧಿಯಲ್ಲಿ ಉಭಯ ತಂಡಗಳ ಪೈಪೋಟಿ ತುರುಸಿನಿಂದ ಕೂಡಿತ್ತು. ಎರಡೂ ತಂಡಗಳು ರೇಡ್‌ನಲ್ಲಿ ತಲಾ 11 ಅಂಕಗಳನ್ನು ಗಳಿಸಿದವು. ಆದರೆ ಟ್ಯಾಕಲ್‌ನಲ್ಲಿ ಮುಂಬಾ ಒಂಬತ್ತು ಅಂಕ ಗಳಿಸಿದರೆ, ಬುಲ್ಸ್ ಕೇವಲ ಎರಡು ಪಾಯಿಂಟ್ ಪಡೆಯಿತು. ಈ ಅವಧಿಯಲ್ಲಿ ಮುಂಬಾ ತಂಡವು ಒಟ್ಟು 22 ಅಂಕ ಗಳಿಸಿದರೆ, ಬೆಂಗಳೂರು ತಂಡ 13 ಪಾಯಿಂಟ್ ಗಳಿಸಿತು. ಇದರಿಂದಾಗಿ ಮುಂಬಾ ತಂಡವು ಜಯದ ಸಂಭ್ರಮ ಆಚರಿಸಿತು.

ಮುಂಬಾ ತಂಡದ ಹರೇಂದರ್ ಕುಮಾರ್ ರಕ್ಷಣಾ ಚಾತುರ್ಯ ಮೆರೆದರು. ಅವರು ಒಟ್ಟು ನಾಲ್ಕು ಟ್ಯಾಕಲ್ ಪಾಯಿಂಟ್ ಗಳಿಸಿದರು.

ಬುಲ್ಸ್ ತಂಡದ ಚಂದ್ರನ್ ರಂಜೀತ್ 13 ರೇಡಿಂಗ್ ಪಾಯಿಂಟ್ ಮತ್ತು ಮಯೂರ ಜಗನ್ನಾಥ್ ಮೂರು ಟ್ಯಾಕಲ್ ಪಾಯಿಂಟ್ ಗಳಿಸಿದರು.

ಟೈಟನ್ಸ್–ತಲೈವಾಸ್ ರೋಚಕ ಡ್ರಾ: ತೆಲುಗು ಟೈಟನ್ಸ್ ಮತ್ತು ತಮಿಳ್ ತಲೈವಾಸ್ ನಡುವಣ ಪಂದ್ಯ ರೋಚಕ ಡ್ರಾದಲ್ಲಿ ಅಂತ್ಯಗೊಂಡಿತು. ಟೈಟನ್ಸ್ ಪರ ಸಿದ್ಧಾರ್ಥ್ ದೇಸಾಯಿ 14 ರೈಡ್‌ಗಳಲ್ಲಿ ಒಟ್ಟು 11 ಪಾಯಿಂಟ್ ಕಲೆ ಹಾಕಿದರು. ರಜನೀಶ್ 6 ಮತ್ತು ಸಂದೀಪ್ 5 ಪಾಯಿಂಟ್ ಗಳಿಸಿದರು.

ತಮಿಳ್ ತಲೈವಾಸ್ ಪರ ಮಂಜಿತ್ 12 ಮತ್ತು ಪ್ರಪಂಚನ್ 6 ಪಾಯಿಂಟ್ ಗಳಿಸಿದರು. ಎರಡೂ ತಂಡಗಳು ತಲಾ 40 ಪಾಯಿಂಟ್‌ಗಳನ್ನು ಗಳಿಸಿದವು.

ಮತ್ತೊಂದು ಪಂದ್ಯದಲ್ಲಿ ಬೆಂಗಾಲ್ ವಾರಿಯರ್ಸ್ 38–33ರಲ್ಲಿ ಯು.ಪಿ. ಯೋಧಾವನ್ನು ಮಣಿಸಿತು.

ಬೆಂಗಾಲ್ ಪರ ಮಹಮ್ಮದ್ 11, ಸುಕೇಶ್ ಹೆಗ್ಡೆ 8 ಮತ್ತು ಮಣಿಂದರ್ ಸಿಂಗ್ 7 ಪಾಯಿಂಟ್ ಗಳಿಸಿದರು. ಯು.ಪಿ.ಯೋಧಾ ಪರ ಪ್ರದೀಪ್ ನರ್ವಾಲ್ 8 ಪಾಯಿಂಟ್ ಗಳಿಸಿದರು. ಸುರೇಂದರ್ 5 ಪಾಯಿಂಟ್ ಗಳಿಸಿದರು.

ಬೆಂಗಳೂರು ಬುಲ್ಸ್ ತಂಡದ ನಾಯಕ ಪವನ್ ಶೆರಾವತ್ ರೈಡಿಂಗ್ ಮೂಲಕ ಪಾಯಿಂಟ್ ಗಳಿಸಲು ಪ್ರಯತ್ನಿಸಿದರು

ಇಂದಿನ ಪಂದ್ಯ (ರಾತ್ರಿ)

ಜೈಪುರ ಪಿಂಕ್ ಪ್ಯಾಂಥರ್ಸ್ Vs ಗುಜರಾತ್ ಜೈಂಟ್ಸ್	7.30
ದಬಂಗ್ ಡೆಲ್ಲಿ – ಪುಣೇರಿ ಪಲ್ಟನ್	8.30
ಹರಿಯಾಣ ಸ್ಟೀಲರ್ಸ್ – ಪಟ್ನಾ ಪೈರೇಟ್ಸ್	9.30

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಸಿದ್ಧಾರ್ಥ್ ದೇಸಾಯಿ

ಬೆಂಗಳೂರಿನಲ್ಲಿ ಐಪಿಎಲ್ ಮೆಗಾ ಹರಾಜು?

ನವದೆಹಲಿ (ಪಿಟಿಐ): ‘ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ 2022ರ ಮೆಗಾ ಹರಾಜು ಪ್ರಕ್ರಿಯೆ ಬೆಂಗಳೂರಿನಲ್ಲಿ ನಡೆಯುವ ಸಾಧ್ಯತೆ ಇದೆ. ಫೆಬ್ರುವರಿ 7 ಮತ್ತು 8ರಂದು ಆಯೋಜನೆಗೊಳ್ಳಲಿದೆ ಎಂದು ಬಿಸಿಸಿಐ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಕೋವಿಡ್ ಪರಿಸ್ಥಿತಿಯು ಕೈಮೀರದಿದ್ದರೆ ಭಾರತದಲ್ಲಿಯೇ ಐಪಿಎಲ್ ಮೆಗಾ ಹರಾಜು ನಡೆಸಲಾಗುವುದು. ಇದು ಎರಡು ದಿನಗಳವರೆಗೆ ನಡೆಯುವುದು. ಬೆಂಗಳೂರಿನಲ್ಲಿ ನಡೆಸಲು ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ’ ಎಂದು ಅಧಿಕಾರಿಯು ತಿಳಿಸಿದ್ದಾರೆ.

ಕೋವಿಡ್ 19ರ ರೂಪಾಂತರಿತ ತಳಿಯಾದ ಓಮೈಕ್ರಾನ್ ಪ್ರಕರಣಗಳು ದೇಶದಲ್ಲಿ ವರದಿಯಾಗುತ್ತಿವೆ. ಮುಂದಿನ ಪರಿಸ್ಥಿತಿ ಹೇಗಿರಲಿದೆ ಎಂಬ ಕುರಿತು ಅನಿಶ್ಚಿತ ವಾತಾವರಣವೂ ಇದೆ.

ಈ ವರ್ಷ ಐಪಿಎಲ್‌ನಲ್ಲಿ ಎರಡು ಹೊಸ ತಂಡಗಳು ಸೇರ್ಪಡೆಯಾಗಿವೆ.

ಸಂಜೀವ್ ಗೋಯೆಂಕಾ ಒಡೆತನದ ಲಖನೌ ಮತ್ತು ವೆಂಚರ್ ಕ್ಯಾಪಿಟಲ್ ಫರ್ಮ್ ಸಿವಿಸಿ ಮಾಲೀಕತ್ವದ ಅಹಮದಾಬಾದ್ ತಂಡಗಳು ಪದಾರ್ಪಣೆ ಮಾಡಲಿವೆ. ಈ ತಂಡಗಳಿಗೂ ಆಟಗಾರರ ಆಯ್ಕೆ ನಡೆಯಲಿದೆ. ಈಗಾಗಲೇ ಟೂರ್ನಿಯಲ್ಲಿರುವ ಉಳಿದ ಎಂಟು ತಂಡಗಳು ಬಿಡುಗಡೆಗೊಳಿಸಲಾದ ಆಟಗಾರರ ಪಟ್ಟಿಯನ್ನು ಬಿಡುಗಡೆ ಮಾಡಿವೆ.

ಈಗಾಗಲೇ ತಮ್ಮ ತಂಡಗಳಲ್ಲಿರುವ ಆಟಗಾರರನ್ನು ಬಿಡುಗಡೆ ಮಾಡುವ ನಿಯಮದ ಕುರಿತು ಕೆಲವು ಫ್ರಾಂಚೈಸಿ ಮಾಲೀಕರು ಬೇಸರ ವ್ಯಕ್ತಪಡಿಸಿದ್ದಾರೆ.

‘ಶ್ರೇಯಸ್ ಅಯ್ಯರ್, ಶಿಖರ್ ಧವನ್, ಕಗಿಸೊ ರಬಾಡ ಮತ್ತು ಆರ್. ಅಶ್ವಿನ್ ಅವರಂತಹ ಆಟಗಾರರನ್ನು ತಂಡದಿಂದ ಬಿಡುಗಡೆ ಮಾಡುವುದು ತುಂಬ ಬೇಸರದ ಸಂಗತಿ. ಹರಾಜು ನಿಯಮಗಳು ಹೀಗಿರುವುದರಿಂದ ಪಾಲಿಸಬೇಕಾಗುತ್ತದೆ. ಒಂದು ತಂಡವನ್ನು ಬಲಿಷ್ಠವಾಗಿ ಕಟ್ಟುವುದು ಬಹಳ ದೊಡ್ಡ ಕೆಲಸ. ಯುವ ಆಟಗಾರರನ್ನು ಹುಡುಕಿ ತಂದು ಪ್ರೋತ್ಸಾಹಿಸಿ ಅವಕಾಶ ಕೊಡಲಾಗುತ್ತದೆ. ಅವರು ಉತ್ತಮವಾಗಿ ಆಡಿ ರಾಷ್ಟ್ರೀಯ ತಂಡದಲ್ಲಿಯೂ ಸ್ಥಾನ ಪಡೆಯುತ್ತಾರೆ. ಆದರೆ ಮೂರು ವರ್ಷಗಳ ನಂತರ ಅವರನ್ನು ಬಿಟ್ಟುಕೊಡಬೇಕಾದಾಗ ನೋವಾಗುತ್ತದೆ’ ಎಂದು ಡೆಲ್ಲಿ ಕ್ಯಾಪಿಟಲ್ಸ್ ಸಹಮಾಲೀಕರಾದ ಪಾರ್ಥ್ ಜಿಂದಾಲ್ ಹೇಳಿದ್ದಾರೆ.

ಇಂಡಿಯನ್ ಸೂಪರ್ ಲೀಗ್ ಟೂರ್ನಿ

ಕೇರಳಕ್ಕೆ ಭರ್ಜರಿ ಜಯ

ವಾಸ್ಕೊ (ಪಿಟಿಐ): ಕೇರಳ ಬ್ಲಾಸ್ಟರ್ಸ್ ತಂಡ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಚೆನ್ನೈಯಿನ್ ಎಫ್‌ಸಿಯನ್ನು 3–0ರಲ್ಲಿ ಮಣಿಸಿತು.

ಬುಧವಾರ ರಾತ್ರಿ ನಡೆದ ಪಂದ್ಯದಲ್ಲಿ ಆಕ್ರಮಣಕಾರಿ ಆಟದ ಮೂಲಕ ಎದುರಾಳಿಗಳನ್ನು ಕೇರಳ ತಡ ಕಂಗೆಡಿಸಿತು. 9ನೇ ನಿಮಿಷದಲ್ಲಿ ಪೇರೇರಾ ಡಯಾಸ್, 38ನೇ ನಿಮಿಷದಲ್ಲಿ ಸಹಾಲ್ ಮತ್ತು 79ನೇ ನಿಮಿಷದಲ್ಲಿ ಎ.ಲೂನಾ ಗೋಲು ಗಳಿಸಿದರು.

ಬ್ಯಾಂಬೊಲಿಮ್‌ನಲ್ಲಿ ಗುರುವಾರ ನಡೆಯಲಿರುವ ಪಂದ್ಯದಲ್ಲಿ ಹೈದರಾಬಾದ್ ಎಫ್‌ಸಿ ಮತ್ತು ಈಸ್ಟ್ ಬೆಂಗಾಲ್ ಎಫ್‌ಸಿ ತಂಡಗಳು ಮುಖಾಮುಖಿಯಾಗಲಿವೆ. ಆಡಿರುವ ಆರು ಪಂದ್ಯಗಳಲ್ಲಿ ಮೂರು ಜಯ ಮತ್ತು ಎರಡು ಡ್ರಾ ಸಾಧಿಸಿರುವ ಹೈದರಾಬಾದ್ ತಂಡ ಪಾಯಿಂಟ್ ಪಟ್ಟಿಯ ಅಗ್ರಸ್ಥಾನದ ಮೇಲೆ ಕಣ್ಣಿಟ್ಟಿದೆ. ಈ ಪಂದ್ಯದಲ್ಲಿ ಜಯ ಗಳಿಸಿದರೆ ಈ ಕನಸಿನ ಹಾದಿ ಸುಲಭವಾಗಲಿದೆ.

ಈ ಬಾರಿಯೂ ನೀರಸ ಪ್ರದರ್ಶನ ನೀಡಿರುವ ಎಸ್‌ಸಿ ಈಸ್ಟ್ ಬೆಂಗಾಲ್ ತಂಡ ಏಳು ಪಂದ್ಯಗಳ ಪೈಕಿ ಒಂದರಲ್ಲೂ ಜಯ ಗಳಿಸಲಿಲ್ಲ. ಪಾಯಿಂಟ್ ಪಟ್ಟಿಯ ಕೊನೆಯಲ್ಲಿರುವ ತಂಡಕ್ಕೆ ಈಗ ಮೊದಲ ಜಯ ಸಾಧಿಸುವುದೇ ದೊಡ್ಡ ಕನಸು.

ಹೈದರಾಬಾದ್ ಎಫ್‌ಸಿ ಕಳೆದ ಐದು ಪಂದ್ಯಗಳಲ್ಲಿ ಅಜೇಯವಾಗಿದೆ. ಈ ಮೂಲಕ ಅತಿ ಹೆಚ್ಚು ಪಂದ್ಯಗಳಲ್ಲಿ ಸೋಲರಿಯದ ಸಾಧನೆಯನ್ನು ಕೇರಳ ಬ್ಲಾಸ್ಟರ್ಸ್ ಜೊತೆ ಹಂಚಿಕೊಂಡಿದೆ. ಈ ಆವೃತ್ತಿಯಲ್ಲಿ ಅತ್ಯುತ್ತಮ ಸಮತೋಲನ ಹೊಂದಿರುವ ತಂಡವೆಂದು ಬಿಂಬಿತವಾಗಿರುವ ಹೈದರಾಬಾದ್ ಎಫ್‌ಸಿ ಆಕ್ರಮಣ ಮತ್ತು ರಕ್ಷಣೆಯಲ್ಲಿ ಒಂದೇ ರೀತಿ ಮಿಂಚುತ್ತಿದೆ. ಫಾರ್ವರ್ಡ್ ಆಟಗಾರ ಜೊಯೆಲ್ ಚಿಯಾನಿಸ್, ಬಾರ್ತೊಲೊಮೆ ಒಗ್ಬೆಚೆ ಮತ್ತು ಎಜು ಗಾರ್ಸಿಯಾ ತಂಡದ ಪರ ಮಿಂಚುತ್ತಿದ್ದಾರೆ.

ತಂಡ ಈ ವರೆಗೆ ಆರು ಪಂದ್ಯಗಳಲ್ಲಿ ಮಾತ್ರ, ಕೇವಲ ಐದು ಗೋಲುಗಳನ್ನು ಬಿಟ್ಟುಕೊಟ್ಟಿದೆ. ಈ ಮೂಲಕ ಅತ್ಯುತ್ತಮ ರಕ್ಷಣಾ ವಿಭಾಗ ಹೊಂದಿರುವ ತಂಡ ಎಂದೆನಿಸಿಕೊಂಡಿದೆ.

ಆರಂಭ: ರಾತ್ರಿ 7.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಗೋವಾಗೆ ಡೆರಿಕ್ ಕೋಚ್

ಬೆಂಗಳೂರು: ಎಫ್‌ಸಿ ಗೋವಾ ತಂಡವು ಡೆರಿಕ್ ಪೆರೇರಾ ಅವರನ್ನು ಮುಖ್ಯ ಕೋಚ್ ಆಗಿ ನೇಮಕ ಮಾಡಿಕೊಂಡಿದೆ. ಈ ಬಾರಿ ನಿರೀಕ್ಷಿತ ಫಲಿತಾಂಶ ಕಾಣದ ಕಾರಣ ಕೋಚ್ ಯುವಾನ್ ಫೆರಾಂಡೊ ಅವರನ್ನು ಗೋವಾ ಕಳೆದ ವಾರ ವಜಾ ಮಾಡಿತ್ತು. ಅವರು ಎಟಿಕೆ ಮೋಹನ್ ಬಾಗನ್ ತಂಡವನ್ನು ಸೇರಿಕೊಂಡಿದ್ದಾರೆ.

ಡೆರಿಕ್ ಪೆರೇರಾ

ಪೆರೇರಾ ಅವರನ್ನು ನೇಮಕ ಮಾಡಿರುವ ವಿಷಯವನ್ನು ಗುರುವಾರ ತಂಡ ತಿಳಿಸಿದೆ. ಐಎಸ್‌ಎಲ್‌ನಲ್ಲಿ ಖಾಯಂ ಆಗಿ ಕಾರ್ಯನಿರ್ವಹಿಸುವ ಭಾರತದ ಎರಡನೇ ಕೋಚ್ ಆಗಿದ್ದಾರೆ ಪೆರೇರಾ. ನಾರ್ತ್ ಈಸ್ಟ್ ಯುನೈಟೆಡ್ ತಂಡ ಖಲಿದ್ ಜಮೀಲ್ ಅವರನ್ನು ನೇಮಕ ಮಾಡುವ ಮೂಲಕ ಭಾರತದವರನ್ನು ಈ ಹುದ್ದೆಗೇರಿಸಿದ ಮೊದಲ ತಂಡ ಎನಿಸಿಕೊಂಡಿತ್ತು.

2017ರಿಂದ ಸಹಾಯಕ ಕೋಚ್ ಆಗಿ ಗೋವಾ ತಂಡದೊಂದಿಗೆ ಇದ್ದ ಪೆರೇರಾ ನಂತರ ತಾಂತ್ರಿಕ ನಿರ್ದೇಶಕ ಆಗಿ ಕಾರ್ಯನಿರ್ವಹಿಸುತ್ತಿದ್ದರು.

ಪೊನ್ನಂಪೇಟೆಯಲ್ಲಿ ಮಹಿಳಾ ಹಾಕಿ

ಗೋಣಿಕೊಪ್ಪಲು: ಪೊನ್ನಂಪೇಟೆ ಹಾಕಿ ಟರ್ಫ್ ಮೈದಾನದಲ್ಲಿ ಇದೇ 27ರಿಂದ 31ರವರೆಗೆ ದಕ್ಷಿಣ ವಲಯ ಅಂತರ ವಿವಿ ಮಹಿಳಾ ಹಾಕಿ ಟೂರ್ನಿ ನಡೆಯಲಿದೆ.

ಮಂಗಳೂರು ವಿಶ್ವವಿದ್ಯಾನಿಲಯ ಹಾಗೂ ವಿರಾಜಪೇಟೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಯೋಗದಲ್ಲಿ ನಡೆಯಲಿರುವ ಟೂರ್ನಿಯಲ್ಲಿ ಕರ್ನಾಟಕ, ಕೇರಳ, ಆಂಧ್ರಪ್ರದೇಶ, ತೆಲಂಗಾಣ, ಪುದುಚೇರಿ, ತಮಿಳುನಾಡು ರಾಜ್ಯಗಳ ತಂಡಗಳು ಪಾಲ್ಗೊಳ್ಳಲಿವೆ ಎಂದು ಡಾ.ಬೋಪಯ್ಯ ತಿಳಿಸಿದರು.

ಮೂಡುಬಿದಿರೆ: ಜ.4ರಿಂದ ಅಂತರ ವಿವಿ ಅಥ್ಲೆಟಿಕ್ಸ್

ಪ್ರಜಾವಾಣಿ ವಾರ್ತೆ

ಮೂಡಬಿದಿರೆ: ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ, ಮಂಗಳೂರು ವಿಶ್ವವಿದ್ಯಾಲಯ ಮತ್ತು ಭಾರತೀಯ ವಿಶ್ವವಿದ್ಯಾಲಯಗಳ ಒಕ್ಕೂಟದ ಸಹಯೋಗದಲ್ಲಿ ಜನವರಿ 4ರಿಂದ 7ರವರೆಗೆ 81ನೇ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಪುರುಷರ ಅಥ್ಲೆಟಿಕ್ಸ್ ಇಲ್ಲಿನ ಸ್ವರಾಜ್ಯ ಮೈದಾನದಲ್ಲಿ ನಡೆಯಲಿದೆ.

ಸುದ್ದಿಗೋಷ್ಠಿಯಲ್ಲಿ ಬುಧವಾರ ಈ ಮಾಹಿತಿ ನೀಡಿದ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ. ಮೋಹನ ಆಳ್ವ, ‘400 ವಿ.ವಿ.ಗಳ ಎರಡು ಸಾವಿರ ಕ್ರೀಡಾಪಟುಗಳು, ಒಂದು ಸಾವಿರ ಕ್ರೀಡಾಧಿಕಾರಿಗಳು ಈ ಕ್ರೀಡಾಕೂಟದಲ್ಲಿ ಭಾಗವಹಿಸಲಿದ್ದಾರೆ. ಆನ್‌ಲೈನ್ ಮೂಲಕವೂ ನೋಂದಣಿಗೆ ಅವಕಾಶ ಕಲ್ಪಿಸಲಾಗಿದೆ. ಪ್ರತಿ ದಿನ ಸಂಜೆ ಏಳು ಗಂಟೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ವೇದಿಕೆಯಲ್ಲಿ ಪದಕ ವಿಜೇತರನ್ನು ಗೌರವಿಸಲಾಗುವುದು’ ಎಂದರು.

‘ಜನವರಿ 4ರಂದು ಬೆಳಿಗ್ಗೆ 6.30ಕ್ಕೆ ಸ್ಪರ್ಧೆಗಳು ಆರಂಭವಾಗಲಿವೆ. ಸಂಜೆ 3.30ಕ್ಕೆ ಮೂಡುಬಿದಿರೆ ಹನುಮಾನ್ ದೇವಸ್ಥಾನದ ಎದುರಿನಿಂದ ಮುಖ್ಯ ರಸ್ತೆಯಲ್ಲಿ ಸಾಂಸ್ಕೃತಿಕ ಮೆರವಣಿಗೆ ನಡೆಯಲಿದೆ. ಬಳಿಕ ಕ್ರೀಡಾಕೂಟವನ್ನು ಕೇಂದ್ರ ಕ್ರೀಡಾ ಸಚಿವ ಅನುರಾಗ್ ಠಾಕೂರ್ ಉದ್ಘಾಟಿಸಲಿದ್ದಾರೆ. ರಾಜ್ಯ ಕ್ರೀಡಾ ಸಚಿವ ನಾರಾಯಣ ಗೌಡ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಭಾಗವಹಿಸುವರು’ ಎಂದರು.

‘ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಸಹಯೋಗದಲ್ಲಿ 5ನೇ ಬಾರಿಗೆ ಅಖಿಲಭಾರತ ಅಂತರ ವಿ.ವಿ. ಅಥ್ಲೆಟಿಕ್ಸ್ ಆಯೋಜಿಸಲಾಗಿದೆ. ಪದಕ ವಿಜೇತರಿಗೆ ಆಳ್ವಾಸ್‌ನಿಂದ ಕ್ರಮವಾಗಿ ₹25 ಸಾವಿರ, ₹15 ಸಾವಿರ ಮತ್ತು ₹10 ಸಾವಿರ ನಗದು ಬಹುಮಾನ ನೀಡಲಾಗುವುದು. ಕೂಟ ದಾಖಲೆ ನಿರ್ಮಿಸಿದವರಿಗೆ ₹25 ಸಾವಿರ, ಸಮಗ್ರ ಪ್ರಶಸ್ತಿ ಪಡೆದ ತಂಡಕ್ಕೆ ₹50 ಸಾವಿರ, ರನ್ನರ್ ಅಪ್ ತಂಡಕ್ಕೆ ₹30 ಸಾವಿರ ಮತ್ತು ತೃತೀಯ ಸ್ಥಾನ ಪಡೆದ ತಂಡಕ್ಕೆ ₹20 ಸಾವಿರ ನಗದು ಪುರಸ್ಕಾರ ನೀಡಿ ಗೌರವಿಸಲಾಗುವುದು’ ಎಂದು ಮೋಹನ ಆಳ್ವ ತಿಳಿಸಿದರು.

ಮಂಗಳೂರು ವಿ.ವಿ. ಕುಲಸಚಿವ ಡಾ.ಕಿಶೋರ್ ಕುಮಾರ್ ಸಿ.ಕೆ, ದೈಹಿಕ ಶಿಕ್ಷಣ ನಿರ್ದೇಶಕ ಡಾ.ಜೆರಾಲ್ಡ್ ಸಂತೋಷ್ ಡಿಸೋಜಾ ಇದ್ದರು.

ಷೇರುಪೇಟೆ ವಹಿವಾಟು 611



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,770
ಇಂದಿನ ಅಂತ್ಯ	16,955
▲	185
ದಿನದ ಗರಿಷ್ಠ	16,971

ವಿನಿಮಯ ದರ

$ ಡಾಲರ್	75.54
£ ಪೌಂಡ್	100.31
€ ಯುರೊ	85.19
¥ ಯೆನ್ (100ಕ್ಕೆ)	66

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹510
12 ಮೊಟ್ಟೆಗೆ	₹66
ಮೈಸೂರು	
100 ಮೊಟ್ಟೆಗೆ	₹510

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1280 (1280)
ಸೋಯಾ (ರಿಫೈನ್ಡ್)	₹1175 (1175)
ಸೂರ್ಯಕಾಂತಿ (ರಿಫೈನ್ಡ್)	₹1260 (1250)
ಪಾಮೋಲಿನ್	₹1133 (1130)

ಕೊಬ್ಬರಿ ಧಾರಣೆ

ತಿಪಟೂರು	---
ಪುತ್ತೂರು	₹4500-11500
ತುರುವೇಕೆರೆ	₹17800-17900

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು	
1ನೇ ದರ್ಜೆ	₹20000-27000
2ನೇ ದರ್ಜೆ	₹10000-18000

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದೊಡ್ಡ	₹3000-3500
ಮಧ್ಯಮ	₹2000-3000
ಸಣ್ಣ	₹1000-2000

ಜೀ, ಸೋನಿ ವಿಲೀನಕ್ಕೆ ಒಪ್ಪಿಗೆ

ನವದೆಹಲಿ (ಪಿಟಿಐ): ಸೋನಿ ಪಿಕ್ಚರ್ಸ್ ನೆಟ್‌ವರ್ಕ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಮತ್ತು ಜೀ ಎಂಟರ್‌ಟೈನ್‌ಮೆಂಟ್ ಎಂಟರ್‌ಪ್ರೈಸಸ್ ಲಿಮಿಟೆಡ್ ಕಂಪನಿಗಳು ಪರಸ್ಪರ ವಿಲೀನಕ್ಕೆ ಅಂತಿಮ ಒಪ್ಪಿಗೆ ನೀಡಿವೆ.

ಜೀ ಅನ್ನು ಸೋನಿಯೊಂದಿಗೆ ವಿಲೀನಗೊಳಿಸಲು ಹಾಗೂ ಎರಡೂ ಕಂಪನಿಗಳ ನೆಟ್‌ವರ್ಕ್‌ಗಳು, ಡಿಜಿಟಲ್ ಸ್ವತ್ತುಗಳು, ಕಾರ್ಯಾಚರಣೆ ಮತ್ತು ಪ್ರೋಗ್ರಾಂ ಲೈಬ್ರರಿಗಳನ್ನು ಸಂಯೋಜಿಸಲು ನಿರ್ಣಾಯಕ ಒಪ್ಪಂದಗಳಿಗೆ ಸಹಿ ಹಾಕಲಾಗಿದೆ ಎಂದು ಕಂಪನಿಗಳು ಜಂಟಿ ಹೇಳಿಕೆ ಬಿಡುಗಡೆ ಮಾಡಿವೆ.

ವಿಲೀನದ ಕುರಿತು ಸೆಪ್ಟೆಂಬರ್‌ನಲ್ಲಿ ಘೋಷಣೆ ಮಾಡಲಾಗಿತ್ತು.

ಸೋನಿ ಕಂಪನಿಯು ₹ 11,812 ಕೋಟಿ ಹೂಡಿಕೆ ಮಾಡಲಿದ್ದು, ವಿಲೀನದ ನಂತರದ ಕಂಪನಿಯಲ್ಲಿ ಶೇ 52.93ರಷ್ಟು ಷೇರುಪಾಲು ಹೊಂದಲಿದೆ. ಉಳಿದ ಶೇ 47.07ರಷ್ಟು ಷೇರುಗಳನ್ನು ಜೀ ಹೊಂದಲಿದೆ.

ಹೊಸ ಕಂಪನಿಯು ಷೇರುಪೇಟೆಯಲ್ಲಿ ನೋಂದಣಿ ಆಗಲಿದೆ. ಜೀ ಎಂಟರ್‌ಟೇನ್‌ಮೆಂಟ್ ಎಂಟರ್‌ಪ್ರೈಸಸ್ ಲಿ. ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಪುನೀತ್ ಗೋಯಂಕಾ ಅವರು ವಿಲೀನದ ನಂತರದ ಕಂಪನಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಆಗಿರಲಿದ್ದಾರೆ. ಆಡಳಿತ ಮಂಡಳಿಯ ಬಹುಪಾಲು ನಿರ್ದೇಶಕರನ್ನು ಸೋನಿ ಸಮೂಹವು ನೇಮಕ ಮಾಡಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಯೂನಿಕಾರ್ನ್: ಭಾರತಕ್ಕೆ 3ನೇ ಸ್ಥಾನ

ಮುಂಬೈ (ಪಿಟಿಐ): ಅತಿ ಹೆಚ್ಚಿನ ಯೂನಿಕಾರ್ನ್‌ಗಳನ್ನು ಹೊಂದಿರುವ ದೇಶಗಳ ಪಟ್ಟಿಯಲ್ಲಿ ಯುನೈಟೆಡ್ ಕಿಂಗ್‌ಡಮ್ ಅನ್ನು ಹಿಂದಿಕ್ಕಿ ಭಾರತವು ಮೂರನೇ ಸ್ಥಾನಕ್ಕೇರಿದೆ. ಅಮೆರಿಕ ಮತ್ತು ಚೀನಾ ಮೊದಲ ಎರಡು ಸ್ಥಾನಗಳಲ್ಲಿವೆ. ದೇಶದಲ್ಲಿ ಬೆಂಗಳೂರು ಅತಿ ಹೆಚ್ಚಿನ ಯೂನಿಕಾರ್ನ್‌ಗಳಿಗೆ ತಾಣವಾಗಿದೆ.

ಒಂದೇ ವರ್ಷದಲ್ಲಿ 33 ಯೂನಿಕಾರ್ನ್‌ಗಳು (₹ 7,435 ಕೋಟಿಗಿಂತ ಹೆಚ್ಚಿನ ಬಂಡವಾಳ ಮೌಲ್ಯ ಹೊಂದಿರುವ ನವೋದ್ಯಮ) ಸೇರ್ಪಡೆ ಆಗಿರುವುದರಿಂದ ಭಾರತವು ಈ ಸ್ಥಾನಕ್ಕೆ ಏರಲು ಸಾಧ್ಯವಾಯಿತು ಎಂದು ಹುರೂನ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಬಿಡುಗಡೆ ಮಾಡಿರುವ 2021ರ ವರದಿಯಲ್ಲಿ ತಿಳಿಸಲಾಗಿದೆ.

ಭಾರತವು ಹಿಂದಿನ ವರ್ಷ ನಾಲ್ಕನೇ ಸ್ಥಾನದಲ್ಲಿತ್ತು. ಬೈಜೂಸ್, ಇನ್‌ಮೊಬಿ, ಓಯೊ, ರೇಜರ್‌ಪೆ ದೇಶದಲ್ಲಿನ ಪ್ರಮುಖ ಯೂನಿಕಾರ್ನ್‌ಗಳು ಎಂದೂ ವರದಿಯು ತಿಳಿಸಿದೆ.

ದೇಶವಾರು ವಿವರ

ದೇಶ	ಯೂನಿಕಾರ್ನ್ ಸಂಖ್ಯೆ
ಅಮೆರಿಕ	487
ಚೀನಾ	301
ಭಾರತ	54
ಯುನೈಟೆಡ್ ಕಿಂಗ್‌ಡಮ್	39

ಮುಂಬೈ ಧಾರಣೆ

ಶೇಂಗಾ

22-12-2021

ಜಾವಾ 70/80(ಹೊಸ)	10450-10500
ಜಾವಾ 80/90(ಹೊಸ)	10350-10400
ದಪ್ಪ ಮಧ್ಯಪ್ರದೇಶ(ಹೊಸ)	9700-9800
ದಪ್ಪ ಗುಜರಾತ್(ಹೊಸ)	8800-8900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1290 (1290)
ಒಂದು ವಾರದ ಡೆಲಿವರಿ	1285 (1285)
ಸೋಯಾ ಕಚ್ಚಾ	1132 (1130)
ಪಾಮ್ ವಾರದ ಡೆಲಿವರಿ	1131 (1128)
ಸೂರ್ಯಕಾಂತಿ ಎಣ್ಣೆ ಕಚ್ಚಾ	1180 (1160)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	47,900 (48,200)
ಬೆಳ್ಳಿ ಕೆ.ಜಿ	61,500 (61,650)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	500-550
ನಡುಗೋಲು	600-650
ರಾಶಿ	700-800
ರಾಶಿ ಉತ್ತಮ	800-900
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	750-850
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	520
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಕಾರ್ಕಳ	
ಹೊಸತು	40000-45000
ಹಳತು	46000-53000
ಕುಮಟ	
ಚಿಪ್ಪು	24869-40589
ಕೋಕ	22019-33319
ಫ್ಯಾಕ್ಟರಿ	12869-19169
ಹಳೆಚಾಲಿ	48589-49699
ಹೊಸಚಾಲಿ	36589-41599
ಪುತ್ತೂರು	
ಕೋಕ	11000-26000
ಹೊಸತು	27500-45000
ಸಿದ್ದಾಪುರ	
ಬಿಳಿಗೋಟು	28699-38612
ಚಾಲಿ	44099-49209
ಕೋಕ	26699-39299
ಹೊಸಚಾಲಿ	31899-39399
ಕೆಂಪುಗೋಟು	21699-34499
ರಾಶಿ	44649-48399
ತಟ್ಟಿಬೆಟ್ಟೆ	30012-48099
ಶಿರಸಿ	
ಬೆಟ್ಟೆ	38823-43518
ಬಿಳಿಗೋಟು	27109-44099
ಚಾಲಿ	37109-50491
ರಾಶಿ	42999-49369
ಯಲ್ಲಾಪುರ	
ಬಿಳಿಗೋಟು	29299-38899
ಚಾಲಿ	39012-50291
ಕೋಕ	22809-32899
ಕೆಂಪುಗೋಟು	30211-36099
ರಾಶಿ	46750-52899
ತಟ್ಟಿಬೆಟ್ಟೆ	38899-45182
ಶಿವಮೊಗ್ಗ ಎಪಿಎಂಸಿ	
ಬೆಟ್ಟೆ	46569-52569
ಗೊರಬಲು	17000-37888
ರಾಶಿ	43669-47629
ಸರಕು	52400-75696
ರಾಮನಗರ ರೇಷ್ಮೆ	
ಮಿಶ್ರತಳಿ	400-720
ದ್ವಿತಳಿ	580-862

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	15300	15250	228.25ಸೆಂಟ್ಸ್
ಎಸಿ	---	6700	6400	
ಆರ್‌ಪಿ	---	6200	---	ಲಂಡನ್
ಆರ್‌ಸಿ	---	3750	---	2423 ಡಾಲರ್ಸ್

ಹಣಕಾಸು ಮಾರುಕಟ್ಟೆಯಲ್ಲಿ ಇನ್ನಷ್ಟು ಅಸ್ಥಿರತೆ: ದಾಸ್

ಓಮೈಕ್ರಾನ್: ಆರ್ಥಿಕತೆಯ ಬಗ್ಗೆ ಆರ್‌ಬಿಐ ಕಳವಳ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಾನವ ಸಂಪರ್ಕದ ಅಗತ್ಯ ಹೆಚ್ಚು ಇರುವ ಸೇವಾ ವಲಯದ ಬೆಳವಣಿಗೆಯ ಮೇಲೆ ಕೊರೊನಾ ವೈರಾಣುವಿನ ಓಮೈಕ್ರಾನ್ ತಳಿಯು ದುಷ್ಪರಿಣಾಮ ಉಂಟುಮಾಡಬಹುದು ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಗವರ್ನರ್ ಶಕ್ತಿಕಾಂತ ದಾಸ್ ಅವರು ಹಣಕಾಸು ನೀತಿ ಸಮಿತಿಯ ಸಭೆಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದ್ದರು.

ಸಮಿತಿಯ ಸಭೆಯು ಈ ತಿಂಗಳ ಆರಂಭದಲ್ಲಿ ನಡೆದಿತ್ತು. ಸಭೆಯ ವಿವರಗಳನ್ನು ಆರ್‌ಬಿಐ ಬುಧವಾರ ಪ್ರಕಟಿಸಿದೆ. ಓಮೈಕ್ರಾನ್ ತರಬಹುದಾದ ಅಪಾಯವು ಹಣಕಾಸು ಮಾರುಕಟ್ಟೆಯಲ್ಲಿ ಇನ್ನಷ್ಟು ಅಸ್ಥಿರತೆಗೆ ಕಾರಣವಾಗುತ್ತಿದೆ ಎಂದೂ ದಾಸ್ ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಪೂರೈಕೆ ವ್ಯವಸ್ಥೆಯಲ್ಲಿನ ಅಡಚಣೆಗಳು ಈ ವರ್ಷಾಂತ್ಯದ ವೇಳೆಗೆ ಕೊನೆಗೊಳ್ಳಬಹುದು ಎಂದು ಭಾವಿಸಲಾಗಿತ್ತು. ಆದರೆ ಇದು 2022ರಲ್ಲಿಯೂ ಮುಂದುವರಿಯಬಹುದು ಎಂದು ದಾಸ್ ಆತಂಕ ವ್ಯಕ್ತಪಡಿಸಿದ್ದಾರೆ.



ಶಕ್ತಿಕಾಂತ ದಾಸ್

‘2021–22ನೆಯ ಹಣಕಾಸು ವರ್ಷದಲ್ಲಿ ಭಾರತದ ಅರ್ಥ ವ್ಯವಸ್ಥೆಯು ಶೇಕಡ 9.5ರಷ್ಟು ಬೆಳವಣಿಗೆ ಸಾಧಿಸುವ ಹಾದಿಯಲ್ಲಿ ಇದೆಯಾದರೂ, ಕಳವಳಕ್ಕೆ ಕಾರಣವಾಗುವ ಹಲವು ಅಂಶಗಳು ಇವೆ. ಮಾರುಕಟ್ಟೆಯಲ್ಲಿ ಸಾರ್ವಜನಿಕರಿಂದ ಸೃಷ್ಟಿಯಾಗುವ ಬೇಡಿಕೆಯು ಕೋವಿಡ್ ಪೂರ್ವದ ಮಟ್ಟಕ್ಕಿಂತಲೂ ಕಡಿಮೆ ಇದೆ. ಅಂದರೆ, ಹೆಚ್ಚು ಕಾಲ ಬಾಳಿಕೆ ಬರುವಂತಹ ಪುನಶ್ಚೇತನ ಸಾಧಿಸಲು ನಾವು ಕ್ರಮಿಸಬೇಕಾದ ಹಾದಿ ದೀರ್ಘವಾಗಿದೆ ಎಂಬುದನ್ನು ಇದು ಸೂಚಿಸುತ್ತಿದೆ’ ಎಂದು ದಾಸ್ ಅವರು ಹೇಳಿದ್ದಾರೆ.

ಖಾಸಗಿ ವಲಯದಿಂದ ಆಗುವ ಬಂಡವಾಳ ವೆಚ್ಚ ಕೂಡ ದೊಡ್ಡ ಮಟ್ಟದಲ್ಲಿ ಇಲ್ಲ. ತಯಾರಿಕಾ ವಲಯದಲ್ಲಿನ ಸಾಮರ್ಥ್ಯ ಬಳಕೆಯು ಜುಲೈ–ಸೆಪ್ಟೆಂಬರ್ ತ್ರೈಮಾಸಿಕದ ಅವಧಿಯಲ್ಲಿ ಶೇಕಡ 68.8ಕ್ಕೆ ಹೆಚ್ಚಳ ಆಗಿದೆ. ಇದು ಏಪ್ರಿಲ್–ಜೂನ್ ತ್ರೈಮಾಸಿಕದಲ್ಲಿ ಶೇಕಡ 60ರಷ್ಟು ಇತ್ತು.

ಮುಖ್ಯಾಂಶಗಳು

- ಪೂರೈಕೆ ವ್ಯವಸ್ಥೆಯಲ್ಲಿನ ಅಡಚಣೆ 2022ರಲ್ಲಿಯೂ ಮುಂದುವರಿಕೆ ಸಾಧ್ಯತೆ
- ಕೋವಿಡ್ ಪೂರ್ವಕ್ಕಿಂತ ಕಡಿಮೆ ಮಟ್ಟದಲ್ಲಿ ಬೇಡಿಕೆ
- ಕಡಿಮೆ ಮಟ್ಟದಲ್ಲಿ ಖಾಸಗಿ ವಲಯದ ಬಂಡವಾಳ ವೆಚ್ಚ

ಓಮೈಕ್ರಾನ್ ತಳಿಯ ಕಾರಣದಿಂದಾಗಿ ಜಾಗತಿಕವಾಗಿ ಮತ್ತೊಂದು ಅಲೆ ಸೃಷ್ಟಿಯಾದರೆ, ಮಾರುಕಟ್ಟೆಯಲ್ಲಿ ಕಂಡುಬರುತ್ತಿರುವ ಬೇಡಿಕೆಯಲ್ಲಿನ ಚೇತರಿಕೆಯು ಹಳಿ ತಪ್ಪಬಹುದು ಎಂದು ದಾಸ್ ಅವರು ಸಭೆಯನ್ನು ಹೇಳಿದ್ದಾರೆ. ‘ಒಟ್ಟಾರೆಯಾಗಿ, ಮುಂದಿನ ದಿನಗಳಲ್ಲಿ ಆರ್ಥಿಕ ಬೆಳವಣಿಗೆ ಹಾಗೂ ಹಣದುಬ್ಬರ ಮೇಲೆ ಓಮೈಕ್ರಾನ್ ತಳಿಯ ಪರಿಣಾಮ ಏನಿರುತ್ತದೆ ಎಂಬುದನ್ನು ಅಂದಾಜು ಮಾಡಲು ಕಾಲ ಇನ್ನೂ ಪಕ್ವವಾಗಿಲ್ಲ’ ಎಂದೂ ದಾಸ್ ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಷೇರುಪೇಟೆ: ಸತತ ಎರಡನೇ ದಿನವೂ ಸಕಾರಾತ್ಮಕ ವಹಿವಾಟು

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳಲ್ಲಿ ಸತತ ಎರಡನೇ ದಿನವೂ ಸಕಾರಾತ್ಮಕ ವಹಿವಾಟು ನಡೆಯಿತು. ಓಮೈಕ್ರಾನ್ ಆತಂಕದ ನಡುವೆಯೇ ಜಾಗತಿಕ ಷೇರುಪೇಟೆಗಳಲ್ಲಿ ವಹಿವಾಟು ಚೇತರಿಕೆ ಕಂಡುಕೊಂಡಿದ್ದು ದೇಶಿ ಷೇರುಪೇಟೆಗಳ ಮೇಲೆಯೂ ಪ್ರಭಾವ ಬೀರಿತು.

ಸತತ ಐದನೇ ದಿನವೂ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಚೇತರಿಕೆ ಕಂಡಿರುವುದು ಷೇರುಪೇಟೆಗೆ ಇನ್ನಷ್ಟು ಉತ್ತೇಜನ ನೀಡಿತು ಎಂದು ವರ್ತಕರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 611 ಅಂಶ ಏರಿಕೆ ಕಂಡು 56,930 ಅಂಶಗಳಲ್ಲಿ ವಹಿವಾಟು ಅಂತ್ಯವಾಯಿತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 185 ಅಂಶ ಹೆಚ್ಚಾಗಿ 16,955 ಅಂಶಗಳಲ್ಲಿ ವಹಿವಾಟು ಅಂತ್ಯಗೊಳಿಸಿತು.

ಸಂಪತ್ತು ವೃದ್ಧಿ

ಎರಡು ದಿನಗಳ ವಹಿವಾಟಿನಲ್ಲಿ ಹೂಡಿಕೆದಾರರ ಸಂಪತ್ತು ಮೌಲ್ಯವು ₹ 6.56 ಲಕ್ಷ ಕೋಟಿಯಷ್ಟು ವೃದ್ಧಿಯಾಗಿದೆ. ಇದರಿಂದ ಷೇರುಪೇಟೆಯ ಒಟ್ಟಾರೆ ಸಂಪತ್ತು ಮೌಲ್ಯವು ₹ 259.14 ಲಕ್ಷ ಕೋಟಿಗೆ ಏರಿಕೆ ಆಗಿದೆ.

ಮಾರುಕಟ್ಟೆಯಲ್ಲಿ ಆತುರದ ವಹಿವಾಟು ನಡೆಸುವ ಬದಲಾಗಿ ಬಹಳ ಎಚ್ಚರಿಕೆಯಿಂದ ಬೆಳವಣಿಗೆ ಆಧಾರಿತ ವಲಯಗಳ ಆಯ್ದ ಷೇರುಗಳನ್ನು ಮಾತ್ರವೇ ಆರಿಸಿಕೊಳ್ಳಲು ಇದು ಸೂಕ್ತ ಸಮಯ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಕೊಬ್ಬರಿ ಮೇಲಿನ ಬೆಂಬಲ ಬೆಲೆ ಹೆಚ್ಚಳ

ನವದೆಹಲಿ (ಪಿಟಿಐ): ಹೋಳು ಕೊಬ್ಬರಿ ಮತ್ತು ಉಂಡೆ ಕೊಬ್ಬರಿ ಮೇಲಿನ ಕನಿಷ್ಠ ಬೆಂಬಲ ಬೆಲೆಯನ್ನು ಕ್ವಿಂಟಲ್‌ಗೆ ಕ್ರಮವಾಗಿ ₹ 255ರಷ್ಟು ಮತ್ತು ₹ 400ರಷ್ಟು ಹೆಚ್ಚಿಸಲು ಕೇಂದ್ರ ಸರ್ಕಾರ ಬುಧವಾರ ತೀರ್ಮಾನಿಸಿದೆ.

ಆರ್ಥಿಕ ವ್ಯವಹಾರಗಳಿಗೆ ಸಂಬಂಧಿಸಿದ ಸಂಪುಟ ಸಮಿತಿಯು 2022ನೇ ಸಾಲಿನ ಕನಿಷ್ಠ ಬೆಂಬಲ ಬೆಲೆಗೆ ಒಪ್ಪಿಗೆ ನೀಡಿದೆ. ಇದರಿಂದ ಸರಾಸರಿ ಗುಣಮಟ್ಟದ ಹೋಳು ಕೊಬ್ಬರಿಯ ಕನಿಷ್ಠ ಬೆಂಬಲ ಬೆಲೆ ಕ್ವಿಂಟಲ್‌ಗೆ 2022ನೇ ಸಾಲಿಗೆ ₹ 10,590ಕ್ಕೆ, ಉಂಡೆ ಕೊಬ್ಬರಿಯ ಬೆಲೆ ಕ್ವಿಂಟಲ್‌ಗೆ ₹ 11,000ಕ್ಕೆ ಹೆಚ್ಚಳವಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ: ರೋಚಕ ಹಣಾಹಣಿಯಲ್ಲಿ ಪಾಕಿಸ್ತಾನದ ವಿರುದ್ಧ ಜಯ

ಕೊರಿಯಾಗೆ ಕಿರೀಟ; ಭಾರತಕ್ಕೆ ಕಂಚು

ಢಾಕಾ(ಪಿಟಿಐ): ಚಾಂಪಿಯನ್ ಪಟ್ಟವನ್ನು ಉಳಿಸಿಕೊಳ್ಳಲು ಸಾಧ್ಯವಾಗದ ಭಾರತ ತಂಡ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿಯಲ್ಲಿ ಕಂಚಿನ ಪದಕ ಗಳಿಸಿತು.

ಫೈನಲ್‌ನಲ್ಲಿ ಜಪಾನ್ ತಂಡವನ್ನು ಮಣಿಸಿದ ದಕ್ಷಿಣ ಕೊರಿಯಾ ತಂಡವು ಚಿನ್ನದ ಪದಕ ಜಯಿಸಿತು. ಶೂಟೌಟ್‌ನಲ್ಲಿ ಕೊರಿಯಾ ತಂಡವು 4–2 ಗೋಲುಗಳಿಂದ ಜಪಾನ್ ಎದುರು ಜಯಿಸಿತು. ಪಂದ್ಯದ ನಿಗದಿಯ ಅವಧಿಯಲ್ಲಿ ಉಭಯ ತಂಡಗಳು 3–3ರಿಂದ ಸಮಬಲ ಸಾಧಿಸಿದವು.

ಮೂರನೇ ಸ್ಥಾನಕ್ಕಾಗಿ ಬುಧವಾರ ನಡೆದ ಹಣಾಹಣಿಯಲ್ಲಿ ತಂಡ ಪಾಕಿಸ್ತಾನ ವಿರುದ್ಧ 4–3ರಲ್ಲಿ ಜಯ ಗಳಿಸಿತು.

ರೌಂಡ್ ರಾಬಿನ್ ಹಂತದ ಮೊದಲ ಪಂದ್ಯದಲ್ಲಿ ಸೋತಿದ್ದ ಮನ್‌ಪ್ರೀತ್ ಸಿಂಗ್ ಬಳಗ ನಂತರ ಪುಟಿದೆದ್ದಿತ್ತು. ಆದರೆ ಸೆಮಿಫೈನಲ್‌ನಲ್ಲಿ ಜಪಾನ್‌ಗೆ ಮಣಿದಿತ್ತು. ಕಂಚಿನ ಪದಕದ ಪಂದ್ಯದಲ್ಲಿ ಪಾಕಿಸ್ತಾನದ ಪ್ರಬಲ ಪೈಪೋಟಿಯನ್ನು ಮೀರಿ ಜಯಿಸಿತು. ಮಸ್ಕತ್‌ನಲ್ಲಿ ಕಳೆದ ಬಾರಿ ನಡೆದಿದ್ದ ಟೂರ್ನಿಯ ಫೈನಲ್ ಪಂದ್ಯಕ್ಕೆ ಮಳೆ ಅಡ್ಡಿಪಡಿಸಿದ್ದರಿಂದ ಭಾರತ ಮತ್ತು ಪಾಕಿಸ್ತಾನ ಜಂಟಿಯಾಗಿ ಚಾಂಪಿಯನ್ ಪಟ್ಟ ಗಳಿಸಿದ್ದವು.

ಗುರುಸಾಹೀಬ್‌ಜಿತ್ ಸಿಂಗ್ (ಬಲ) ಅವರಿಂದ ಚೆಂಡು ಕಸಿದುಕೊಳ್ಳಲು ಅಲಿ ಘಜನ್‌ಫರ್ ಪ್ರಯತ್ನಿಸಿದರು –ಎಎಫ್‌ಪಿ ಚಿತ್ರ

ಆರಂಭದಿಂದಲೇ ಆಕ್ರಮಣಕ್ಕೆ ಇಳಿದ ತಂಡ ಒಟ್ಟಾರೆ 11 ಪೆನಾಲ್ಟಿ ಕಾರ್ನರ್ ಅವಕಾಶಗಳನ್ನು ಗಳಿಸಿಕೊಂಡಿತು. ಈ ಪೈಕಿ ಎರಡರಲ್ಲಿ ಯಶಸ್ಸು ಸಾಧಿಸಿತು. ಮೊದಲ ನಿಮಿಷದಲ್ಲೇ ಹರ್ಮನ್‌ಪ್ರೀತ್ ಸಿಂಗ್ ಗಳಿಸಿದ ಗೋಲಿನೊಂದಿಗೆ ಮುನ್ನಡೆ ಸಾಧಿಸಿದ ಭಾರತದ ಪರ 45ನೇ ನಿಮಿಷದಲ್ಲಿ ಸುಮಿತ್, 53ನೇ ನಿಮಿಷದಲ್ಲಿ ವರುಣ್ ಕುಮಾರ್ ಮತ್ತು 57ನೇ ನಿಮಿಷದಲ್ಲಿ ಆಕಾಶ್‌ದೀಪ್ ಸಿಂಗ್ ಚೆಂಡನ್ನು ಗುರಿ ಮುಟ್ಟಿಸಿದರು.

ಪಾಕಿಸ್ತಾನ 10ನೇ ನಿಮಿಷದಲ್ಲಿ ಅಫ್ರಾಜ್ ಅವರ ಗೋಲಿನೊಂದಿಗೆ ಪಾಕಿಸ್ತಾನ ತಿರುಗೇಟು ನೀಡಿತ್ತು. 33ನೇ ನಿಮಿಷದಲ್ಲಿ ಅಬ್ದುಲ್ ರಾಣಾ ಮತ್ತು 57ನೇ ನಿಮಿಷದಲ್ಲಿ ಅಹಮ್ಮದ್ ನದೀಮ್ ಚೆಂಡನ್ನು ಗುರಿ ಮುಟ್ಟಿಸಿ ಸೋಲಿನ ಅಂತರ ಕಡಿಮೆ ಮಾಡಿದರು. ರೌಂಡ್ ರಾಬಿನ್ ಹಂತದಲ್ಲ ಪಾಕಿಸ್ತಾನವನ್ನು ಭಾರತ 3–1ರಲ್ಲಿ ಸೋಲಿಸಿತ್ತು.

ಪಾಕಿಸ್ತಾನದ ರಕ್ಷಣಾ ವಿಭಾಗದ ಮೇಲೆ ಆರಂಭದಿಂದಲೇ ಒತ್ತಡ ಹೇರಲು ಯಶಸ್ವಿಯಾದ ಭಾರತ ತಂಡ ಜಪಾನ್ ಎದುರಿನ ಪಂದ್ಯಕ್ಕಿಂತ ಭಿನ್ನವಾಗಿ ಆಕ್ರಮಣಕಾರಿ ಆಟಕ್ಕೆ ಒತ್ತು ನೀಡಿತು. ಮೊದಲ ನಿಮಿಷದಲ್ಲಿ ಲಭಿಸಿದ ಪೆನಾಲ್ಟಿ ಕಾರ್ನರ್‌ನಲ್ಲಿ ಕೆಳಹಂತದ ಮೋಹಕ ಫ್ಲಿಕ್ ಮೂಲಕ ಹರ್ಮನ್‌ಪ್ರೀತ್ ಸಿಂಗ್ ಗೋಲು ಗಳಿಸಿದರು.

ನಿಧಾನವಾಗಿ ಆಟಕ್ಕೆ ಕುದುರಿಕೊಂಡ ಪಾಕಿಸ್ತಾನ ಭರವಸೆ ಗಳಿಸಿಕೊಂಡು ಮುನ್ನುಗ್ಗಿತು. ಇದರ ಫಲವಾಗಿ 10ನೇ ನಿಮಿಷದಲ್ಲಿ ತಂಡಕ್ಕೆ ಮುನ್ನಡೆ ಲಭಿಸಿತು. ಪ್ರತಿದಾಳಿ ನಡೆಸಿದ ಭಾರತಕ್ಕೆ ಪೆನಾಲ್ಟಿ ಅವಕಾಶಗಳು ಲಭಿಸಿದವು. 14ನೇ ನಿಮಿಷದಲ್ಲಿ ಪಾಕಿಸ್ತಾನಕ್ಕೆ ಪಂದ್ಯದ ಮೊದಲ ಪೆನಾಲ್ಟಿ ಕಾರ್ನರ್ ಅವಕಾಶ ಸಿಕ್ಕಿತು. ಆದರೆ ಗೋಲ್‌ಕೀಪರ್ ಪಾಠಕ್ ಚೆಂಡನ್ನು ತಡೆದರು.

ಎರಡನೇ ಕ್ವಾರ್ಟರ್‌ನಲ್ಲಿ ಎರಡೂ ತಂಡಗಳು ಜಿದ್ದಾಜಿದ್ದಿಯ ಹೋರಾಟ ಪ್ರದರ್ಶಿಸಿದವು. 22 ಮತ್ತು 26ನೇ ನಿಮಿಷಗಳಲ್ಲಿ ಭಾರತದ ಪ್ರಯತ್ನವನ್ನು ಅಮ್ಜದ್ ಅಲಿ ತಡೆದರು. ಆದರೂ ಭಾರತ ಛಲ ಬಿಡದೆ ಆಕ್ರಮಣಕಾರಿ ಆಟ ಮುಂದುವರಿಸಿತು.

ಸೆಮಿಫೈನಲ್‌ಗೆ ಸೌರಾಷ್ಟ್ರ, ಸರ್ವಿಸಸ್

ಜೈಪುರ (ಪಿಟಿಐ): ಸರ್ವಿಸಸ್ ಮತ್ತು ಸೌರಾಷ್ಟ್ರ ತಂಡಗಳು ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿದವು.

ಬುಧವಾರ ಕೆ.ಎಲ್. ಸೈನಿ ಮೈದಾನದಲ್ಲಿ ನಡೆದ ಕ್ವಾರ್ಟರ್‌ಫೈನಲ್‌ನಲ್ಲಿ ಬಲಗೈ ಮಧ್ಯಮವೇಗಿ ದಿವೇಶ್ ಪಠಾಣಿಯಾ (19ಕ್ಕೆ3) ಬೌಲಿಂಗ್ ಬಲದಿಂದ ಸರ್ವಿಸಸ್ ತಂಡವು ಏಳು ವಿಕೆಟ್‌ಗಳಿಂದ ಕೇರಳ ವಿರುದ್ಧ ಜಯಿಸಿತು. ಮೊದಲು ಬ್ಯಾಟಿಂಗ್ ಮಾಡಿದ ಕೇರಳ ತಂಡವು 40.4 ಓವರ್‌ಗಳಲ್ಲಿ 175 ರನ್ ಗಳಿಸಿತು.

ರೋಹನ್ ಕುನ್ನುಮ್ಮಾಳ (85) ಏಕಾಂಗಿ ಹೋರಾಟ ನಡೆಸಿದರು. ಆದರೆ, ದಿವೇಶ್ ಜೊತೆಗೂಡಿದ ಅಭಿಷೇಕ್ ತಿವಾರಿ ಮತ್ತು ಪುಳಕಿತ್ ನಾರಂಗ್ ತಲಾ ಎರಡು ವಿಕೆಟ್ ಗಳಿಸಿದರು. ಸಾಧಾರಣ ಗುರಿಯ ಬೆನ್ನಟ್ಟಿದ ಸರ್ವಿಸಸ್ ತಂಡವನ್ನು ರವಿ ಚೌಹಾಣ್ (95; 90ಎ, 13ಬೌಂಡರಿ 3ಸಿಕ್ಸರ್) ಮತ್ತು ರಜತ್ ಪಲಿವಾಲಾ (ಔಟಾಗದೆ 65; 86ಎ, 8ಬೌಂಡರಿ) ಗೆಲುವಿನ ದಡ ಮುಟ್ಟಿಸಿದರು. ಸರ್ವಿಸಸ್ 30.5 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 176 ರನ್ ಗಳಿಸಿತು. ಸವಾಯ್ ಮಾನಸಿಂಗ್ ಕ್ರೀಡಾಂಗಣದಲ್ಲಿ ನಡೆದ ಇನ್ನೊಂದು ಕ್ವಾರ್ಟರ್‌ಫೈನಲ್‌ನಲ್ಲಿ ಸೌರಾಷ್ಟ್ರ ತಂಡವೂ ಏಳು ವಿಕೆಟ್‌ಗಳಿಂದ ವಿದರ್ಭ ಎದುರು ಜಯಭೇರಿ ಬಾರಿಸಿತು.

ಜಯದೇವ್ ಉನದ್ಕತ್

ಜಯದೇವ್ ಉನದ್ಕತ್ (25ಕ್ಕೆ2) ನೇತೃತ್ವದ ಬೌಲಿಂಗ್ ಪಡೆಯ ನಿಖರ ದಾಳಿಯ ಮುಂದೆ ವಿದರ್ಭದ ಬಲಿಷ್ಠ ಬ್ಯಾಟಿಂಗ್ ಪಡೆ ಕುಸಿಯಿತು. ಇದರಿಂದಾಗಿ 40.3 ಓವರ್‌ಗಳಲ್ಲಿ 150 ರನ್ ಮಾತ್ರ ಗಳಿಸಿತು.

ಗುರಿ ಬೆನ್ನಟ್ಟಿದ ಸೌರಾಷ್ಟ್ರ ತಂಡವು ಪ್ರೇರಕ್ ಮಂಕಡ್ (ಔಟಾಗದೆ 77; 72ಎ, 10ಬೌಂಡರಿ, 2ಸಿಕ್ಸರ್) ಮತ್ತು ಅರ್ಪಿತ್ ವಸವದಾ (ಔಟಾಗದೆ 41; 66ಎ, 6ಬೌಂಡರಿ) ಅವರ ಅಬ್ಬರದ ಫಲದಿಂದ 29.5 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 151 ರನ್ ಗಳಿಸಿತು.

ಸಂಕ್ಷಿಪ್ತ ಸ್ಕೋರುಗಳು: ಕೇರಳ: 40.4 ಓವರ್‌ಗಳಲ್ಲಿ 175 (ಕುನ್ನುಮಾಳ 85, ವಿ. ಮನೋಹರನ್ 41, ದಿವೇಶ್ ಪಠಾಣಿಯಾ 19ಕ್ಕೆ3) **ಸರ್ವಿಸಸ್:** 30.5 ಓವರ್‌ಗಳಲ್ಲಿ 3ಕ್ಕೆ 1876 (ರವಿ ಚೌಹಾಣ್ 95, ರಜತ್ ಪಲಿವಾಲಾ ಔಟಾಗದೆ 65) ಫಲಿತಾಂಶ: **ಸರ್ವಿಸಸ್‌ಗೆ 7 ವಿಕೆಟ್‌ಗಳ ಜಯ.**

ವಿದರ್ಭ: 40.3 ಓವರ್‌ಗಳಲ್ಲಿ 150 (ಫೈಜ್ ಫಜಲ್ 23, ಅಪೂರ್ವ್ ವಾಂಖೆಡೆ 72, ಜಯದೇವ್ ಉನದ್ಕತ್ 25ಕ್ಕೆ2, ಚಿರಾಗ್ ಜಾನಿ 34ಕ್ಕೆ2, ಧರ್ಮೇಂದ್ರಸಿಂಹ ಜಡೇಜ 34ಕ್ಕೆ2, ಯುವರಾಜ್ ಚೂಡಾಸಮಾ 15ಕ್ಕೆ2), ಸೌರಾಷ್ಟ್ರ: 29.5 ಓವರ್‌ಗಳಲ್ಲಿ 3ಕ್ಕೆ 151 (ಪ್ರೇರಕ್ ಮಂಕಡ್ ಔಟಾಗದೆ 77, ಅರ್ಪಿತ್ ವಾಸವದಾ ಔಟಾಗದೆ 41, ಆದಿತ್ಯ ಠಾಕ್ರೆ 13ಕ್ಕೆ2) **ಫಲಿತಾಂಶ:** ಸೌರಾಷ್ಟ್ರ ತಂಡಕ್ಕೆ 7 ವಿಕೆಟ್‌ಗಳ ಜಯ.

ಕೋವಿಡ್ ಕಾಡಿದರೂ ನಿಲ್ಲದು ಸರಣಿ

ನವದೆಹಲಿ (ಪಿಟಿಐ): ದಕ್ಷಿಣ ಆಫ್ರಿಕಾದಲ್ಲಿ ನಡೆಯಲಿರುವ ಕ್ರಿಕೆಟ್ ಸರಣಿಯ ಸಂದರ್ಭದಲ್ಲಿ ಆಟಗಾರರು, ನೆರವು ಸಿಬ್ಬಂದಿ ಮತ್ತಿತರರಿಗೆ ಕೋವಿಡ್ ಖಚಿತವಾದರೂ ಪಂದ್ಯಗಳನ್ನು ಸ್ಥಗಿತಗೊಳಿಸದಿರಲು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಮತ್ತು ಕ್ರಿಕೆಟ್ ದಕ್ಷಿಣ ಆಫ್ರಿಕಾ ಜಂಟಿಯಾಗಿ ನಿರ್ಧರಿಸಿವೆ.

ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಣ ಸರಣಿಯಲ್ಲಿ ಮೂರು ಟೆಸ್ಟ್‌ಗಳು ನಡೆಯಲಿವೆ. ತದನಂತರ ಮೂರು ಏಕದಿನ ಪಂದ್ಯಗಳು ನಡೆಯುತ್ತವೆ. ಇದೇ 26ರಿಂದ ಮೊದಲ ಟೆಸ್ಟ್ ಆರಂಭವಾಗಲಿದೆ.

'ವೈದ್ಯಕೀಯ ಶಿಷ್ಟಾಚಾರದ ಕರಾರಿಗೆ ಎರಡೂ ಮಂಡಳಿಗಳು ಒಪ್ಪಿಕೊಂಡಿವೆ. ಜೀವ ಸುರಕ್ಷಾ ವಾತಾವರಣ (ಬಯೋಬಬಲ್) ದಲ್ಲಿರುವ ಎಲ್ಲರೂ ಸುರಕ್ಷಿತವಾಗಿರುವಂತೆ ನೋಡಿಕೊಳ್ಳಬೇಕು. ಬಹುತೇಕ ಎಲ್ಲರೂ ಲಸಿಕೆ ತೆಗೆದುಕೊಂಡವರಾಗಿದ್ದಾರೆ. ಆದ್ದರಿಂದ ಒಂದೊಮ್ಮೆ ಯಾರಿಗಾದರೂ ಕೋವಿಡ್ ತಗುಲಿದರೆ ಅವರನ್ನು ಪ್ರತ್ಯೇಕವಾಸಕ್ಕೆ ಕಳುಹಿಸಿ ಚಿಕಿತ್ಸೆ ನೀಡಲಾಗುವುದು. ಅದಕ್ಕಾಗಿ ಸುಸಜ್ಜಿತ ವ್ಯವಸ್ಥೆ ಮಾಡಲಾಗಿದೆ. ವೈದ್ಯಕೀಯ ತಂಡವೂ ಸನ್ನದ್ಧವಾಗಿದೆ. ಆಟಗಾರರು ಉಳಿದುಕೊಂಡಿರುವ ಹೋಟೆಲ್‌ನಲ್ಲಿಯೇ ಇಂತಹ ವ್ಯವಸ್ಥೆ ಕಲ್ಪಿಸಲಾಗಿದೆ' ಎಂದು ಕ್ರಿಕೆಟ್ ದಕ್ಷಿಣ ಆಫ್ರಿಕಾದ ವೈದ್ಯಾಧಿಕಾರಿ ಶುಯಬ್ ಮಾಂಜ್ರಾ ಹೇಳಿದ್ದಾರೆ.

ಭಾರತ ತಂಡದ ಆಟಗಾರರ ಅಭ್ಯಾಸ –ಎಎಫ್‌ಪಿ ಚಿತ್ರ

ಪ್ರತಿದಿನವೂ ರ್‍ಯಾಪಿಡ್ ಆ್ಯಂಟಿಜನ್ ಪರೀಕ್ಷೆ (ಆರ್‌ಎಟಿ) ಯನ್ನು ಪ್ರತಿದಿನವೂ ನಡೆಸಲಾಗುವುದು. ಸೋಂಕಿನ ಪ್ರಕರಣಗಳು ಕಂಡುಬಂದರೆ ಆಯಾ ಆಟಗಾರ, ಸಿಬ್ಬಂದಿಯ ತಂಡದ ವೈದ್ಯರು ಮುಂದಿನ ಕ್ರಮ ಕೈಗೊಳ್ಳುತ್ತಾರೆ.

'ಹೋಟೆಲ್ ಸಿಬ್ಬಂದಿಯು ತಂಡಗಳು ಬರುವ ಒಂದು ವಾರ ಮುನ್ನವೇ ಬಯೋಬಬಲ್‌ನಲ್ಲಿದ್ದಾರೆ. ಅವರನ್ನೂ ಪ್ರತಿದಿನ ಪರೀಕ್ಷೆಗಳಿಗೆ ಒಳಪಡಿಸಲಾಗುತ್ತಿದೆ. ಯಾವುದೇ ದಾರಿಯಿಂದಲೂ ಸೋಂಕು ಬಯೋಬಬಲ್ ಪ್ರವೇಶಿಸದಂತೆ ಕಟ್ಟುನಿಟ್ಟಿನ ನಿಯಮ ಜಾರಿ ಮಾಡಲಾಗಿದೆ' ಎಂದು ಮಾಂಜ್ರಾ ತಿಳಿಸಿದ್ದಾರೆ.

ಕೊರೊನಾ ಸೃಷ್ಟಿಸಿದ ಬಿಕ್ಕಟ್ಟಿನಿಂದಾಗಿ ಕಳೆದೆರಡು ವರ್ಷಗಳಿಂದ ದಕ್ಷಿಣ ಆಫ್ರಿಕಾ ಕ್ರಿಕೆಟ್ ಸರಣಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಆಯೋಜಿಸಲು ಸಾಧ್ಯವಾಗಿಲ್ಲ. ಆದ್ದರಿಂದ ಪ್ರಚಾರ ಮತ್ತು ಜಾಹೀರಾತು ಆದಾಯದ ದೃಷ್ಟಿಯಿಂದ ದಕ್ಷಿಣ ಆಫ್ರಿಕಾ ಮಂಡಳಿಗೆ ಇದು ಮಹತ್ವದ ಟೂರ್ನಿಯಾಗಿದೆ. ಆದ್ದರಿಂದ ಯಾವುದೇ ಕಾರಣಕ್ಕೂ ಟೂರ್ನಿಗೆ ಅಡೆತಡೆಯಾಗದಂತೆ ನೋಡಿಕೊಳ್ಳಲು ಶ್ರಮಿಸುತ್ತಿದೆ ಎಂದು ಮೂಲಗಳು ತಿಳಿಸಿವೆ.

ಈ ಸರಣಿಯ ಪಂದ್ಯಗಳಿಗೆ ಪ್ರೇಕ್ಷಕರ ಪ್ರವೇಶವನ್ನು ನಿರ್ಬಂಧಿಸಲಾಗಿದೆ.

ಪಿಎನ್‌ಬಿಗೆ ಭರ್ಜರಿ ಜಯ

ಬೆಂಗಳೂರು: ಪಂಜಾಬ್ ನ್ಯಾಷನಲ್ ಬ್ಯಾಂಕ್ (ಪಿಎನ್‌ಬಿ) ತಂಡ ನಗರದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಅಂತರ ಇಲಾಖೆಗಳ ಹಾಕಿ ಚಾಂಪಿಯನ್‌ಷಿಪ್ ನಲ್ಲಿ ಭರ್ಜರಿ ಜಯ ಸಾಧಿಸಿತು. ಬುಧವಾರ ನಡೆದ ಪಂದ್ಯದಲ್ಲಿ ಅಖಿಲ ಭಾರತ ಪೊಲೀಸ್ ಸ್ಪೋರ್ಟ್ಸ್ ಕಂಟ್ರೋಲ್ ಬೋರ್ಡ್ ತಂಡವನ್ನು ಪಿಎನ್‌ಬಿ 6–2ರಲ್ಲಿ ಮಣಿಸಿತು.

ಪ್ರಜಾವಾಣಿ
ಪ್ರಜಾಧ್ವನಿ
ಜನರ ಮನದಾಳದ ಮಾತು
ಕೋವಿಡ್ ಪ್ರಕರಣಗಳ ಸಂಖ್ಯೆ ಏರುಗತಿಯಲ್ಲಿರುವ ಕಾರಣದಿಂದ ಹೊಸ ವರ್ಷಾಚರಣೆಗೆ ನಿರ್ಬಂಧ ವಿಧಿಸಲು ರಾಜ್ಯ ಸರ್ಕಾರ ನಿರ್ಧರಿಸಿರುವುದು ಸರಿಯೆ?
QR ಕೋಡ್ ಸ್ಕ್ಯಾನ್ ಮಾಡಿ ಅಥವಾ bit.ly/prajadhwani ಲಿಂಕ್ ಮೂಲಕ ಇಂದು ಸಂಜೆ 5ರ ಒಳಗೆ ನಿಮ್ಮ ಅನಿಸಿಕೆಯನ್ನು ಕಳುಹಿಸಿ

ರ‍್ಯಾಂಕಿಂಗ್: ಕುಸಿದ ಕೊಹ್ಲಿ

ದುಬೈ (ಪಿಟಿಐ): ಭಾರತ ಟೆಸ್ಟ್ ಕ್ರಿಕೆಟ್ ತಂಡದ ನಾಯಕ ವಿರಾಟ್ ಕೊಹ್ಲಿ ಐಸಿಸಿ ಬ್ಯಾಟರ್‌ಗಳ ರ‍್ಯಾಂಕಿಂಗ್‌ನಲ್ಲಿ ಏಳನೇ ಸ್ಥಾನಕ್ಕೆ ಕುಸಿದಿದ್ದಾರೆ. ಆಸ್ಟ್ರೇಲಿಯಾದ ಮಾರ್ನಸ್ ಲಾಬುಷೇನ್ ಮೊದಲ ಸ್ಥಾನಕ್ಕೇರಿದ್ದಾರೆ.

ಪ್ರಥಮ ಸ್ಥಾನದಲ್ಲಿದ್ದ ಇಂಗ್ಲೆಂಡ್‌ನ ಜೋ ರೂಟ್ ಅವರನ್ನು ಲಾಬುಷೇನ್ ಹಿಂದಿಕ್ಕಿದ್ದಾರೆ. ಸ್ಟೀವ್ ಸ್ಮಿತ್ ಮತ್ತು ನ್ಯೂಜಿಲೆಂಡ್ ತಂಡದ ಕೇನ್ ವಿಲಿಯಮ್ಸನ್ ಕ್ರಮವಾಗಿ ಮೂರು ಹಾಗೂ ನಾಲ್ಕನೇ ಸ್ಥಾನದಲ್ಲಿದ್ದಾರೆ. ಭಾರತದ ರೋಹಿತ್ ಶರ್ಮಾ ಐದನೇ ಸ್ಥಾನದಲ್ಲಿದ್ದಾರೆ. ಕೊಹ್ಲಿ ಒಂದು ಸ್ಥಾನ ಕುಸಿತ ಕಂಡಿದ್ದಾರೆ. 756 ಪಾಯಿಂಟ್‌ಗಳು ಅವರ ಖಾತೆಯಲ್ಲಿವೆ. ಡೇವಿಡ್ ವಾರ್ನರ್ ಆರನೇ ಸ್ಥಾನಕ್ಕೇರಿದ್ದಾರೆ.


ಲಾಬುಷೇನ್

ಬೌಲಿಂಗ್ ವಿಭಾಗದಲ್ಲಿ ಭಾರತದ ಆಫ್‌ಸ್ಪಿನ್ನರ್ ಆರ್. ಅಶ್ವಿನ್ ಅವರು ಎರಡನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ. ಆಸ್ಟ್ರೇಲಿಯಾ ತಂಡದ ನಾಯಕ ಪ್ಯಾಟ್ ಕಮಿನ್ಸ್ ಅಗ್ರಸ್ಥಾನದಲ್ಲಿದ್ದಾರೆ.

ಟಿ20 ಕ್ರಿಕೆಟ್ ರ‍್ಯಾಂಕಿಂಗ್‌ನಲ್ಲಿ ಪಾಕಿಸ್ತಾನದ ಬಾಬರ್ ಆಜಂ ಅಗ್ರಸ್ಥಾನಕ್ಕೆ ಮರಳಿದ್ದಾರೆ. ಅವರ ಸಹ ಆಟಗಾರ ಮೊಹಮ್ಮದ್ ರಿಜ್ವಾನ್ ಮೂರನೇ ಸ್ಥಾನ ಗಳಿಸಿದ್ದಾರೆ. ಭಾರತದ ಕೆ.ಎಲ್. ರಾಹುಲ್ ಐದನೇ ಸ್ಥಾನಕ್ಕೇರಿದ್ದಾರೆ.

ಡಿವೈಎಸ್ ಮಾಜಿ ಅಧಿಕಾರಿ ಆನಂದನ್ ನಿಧನ

ಬೆಂಗಳೂರು: ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಆಯುಕ್ತರಾಗಿ ಕಾರ್ಯನಿರ್ವಹಿಸಿದ್ದ ನಿವೃತ್ತ ಐಪಿಎಸ್ ಅಧಿಕಾರಿ ಎ.ಜೆ. ಆನಂದನ್ (85) ನಗರದಲ್ಲಿ ಬುಧವಾರ ನಿಧನರಾದರು.

ಆನಂದನ್

ಡಿಜಿಯಾಗಿ ನಿವೃತ್ತರಾಗಿದ್ದರು. ಅವರಿಗೆ ಪತ್ನಿ, ಪುತ್ರ ಮತ್ತು ಪುತ್ರಿ ಇದ್ದಾರೆ.

1982ರಲ್ಲಿ ಕೂಡಿಗೆಯಲ್ಲಿ ಮೊದಲ ಕ್ರೀಡಾ ಶಾಲೆ ತೆರೆಯುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಅವರು ರಾಜ್ಯ ಕ್ರೀಡಾ ಸಮಿತಿಯ ಚೇರ್ಮನ್ ಆಗಿಯೂ ಸೆಂಚುರಿ ಕ್ಲಬ್ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು. ಕರ್ನಾಟಕ ಪೊಲೀಸ್ ಕಂಟ್ರೋಲ್ ಬೋರ್ಡ್ ಅಧ್ಯಕ್ಷರಾಗಿದ್ದಾಗ 100 ಮಂದಿ ಕ್ರೀಡಾಪಟುಗಳನ್ನು ಇಲಾಖೆಯಲ್ಲಿ ನೇಮಕ ಮಾಡಲು ಕಾರಣರಾಗಿದ್ದರು.

ಜಿಲ್ಲಾ ಮಟ್ಟದಲ್ಲಿ ಕ್ರೀಡಾ ವಸತಿನಿಲಯಗಳ ಸ್ಥಾಪನೆಯಲ್ಲೂ ಪ್ರಮುಖ ಪಾತ್ರ ವಹಿಸಿದ್ದ ಆನಂದನ್ 12ರಿಂದ 15 ವರ್ಷದೊಳಗಿನ ಮಕ್ಕಳಿಗೆ ವಸತಿನಿಲಯಗಳಲ್ಲಿ ಅವಕಾಶ ನೀಡುವ ವಿಷಯದಲ್ಲೂ ಕಾಳಜಿ ವಹಿಸಿದ್ದರು. 1996ರಲ್ಲಿ ಬೆಂಗಳೂರಿನಲ್ಲಿ ರಾಷ್ಟ್ರೀಯ ಕ್ರೀಡಾಕೂಟದ ಯಶಸ್ಸಿಗೂ ಕಾರಣರಾಗಿದ್ದರು.

'ರಾಜ್ಯದ ಕ್ರೀಡಾ ಕ್ಷೇತ್ರದ ಬೆಳವಣಿಗೆಗೆ ಅಮೂಲ್ಯವಾದ ಕೊಡುಗೆ ನೀಡಿದವರು ಆನಂದನ್. ಕೂಡಿಗೆ ಕ್ರೀಡಾ ಶಾಲೆಯ ಸ್ಥಾಪನೆಗೆ ಪ್ರಮುಖ ಕಾರಣರಾಗಿದ್ದರು' ಎಂದು ಕರ್ನಾಟಕ ಒಲಿಂಪಿಕ್ ಸಂಸ್ಥೆ ಅಧ್ಯಕ್ಷ ಕೆ. ಗೋವಿಂದರಾಜ್ ಸ್ಮರಿಸಿದ್ದಾರೆ.

ವಿಜಯಪುರದಲ್ಲಿ ಸೈಕ್ಲಿಂಗ್ ಕ್ರೀಡಾ ವಸತಿ ನಿಲಯದ ಆರಂಭದಲ್ಲಿಯೂ ಆನಂದನ್ ಪಾತ್ರ ಪ್ರಮುಖವಾಗಿತ್ತು. ಕ್ರೀಡಾ ಮೀಸಲಾತಿ ಮತ್ತು ಮಾಜಿ ಕುಸ್ತಿಪಟುಗಳಿಗೆ ಮಾಸಾಶನ ಯೋಜನೆಯನ್ನು ಜಾರಿಗೆ ತರಲು ಶ್ರಮಿಸಿದ್ದರು.

ಮುಂಬೈ ರೇಸ್

ಮಿಸ್ಟಿಕ್ ಬೇ ಗೆಲ್ಲುವ ನಿರೀಕ್ಷೆ

ರಾಯಲ್ ಕೋಲ್ಕತ್ತ ಕ್ಲಬ್ ಕಪ್ ಗುರುವಾರದ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು ಮಿಸ್ಟಿಕ್ ಬೇ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 2.00 ಗಂಟೆಗೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಕೀ ಟು ದಿ ಮಿಂಟ್ 4, ಮಲ್ಟಿಎನ್‌ಕ್ರಿಪ್ಟೆಡ್ 1, ಪರ್ಫೆಕ್ಟ್ ಮ್ಯಾನ್ 2
2ನೇ ರೇಸ್: ಹೂವ್ಸ್ ಆಫ್ ಥಂಡರ್ 3, ಜೆರುಸಲೆಮ್ 4, ಆರ್ಬಿಟ್ರೇಜ್ 1
3ನೇ ರೇಸ್: ಮಿಸ್ಟಿಕ್ ಬೇ 1, ಗೋಲ್ಡನ್ ಕ್ವೆಸ್ಟ್ 7, ಸೇಂಟ್ ಆಂಡ್ರ್ಯೂಸ್ 3
4ನೇ ರೇಸ್: ನಾರ್ದರ್ನ್ ಲೈಟ್ಸ್ 4, ಪ್ರೈಡ್ಸ್ ಏಂಜೆಲ್ 3, ವಿನ್ಸೆಂಜೊ 6
5ನೇ ರೇಸ್: ಕಿನ್ನರ 2, ಇಂಪರ್ಮನೆನ್ಸ್ 4, ದಿಲ್‌ಬರ್ 5
6ನೇ ರೇಸ್: ರಫೆಲೊ 1, ಫಾಸ್‌ಬೈಂಡರ್ 2, ಫ್ಲೇಮಿಂಗ್ ಫೈರ್ 4
7ನೇ ರೇಸ್: ಬ್ಲೂಮ್‌ಬರ್ರಿ 3, ನೋಬಲ್ ಲಾರ್ಡ್ 1, ಎಮಿರಾಲ್ಡ್ 5

ಉತ್ತಮ ಬೆಟ್: ರಫೆಲೊ

ಜಾಕ್‌ಪಾಟ್	ಟ್ರಿಬಲ್
3,4,5,6,7	4,5,6

ಸ್ಟಾಕಿಸ್ಟ್
ಸಪ್ನ ಫಾರ್ಮಾಸಿಟಿಕಲ್ಸ್
ದೂ: 080 68110000
097 41225724
ಉಚಿತ ವೈದ್ಯರ ಸಮಾಲೋಚನೆ
ಸಹಾಯವಾಣಿ: 7736894942
www.dhanwantharikerala.com

ಮೊದಲು ನನಗೆ ನಡೆದಾಡಲಿಕ್ಕೂ ಕಷ್ಟವಾಗುತ್ತಿತ್ತು
ಆದರೀಗ ಓಡಾಡಬಲ್ಲವನಾಗಿದ್ದೇನೆ.

ಕೌಶಲ್ ಕಿಶೋರ್ ಆನಂದ್ (ವ್ಯಾಪಾರಿ)

ಹಿಂದೆ 15 ವರ್ಷಗಳಿಂದ ನಾನು ಮಂಡಿಗಳ ನೋವಿನಿಂದ ಬಳಲುತ್ತಿದ್ದೆ. ನಾನಾ ರೀತಿಯ ಚಿಕಿತ್ಸೆ ಪಡೆದರೂ, ವಿವಿಧ ತೈಲಗಳನ್ನು ಲೇಪಿಸಿದರೂ, ನಡೆದಾಡುವಾಗ ಮತ್ತು ಮೆಟ್ಟಿಲುಗಳನ್ನು ಏರುವಾಗ ನೋವಿನಿಂದ ನರಳುತ್ತಿದ್ದೆ. ಎಲ್ಲಿಗೂ ಹೋಗಿ ಬರಲಿಕ್ಕೆ ಸಾಧ್ಯವಾಗುತ್ತಿರಲಿಲ್ಲ. ನಂತರ ಒಂದು ದಿನ ಚತುರ್ಭುಜ ತೈಲ ಮತ್ತು ಟ್ಯಾಬ್ಲೆಟ್ ಕುರಿತು ಮಾಹಿತಿ ಸಿಕ್ಕ ಬಳಿಕ, ಪ್ರತಿದಿನ ಬೆಳಗ್ಗೆ 1 ಮತ್ತು ರಾತ್ರಿ 1 ಚತುರ್ಭುಜ ಟ್ಯಾಬ್ಲೆಟ್ ಸೇವಿಸತೊಡಗಿದೆ ಮತ್ತು ಈ ನೋವು ಚರ್ಮದ ಮೇಲೆ ಇರುವುದಿಲ್ಲ, ಕೀಲುಗಳಲ್ಲಿ ಹಾಗೂ ಮಾಂಸಖಂಡಗಳಲ್ಲಿ ಇರುತ್ತದೆ ಎಂದು ನನಗೆ ತಿಳಿದಿದ್ದರಿಂದ, ಯಾವುದೇ ಮುಲಾಜಿಲ್ಲದೆ ದಿನಕ್ಕೆ 3 ಬಾರಿ 8 ರಿಂದ 10 ಎಂ.ಎಲ್. ತೈಲದಿಂದ 15 ರಿಂದ 20 ನಿಮಿಷ ಚೆನ್ನಾಗಿ ಮಂಡಿಗಳನ್ನು ಮಾಲಿಷ್ ಮಾಡಿಕೊಂಡೆ. ಹೆಚ್ಚಿನ ಪ್ರಮಾಣದ ತೈಲದಿಂದ ಮಸಾಜ್ ಮಾಡಿಕೊಂಡಿದ್ದರಿಂದ, ತೈಲವು ಆಳದವರೆಗೆ ಇಳಿದು ಪ್ರಭಾವ ಬೀರಿತ್ತು ಮತ್ತು ನನಗೆ ಬಹುಬೇಗ ನಿವಾರಣೆ ಲಭಿಸಿತು. ಇದೀಗ ನಾನು ಎಲ್ಲಿಗೆ ಬೇಕಾದರೂ ಕಾಲ್ನಡಿಗೆಯಲ್ಲೇ ಹೋಗಿ ಬರುವಂತಾಗಿದ್ದೇನೆ ಮತ್ತು ಮನೆಯ ಮೆಟ್ಟಿಲುಗಳನ್ನು ಓಡುತ್ತ ಏರಬಲ್ಲವನಾಗಿದ್ದೇನೆ. ನನ್ನ ಕುಟುಂಬ ಸದಸ್ಯರು ಚತುರ್ಭುಜ ತೈಲ ಮತ್ತು ಚತುರ್ಭುಜ ಟ್ಯಾಬ್ಲೆಟ್‌ಗಳನ್ನು ಹಲವಾರು ನೋವಿಗಾಗಿ ಬಳಸುತ್ತಿದ್ದಾರೆ ಮತ್ತು ನೋವುಗಳಿಂದ ಮುಕ್ತರಾಗುತ್ತಿದ್ದಾರೆ. ನನಗೆ ಇದರ ಫಲಿತಾಂಶ ಅತ್ಯಂತ ತೃಪ್ತಿ ನೀಡಿದೆ. ಎಲ್ಲಾ ಜನರು ನೋವುಗಳಿಂದ ಮುಕ್ತರಾಗಲಿ ಎಂಬ ಏಕೈಕ ಸಾರ್ವಜನಿಕ ಹಿತಾಸಕ್ತಿಯಿಂದ ಇಲ್ಲಿ ನನ್ನ ವೈಯಕ್ತಿಕ ಅನುಭವವನ್ನು ಹಂಚಿಕೊಳ್ಳುತ್ತಿದ್ದೇನೆ.

ಆಯುರ್ವೇದಿಕ ಔಷಧಿ
ಚತುರ್ಭುಜ®
ತೈಲ ಮತ್ತು ಟ್ಯಾಬ್ಲೆಟ್
ಎಲ್ಲಾ ಮೆಡಿಕಲ್ ಮತ್ತು ಆಯುರ್ವೇದಿಕ ಮಳಿಗೆಗಳಲ್ಲಿ ಲಭ್ಯ

ಆರೋಗ್ಯಕ್ಕಾಗಿ ಅಡ್ಡ ಪರಿಣಾಮಗಳ ಬಗ್ಗೆ ಚಿಂತೆಯೇ?
ಸಿಹಿಯಾದ ನೆನಪುಗಳು
ಶಂಕರ್ ಫಾರ್ಮಸಿ ಯಾ ಡಯಾಬಿಟಿಕ್ ರಿಸರ್ಚ್ ಸೆಂಟರ್ ಇವರು ಅಭಿವೃದ್ಧಿಪಡಿಸಿರುವ ಔಷಧಿ
ಮಧುಮೇಹ-ಎನ್
ಆರೋಗ್ಯಕ್ಕಾಗಿ ಜೊತೆಯಾಗಿ ಹೋರಾಡೋಣ
ಆರೋಗ್ಯಕ್ಕಾಗಿ ಅಡ್ಡ ಪರಿಣಾಮಗಳಿಂದ ಸರ್ವಾಂಗಗಳನ್ನು ಕಾಪಾಡುವ ಆಯುರ್ವೇದಿಕ್ ಔಷಧಿ ಮಧುಮೇಹ-ಎನ್ ಸದಾ ಉಪಯೋಗಿಸಿರಿ ಮತ್ತು ಆರೋಗ್ಯಕರ ಜೀವನ ಸಾಗಿಸಿ
ಈ ಕೆಳಗೆ ಇರುವ ಲಕ್ಷಣಗಳನ್ನು ಮಧುಮೇಹ-ಎನ್ ನಿವಾರಿಸುತ್ತದೆ
- ಅತಿಯಾದ ನೀರಡಿಕೆ
- ಶ್ರಮವಿಲ್ಲದ ತೂಕ ಇಳಿಕೆ
- ಅತಿಯಾದ ಹಸಿವು
- ಅತಿಯಾದ ಆಯಾಸ
- ಅತಿಯಾದ ಶುಷ್ಕ ಚರ್ಮ
- ಮೆಲ್ಲನೆ ಗುಣವಾಗುವ ಗಂಟಲು ಕೆರೆತ
- ಸಾಮಾನ್ಯಕ್ಕಿಂತ ಅಧಿಕವಾದ ಸೋಂಕು

ಮಧುಮೇಹ–ಎನ್

ಶ್ರೀ ಶ್ರೀ ಶ್ರೀ ಡಾ|| ಮಹರ್ಷಿ ಆನಂದ ಗುರೂಜಿಯವರ ಆಶೀರ್ವಾದದೊಂದಿಗೆ
Also available at : amazon.in
ಸದಾ ಉಪಯೋಗಿಸಿ ಮಧುಮೇಹ–ಎನ್
ಹೆಚ್ಚಿನ ವಿವರಗಳಿಗೆ ವಿಚಾರಿಸಿರಿ:
From the house of A & J Health Care, Bangalore
For a Healthy Society
Ph: 8762226000, 9243112373.

ನೀವು ಕೂಡ ಇವುಗಳಿಂದ ಬಳಲುತ್ತಿದ್ದೀರಾ
- ಮಲಬದ್ಧತೆ
- ಗ್ಯಾಸ್
- ಅಸಿಡಿಟಿ

ಹಾಗಾದರೆ ಇಂದೇ ಸೇವಿಸಿರಿ ಆಯುರ್ವೇದಿಕ ಪೇಟ್ ಸಫಾ ಹರಳುಗಳನ್ನು. ಇದು ಮೊದಲ ದಿನದಿಂದಲೇ ಫಲಿತಾಂಶ ನೀಡುತ್ತದೆ.
Dr. Juneja's ಪೇಟ್ ಸಫಾ®
Natural Laxative Granules & Tablets